ಶನಿವಾರ, ಅಕ್ಟೋಬರ್ 2, 2021 | ₹ 6.00

● www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಗಾಂಧಿ ಚಿತ್ರ

ಗಾಂಧಿ ಜಯಂತಿ ಮುನ್ನಾ ದಿನವಾದ ಶುಕ್ರವಾರ ಅಮೃತಸರದಲ್ಲಿ ಮಹಿಳೆಯೊಬ್ಬರು ತಮ್ಮ ಮುಂಗೈ ಮೇಲೆ ಬಿಡಿಸಿಕೊಂಡಿದ್ದ ಮಹಾತ್ಮಗಾಂಧಿಯವರ ಚಿತ್ರವನ್ನು ಪ್ರದರ್ಶಿಸಿದರು

5,000ಕ್ಕೂ ಹೆಚ್ಚು ಉತ್ಪನ್ನಗಳ ಮೇಲೆ ಕನಿಷ್ಠ 47% ರಿಯಾಯಿತಿ ಪಡೆಯಿರಿ

big 47 sale Oct 1-10

ಭಾರತದ ಅತಿ ದೊಡ್ಡ ಗ್ರಾಸರಿ ಸೇಲ್

bb big basket
A TATA Enterprise

Now delivering to Tumkur & Hosur

Product	MRP	Price	Qty	Product	MRP	Price	Qty
fresho! Orange Nagpur Regular	₹73	₹39	1kg	fresho! Apple Shimla	₹113	₹60	4N
bb ROYAL Organic Brown Sugar	₹119	₹63	1kg	Cumin / Jeera	₹51	₹27	100g
bb ROYAL Superior MP Sharbati Atta Fortified	₹320	₹170	5kg	bb ROYAL Organic Almond / Badam	₹195	₹103	100g
GoodDiet Himalayan Pink Rock Salt Powder	₹99	₹52	1kg	GoodDiet Ragi Sticks Achari Masala	₹19	₹10	30g
Quinoa Puffs Spicy Garlic	₹19	₹10	30g	Tasties Rusk Suji Elaichi	₹55	₹29	200g
Biscuits Osmania	₹89	₹47	200g	iD fresho! Idly Dosa Batter	₹75	₹40	1kg
Malabar Parota	₹80	₹42	350g	Mother Dairy Cheese Slices	₹130	₹69	200g
D'Lecta Cream	₹54	₹29	200ml	Sunfeast Nice Sugar Sprinkled Biscuits	₹25	₹13	150g
Peppy Cheese Balls	₹60	₹32	70g	Yummiez Green Peas	₹250	₹133	1kg
B Natural Juice Mixed Fruit Merry	₹110	₹58	1L	Real Activ 100% Apple Juice	₹135	₹72	1L
Paper Boat Aamras Juice	₹120	₹64	1L	bigbasket Baby Wipes Sea Breeze	₹169	₹90	80N
Baby Dove Rich Moisture Baby Wash	₹315	₹167	400ml	Vaseline Intensive Care Deep Moisture Body Lotion	₹325	₹172	400ml
Parachute Advansed Deep Nourish Body Lotion	₹310	₹164	400ml	Dabur Gulabari Premium Rose Water	₹80	₹42	250ml
Oral-B Criss Cross Toothbrush (Buy 2 & Get 2 Free)	₹130	₹69	2N	Dabur Red India's No. 1 Ayurvedic Paste (Pack of 2)	₹179	₹95	200g
Stayfree Dry Max All Nights XL Sanitary Pads	₹450	₹239	42N	Whisper Ultra Clean Sanitary Pads XL	₹520	₹276	50N
Domex Fresh Guard Ocean Fresh Disinfectant Toilet Cleaner	₹147	₹78	750ml	Scotch Brite Scrub Sponge Large	₹65	₹34	2N
Sponge Wipe Large	₹70	₹37	1N	All Out Ultra Mosquito Repellant (Pack of 2)	₹134	₹71	45ml
Colin TV Gadget Cleaner Spray	₹99	₹52	500ml	Panasonic Carbon Zinc Battery Gold Plus AA	₹160	₹85	10N
Eveready LED Bulb 9 Watt B22D	₹150	₹80	1N				

citi ₹250 instant discount on Citi Cards*

mastercard 10% instant discount
Minimum order ₹1,500
Maximum discount of ₹300
Valid from Friday through Sunday in the month of October 2021

Paytm CASHBACK Up to ₹500 cashback
Minimum order ₹1,500

PENTAGON 8298

Offers valid in Bengaluru, Tumkur & Hosur only. *Min. order ₹3,000 | Oct. 1-5, 2021. Offers on Fruits & Vegetables valid only on Oct. 2 & Oct. 3, 2021. Offers valid on a minimum purchase of ₹1,500 and till stocks last. Prices shown above are inclusive of all taxes. bigbasket reserves the right to modify or terminate offers without prior notice. Offer redemption limited to one unit per order and on a max. of 2 orders per customer during the sale period. For detailed T & C visit bigbasket.com.

India's largest online supermarket

ಶನಿವಾರ, ಅಕ್ಟೋಬರ್ 2, 2021 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ನವರಾತ್ರಿಗೆ ಸಜ್ಜು

ನವರಾತ್ರಿ ಉತ್ಸವದ ಪೂರ್ವಭಾವಿಯಾಗಿ ವಾರಾಣಸಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಕಲಾವಿದೆಯರು ದೇವತೆಗಳಂತೆ ವೇಷ ತೊಟ್ಟು ಗಮನ ಸೆಳೆದರು

PRM/KA/RERA/1251/446/PR/210928/004324
For more details, visit: rera.karnataka.gov.in

ಪ್ರಮುಖ ಸ್ಥಳಗಳಿಗೆ ಸಮೀಪದಲ್ಲಿದೆ ನಿಮ್ಮ ಬಜೆಟ್‌ಗೆ ಹತ್ತಿರದಲ್ಲಿದೆ

ಮಾನ್ಯತಾ ಟೆಕ್ ಪಾರ್ಕ್, ಹೆಣ್ಣೂರು ಜಂಕ್ಷನ್ ಸಮೀಪದಲ್ಲಿ ನಿಮ್ಮ ಸ್ವಂತ ಮನೆ ಕೇವಲ ರೂ.4999/ ಗಳಿಗೆ

ಪ್ರಾರಂಭಿಸಲಾಗುತ್ತಿದೆ

CASAGRAND **Orlena**

ಹೆಣ್ಣೂರು ಜಂಕ್ಷನ್
₹4999
ಚ.ಅ.

5 ನಿಮಿಷಗಳು
ಹೆಬ್ಬಾಳ್
₹10,000
ಚ.ಅ.

10 ನಿಮಿಷಗಳು
HRBR ಲೇಔಟ್
₹10,000
ಚ.ಅ.

20 ನಿಮಿಷಗಳು
ಇಂದಿರಾ ನಗರ
₹15,000
ಚ.ಅ.

15 ನಿಮಿಷಗಳು
MG ರೋಡ್
₹25,000
ಚ.ಅ.

ಪ್ರಾರಂಭಿಸಲಾಗುತ್ತಿದೆ
CASAGRAND Orlena
ಹೆಣ್ಣೂರು ಜಂಕ್ಷನ್

ವಿಶೇಷ
2 & 3 BHK ಅಪಾರ್ಟ್‌ಮೆಂಟ್ಸ್
₹65* ಲಕ್ಷದಿಂದ

ಮಾರುಕಟ್ಟೆ ದರ
~~₹6000~~
ಚ.ಅ.

CASAGRAND ಪ್ರಾರಂಭಿಕ ಬೆಲೆ
~~₹5399~~
ಚ.ಅ.

CASAGRAND ಮುಂದೆ ಬಂದವರಿಗಾಗಿ ಬೆಲೆ
₹4999
ಚ.ಅ.
(ಮೊದಲ 20 ಬುಕಿಂಗ್‌ಗಳಿಗೆ ಮಾತ್ರ)

Elevation View

ಊಹಿಸಲಾಗದಷ್ಟು ಬೆಲೆಯಲ್ಲಿ!

Type	Size (sft)	Launch Price (₹)	Early Bird Price (₹)
2 BHK	1078 - 1243	~~66 L - 76 L~~	63 L - 72 L
3 BHK	1451 - 1733	~~87 L - 1.05 Cr~~	86 L - 99 L

ಪ್ರಮುಖ ಅಂಶಗಳು

- ವಿಸ್ತಾರವಾದ 4 ಎಕರೆಯಲ್ಲಿ 296 ಅಪಾರ್ಟ್‌ಮೆಂಟ್‌ಗಳನ್ನು ಉತ್ತಮ ಗುಣಮಟ್ಟದೊಂದಿಗೆ ನಿರ್ಮಿಸಲಾಗಿದೆ
- ನೆಲಮಾಳಿಗೆ (ಬೇಸ್ಮೆಂಟ್) + ನೆಲ (ಗ್ರೌಂಡ್) + 7 ಮಹಡಿಗಳ ವಿನ್ಯಾಸ ರಚನೆ
- ವಿಶೇಷ 2 & 3 BHK ಕಮ್ಯೂನಿಟಿ
- 80+24,500 ಚದರ ಅಡಿ ಕ್ಲಬ್ ಹೌಸ್‌ನೊಂದಿಗೆ ವಿಶ್ವ ದರ್ಜೆಯ ಸೌಲಭ್ಯಗಳು ಮತ್ತು ವೈಶಿಷ್ಟ್ಯಗಳು
- 65% ತೆರೆದ ಸ್ಥಳವು ಹಸಿರಿನಿಂದ ಕೂಡಿದೆ
- ಹೆಣ್ಣೂರು ಜಂಕ್ಷನ್‌ಗೆ 2 ನಿಮಿಷಗಳು ಮತ್ತು ಮಾನ್ಯತಾ ಟೆಕ್ ಪಾರ್ಕ್‌ಗೆ 5 ನಿಮಿಷಗಳು
- ಎಲಿಮೆಂಟ್ಸ್ ಮಾಲ್‌ಗೆ 700 ಮೀಟರ್ ಮತ್ತು ಮುಂಬರುವ ಮೆಟ್ರೋ ನಿಲ್ದಾಣಕ್ಕೆ 2 ನಿಮಿಷಗಳು
- ಅಂತರಾಷ್ಟ್ರೀಯ ವಿಮಾನ ನಿಲ್ದಾಣ, ಶಾಲೆಗಳು, ಕಾಲೇಜುಗಳು ಮತ್ತು ಆಸ್ಪತ್ರೆಗಳಿಗೆ ತ್ವರಿತವಾಗಿ ತಲುಪಬಹುದು

ಖರೀದಿಸಲು ಪ್ರಮುಖ ಕಾರಣಗಳು

- ಮಾನ್ಯತಾ ಟೆಕ್ ಪಾರ್ಕ್‌ನ ಪಕ್ಕದಲ್ಲಿ
- ಪ್ರಸ್ತಾವಿತ ಮೆಟ್ರೋ ನಿಲ್ದಾಣ ಮತ್ತು ಎಲಿಮೆಂಟ್ಸ್ ಮಾಲ್‌ನಿಂದ ಕೇವಲ 1 ಕಿಮೀ
- 80+ ಸೌಲಭ್ಯಗಳೊಂದಿಗೆ ಬರುತ್ತದೆ
- ವೇಗವಾಗಿ ಅಭಿವೃದ್ಧಿ ಹೊಂದುತ್ತಿರುವ ಮೈಕ್ರೋ ಮಾರ್ಕೆಟ್
- ಮಕ್ಕಳಿಗಾಗಿ ವಿಶೇಷ ಕಮ್ಯೂನಿಟಿ
- ವಿಮಾನ ನಿಲ್ದಾಣಕ್ಕೆ ಕೇವಲ 20 ನಿಮಿಷಗಳು

*T&C apply.

CREDAI

ಸೈಟ್‌ನ ಸಂದರ್ಶನಕ್ಕಾಗಿ ಪ್ರತ್ಯೇಕ ಸೌಲಭ್ಯ | ಸೈಟ್‌ನಲ್ಲಿ ನಮೂನೆಯ ಮನೆಯನ್ನು ಸಂದರ್ಶಿಸಿ.

93848 88410 | www.casagrand.co.in

CASAGRAND
building aspirations

ಶನಿವಾರ, ಅಕ್ಟೋಬರ್ 2, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 274 | ಪುಟ 36
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಮಹಾತ್ಮ ಗಾಂಧಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರಿ ಜಯಂತಿ ಶುಭಾಶಯಗಳು

ಚರ್ಚೆ
ಕರ್ನಾಟಕದಲ್ಲಿ ಮತಾಂತರ ತಡೆ ಕಾಯ್ದೆಯ ಅಗತ್ಯ ಇದೆಯೇ? 7
ಕಸಮುಕ್ತ ನಗರ, ಸುರಕ್ಷಿತ ನೀರಿನ ಭರವಸೆ 11

ಸೆನ್ಸೆಕ್ಸ್	ನಿಫ್ಟಿ	₹/$
58,765 ▼	17,532 ▼	74.12 ▲

Paytm
ಹಣ ಕಳುಹಿಸಿ ₹
ಬ್ಯಾಂಕ್ ಅಕೌಂಟಿಂದ
ಸೂಪರ್ ಫಾಸ್ಟ್ UPI ಮನಿ ಟ್ರಾನ್ಸ್‌ಫರ್ Paytm ನಲ್ಲಿ
ನಿಮ್ಮ ಬ್ಯಾಂಕ್ ಅಕೌಂಟಿಂದ ಬೇರೆ ಬ್ಯಾಂಕಿಗೆ ಹಣ ಕಳುಹಿಸಿ ಮೊಬೈಲ್ ನಂಬರ್ ಜೊತೆ.
ಕೆವೈಸಿ ಅಥವಾ ವಾಲೆಟ್ ಬ್ಯಾಲೆನ್ಸ್ ಅಗತ್ಯವಿಲ್ಲ
₹100 Paytm Cashback ಮೊದಲ ಟ್ರಾನ್ಸ್‌ಫರ್ ಮೇಲೆ
ಕ್ಯಾಶ್ ಬ್ಯಾಕ್ ಪಡೆಯಲು, ಪೇಟಿಎಂ ಆ್ಯಪ್ ನಲ್ಲಿ ಕ್ಯೂಆರ್ ಸ್ಕ್ಯಾನ್ ಮಾಡಿ
ಯುಪಿಐ ಸೌಲಭ್ಯವನ್ನು ಪೇಟಿಎಂ ಪೇಮೆಂಟ್ಸ್ ಬ್ಯಾಂಕ್ ಒದಗಿಸುತ್ತದೆ.
ಆಫರ್ ಇನ್ನೇ ನವೆಂಬರ್ ೨೦೨೦ ವರೆಗೆ ಮಾನ್ಯವಾಗಿರುತ್ತದೆ. ಟಿಅಂಡ್‌ಸಿ ಅನ್ವಯಿಸುತ್ತದೆ.

ಸುದರ್ಶನ್ ಜ್ಯುವೆಲರ್ಸ್
ಚಿನ್ನ ✦ ಬೆಳ್ಳಿ ✦ ಚಿನ್ನದ ಆಭರಣಗಳು
916 Hallmark Gold Rate
₹4250/-gm
ಬೆಳ್ಳಿ ₹ 56,000/-
ಚಿಕ್ಕಪೇಟೆ: 41300355
Gangothri *CA

'ಕಾನೂನು ಹೋರಾಟದ ಜತೆಗೆ ಸತ್ಯಾಗ್ರಹ ಏಕೆ?' 11
ಏರ್ ಇಂಡಿಯಾ ಖರೀದಿ ಟಾಟಾ ಮುಂಚೂಣಿ ಬಿಡ್ದರ್ 11

ಚಿನಕುರಳಿ

ಪ್ರಕಾಶ್ ಶೆಟ್ಟಿ

ಸೆಸ್ಕ್, ಜೆಸ್ಕಾಂ: ಕೃಷಿ ಪಂಪ್‌ಸೆಟ್‌ಗಳ ಸಕ್ರಮ ಕಾಮಗಾರಿಗೆ 'ಅಕ್ರಮ' ದಾರಿ?

ಕಾಯ್ದೆ ಉಲ್ಲಂಘಿಸಿ ಟೆಂಡರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರಿನ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ (ಸೆಸ್ಕ್) ಮತ್ತು ಕಲಬುರ್ಗಿಯ ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ (ಜೆಸ್ಕಾಂ) ವ್ಯಾಪ್ತಿಯಲ್ಲಿ ಅಕ್ರಮ ಕೃಷಿ ಪಂಪ್‌ಸೆಟ್‌ಗಳನ್ನು ಸಕ್ರಮಗೊಳಿಸುವ ಉದ್ದೇಶದಿಂದ ಮೂಲಸೌಕರ್ಯಗಳ ನಿರ್ಮಾಣಕ್ಕಾಗಿ ಕರೆದಿರುವ ಟೆಂಡರ್‌ಗಳಲ್ಲಿ ಕೆಟಿಪಿಪಿ ಕಾಯ್ದೆಯನ್ನು ಉಲ್ಲಂಘಿಸಲಾಗಿದೆ.

ಮೈಸೂರಿನ ಸೆಸ್ಕ್ ₹266.81 ಕೋಟಿ ಮೊತ್ತದ 24 ಟೆಂಡರ್‌ಗಳು ಮತ್ತು ಜೆಸ್ಕಾಂ ₹53.79 ಕೋಟಿ ಮೊತ್ತದ 9 ಟೆಂಡರ್‌ಗಳನ್ನು ಕರೆದಿದ್ದು ಎರಡರಲ್ಲೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಕಾಯ್ದೆಯ (ಕೆಟಿಪಿಪಿ) ಉಲ್ಲಂಘನೆ ಆಗಿದೆ.

ಇಂಧನ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ 2020 ರ ಫೆಬ್ರುವರಿಯಲ್ಲಿ ಹೊರಡಿಸಿರುವ ಆದೇಶದಲ್ಲಿ, ವಿದ್ಯುತ್ ಮೂಲ ಸೌಕರ್ಯವನ್ನು ಸೃಷ್ಟಿಸುವ ಉದ್ದೇಶದಿಂದ ಕೈಗೊಳ್ಳುವ ನಿರ್ಮಾಣ ಕಾಮಗಾರಿಗಳು, ರಸ್ತೆ, ಸೇತುವೆ, ಕಟ್ಟಡಗಳು, ಇತರ ರಚನೆಗಳನ್ನು ಕೆಡಹುವುದು, ಉಕ್ಕಿನ ರಚನೆಗಳ ನಿರ್ಮಾಣವೂ ಸೇರಿ ಎಲ್ಲ ರೀತಿಯ ಸಿವಿಲ್ ಕಾಮಗಾರಿಗಳಿಗೂ ಕೆಟಿಪಿಪಿ ಕಾಯ್ದೆ ಅನ್ವಯವಾಗುತ್ತದೆ. ಎಲ್ಲ ಎಸ್ಕಾಂಗಳೂ ಕೆಟಿಪಿಪಿ ಕಾಯ್ದೆ ಕಲಂ 2 (ಡಿ) ಅಡಿ ಸಂಗ್ರಹಣಾ ಸಂಸ್ಥೆಯಾಗಿದೆ ಎಂದು ಸ್ಪಷ್ಟವಾಗಿ ಉಲ್ಲೇಖಿಸಲಾಗಿದೆ.

ಆದರೆ, ಮೈಸೂರಿನ ಸೆಸ್ಕ್ 2020 ರ ಜೂನ್‌ನಲ್ಲಿ ಕರೆದ ಟೆಂಡರ್ ಮತ್ತು ಜೆಸ್ಕಾಂ 2021 ರ ಜುಲೈನಲ್ಲಿ ಕರೆದ ಟೆಂಡರ್‌ನಲ್ಲಿ ಕೆಟಿಪಿಪಿ ಕಾಯ್ದೆಯ ಕೆಲವು ಅಂಶಗಳನ್ನು ಉಲ್ಲೇಖಿಸಿಲ್ಲ. ಇದು ಕೆಲವು ಗುತ್ತಿಗೆದಾರರಿಗೆ ಮಾತ್ರ ಅನುಕೂಲ ಮಾಡಿಕೊಡಲು ಅಡ್ಡ ದಾರಿ ಹಿಡಿದಿರುವ ಸಾಧ್ಯತೆ ಇದೆ ಎಂಬುದಾಗಿ ಅಸಮಾಧಾನಗೊಂಡಿರುವ ಗುತ್ತಿಗೆದಾರರು ಆರೋಪಿಸಿದ್ದಾರೆ.

ಕೈ ಬಿಟ್ಟ ಕೆಲ ಅಂಶಗಳು: ಟೆಂಡರ್‌ನಲ್ಲಿ ಗುತ್ತಿಗೆ ಕಂಪನಿಗಳು ಜಂಟಿಯಾಗಿ ಭಾಗವಹಿಸುವಂತಿಲ್ಲ ಎಂಬ ಅಂಶವನ್ನು ಕೈಬಿಡಲಾಗಿದೆ. ಅಲ್ಲದೆ, ಗುತ್ತಿಗೆ ಕಂಪನಿಗಳು ಆ ಕೆಲಸಗಳಲ್ಲಿ ಅನುಭವವನ್ನು ಹೊಂದಿರಬೇಕು ಮತ್ತು ಸಂಪನ್ಮೂಲ (ಆರ್ಥಿಕ ಸ್ಥಿತಿ) ಸಂಬಂಧಿಸಿದಂತೆ ನಿಗದಿ ಮಾಡಿದ ಮಾನದಂಡಕ್ಕೆ ಅನುಗುಣವಾಗಿ ಇರಬೇಕು ಎಂಬ ಅಂಶಗಳೂ ಸೇರಿಲ್ಲ.

ಟೆಂಡರ್‌ನಲ್ಲಿ ಭಾಗವಹಿಸುವ ಗುತ್ತಿಗೆದಾರ ಕಳೆದ ಐದು ವರ್ಷಗಳ ಪೈಕಿ ಯಾವುದೇ ಒಂದು ವರ್ಷದಲ್ಲಿ ಕೈಗೊಂಡ ಸಿವಿಲ್ ಎಂಜಿನಿಯರಿಂಗ್‌ನ ಗರಿಷ್ಠ ವಹಿವಾಟಿನ ಮೊತ್ತ, ಪೂರ್ಣಗೊಂಡ ಕಾಮಗಾರಿ ಮತ್ತು ಚಾಲ್ತಿಯಲ್ಲಿರುವ ಕಾಮಗಾರಿ ಮಾಹಿತಿ ನೀಡಬೇಕು ಎಂಬ ಅಂಶವನ್ನೂ ಕೈಬಿಡಲಾಗಿದೆ ಎಂದು ಮೂಲಗಳು ಹೇಳಿವೆ.

'ಈ ಟೆಂಡರ್‌ನಲ್ಲಿ ರಾಜ್ಯ ಸರ್ಕಾರದಿಂದ ಲೈಸೆನ್ಸ್ ಪಡೆದಿರುವ ಕ್ಲಾಸ್-1 ಎಲೆಕ್ಟ್ರಿಕ್ ಗುತ್ತಿಗೆದಾರರೇ ಭಾಗವಹಿಸಬೇಕು. ಇವರಿಗೆ ಕನಿಷ್ಠ ಮೂರು ವರ್ಷ ಈ ಕ್ಷೇತ್ರದಲ್ಲಿ ಕೆಲಸ ಮಾಡಿರುವ ಅನುಭವ ಇರಬೇಕು ಎಂಬ ನಿಯಮವೇನೋ ಇದೆ. ಆದರೆ, ಈ ಎರಡೂ ಕಂಪನಿಗಳಲ್ಲಿ ಅವುಗಳನ್ನು ಗಾಳಿಗೆ ತೂರಲಾಗಿದೆ. ಬೆಸ್ಕಾಂನಲ್ಲಿ ಕೆಟಿಪಿಪಿ ಕಾಯ್ದೆಯನ್ನು ಚಾಚೂ ತಪ್ಪದೆ ಪಾಲಿಸಲಾಗಿದೆ. ಈಗ ಬಿಡ್‌ದಾರರ ಮೌಲ್ಯಮಾಪನ ಪ್ರಕ್ರಿಯೆ ನಡೆಯುತ್ತಿದ್ದು, ನಮಗೂ ನ್ಯಾಯ ಒದಗಿಸಬೇಕು' ಎಂದು ಕೆಲವು ಗುತ್ತಿಗೆದಾರರು ದೂರಿದ್ದಾರೆ.

ತಾಂತ್ರಿಕ ಸಮಿತಿ ನಿರ್ಧಾರವೇ ಅಂತಿಮ

'ಟೆಂಡರ್‌ಗಳನ್ನು ವಿದ್ಯುತ್ ಕಂಪನಿಗಳ ನಿಯಮಗಳಿಗೆ ಅನುಸಾರವಾಗಿಯೇ ತಾಂತ್ರಿಕ ಸಮಿತಿಯೇ ಅಂತಿಮಗೊಳಿಸುತ್ತದೆ. ಒಂದು ವೇಳೆ ಯಾವುದೇ ವ್ಯತ್ಯಾಸಗಳಾಗಿದ್ದರೆ, ಸರಿಪಡಿಸಲು ಕ್ರಮ ತೆಗೆದುಕೊಳ್ಳಲಾಗುವುದು' ಎಂದು ಇಂಧನ ಸಚಿವ ವಿ.ಸುನಿಲ್ ಕುಮಾರ್ ಪ್ರತಿಕ್ರಿಯಿಸಿದ್ದಾರೆ.

'ಪ್ಯಾಕೇಜ್ ಟೆಂಡರ್ ಆಗಬಾರದು, ಹತ್ತಾರು ಜನರಿಗೆ ಗುತ್ತಿಗೆ ಹಂಚಿಕೆ ಮಾಡಿ ಕಾಮಗಾರಿ ನಡೆಸಬೇಕು ಎಂಬ ಕಾರಣಕ್ಕೆ ಆ ರೀತಿ ಮಾಡಿರಲೂಬಹುದು. ಈ ಪ್ರಕರಣವನ್ನು ಪರಿಶೀಲಿಸುತ್ತೇನೆ' ಎಂದು ಹೇಳಿದರು.

'ದೂರು ಸಲ್ಲಿಸಿದರೆ ತನಿಖೆ ನಡೆಸಿ ಕ್ರಮ'

'ಕಾಯ್ದೆಯ ಪ್ರಕಾರವೇ ಟೆಂಡರ್ ಕರೆಯಲಾಗಿದೆ. ಯಾವುದೇ ನಿಯಮಗಳನ್ನು ಮೀರಿ ಕರೆಯಲು ಸಾಧ್ಯವಿಲ್ಲ' ಎಂದು ಮೈಸೂರಿನ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ವ್ಯವಸ್ಥಾಪಕ ನಿರ್ದೇಶಕ ಜಯವಿಭವಸ್ವಾಮಿ ತಿಳಿಸಿದರು.'ಒಂದು ವೇಳೆ ಟೆಂಡರ್ ಪ್ರಕ್ರಿಯೆಯಲ್ಲಿ ಲೋಪ ಆಗಿದೆ ಅಥವಾ ಕಾನೂನು ಮೀರಲಾಗಿದೆ ಎಂಬ ಭಾವನೆ ಇದ್ದರೆ ದೂರು ದಾಖಲಿಸಲು ಅವಕಾಶವಿದೆ. ಆ ಬಗ್ಗೆ ತನಿಖೆ ನಡೆಸುತ್ತೇವೆ. ಲೋಪ ಕಂಡು ಬಂದರೆ ಸೂಕ್ತ ಕ್ರಮ ಕೈಗೊಳ್ಳುತ್ತೇವೆ. ₹5 ಲಕ್ಷದಿಂದ ₹6 ಲಕ್ಷದ ಮೊತ್ತದ ಟೆಂಡರ್‌ಗಳನ್ನು ಕಾರ್ಯನಿರ್ವಾಹಕ ಎಂಜಿನಿಯರ್‌ಗಳೇ ಕರೆಯುತ್ತಾರೆ. ಈ ಬಾರಿ ಟೆಂಡರ್‌ನಲ್ಲಿ ಅವಕಾಶ ಸಿಗದೇ ಇದ್ದರೆ, ಮುಂದೆ ಕರೆಯುವ ಟೆಂಡರ್‌ನಲ್ಲೂ ಬಿಡ್ ಸಲ್ಲಿಸಲು ಅವಕಾಶವಿದೆ' ಎಂದೂ ಹೇಳಿದರು.

ಮಾಸ್ತಿ ಭವನ ಅಡಿಗಲ್ಲಿಗೆ ಅಡಿಗಡಿಗೂ ಅಡ್ಡಿ!

• ವರುಣ ಹೆಗಡೆ

ಪ್ರಜಾವಾಣಿ ವಿಶೇಷ

ಬೆಂಗಳೂರು: 'ಕನ್ನಡದ ಆಸ್ತಿ' ಎಂದೇ ಜನಜನಿತರಾದ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಸಾಹಿತಿ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರ ಭವನ ನಿರ್ಮಾಣಕ್ಕೆ ಭೂಮಿ ಹಂಚಿಕೆಯಾಗಿ ಒಂಬತ್ತು ವರ್ಷಗಳಾಗಿವೆ. ಆದರೆ, ಸರ್ಕಾರಗಳ ನಿರ್ಲಕ್ಷ್ಯದಿಂದಾಗಿ ಈವರೆಗೂ ಭವನ ನಿರ್ಮಾಣ ಕಾಮಗಾರಿಗೆ ಚಾಲನೆಯೇ ಸಿಕ್ಕಿಲ್ಲ.

ಈ ಎಲ್ಲ ಬೆಳವಣಿಗೆಯ ಮಧ್ಯೆಯೇ ಭವನ ನಿರ್ಮಾಣಕ್ಕೆ ಸರ್ಕಾರ ನೀಡಿದ್ದ ₹1.99 ಕೋಟಿ ಅನುದಾನವನ್ನು ಬಡ್ಡಿ ಸಮೇತ ವಾಪಸ್ ಪಡೆಯಲು ಆರ್ಥಿಕ ಇಲಾಖೆ ಮುಂದಾಗಿದೆ. ಇದು, ಮಾಸ್ತಿ ಅವರು ಹಾಗೂ ಕನ್ನಡ ಅಭಿಮಾನಿಗಳ ಆಕ್ರೋಶಕ್ಕೂ ಕಾರಣವಾಗಿದೆ.

ಈ ಭವನ ನಿರ್ಮಾಣಕ್ಕೆ 2012ರಲ್ಲಿಯೇ ಇಲ್ಲಿನ ಜ್ಞಾನ ಭಾರತಿ ಬಡಾವಣೆಯಲ್ಲಿ 20 ಸಾವಿರ ಚದರ ಅಡಿ ಜಾಗವನ್ನು ಗುರುತಿಸಲಾಗಿತ್ತು.

4ನೇ ಪುಟ ನೋಡಿ

ನಾಡಗೀತೆ: ಅನಂತಸ್ವಾಮಿ ಧಾಟಿ ಅಧಿಕೃತ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರು ಅನಂತಸ್ವಾಮಿ ಅವರು ರಾಗ ಸಂಯೋಜಿಸಿರುವ ಧಾಟಿಯನ್ನೇ ನಾಡಗೀತೆಗೆ ಅಳವಡಿಸಿಕೊಳ್ಳಲು ತಜ್ಞರ ಸಮಿತಿ ಶಿಫಾರಸು ಮಾಡಿದ್ದು, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಇದನ್ನೇ ಅಧಿಕೃತ ಎಂದು ಶನಿವಾರ ಪ್ರಕಟಿಸುವ ಸಾಧ್ಯತೆ ಇದೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಇದಕ್ಕೆ ಸಂಬಂಧಿಸಿದ ಕಡತವನ್ನು ಬೊಮ್ಮಾಯಿ ಅವರಿಗೆ ಕಳುಹಿಸಿದೆ. ಈ ಕಡತಕ್ಕೆ ಸಹಿ ಆದ ತಕ್ಷಣವೇ ಮುಖ್ಯಮಂತ್ರಿಯವರೇ ಅಧಿಕೃತವಾಗಿ ಪ್ರಕಟಿಸಲಿದ್ದಾರೆ. ನಾಡಗೀತೆಯ ಅವಧಿ 2 ನಿಮಿಷ 14 ಸೆಕೆಂಡುಗಳಷ್ಟು ಇರಲಿದೆ ಎಂದು ಉನ್ನತ ಮೂಲಗಳು ತಿಳಿಸಿವೆ.

ಸರ್ಕಾರ ರಚಿಸಿದ್ದ ಸಮಿತಿಯಲ್ಲಿ ಕವಿ ದೊಡ್ಡರಂಗೇಗೌಡ, ಎಚ್.ಆರ್. ಲೀಲಾವತಿ, ಕಸ್ತೂರಿ ಶಂಕರ್ ಸೇರಿ ಒಟ್ಟು 18 ಮಂದಿ ಇದ್ದರು. ಸಮಿತಿಯು ಒಮ್ಮತದಿಂದಲೇ ಅನಂತಸ್ವಾಮಿ ಧಾಟಿಯ ನಾಡಗೀತೆ ಅಳವಡಿಸಿಕೊಳ್ಳಲು ಒಪ್ಪಿಗೆ ನೀಡಿದೆ.

ಕನ್ನಡದಲ್ಲೇ ಬ್ಯಾಂಕ್ ನೇಮಕಾತಿ ಪರೀಕ್ಷೆ

ನವದೆಹಲಿ: ಸಾರ್ವಜನಿಕ ವಲಯದ ಬ್ಯಾಂಕ್‌ಗಳ ಕ್ಲರ್ಕ್ ಹುದ್ದೆಯ ನೇಮಕಾತಿ ಪರೀಕ್ಷೆಯನ್ನು ಕನ್ನಡವೂ ಸೇರಿದಂತೆ 13 ಪ್ರಾದೇಶಿಕ ಭಾಷೆಗಳಲ್ಲಿ ಆಯೋಜಿಸಲು ಕೇಂದ್ರದ ಹಣಕಾಸು ಸಚಿವಾಲಯ ಒಪ್ಪಿಗೆ ಸೂಚಿಸಿದೆ.

ಇದುವರೆಗೆ ಇಂಗ್ಲಿಷ್ ಮತ್ತು ಹಿಂದಿ ಭಾಷೆಯಲ್ಲಿ ಮಾತ್ರ ಆಯೋಜಿಸಲಾಗುತ್ತಿದ್ದ ಈ ಹುದ್ದೆಗಳ ನೇಮಕಾತಿ ಪರೀಕ್ಷೆಯನ್ನು, ಪ್ರಾದೇಶಿಕ ಭಾಷೆಗಳಲ್ಲಿ ಆಯೋಜಿಸುವಂತೆ ಅನೇಕ ವರ್ಷಗಳಿಂದ ಬೇಡಿಕೆ ಇತ್ತು.

ಈ ಕುರಿತ ಪರಿಶೀಲನೆಗೆ ರಚಿಸಲಾಗಿದ್ದ ಸಮಿತಿಯು ಅಧ್ಯಯನ ನಡೆಸಿ ಸಲ್ಲಿಸಿರುವ ಶಿಫಾರಸ್ಸನ್ನು ಆಧರಿಸಿ ಪ್ರಾದೇಶಿಕ ಭಾಷೆಗಳಲ್ಲೂ ಪರೀಕ್ಷೆ ನಡೆಸುವಂತೆ ಬ್ಯಾಂಕಿಂಗ್ ಸಿಬ್ಬಂದಿ ನೇಮಕಾತಿ ಸಂಸ್ಥೆ (ಐಬಿಪಿಎಸ್)ಗೆ ಹಣಕಾಸು ಸಚಿವಾಲಯ ಸೂಚಿಸಿದೆ.

ಸ್ಥಳೀಯ ಯುವಜನತೆಗೆ ಬ್ಯಾಂಕಿಂಗ್ ವಲಯದ ಉದ್ಯೋಗದಲ್ಲಿ ಏಕರೂಪದ ಅವಕಾಶ ಒದಗಿಸಲು ಪ್ರಾದೇಶಿಕ ಭಾಷೆಯಲ್ಲೇ ನೇಮಕಾತಿ ಪರೀಕ್ಷೆ ಆಯೋಜಿಸುವುದು ಸೂಕ್ತ. ಸ್ಥಳೀಯರೇ ಉದ್ಯೋಗ ಪಡೆದಲ್ಲಿ ಬ್ಯಾಂಕ್‌ನ ಗ್ರಾಹಕರೊಂದಿಗೆ ವ್ಯವಹರಿಸುವುದೂ ಸುಲಭ ಎಂದೂ ಸಮಿತಿ ಶಿಫಾರಸು ಮಾಡಿತ್ತು.

4ನೇ ಪುಟ ನೋಡಿ

CAMPUS PUMA SKECHERS adidas new balance Reebok Levi's GAP Calvin Klein TOMMY HILFIGER AND OUTRYT JACK&JONES ONLY Pepe Jeans LONDON A|X ARMANI EXCHANGE
globaldesi W spykar SVRNAA SUPERDRY® 冒険魂 Lee Cooper STEVE MADDEN
VERO MODA MARKS & SPENCER LONDON asics U.S. POLO ASSN. SINCE 1890 BIBA RITU KUMAR SATYA PAUL
Dune LONDON G-STAR RAW REPLAY ALDO MUJI 無印良品 INDIE PICKS JOHN PLAYERS GAS
10% INSTANT DISCOUNT# SBI Debit Card | SBI card
#Min. Trxn.: ₹2,999; Max. Discount: ₹600 per card.
Valid once per card. Validity: 30 Sep - 10 Oct 2021. T&C Apply.
*Conditions apply. **Delivery as per Govt. regulations.
FOLLOW US @AJIOLIFE
DOWNLOAD THE APP NOW

ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಭರವಸೆ

ಹೊರ ವಲಯ: ರಸ್ತೆ ಮರು ನಿರ್ಮಾಣ ತಿಂಗಳಲ್ಲಿ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹೊರವಲಯದ ವಾರ್ಡ್‌ಗಳಿಗೆ ಕುಡಿಯುವ ನೀರು ಹಾಗೂ ಒಳಚರಂಡಿ ಕಲ್ಪಿಸುವ ಸಲುವಾಗಿ ಕತ್ತರಿಸಲಾದ ರಸ್ತೆಗಳ ಪುನರ್ ನಿರ್ಮಾಣ ಕಾಮಗಾರಿಗಳನ್ನು ಮುಂದಿನ ತಿಂಗಳಿನಿಂದ ಆರಂಭಿಸಲು ಬಿಬಿಎಂಪಿ ಸಿದ್ಧತೆ ನಡೆಸಿದೆ.

ಸುದ್ದಿಗಾರರ ಜೊತೆ ಶುಕ್ರವಾರ ಮಾತನಾಡಿದ ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ, 'ನಗರಕ್ಕೆ ಹೊಸತಾಗಿ ಸೇರ್ಪಡೆಯಾಗಿರುವ ಗ್ರಾಮಗಳಲ್ಲಿ ಕುಡಿಯುವ ನೀರು ಮತ್ತು ಒಳಚರಂಡಿ ಕಾಮಗಾರಿಗಳಿಂದಾಗಿ 2500 ಕಿ.ಮೀ ಉದ್ದದ ರಸ್ತೆಗಳು ಹಾಳಾಗಿವೆ. ಈ ಉದ್ದೇಶಕ್ಕಾಗಿ ಕತ್ತರಿಸಲಾದ ರಸ್ತೆಗಳ ಪುನರ್ ನಿರ್ಮಾಣಕ್ಕೆ ಸರ್ಕಾರ ವಿಶೇಷ ಅನುದಾನ ಬಿಡುಗಡೆ ಮಾಡಿದೆ. ಕಾಮಗಾರಿಗಳ ವಿಸ್ತೃತ ಯೋಜನಾ ವರದಿ (ಡಿಪಿಆರ್) ಸಿದ್ಧವಾಗಿದ್ದು, ಟೆಂಡರ್ ಪ್ರಕ್ರಿಯೆ ಚಾಲ್ತಿಯಲ್ಲಿದೆ. ಬರುವ ತಿಂಗಳಲ್ಲಿ ಕೆ.ಆರ್.ಪುರ ಹಾಗೂ ಮಹದೇವಪುರ ಕ್ಷೇತ್ರಗಳಲ್ಲಿ ರಸ್ತೆಗಳ ಪುನರ್ ನಿರ್ಮಾಣ ಕಾಮಗಾರಿಗಳು ಆರಂಭವಾಗಲಿವೆ' ಎಂದು ಮಾಹಿತಿ ನೀಡಿದರು.

'ನಗರದ ರಸ್ತೆಗಳ ವಸ್ತುಸ್ಥಿತಿ ಪರಿಶೀಲಿಸಲು ಬಿಬಿಎಂಪಿಯ ಎಂಟೂ ವಲಯಗಳ ಮುಖ್ಯ ಎಂಜಿನಿಯರ್‌ಗಳು ಹಾಗೂ 27 ವಿಭಾಗ ಮಟ್ಟದ ಅಧಿಕಾರಿಗಳ ಸಭೆ ನಡೆಸಿದ್ದೇವೆ. ಮುಖ್ಯ ರಸ್ತೆಗಳ ದುರಸ್ತಿ ಪ್ರಗತಿಯಲ್ಲಿದ್ದು, 10 ದಿನಗಳ ಒಳಗೆ ಕಾಮಗಾರಿ ಪೂರ್ಣಗೊಳಿಸಲು ಸಿದ್ಧತೆ ಮಾಡಿಕೊಂಡಿದ್ದೇವೆ. ವಾರ್ಡ್ ಮಟ್ಟದ ರಸ್ತೆ ಗುಂಡಿಗಳನ್ನು ಆದಷ್ಟು ಬೇಗ ದುರಸ್ತಿ ಮಾಡುವಂತೆ ಕಂದಾಯ ಸಚಿವ ಆರ್.ಅಶೋಕ ಸೂಚಿಸಿದ್ದಾರೆ. ಇದಕ್ಕಾಗಿ 25 ದಿನಗಳ ಗಡುವು ನೀಡಿದ್ದಾರೆ' ಎಂದರು.

ಇ-ಆಸ್ತಿ ನೋಂದಣಿಗೆ ಕೆಲವು ಪಾಲಿಕೆ ಸಿಬ್ಬಂದಿ ₹ 10 ಸಾವಿರ ಲಂಚ ತೆಗೆದುಕೊಳ್ಳುತ್ತಿರುವ ಆರೋಪದ ಕುರಿತು ಪ್ರತಿಕ್ರಿಯಿಸಿದ ಮುಖ್ಯ ಆಯುಕ್ತರು, 'ನಿರ್ದಿಷ್ಟ ಪ್ರಕರಣಗಳಿದ್ದರೆ ಸಾರ್ವಜನಿಕರು ನನಗೆ ದೂರು ನೀಡಬಹುದು. ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುತ್ತೇನೆ' ಎಂದರು.

ವೈರಾಣು ಜ್ವರ, ಡೆಂಗಿ: ಮುನ್ನೆಚ್ಚರಿಕೆ ವಹಿಸಿ

ನಗರದಲ್ಲಿ ವೈರಾಣು ಜ್ವರ ಹಾಗೂ ಡೆಂಗಿ ಪ್ರಕರಣಗಳು ಹೆಚ್ಚುತ್ತಿರುವ ಬಗ್ಗೆ ಪ್ರತಿಕ್ರಿಯಿಸಿದ ಗೌರವ್ ಗುಪ್ತ ಅವರು, 'ಜ್ವರ ಹಾಗೂ ಡೆಂಗಿ ನಿಯಂತ್ರಣದ ಬಗ್ಗೆ ಪಾಲಿಕೆಯ ತಜ್ಞ ವೈದ್ಯರ ಸಮಿತಿ ಹಾಗೂ ಮಕ್ಕಳ ತಜ್ಞರ ಸಮಿತಿ ಜೊತೆ ಚರ್ಚಿಸಿದ್ದೇವೆ. ಡೆಂಗಿ ಹರಡದಂತೆ ಜನರೂ ಮುನ್ನೆಚ್ಚರಿಕೆ ವಹಿಸಬೇಕು' ಎಂದರು.

ಗೌರವ್ ಗುಪ್ತ

ವಿಶ್ವ ಅನುವಾದ ದಿನ

ಬೆಂಗಳೂರು: 'ಕೂ' ಮೈಕ್ರೊ ಬ್ಲಾಗಿಂಗ್ ವೇದಿಕೆಯಲ್ಲಿ ಅನುವಾದ ವೈಶಿಷ್ಟ್ಯ ಸಕ್ರಿಯಗೊಳಿಸುವ ಸಲುವಾಗಿ ವಿಶ್ವ ಅನುದಾನ ದಿನ ಆಚರಿಸಲಾಗಿದೆ.

'ವಿವಿಧ ಕ್ಷೇತ್ರಗಳ ಗಣ್ಯರು, ಪ್ರಸಿದ್ಧ ವ್ಯಕ್ತಿಗಳು ಇನ್ನು ಮುಂದೆ ವಿಶಿಷ್ಟ ಬಗೆಯ ಅನುವಾದ ಶೈಲಿಯ ಮೂಲಕ ತಮ್ಮ ಅಭಿಮಾನಿಗಳು ಹಾಗೂ ಹಿಂಬಾಲಕರೊಂದಿಗೆ ಸಂಪರ್ಕ ಸಾಧಿಸಲು ಇದು ನೆರವಾಗಲಿದೆ' ಎಂದು ಪ್ರಕಟಣೆ ತಿಳಿಸಿದೆ.

'ಕೂ ಬಳಕೆದಾರರು ಹಿಂದಿ, ಮರಾಠಿ, ಕನ್ನಡ, ತಮಿಳು, ಅಸ್ಸಾಮಿ, ಬಂಗಾಳಿ, ತೆಲುಗು ಮತ್ತು ಇಂಗ್ಲಿಷ್ ಭಾಷೆಗಳಿಗೆ ಸ್ವಯಂ ಚಾಲಿತವಾಗಿ ಅನುವಾದ ಮಾಡಲು ಹೊಸ ವೈಶಿಷ್ಟ್ಯ ಸಹಕಾರಿಯಾಗಿದೆ. ಟೆಕ್-ಚಾಲಿತ ಅನುವಾದ ವೈಶಿಷ್ಟ್ಯ ಸಕ್ರಿಯಗೊಳಿಸಿದ ವಿಶ್ವದ ಮೊದಲ ಸಾಮಾಜಿಕ ಜಾಲತಾಣ ಎಂಬ ಹೆಗ್ಗಳಿಕೆಗೆ ಕೂ ಪಾತ್ರವಾಗಿದೆ' ಎಂದು ತಿಳಿಸಲಾಗಿದೆ.

ಅ.4, 5ರಂದು ವಿದ್ಯುತ್ ವ್ಯತ್ಯಯ

ಬೆಂಗಳೂರು: ನಗರದಲ್ಲಿ ಅ.4ರಂದು 66/11ಕೆ.ವಿ. ಕಾಚಮಾರನ ಹಳ್ಳಿ ವಿದ್ಯುತ್ ಕೇಂದ್ರದಲ್ಲಿ ತುರ್ತು ನಿರ್ವಹಣಾ ಕಾರ್ಯ ಕೈಗೊಳ್ಳುತ್ತಿರುವುದರಿಂದ ಬೆಳಿಗ್ಗೆ 10ರಿಂದ 4ರವರೆಗೆ ವಿವಿಧ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಸ್ಥಳಗಳು: ಕಾಚಮಾರನಹಳ್ಳಿ, ವರ್ತೂರು, ಗುಂಜೂರು, ಪಣತ್ತೂರು, ಬಾಳಗೆರೆ ವೈಟ್‌ಫೀಲ್ಡ್ ಮುಖ್ಯ ರಸ್ತೆ, ರಾಮಗೊಂಡನಹಳ್ಳಿ, ಗುಂಜೂರು ಹೊಸಹಳ್ಳಿ, ವಿನಾಯಕ ಥಿಯೇಟರ್, ವಿನಾಯಕ ಲೇಔಟ್, ವರ್ತೂರು ಮುಖ್ಯರಸ್ತೆ, ಬಾಳಗೇರಿ ರಸ್ತೆ, ಗಾಂಧಿ ವೃತ್ತ, ಈದ್ಗಾ ರಸ್ತೆ, ಸಬ್ ರಿಜಿಸ್ಟ್ರಾರ್ ರಸ್ತೆ, ಪ್ರಕಾಶ ಲೇಔಟ್, ಮಧುರ ನಗರ, ವಾಲೇಪುರನಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಅ.5ರಂದು ಬೆಳಿಗ್ಗೆ 10ರಿಂದ ಸಂಜೆ 4ರವರೆಗೆ 66/11ಕೆ.ವಿ ಬ್ರಿಗೇಡ್ ಗೇಟ್‌ವೇ ಜಿಐಎಸ್ ವಿದ್ಯುತ್ ಕೇಂದ್ರದ ವ್ಯಾಪ್ತಿಯಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಕೃಷ್ಣ ಚಿತ್ರಮಂದಿರ, ಬಸವನಪುರ ರಸ್ತೆ, ಗೋಕುಲ ಬಡಾವಣೆ, ಗಾಯತ್ರಿ ಲೇಔಟ್, ಎಸ್.ಆರ್. ಲೇಔಟ್, ಲಕ್ಷ್ಮೀ ಪುರ ಲೇಔಟ್, ವಿಜಯಾ ಬ್ಯಾಂಕ್ ಕಾಲೊನಿ, ಐಗೇಟ್ ಸರ್ಕಲ್, ನೇತ್ರಾ ಟೆಕ್‌ಪಾರ್ಕ್, ವೈದೇಹಿ ಆಸ್ಪತ್ರೆ, ಸತ್ಯ ಸಾಯಿಬಾಬಾ ಆಸ್ಪತ್ರೆ, ಸ್ಯಾಪ್ ಲ್ಯಾಬ್, ಎಸ್‌ಎಡಿಎ ಟೆಕ್‌ಪಾರ್ಕ್, ಕ್ವಾಲ್‌ಕಾಮ್, ಜಿಇಬಿಇ ಕಂಪನಿ, ಶೈಲೇಂದ್ರ ಟವರ್, ಟೆಸ್ಕೊ, ಬಿಎಂಟಿಸಿ, ಎಸ್‌ಜೆಆರ್, ಬಿಐಪಿ ಡೆವಲಪರ್ಸ್, ಯ್ಯೂಟಿಎಲ್, ಎಸ್‌ಎಂಸಿ ಸುತ್ತಮುತ್ತ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ವಿವಿಧೆಡೆ ವಿದ್ಯುತ್ ನಿಲುಗಡೆ ಇಂದು

ಬೆಂಗಳೂರು: ವಿದ್ಯುತ್ ಕೇಂದ್ರಗಳಲ್ಲಿ ತುರ್ತು ಕಾರ್ಯನಿರ್ವಹಣೆ ಕೈಗೆತ್ತಿಕೊಂಡಿರುವುದರಿಂದ ಅಕ್ಟೋಬರ್ 2 ರಂದು ಬೆಳಿಗ್ಗೆ 10ರಿಂದ ಸಂಜೆ 5 ರವರೆಗೆ ನಗರದ ವಿವಿಧ ಸ್ಥಳಗಳಲ್ಲಿ ವಿದ್ಯುತ್ ವ್ಯತ್ಯಯ ಆಗಲಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

ವಿದ್ಯುತ್ ವ್ಯತ್ಯಯವಾಗುವ ಸ್ಥಳಗಳು: ಪದ್ಮನಾಭನಗರ ಬಸ್ ನಿಲ್ದಾಣ, ಪುಟ್ಟಲಿಂಗಯ್ಯ ರಸ್ತೆ, ಕಾರ್ಮೆಲ್ ಶಾಲೆ, ವಸಂತ ವಲ್ಲಭ ನಗರ, ಶಾರದಾ ನಗರ, ಮಾರುತಿ ಲೇಔಟ್, ಹೊಂಗಸಂದ್ರ ಓಣಿ ರಸ್ತೆ, ಜಿಬಿ ಪಾಳ್ಯ ಮತ್ತು ಸುತ್ತಲಿನ ಪ್ರದೇಶ.

ಬೆಳಿಗ್ಗೆ 10.30 ರಿಂದ ಸಂಜೆ 5: ಸುಭಾಷ್ ನಗರ, ಮಣಿಪಾಲ್ ಕೌಂಟಿ ರಸ್ತೆ, ಎಇಸಿಎಸ್ ಲೇಔಟ್ ಮತ್ತು ಸುತ್ತಲಿನ ಪ್ರದೇಶ. ವಿಶ್ವಪ್ರಿಯ ಲೇಔಟ್ ಮತ್ತು ಸುತ್ತಲಿನ ಪ್ರದೇಶ (ಬೆಳಿಗ್ಗೆ 11ರಿಂದ ಮಧ್ಯಾಹ್ನ 2).

ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. ಸಿಹೆಚ್215504 ಮುಕ್ತಾಯದ ದಿನಾಂಕ : 18-10-2021

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು, ಕೆಳಕಂಡ ಕೆಲಸಕ್ಕಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕೆಲಸದ ಹೆಸರು	ಅಂದಾಜು ಮೌಲ್ಯ
ಹುಬ್ಬಳ್ಳಿಯ ಕೇಂದ್ರ ಆಸ್ಪತ್ರೆಯಲ್ಲಿ ದ್ರವ ವೈದ್ಯಕೀಯ ಆಮ್ಲಜನಕ 5ಕೆಎಲ್ ಟ್ಯಾಂಕ್.	ರೂ. 44,72,581/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 18-10-2021 ರಂದು 14.00 ಗಂಟೆಯವರೆಗೆ

ಹೆಚ್ಚಿನ ವಿವರಗಳಿಗೆ www.ireps.gov.in ಗೆ ಲಾಗ್ಆನ್ ಮಾಡಿ.

ಹಿರಿಯ ಸಾಮಗ್ರಿ ವ್ಯವಸ್ಥಾಪಕರು / ಸಿಹೆಚ್ ಹುಬ್ಬಳ್ಳಿ

ಪಿಯುಬಿ/213/ಎಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2021-22

S.W.Railways SWRRLY SWRRLY

11ನೇ ಮಹಡಿಯಿಂದ ಬಿದ್ದು ಬಾಲಕ ಸಾವು

ಬೆಂಗಳೂರು: ಬನಶಂಕರಿ 3ನೇ ಹಂತದಲ್ಲಿರುವ 'ಶೋಭಾ ವ್ಯಾಲಿ ವ್ಯೂ' ಅಪಾರ್ಟ್‌ಮೆಂಟ್ ಸಮುಚ್ಚಯದ 11ನೇ ಮಹಡಿಯಿಂದ ಬಿದ್ದು 10 ವರ್ಷದ ಗಗನ್ ಎಂಬಾತ ಮೃತಪಟ್ಟಿದ್ದಾನೆ.

'ಗುರುವಾರ ಸಂಜೆ ಈ ಘಟನೆ ನಡೆದಿದೆ. ಪೋಷಕರು ನೀಡಿರುವ ದೂರು ಆಧರಿಸಿ ಅಸಹಜ ಸಾವು ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ತನಿಖೆ ಮುಂದುವರಿದಿದೆ' ಎಂದು ಪೊಲೀಸರು ಹೇಳಿದರು.

'ಬಾಲಕನ ತಂದೆ, ಸಾಫ್ಟ್‌ವೇರ್ ಕಂಪನಿಯೊಂದರ ಮಾನವ ಸಂಪನ್ಮೂಲ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದರು. ತಾಯಿ ಗೃಹಿಣಿ. ಅಪಾರ್ಟ್‌ಮೆಂಟ್ ಸಮುಚ್ಚಯದ 11ನೇ ಮಹಡಿಯ ಫ್ಲ್ಯಾಟ್‌ನಲ್ಲಿ ಕುಟುಂಬ ವಾಸವಿತ್ತು.'

'ದಂಪತಿ ಕೆಲಸ ನಿಮಿತ್ತ ಹೊರಗೆ ಹೋಗಿದ್ದರು. ಬಾಲಕ ಮಾತ್ರ ಮನೆಯಲ್ಲಿದ್ದ. ಆಟವಾಡುತ್ತಲೇ ಬಾಲಕ, ಫ್ಲ್ಯಾಟ್‌ನಿಂದ ಹೊರಗೆ ಬಂದು ಬಾಲ್ಕನಿ ಬಳಿ ಬಂದಿದ್ದ. ಅಲ್ಲಿಂದಲೇ ಆಯತಪ್ಪಿ 5ನೇ ಮಹಡಿಗೆ ಬಿದ್ದಿದ್ದ. ತೀವ್ರ ಪೆಟ್ಟು ಬಿದ್ದು ಆತ ಸ್ಥಳದಲ್ಲೇ ಮೃತಪಟ್ಟ' ಎಂದೂ ತಿಳಿಸಿದರು.

ನಿಧನ ವಾರ್ತೆ

ಚಿಕ್ಕತಾಯಮ್ಮ

ಮಂಡ್ಯ: ನಟ ನೀನಾಸಂ ಸತೀಶ್ ತಾಯಿ, ಮದ್ದೂರು ತಾಲ್ಲೂಕು ಯಾಲದಹಳ್ಳಿ ನಿವಾಸಿ ಚಿಕ್ಕತಾಯಮ್ಮ (76) ವಯೋಸಹಜ ಅನಾರೋಗ್ಯದಿಂದ ಬೆಂಗಳೂರಿನ ಸತೀಶ್ ನಿವಾಸದಲ್ಲಿ ಶುಕ್ರವಾರ ನಿಧನರಾದರು.

ಅವರಿಗೆ ಸತೀಶ್ ಸೇರಿ ನಾಲ್ವರು ಪುತ್ರರು, ನಾಲ್ವರು ಪುತ್ರಿಯರು ಇದ್ದಾರೆ. ಯಾಲದಹಳ್ಳಿಯ ಅವರ ಜಮೀನಿನಲ್ಲಿ ಶನಿವಾರ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಚಾಚಮ್ಮ ಜಾನ್

ಬೆಂಗಳೂರು: ಇಂದಿರಾನಗರ ನಿವಾಸಿ ಚಾಚಮ್ಮ ಜಾನ್ (82) ಅವರು ಸೆ. 29ರಂದು ನಿಧನರಾದರು.

ಇವರು ಮಾಜಿ ಸಚಿವ ಟಿ. ಜಾನ್ ಪತ್ನಿ. ಇವರಿಗೆ, ಪುತ್ರರಾದ 'ಟಿ. ಜಾನ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್' ಚೇರ್ಮನ್ ಡಾ. ಥಾಮಸ್ ಜಾನ್, ಪಾಲ್ ಜಾನ್, ಬಿಜು ಜಾನ್ ಹಾಗೂ ಪುತ್ರಿಯರಾದ ಶೀಲಾ ನೊರ್ನಾಳ ಹಾಗೂ ಶಿಜಿ ಬಾಲು ಪೌಲ್ ಇದ್ದಾರೆ.

ಹೊಸೂರು ರಸ್ತೆಯಲ್ಲಿರುವ ಕ್ರಿಶ್ಚಿಯನ್ ಸೆಮಿಟ್ರಿಯಲ್ಲಿ ಸೆ. 30ರಂದು ಅಂತ್ಯಸಂಸ್ಕಾರ ನಡೆಯಿತು ಎಂದು ಕುಟುಂಬದವರು ತಿಳಿಸಿದ್ದಾರೆ.

ಮುಸ್ಲಿಮರ ತುಷ್ಟೀಕರಣಕ್ಕೆ ಸಿದ್ದರಾಮಯ್ಯ ಹೇಳಿಕೆ: ಜೋಶಿ ಟೀಕೆ

ಧಾರವಾಡ: 'ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಮತ್ತು ಕಾಂಗ್ರೆಸ್ ಪಕ್ಷ ತುಷ್ಟೀಕರಣದ ರಾಜಕಾರಣ ಮಾಡಿದೆ. ಹಿಂದೆ ಮೋಹನಚಂದ್ ಎಂಬ ಇನ್‌ಸ್ಪೆಕ್ಟರ್ ಸಾವಿಗೀಡಾದಾಗ ಸೋನಿಯಾ ಗಾಂಧಿ ಅತ್ತಿರಲಿಲ್ಲ. ಆದರೆ, ಉಗ್ರವಾದಿ ಸತ್ತಾಗ ಅತ್ತಿದ್ದರು. ಮುಸಲ್ಮಾನರ ತುಷ್ಟೀಕರಣಕ್ಕಾಗಿ ಈ ರೀತಿಯ ಹೇಳಿಕೆಯನ್ನು ಸಿದ್ದರಾಮಯ್ಯ ನೀಡಿದ್ದಾರೆ' ಎಂದು ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಟೀಕಿಸಿದರು.

ಬಿಎಸ್‌ವೈಗೆ 'ಶರಣಶ್ರೀ', ಬೊಮ್ಮಾಯಿ ಅವರಿಗೆ 'ಬಸವಭೂಷಣ' ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬಿ.ಎಸ್. ಯಡಿಯೂರಪ್ಪ



ಬಸವರಾಜ ಬೊಮ್ಮಾಯಿ



ಪಂ.ರಾಜೀವ್ ತಾರಾನಾಥ್

ಕೆ.ಕಸ್ತೂರಿ ರಂಗನ್



ರವೀಂದ್ರ ಭಟ್ಟ



ಎಸ್. ನಾಗರತಿನಂ

ಯುಗಧರ್ಮ ರಾಮಣ್ಣ

ರುದ್ರೇಶ್ವರ ಸ್ವಾಮೀಜಿ



ಡಾ.ಅಮ್ಜದ್ ಹುಸೇನ್

ತನುಶ್ರೀ

ಚಿತ್ರದುರ್ಗ: ಇಲ್ಲಿನ ಮುರುಘಾಮಠ ಶರಣ ಸಂಸ್ಕೃತಿ ಉತ್ಸವದಲ್ಲಿ ಪ್ರದಾನ ಮಾಡುವ 'ಬಸವಭೂಷಣ' ಪ್ರಶಸ್ತಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಹಾಗೂ 'ಶರಣಶ್ರೀ' ಪ್ರಶಸ್ತಿಗೆ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರನ್ನು ಆಯ್ಕೆ ಮಾಡಲಾಗಿದೆ. ಅ.18ರಂದು ಮುರುಘಾಮಠದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ ಎಂದು ಶಿವಮೂರ್ತಿ ಮುರುಘಾ ಶರಣರು ಶುಕ್ರವಾರ ಪ್ರಕಟಿಸಿದರು.

'ಮುರುಘಾಶ್ರೀ' ಪ್ರಶಸ್ತಿಗೆ 'ಪ್ರಜಾವಾಣಿ' ಪತ್ರಿಕೆಯ ಕಾರ್ಯನಿರ್ವಾಹಕ ಸಂಪಾದಕರಾದ ರವೀಂದ್ರ ಭಟ್ಟ ಸೇರಿ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದ ಐವರನ್ನು ಆಯ್ಕೆ ಮಾಡಲಾಗಿದೆ. 'ಆರೋಗ್ಯಪೂರ್ಣ ಸಮಾಜಕ್ಕಾಗಿ ಶ್ರಮಿಸುತ್ತಿರುವ ಹೆಬ್ಬಾಳು ವಿರಕ್ತಮಠದ ಮಹಾಂತ ರುದ್ರೇಶ್ವರ ಸ್ವಾಮೀಜಿ, ಸಮಾಜಮುಖಿ ಚಿಂತಕ ಮತ್ತು ಶಿಕಾರಿಪುರ ಜುಬೇದ ವಿದ್ಯಾಸಂಸ್ಥೆಯ ಡಾ.ಅಮ್ಜದ್ ಹುಸೇನ್, ದೇಸಿ ಪದಶಕ್ತಿಯ ಶಬ್ದಗಾರುಡಿಗ ಯುಗಧರ್ಮ ರಾಮಣ್ಣ, ಅಖಿಲ ಭಾರತ ವೀರಶೈವ ಮಹಾಸಭಾದ ತಮಿಳುನಾಡು ರಾಜ್ಯ ಘಟಕದ ಅಧ್ಯಕ್ಷ ಎಸ್. ನಾಗರತಿನಂ ಅವರಿಗೆ ಈ ಪ್ರಶಸ್ತಿ ನೀಡಲಾಗುತ್ತಿದೆ' ಎಂದು ಶರಣರು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ಸ್‌ನಲ್ಲಿ 7 ವಿಶ್ವದಾಖಲೆ ಮುಡಿಗೇರಿಸಿಕೊಂಡಿರುವ ಬಾಲ ಪ್ರತಿಭೆ ಉಡುಪಿಯ ತನುಶ್ರೀ ಅವರನ್ನು ಭರಮಣ್ಣನಾಯಕ ಶೌರ್ಯ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಮುರುಘಾಶ್ರೀ ಮತ್ತು ಶೌರ್ಯ ಪ್ರಶಸ್ತಿಯು ₹ 25 ಸಾವಿರ ಹಾಗೂ ಪ್ರಶಸ್ತಿ ಫಲಕ ಒಳಗೊಂಡಿದೆ. ಅ.13ರಂದು ಮುರುಘಾಮಠದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಈ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಗುತ್ತದೆ' ಎಂದು ಅವರು ಮಾಹಿತಿ ನೀಡಿದರು.

ಇಬ್ಬರಿಗೆ 'ಬಸವಶ್ರೀ': 'ಬಸವಶ್ರೀ' ಪ್ರಶಸ್ತಿಗೆ ಖ್ಯಾತ ಸರೋದ್ ವಾದಕ ಪಂಡಿತ್ ರಾಜೀವ್ ತಾರಾನಾಥ್ (2019) ಹಾಗೂ ಬಾಹ್ಯಾಕಾಶ ವಿಜ್ಞಾನಿ ಕೆ.ಕಸ್ತೂರಿ ರಂಗನ್ (2020) ಅವರನ್ನು ಆಯ್ಕೆ ಮಾಡಲಾಗಿದೆ. ಪ್ರಶಸ್ತಿಯು ₹ 5 ಲಕ್ಷ ಹಾಗೂ ಫಲಕವನ್ನು ಒಳಗೊಂಡಿದೆ. ಅ. 17ರಂದು ನಡೆಯಲಿರುವ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ' ಎಂದರು.

ಉತ್ಸವ ಸಮಿತಿ ಗೌರವಾಧ್ಯಕ್ಷ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ ಇದ್ದರು.

ವಿಜಯನಗರ ಜಿಲ್ಲೆ ಉದ್ಘಾಟನೆ ಇಂದು

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ರಾಜ್ಯದ 31ನೇ ಜಿಲ್ಲೆಯಾಗಿ ಉದಯಗೊಂಡಿರುವ ವಿಜಯನಗರದ ಅಧಿಕೃತ ಉದ್ಘಾಟನಾ ಸಮಾರಂಭ ಶನಿವಾರ (ಅ. 2) ಇಲ್ಲಿನ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆಯಲಿದೆ.

ಕಾರ್ಯಕ್ರಮ ನಡೆಯಲಿರುವ ಜಿಲ್ಲಾ ಕ್ರೀಡಾಂಗಣ ಮಿನಿ ಹಂಪಿಯಾಗಿ ಬದಲಾಗಿದೆ. ಬೆಟ್ಟ-ಗುಡ್ಡ, ವಿರೂಪಾಕ್ಷೇಶ್ವರ ದೇವಸ್ಥಾನ, ಸಾಲು ಮಂಟಪ, ಉಗ್ರ ನರಸಿಂಹ, ಸಪ್ತಸ್ವರ ಮಂಟಪ ನಿರ್ಮಿಸಲಾಗಿದೆ.

ಪ್ರವೇಶ ದ್ವಾರದ ಮುಂಭಾಗದಲ್ಲಿ 40 ಅಡಿ ಎತ್ತರದ ಶ್ರೀಕೃಷ್ಣದೇವರಾಯನ ಫೈಬರ್ ಪುತ್ಥಳಿ ಪ್ರತಿಷ್ಠಾಪಿಸಲಾಗಿದೆ. ನಗರದ ಎಲ್ಲಾ ರಸ್ತೆಗಳಿಗೆ ವಿದ್ಯುತ್ ದೀಪಗಳ ಅಲಂಕಾರ ಮಾಡಲಾಗಿದೆ. ತಳಿರು ತೋರಣ ಕಟ್ಟಲಾಗಿದೆ.

ಶನಿವಾರ ಸಂಜೆ 6ಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೊಸ ಜಿಲ್ಲೆ ಉದ್ಘಾಟಿಸುವರು. ಜಿಲ್ಲೆ ಘೋಷಣೆ ಮಾಡಿದ ಮಾಜಿ ಮುಖ್ಯಮಂತ್ರಿ, ಶಾಸಕ ಬಿ.ಎಸ್. ಯಡಿಯೂರಪ್ಪನವರ ಸನ್ಮಾನ ನಡೆಯಲಿದೆ. ಜಿಲ್ಲಾ ಉಸ್ತುವಾರಿ ಸಚಿವ ಆನಂದ್ ಸಿಂಗ್ ಅಧ್ಯಕ್ಷತೆ ವಹಿಸುವರು. ಕಲಾ ತಂಡಗಳ ಮೆರವಣಿಗೆ, ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿವೆ.

ವಿಶೇಷ ಪುಟ 14,15, 16,17



ವಿಜಯನಗರ ಜಿಲ್ಲೆ ಉದ್ಘಾಟನಾ ಸಮಾರಂಭ ನಡೆಯಲಿರುವ ಹೊಸಪೇಟೆ ಜಿಲ್ಲಾ ಕ್ರೀಡಾಂಗಣದ ಪ್ರವೇಶ ದ್ವಾರದಲ್ಲಿ ಶುಕ್ರವಾರ ಸಂಜೆ ಹಂಪಿ ಸಪ್ತಸ್ವರ ಮಂಟಪದ ಪ್ರಕೃತಿ ನಿರ್ಮಿಸುವ ಕೆಲಸ ನಡೆಯಿತು

ಮಾಸ್ತಿ ಭವನ ಅಡಿಗಲ್ಲಿಗೆ ಅಡಿಗಡಿಗೂ ಅಡ್ಡಿ!

ಒಂದನೇ ಪುಟದಿಂದ

ಸರ್ಕಾರವೇ ಸ್ಥಾಪಿಸಿದ ಡಾ. ಮಾಸ್ತಿ ವೆಂಕಟೇಶ ಅಯ್ಯಂಗಾರ್ ಟ್ರಸ್ಟ್‌ಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಮೂಲಕ ಭೂಮಿಯನ್ನು ಹಸ್ತಾಂತರಿಸಲಾಗಿತ್ತು. ಆದರೆ, ಕಟ್ಟಡ ನಿರ್ಮಾಣ ಕಾಮಗಾರಿಗೆ ಈವರೆಗೂ ಸರ್ಕಾರವು ಆಡಳಿತಾತ್ಮಕ ಅನುಮೋದನೆ ನೀಡಿಲ್ಲ. ಇದು ಸಾಹಿತ್ಯ ವಲಯದ ಪ್ರಮುಖರ ಅಸಮಾಧಾನಕ್ಕೆ ಕಾರಣವಾಗಿದೆ.

ಮಾಸ್ತಿ ಅವರು ಕೋಲಾರದ ಮಾಲೂರಿನ ಮಾಸ್ತಿ ಗ್ರಾಮದಲ್ಲಿ ಜನಿಸಿದ್ದರಿಂದ ಟ್ರಸ್ಟ್‌ನ ಕಚೇರಿ ಕೋಲಾರದಲ್ಲಿ ನೋಂದಾಯಿಸಲ್ಪಟ್ಟಿದೆ. ಒಟ್ಟು ₹ 8 ಕೋಟಿ ವೆಚ್ಚದಲ್ಲಿ ಮೂರು ಮಹಡಿಗಳ ಸುಸಜ್ಜಿತ ಭವನ ನಿರ್ಮಾಣಕ್ಕೆ ಸಂಬಂಧಿಸಿದಂತೆ ನೀಲ ನಕ್ಷೆ ಸಿದ್ಧಪಡಿಸಿದ ಟ್ರಸ್ಟ್, ಸರ್ಕಾರಕ್ಕೆ ಸಲ್ಲಿಸಿತ್ತು. ಆದರೆ, ಕಟ್ಟಡ ನಿರ್ಮಾಣ ಕಾಮಗಾರಿಗೆ 2015ರಲ್ಲಿ ₹ 1.99 ಕೋಟಿ ಅನುದಾನವನ್ನು ಮಾತ್ರ ಇಲಾಖೆಯಿಂದ ನೀಡಲಾಗಿತ್ತು. ಈ ಹಣವೂ ಕೋಲಾರ ಜಿಲ್ಲಾಧಿಕಾರಿ ಕಚೇರಿಗೆ ವರ್ಗಾವಣೆಯಾಗಿತ್ತು. ಇದರಿಂದಾಗಿ ಕಟ್ಟಡ ನಿರ್ಮಾಣ ಕಾಮಗಾರಿಗೆ ತೊಡಕಾಗಿತ್ತು.

₹ 8 ಕೋಟಿ ವೆಚ್ಚ ಮಾಡಲು ಸರ್ಕಾರದಿಂದ ಅನುಮೋದನೆ ಸಿಗದಿದ್ದರಿಂದ ಬಿಡುಗಡೆಯಾಗಿದ್ದ ಹಣವನ್ನು ಜಿಲ್ಲಾಧಿಕಾರಿಯ ಸಮ್ಮತಿ ಮೇರೆಗೆ ₹1.99 ಕೋಟಿಯನ್ನು ಕರ್ನಾಟಕ ಬ್ಯಾಂಕ್‌ನಲ್ಲಿ ಟ್ರಸ್ಟ್ ಇರಿಸಿತ್ತು. ಬಡ್ಡಿ ಸೇರಿದ್ದರಿಂದಾಗಿ ಆ ಹಣ ಈಗ ಬೆಳೆಯುತ್ತಿದೆ. ಈ ಹಣವನ್ನು ಸರ್ಕಾರಕ್ಕೆ ಮರುಸಂದಾಯ ಮಾಡಿಸುವಂತೆ ಆರ್ಥಿಕ ಇಲಾಖೆ ಸೂಚಿಸಿದೆ ಎಂದು ಸಂಸ್ಕೃತಿ ಇಲಾಖೆಯ ಮೂಲಗಳು ತಿಳಿಸಿವೆ.

ಇಲಾಖೆ ಹೆಸರಿನಲ್ಲಿಯೇ ನೋಂದಣಿ: ಮಾಸ್ತಿ ಭವನ ನಿರ್ಮಾಣಕ್ಕೆ ಹಂಚಿಕೆಯಾದ ಜಾಗವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಹೆಸರಿನಲ್ಲಿಯೇ ಟ್ರಸ್ಟ್ ನೋಂದಣಿ ಮಾಡಿಸಿದೆ. ಹಂಚಿಕೆಯಾದ ಭೂಮಿಯನ್ನು ಸಮತಟ್ಟು ಮಾಡಿಸಿ, ಕೊಳವೆ ಬಾವಿ ಕೊರೆಯಿಸಲಾಗಿದೆ. ನಿವೇಶನಕ್ಕೆ ಬೇಲಿಯನ್ನೂ ವಾರ್ಷಿಕ ಕಾರ್ಯಚಟುವಟಿಕೆಗೆ ಹಂಚಿಕೆಯಾದ ಅನುದಾನದಿಂದಲೇ ಟ್ರಸ್ಟ್ ಮಾಡಿಸಿದೆ.

'ಮಾಸ್ತಿ ಅವರು ತಮ್ಮ ಜೀವನದ ಬಹುತೇಕ ಅವಧಿಯನ್ನು ಬೆಂಗಳೂರಿನಲ್ಲಿಯೇ ಕಳೆದಿದ್ದಾರೆ. ಇಲ್ಲಿಯೇ ಅವರ ಹೆಸರಿನಲ್ಲಿ ಭವನ ನಿರ್ಮಿಸಬೇಕೆಂಬ ಒತ್ತಾಯವಿತ್ತು. ಜಾಗ ಹಾಗೂ ಈ ಹಿಂದೆ ಬಿಡುಗಡೆ ಮಾಡಿದ ಅನುದಾನವಿದೆ. ಸರ್ಕಾರವು ಆಡಳಿತಾತ್ಮಕ ಅನುಮೋದನೆ ನೀಡಿ, ಹಂತ ಹಂತವಾಗಿ ಅನುದಾನ ನೀಡಿದಲ್ಲಿ ಭವನ ನಿರ್ಮಾಣ ಸಾಕಾರವಾಗಲಿದೆ' ಎಂದು ಟ್ರಸ್ಟ್ ಅಧ್ಯಕ್ಷ ಮಾವಿನಕೆರೆ ರಂಗನಾಥನ್ ತಿಳಿಸಿದರು.

ನಗರದ ಜ್ಞಾನ ಭಾರತಿಯಲ್ಲಿ "ಮಾಸ್ತಿ ಭವನ' ನಿರ್ಮಾಣಕ್ಕೆ ಹಂಚಿಕೆಯಾಗಿರುವ ಜಾಗವು ನೆನೆಗುದಿಗೆ ಬಿದ್ದಿರುವುದು. –ಪ್ರಜಾವಾಣಿ ಚಿತ್ರ/ ಅನೂಪ್ ರಾಘ್.ಟಿ.

'ಗುರುವಿನ ಕೆಲಸ ಮುಗಿಸುವ ಆಸೆ'



'ಮಾಸ್ತಿ ವೆಂಕಟೇಶ ಅಯ್ಯಂಗಾರ್ ನನ್ನ ಗುರುಗಳು. ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಉಳಿದ ಸಾಹಿತಿಗಳ ಹೆಸರಿನಲ್ಲಿ ಭವನಗಳು ನಿರ್ಮಾಣವಾಗಿವೆ. ಗುರುವಿನ ಕೆಲಸ ಮುಗಿಸಿ ಹೋಗಬೇಕು ಎಂಬ ಆಸೆ ನನ್ನದಾಗಿದೆ. 'ಮಾಸ್ತಿ ಕನ್ನಡದ ಆಸ್ತಿ' ಎನ್ನುತ್ತಾರೆ. ಆದರೆ, ಸರ್ಕಾರ ಎಲ್ಲಿ ಬೆಲೆ ನೀಡಿದೆ? ಈಗಲಾದರೂ ಆಡಳಿತಾತ್ಮಕ ಅನುಮೋದನೆ ನೀಡಿ, ಭವನ ನಿರ್ಮಾಣಕ್ಕೆ ಅನುವು ಮಾಡಿಕೊಡಬೇಕು' ಎಂದು ಟ್ರಸ್ಟ್‌ನ ಅಧ್ಯಕ್ಷ ಮಾವಿನಕೆರೆ ರಂಗನಾಥನ್ ಆಗ್ರಹಿಸಿದರು.

ಮಾಸ್ತಿ ಭವನದ ನಿರ್ಮಾಣ ಕಾಮಗಾರಿ ಇಷ್ಟು ವರ್ಷಗಳಾದರೂ ಏಕೆ ಸಾಕಾರವಾಗಿಲ್ಲ ಎನ್ನುವುದನ್ನು ಪರಿಶೀಲಿಸಿ, ಕ್ರಮಕೈಗೊಳ್ಳಲಾಗುವುದು

ಎಸ್. ರಂಗಪ್ಪ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ

ಮಾಸ್ತಿ ಭವನ ನಿರ್ಮಾಣ ಶಾಶ್ವತವಾಗಿ ಉಳಿಯುವ ಕೆಲಸ. ಸರ್ಕಾರ ಆದ್ಯತೆ ನೀಡಿ, ಈ ಕೂಡಲೇ ಭವನ ನಿರ್ಮಾಣಕ್ಕೆ ಕ್ರಮಕೈಗೊಳ್ಳಬೇಕು

ಚಂದ್ರಶೇಖರ ಕಂಬಾರ, ಕೇಂದ್ರ ಸಾಹಿತ್ಯ ಅಕಾಡೆಮಿ ಅಧ್ಯಕ್ಷ

ನಕ್ಷೆಯಲ್ಲಿ ಏನಿದೆ?

ಮಾಸ್ತಿ ಭವನದ ನೀಲ ನಕ್ಷೆಯನ್ನು ಕೋಲಾರದ ನಿರ್ಮಿತಿ ಕೇಂದ್ರವು ಸಿದ್ಧಪಡಿಸಿತ್ತು. ತಳ ಮಹಡಿಯಲ್ಲಿ ವಾಹನಗಳ ನಿಲುಗಡೆಗೆ ವ್ಯವಸ್ಥೆ, ನೆಲ ಮಹಡಿಯಲ್ಲಿ 300 ಆಸನಗಳ ಸಭಾಂಗಣ, ಕಚೇರಿ, ವಿಶ್ರಾಂತಿ ಸ್ಥಳ ಹಾಗೂ ಗ್ರಂಥಾಲಯ ನಿರ್ಮಿಸಲು ಯೋಜನೆ ರೂಪಿಸಲಾಗಿತ್ತು. ಮೊದಲ ಹಾಗೂ ಎರಡನೇ ಮಹಡಿಯಲ್ಲಿ ಸಭಾ ಕೊಠಡಿ ಹಾಗೂ ಅತಿಥಿಗಳ ವಾಸಕ್ಕೆ ಕೊಠಡಿಗಳನ್ನು ನಿರ್ಮಿಸುವುದು ನೀಲ ನಕ್ಷೆಯಲ್ಲಿದೆ.



ಮಾಸ್ತಿ ಭವನ ನಿರ್ಮಾಣ ಉತ್ತಮವಾದ ಕೆಲಸ. ಕಟ್ಟಡ ಕಾಮಗಾರಿಯನ್ನು ಆದಷ್ಟು ಬೇಗ ಪ್ರಾರಂಭಿಸಿ, ಭವನ ನಿರ್ಮಾಣ ಮಾಡಬೇಕು

ಹಂ.ಪ. ನಾಗರಾಜಯ್ಯ, ಸಾಹಿತಿ

ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ ಭವನಗಳನ್ನು ಆದ್ಯತೆಯ ಮೇರೆಗೆ ನಿರ್ಮಾಣ ಮಾಡಬೇಕು. ಮಾಸ್ತಿ ಅವರ ಕೊಡುಗೆ ಬೆಲೆಕಟ್ಟಲಾಗದು

ಮನು ಬಳಿಗಾರ್, ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷ

ಕನ್ನಡದಲ್ಲೇ ಬ್ಯಾಂಕ್ ನೇಮಕಾತಿ ಪರೀಕ್ಷೆ

ಒಂದನೇ ಪುಟದಿಂದ

ವಿವಿಧ 12 ಬ್ಯಾಂಕ್‌ಗಳಲ್ಲಿನ ಕ್ಲರ್ಕ್ ಹುದ್ದೆಗಳ ನೇಮಕಾತಿಗಾಗಿ ಸಮಿತಿಯು ಐಬಿಪಿಎಸ್ ಹೊರಡಿಸಿದ್ದ ಅಧಿಸೂಚನೆಗೆ, ಪರಿಶೀಲನೆ ನಡೆಸಿ ವರದಿ ಸಲ್ಲಿಸುವವರೆಗೆ ತಾತ್ಕಾಲಿಕ ತಡೆ ನೀಡಲಾಗಿತ್ತು. ಇದೀಗ ನೇಮಕಾತಿ ಪ್ರಕ್ರಿಯೆ ಮುಂದುವರಿಸಲು ಸಚಿವಾಲಯ ಸಮ್ಮತಿ ಸೂಚಿಸಿದೆ.

ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ)ನ ಕ್ಲರ್ಕ್ ಹುದ್ದೆಗಳ ನೇಮಕಾತಿಗೂ ಈ ಆದೇಶ ಅನ್ವಯವಾಗಲಿದೆ. ಈಗಾಗಲೇ ಪೂರ್ವಭಾವಿ ಪರೀಕ್ಷೆ ಆಯೋಜಿಸಿ ಅಂತಿಮ ಹಂತದಲ್ಲಿರುವ ಎಸ್‌ಬಿಐನ ನೇಮಕಾತಿ ಪ್ರಕ್ರಿಯೆಯು ಈ ಹಿಂದಿನ ಅಧಿಸೂಚನೆಯಂತೆಯೇ ಪೂರ್ಣಗೊಳ್ಳಲಿದೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

1ನೇ ವರ್ಷದ ಪುಣ್ಯಸ್ಮರಣೆ

ಶ್ರೀ ಹೆಚ್. ಎಂ. ಚಂದ್ರಶೇಖರಯ್ಯ
Retd. Post Master, Bangalore
ಜನನ: 10–05–1945, ನಿಧನ : 04–10–2020
ನಿಮ್ಮ ಆದರ್ಶ ಜೀವನ ನಮಗೆ ಎಂದೆಂದೂ ಮಾರ್ಗದರ್ಶನ, ನಿಮ್ಮ ನೆನಪು ನಮಗೆ ಸದಾ ಹಸಿರು ಮತ್ತು ಸ್ಫೂರ್ತಿದಾಯಕ.
ಇಂತಿ ದು:ಖತಪ್ತರು: ಧರ್ಮಪತ್ನಿ ಶ್ರೀಮತಿ ಕಾಂತಮ್ಮ, ಪದ್ಮನಾಭ, ಲತಾ ಪದ್ಮನಾಭ, ಗಂಗಾಧರ, ಕವಿತ ಗಂಗಾಧರ, ನಿತಿನ್, ಸುಮಲತ ನಿತಿನ್, ಮೊಮ್ಮಕ್ಕಳು ಮತ್ತು ಕುಟುಂಬವರ್ಗದವರು
9886994711, 9538010606, 9900184653

ಮೊದಲನೇ ವರ್ಷದ ಪುಣ್ಯ ಸ್ಮರಣೆ

ಶ್ರೀಮತಿ. ವರದೇಶ್ವರಿ H.S.
ನಿಧನ : 02.10.2020
ನೀವು ನಮ್ಮನ್ನಗಲಿ ಇಂದಿಗೆ 1 ವರ್ಷ ಕಳೆದರು, ನಿಮ್ಮ ಸವಿನೆನಪು ನಮ್ಮ ಹೃದಯದಲ್ಲಿ ಹಚ್ಚ ಹಸಿರಾಗಿ ಉಳಿದಿದೆ.
ನಿಮ್ಮ ಆತ್ಮಕ್ಕೆ ಚಿರಶಾಂತಿ ಕರುಣಿಸಲೆಂದು ಭಗವಂತನಲ್ಲಿ ಸದಾ ಪ್ರಾರ್ಥಿಸುವ ಸದಾ ನಿಮ್ಮನ್ನು ನೆನೆದು ದುಃಖ ಭರಿತರಾಗಿರುವ ಪತಿ J.M.ಮುನೇಶ್ವರ ಸಾ ಮಕ್ಕಳು, J.M. ಸುಮಾ, J.M.ಸಂತೋಷ, J.M. ಸ್ವಾತಿ, ಸೊಸೆ ಜ್ಯೋತಿ ಹಾಗೂ ಅಳಿಯಂದಿರು, ಮೊಮ್ಮಕ್ಕಳು, ಅಪಾರ ಬಂಧು ಮಿತ್ರರು.
ಇಂತಿ
J.M.ಗ್ರೂಪ್
9986423464

15ನೇ ವರ್ಷದ ಪುಣ್ಯಸ್ಮರಣೆ



ಶ್ರೀ ತ. ರಂ. ಕೃಷ್ಣಗೌಡರು.
24.01.1934 – 02.10.2006
ನೀವು ನಮ್ಮ ಹೃದಯಗಳಲ್ಲಿ ಪ್ರೀತಿ ಚೇತನವಾಗಿದ್ದೀರಿ.
ಪತ್ನಿ ಜಯಲಕ್ಷ್ಮಿ. ಕೆ. ತಲಕಾಡ್ ಹಾಗೂ ಕುಟುಂಬದವರು.

ತಾಯಿ ಪ್ರೀತಿಗಿಂತ ಶ್ರೇಷ್ಠವಾದ ಪ್ರೀತಿಯಿಲ್ಲ.. ತಾಯಿಗಿಂತ ದೊಡ್ಡ ದೇವರಿಲ್ಲ...

ಭಾಗ್ಯ
Husband - Shri C S Byregowda, Family & Friends
1st year Pooja -03.10.2021,Sunday ,11.00 am at our Residence, Bangalore.
Mob: 9845972144 / 9845056308

On the occasion of 75th Anniversary of First Mysore Government formed in October 1947,
In revered memory of the First Home Minister of Mysore State.



T. MARIAPPA B.A, LL.B. [1904-1964]
MRA, MLC, MLA-1930-1962
First Home Minister Mysore State-1947-1952,
First Finance Minister of Karnataka-1956-1962
By T M Rajakumar B E
SUPDT ENGINEER ELEC (Rtd)
Mob: 9845014964

ಶ್ರೀಮತಿ. ಮೇಘು ಸುರೇಶ್
ಮರಣ : 22.09.2021
ಇವರ ತತ್ಸಂಬಂಧವಾದ ಉತ್ತರಕ್ರಿಯಾದಿ ದಿನಾಂಕ : 02.10.2021 ನೇ ಶನಿವಾರ ಬೆಳಿಗ್ಗೆ 7.05 ರಿಂದ 8.30 ರ ವೈಕುಂಠ ಸಮಾರಾಧನೆ ಯನ್ನು ನಮ್ಮ ಸ್ವಗೃಹದಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.
ಇಂತಿ ದುಃಖತಪ್ತರು
ಕುಟುಂಬಸ್ಥರು ಹಾಗೂ ಬಂಧು-ಮಿತ್ರರು
ಮೊ: 94493 99781

ವೈಕುಂಠ ಸಮಾರಾಧನೆ



ನಮ್ಮ ಪೂಜ್ಯ ತಂದೆಯವರಾದ
ಶ್ರೀ ಎನ್. ಆರ್. ರಂಗಯ್ಯ ಅವರು
ಸಹಕಾರಿ ಸಂಘಗಳ ಅಪರ ನಿಬಂಧಕರು (ನಿವೃತ್ತ)
ದಿ.27.09.2021ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾದ ಉತ್ತರಕ್ರಿಯಾದಿಗಳು ದಿ. 03.10.2021ರ ಭಾನುವಾರ ನಮ್ಮ ಸ್ವಗೃಹ ನಂ.243, 2ನೇ ಬ್ಲಾಕ್, 3ನೇ ಹಂತ, ಬಸವೇಶ್ವರನಗರ, ಬೆಂಗಳೂರು-79. ಇಲ್ಲಿ ನಡೆಸಲು ನಿಶ್ಚಯಿಸಲಾಗಿದೆ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.
ಇಂತಿ ದುಃಖತಪ್ತರು
ಮಕ್ಕಳಾದ ಆರ್. ಮಂಜುನಾಥ್, ಶುಭಾ, ಡಾ|| ಆರ್ ರಾಜೇಶ್ವರಿ, ಆರ್. ಅರುಣಾಕುಮಾರಿ, ಆರ್. ಪೂರ್ಣಿಮಾ ಮತ್ತು ಕುಟುಂಬವರ್ಗದವರು
ಮೊಬೈಲ್: 9945183273, 9448083273

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Domestic Helpers / Housekeeping

JOIN NOW in India's Largest House Keeping Company and earn 30,000 to 40,000 per month. For more details give a missed call at this number: 08045686600

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000ವರೆಗೆ ಸಂಪಾದಿಸಿ. ಕನ್ನಡ/ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8095377333/ 8095377444

ಕರ್ನಾಟಕದಾದ್ಯಂತ ಹೆಸರಾಂತ 450 ಕಂಪನಿ ಹಾಗೂ Office ಕೆಲಸಕ್ಕೆ ಯುವಕ ಯುವತಿಯರು ಬೇಕಾಗಿದ್ದಾರೆ ನೇರನೇಮಕಾತಿ, ವಸತಿಯೂಟದೊಂದಿಗೆ 16,200-65,000/- 7022366461, 8904049301

ಕರ್ನಾಟಕದಾದ್ಯಂತ ಪುನರಾರಂಭವಾಗಿರುವ ಪ್ರಸಿದ್ಧಕಂಪನಿ ಹಾಗೂ ಆಫೀಸ್ ಕೆಲಸಗಳಿಗೆ ಯುವಕ ಯುವತಿಯರು ಬೇಕಾಗಿದ್ದಾರೆ ವಸತಿಯೂಟದೊಂದಿಗೆ Salary+OT 16,800-45000/-. 7618763886, 7618760283

General

ತಕ್ಷಣ ಬೇಕಾಗಿದ್ದಾರೆ ಮಾರ್ಕೆಟಿಂಗ್ ಅಲ್ಲ MNC, TVS, TOYOTA, BRITANIYA ಕಂಪನಿಗಳಿಗೆ 7th,SSLC, PUC, Degree, DIPLOMA ಆದವರಿಗೆ, (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಊಟದೊಂದಿಗೆ ESI/PFನೊಂದಿಗೆ ಸಂಬಳ 16,000-80,000/- ಸಂಪರ್ಕಿಸಿ: 7829400441, 7829416611

ತಕ್ಷಣ ಬೇಕಾಗಿದ್ದಾರೆ ಹೊಸದಾದ ಕಂಪನಿಗಳಿಗೆ ಆಫೀಸ್‌ಗಳಿಗೆ 7th,SSLC, PUC,Degree ಆದವರಿಗೆ, (ವಿದ್ಯಾರ್ಹತೆಯಿಲ್ಲದವರಿಗೂ) ವಸತಿ ಊಟದೊಂದಿಗೆ ESI/PF ನೊಂದಿಗೆ ಸಂಬಳ 16,000-80,000/- ಸಂಪರ್ಕಿಸಿ: 8884486100, 7829919947

TOYOTA, ಟಾಟಾಮೋಟರ್ಸ್, ಬಿಗ್ ಬಜಾರ್ಸ್ ಬ್ರಿಟಾನಿಯಾಗಳಿಗೆ 5th,SSLC, Degree, ITI,Diploma ದವರು ನೇರನೇಮಕಾತಿಯಿದೆ.18,000-60,000 /- ವಸತಿಯೂಟವಿದೆ. 7795837319, 9901312461

ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟರ್ಸ್, ಹೊಂಡ ಆನ್‌ಲೈನ್ ಕಂಪನಿಗಳಿಗೆ 10ನೇ, ಪಿಯುಸಿ, ಡಿಗ್ರಿ, ಐಟಿಐ, ಡಿಪ್ಲೊಮಾದವರು 16,600-62000/-. ವಸತಿಯೂಟದೊಂದಿಗೆ 8123884588, 8123884788

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

★ಮನೆಯಿಂದಲೇ ಮೆಣದಬತ್ತಿ★ ತಯಾರಿಸಿ ನಮಗೆ ಮರಳಿಸಿ, ಪ್ರತಿದಿನ 500 ರಿಂದ 1000 ಸಂಪಾದಿಸಿ.ತರಬೇತಿಗಾಗಿ: ಬೆಂಗಳೂರು.9060472077, ಶಿವಮೊಗ್ಗ.9008012895

Wanted

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ, ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು ಉಚಿತ ಊಟ ವಸತಿ ಸಂಬಳ 10,000 ರಿಂದ 15,000/- ESI & PF ಸೌಲಭ್ಯವಿರುತ್ತದೆ. ಬೆಂಗಳೂರು -56 ಸಂಪರ್ಕಿಸಿ : 9606523337, 9606385001

Marketing & Sales

LOOKING FOR Sales Staff in Bangalore Showroom with 6 to 8 years experience in Jewellery. Salary starting from 25000 up to 35000. Food and Accommodation shall be provided by the Company. Contact B.B. Jewellers 9986577790

Walk-in

ವಾಂಟೆಡ್ ಪುರುಷ ಸೇಲ್ಸ್ ಎಕ್ಸಿಕ್ಯೂಟಿವ್ ಕನ್ನಡ ಸ್ಪೀಕಿಂಗ್, ಟೂ ವೀಲರ್ ಮ್ಯಾಂಡೇಟರಿ walk-in. ಅಟ್ರಾಕ್ಟಿವ್ ಇನ್ಸೆಂಟಿವ್ ಬಜಾಜ್ ಫೈನಾನ್ಸ್ ಪ್ರೆಸ್ಟೀಜ್ ಲಿಮಿಟೆಡ್, ಟವರ್ 8 ನೇ ಮಹಡಿ, ರೆಸಿಡೆನ್ಸಿ ರೋಡ್-560025 ಸಂಪರ್ಕಿಸಿ- 8147927081, 7899073558

ವ್ಯಾಪಾರ

Business Offers

Machinery & Tools

PVC CABLES Manufacturing Machines for Sale. Contact. No. 9845707084.

ಭವಿಷ್ಯ

Astrology

★ಅಂಭಾಭವಾನಿ★ ಜ್ಯೋತಿಷ್ಯಾಲಯ ಕೊಳ್ಳೆಗಾಲದ ನಂ.1 'ವಶೀಕರಣ ಸ್ಪೆಷಲಿಸ್ಟ್' ದೇವಿಪ್ರಸಾದ್. (ಉಚಿತ ಭವಿಷ್ಯ ಖಚಿತ ಪರಿಹಾರ) ನಿಮ್ಮ ಸಮಸ್ಯೆಗಳೇನೇಯಿರಲಿ 2ದಿನದಲ್ಲಿ ಪರಿಹಾರ.9886755306

"ವಶೀಕರಣಯಂತ್ರ" ಜನವಶೀಕರಣ, ಲಕ್ಷ್ಮಿವಶೀಕರಣ, ಸ್ತ್ರೀಪುರುಷ ವಶೀಕರಣ, ಶತ್ರು ವಶೀಕರಣ, ಕೇವಲ 2001 ರೂಪಾಯಿ ಗುರೂಜಿ ಮಹೇಶ್9686999517

ಶಕ್ತಿಶಾಲಿ ಮಹಾಲಕ್ಷ್ಮಿ ಯಂತ್ರ ವ್ಯಾಪಾರ ಅಭಿವೃದ್ಧಿ,ಹಣಕಾಸಿನ ಸಮಸ್ಯೆಯಿಂದ ಆರ್ಥಿಕ ಅಭಿವೃದ್ಧಿ ಹೊಂದಲು ಲಕ್ಷ್ಮಿಯಂತ್ರ ಕೊಡಲಾಗುತ್ತದೆ Rs.999 ಹಾಗೂ ಎಲ್ಲಾ ಕಠಿಣ ಸಮಸ್ಯೆಗಳಿಗೆ ಪರಿಹಾರ ಸಿಗುತ್ತದೆ: 9606701007, 8892501007

ಬಿಲ್ಡರ್ ಎಸೆನ್ಷಿಯಲ್

Water Proofing Materials

ಲೀಕೇಜ್.. ಲೀಕೇಜ್.. ನಿಮ್ಮ ಮನೆ, ಕಟ್ಟೇರಿಯ ಮೇಲ್ಛಾವಣಿ, ಸಂಪ್, ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ರಿಯಲ್ ಎಸ್ಟೇಟ್ ಸೆಲ್ಲಿಂಗ್

Mysore

GOVIANU LUXURIA, High-end Luxury Flat at Mysore, Zoo Road, near Mysore Mall, Rera-003588, www.govianu.com. 8103990990

ಪ್ರವಾಸ

Travel

10.11.2021, 4 ದಿನಗಳ ಗೋವಾ, ದೂದ್- ಸಾಗರ್. 24.11.2021, 12 ದಿನಗಳ ಗುಜರಾತ್, ಮಧ್ಯಪ್ರದೇಶ. 18.11.2021, 12 ದಿನಗಳ ಕಾಶಿ, ನೇಪಾಳ, ಮುಕ್ತಿನಾಥ. 11.11.2021, 12 ದಿನಗಳ ಸಂಪೂರ್ಣ ರಾಜಸ್ಥಾನ್. 11.11.2021 11 ದಿನಗಳ ಪುರಿ, ಕೊಲ್ಕತಾ, ಡಾರ್ಜಿಲಿಂಗ್. ಶ್ರೀಮಲ್ಲಿಕಾರ್ಜುನ ಟ್ರಾವೆಲ್ಸ್ ಬೆಂಗಳೂರು. 9880847001, 9342848791

28/10/21ರಿಂದ ವಿಮಾನದಲ್ಲಿ ನೇಪಾಳ ಪಶುಪತಿನಾಥ್ ಮುಕ್ತಿನಾಥ್ ಲುಂಬಿನಿ ಮತ್ತು ಕಾಶಿ ಶ್ರೀ ರಾಮ್ ಟೂರ್: 9036060610 / 9108933383

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

EDUCATION SPECIAL
We are coming out with special offer for Admission Notice, Education Success Congratulation Ads
DH DECCAN HERALD Classifieds More value, more impact
For details contact:
Jerry : 9731810277
Vishal : 9845114560
Tanveer: 9886213331
E-mail: dhclassifieds@deccanherald.co.in

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮ್ಯಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಆರ್ಥಿಕ ಅಶಿಸ್ತಿಗೆ ತಡೆಹಾಕಿ: ಬಿಡಿಎಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಾಕೀತು

₹7 ಸಾವಿರ ಕೋಟಿ ವೆಚ್ಚ: ಬೆಚ್ಚಿದ ಸಿ.ಎಂ

• ಪ್ರವೀಣ್ ಕುಮಾರ್ ಪಿ.ವಿ.

ಬೆಂಗಳೂರು: ₹ 7ಸಾವಿರ ಕೋಟಿಗೂ ಅಧಿಕ ಮೊತ್ತದ ಕೆಲಸ- ಕಾರ್ಯಗಳನ್ನು ಒಳಗೊಂಡ ಕಾರ್ಯಸೂಚಿಗಳಿಗೆ ಆಡಳಿತ ಮಂಡಳಿಯ ಒಂದೇ ಸಭೆಯಲ್ಲಿ ಅಂಗೀಕಾರ ಪಡೆಯುವ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಪ್ರಯತ್ನಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಸಮ್ಮತಿ ಸೂಚಿಸಿದ್ದಾರೆ.

ಆಡಳಿತ ಮಂಡಳಿ ಸಭೆಯಲ್ಲಿ ಅಂಗೀಕಾರ ಪಡೆಯಲು ಬಿಡಿಎ 63 ಕಾರ್ಯಸೂಚಿಗಳ ಪಟ್ಟಿಯನ್ನು ಸಿದ್ಧಪಡಿಸಿದೆ. ಇವುಗಳಲ್ಲಿ ಹಣಕಾಸು ಬಂಡವಾಳ ಬಯಸುವ 15 ವಿಷಯಗಳಿದ್ದು, ಇವುಗಳ ಅನುಷ್ಠಾನಕ್ಕೆ ₹ 7 ಸಾವಿರ ಕೋಟಿಗೂ ಅಧಿಕ ಮೊತ್ತದ ಅಗತ್ಯವಿದೆ. ಈ ಕಡತ ನೋಡಿದ ಬೊಮ್ಮಾಯಿ ಗಾಬರಿಯಾಗಿದ್ದಲ್ಲದೇ, ಆರ್ಥಿಕ ಅಶಿಸ್ತಿಗೆ ತಡೆಹಾಕಿ ಎಂದೂ ಎಚ್ಚರಿಕೆಯನ್ನೂ ಕೊಟ್ಟಿದ್ದಾರೆ ಎಂದು ಗೊತ್ತಾಗಿದೆ.

ಈ ಸಂಬಂಧ ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್ ಹಾಗೂ ಬಿಡಿಎ ಆಯುಕ್ತ ಎಂ.ಬಿ.ರಾಜೇಶ ಗೌಡ ಅವರಿಗೆ ಇದೇ 13ರಂದು ಟಿಪ್ಪಣಿ ಕಳುಹಿಸಿ, ಪ್ರಾಧಿಕಾರದಲ್ಲಿ ಆರ್ಥಿಕ ಶಿಸ್ತು ರೂಢಿಸಿಕೊಳ್ಳುವಂತೆ ಕಿವಿಹಿಂಡಿದ್ದಾರೆ. ಟಿಪ್ಪಣಿಯ ಪ್ರತಿ 'ಪ್ರಜಾವಾಣಿ'ಗೆ ಲಭ್ಯವಾಗಿದೆ.

ಒಂದೇ ಸಭೆಯಲ್ಲಿ 63 ವಿಷಯಗಳನ್ನು ಚರ್ಚಿಸುವ ಬದಲು, ಎರಡು ಸಭೆ ನಡೆಸುವಂತೆ ಹಾಗೂ ಹಣಕಾಸಿನ ಪರಿಣಾಮಗಳನ್ನು ಒಳಗೊಂಡ 15 ಕಾರ್ಯಸೂಚಿಗಳನ್ನು ಎರಡನೇ ಸಭೆಯಲ್ಲಿ ಚರ್ಚೆಗೆ ತೆಗೆದುಕೊಳ್ಳುವಂತೆ ಸೂಚನೆ ನೀಡಿದ್ದಾರೆ.

'15 ವಿಷಯಗಳಿಗೆ ಸಂಬಂಧಿಸಿದ ಚಟುವಟಿಕೆಗಳು, ಕಾಮಗಾರಿಗಳು ಹಾಗೂ ವ್ಯತ್ಯಾಸದ ಕಾಮಗಾರಿಗಳ ಅನುಷ್ಠಾನಕ್ಕೆ ₹ 7 ಸಾವಿರ ಕೋಟಿ ಬೇಕು. ಈಗಾಗಲೇ ಪ್ರಾರಂಭವಾಗಿರುವ ಹಾಗೂ ಪ್ರಸ್ತಾವನೆಯ ಹಂತದಲ್ಲಿರುವ ಕಾಮಗಾರಿಗಳನ್ನು ಪೂರ್ಣಗೊಳಿಸಲು ಹೆಚ್ಚಿನ ಹಣಕಾಸಿನ ಅವಶ್ಯಕತೆ ಇದೆ. ಈಗಿನ ಸಂದರ್ಭದಲ್ಲಿ ಮಂಡಳಿಯ ಮುಂದೆ ಇಂತಹ ವಿಷಯಗಳನ್ನು ಮಂಡಿಸುವುದಕ್ಕೆ ಮುನ್ನ ಬಿಡಿಎಯ ಹಣಕಾಸು ಸ್ಥಿತಿ ಅವಲೋಕಿಸಬೇಕಿದೆ' ಎಂದು ಮುಖ್ಯಮಂತ್ರಿ ಅವರು ಸೂಚಿಸಿದ್ದಾರೆ.

ಪ್ರಜಾವಾಣಿ ವಿಶೇಷ

ಸಭೆಯ ಕಾರ್ಯಸೂಚಿಗಳಿಗೆ ಸಂಬಂಧಿಸಿ ಎಚ್ಚರಿಕೆ ಕ್ರಮಗಳನ್ನು ಕೈಗೊಂಡ ಬಳಿಕ ಸರ್ಕಾರಕ್ಕೆ ವರದಿ ಸಲ್ಲಿಸಬೇಕು ಎಂದೂ ಮುಖ್ಯಮಂತ್ರಿ ತಾಕೀತು ಮಾಡಿದ್ದಾರೆ. ಬಿಡಿಎ, ತನ್ನ ಕೇಂದ್ರ ಕಚೇರಿಯ ಹಳೆ ಕಟ್ಟಡವನ್ನು ಕೆಡವಿ ಹೊಸ ಕಟ್ಟಡ ಸಂಕೀರ್ಣ ನಿರ್ಮಿಸಲು ಚಿಂತನೆ ನಡೆಸಿತ್ತು. ವಿವಿಧ ವಾಣಿಜ್ಯ ಸಂಕೀರ್ಣಗಳ ಅಭಿವೃದ್ಧಿಗೂ ಯೋಜನೆ ಹಾಕಿಕೊಂಡಿತ್ತು. ಗಟ್ಟಿಮುಟ್ಟಾಗಿರುವ ಕೇಂದ್ರ ಕಚೇರಿಯ ಕಟ್ಟಡವನ್ನು ಕೆಡಹುವುದು ಸೂಕ್ತವಲ್ಲ ಎಂಬ ಟೀಕೆ ವ್ಯಕ್ತವಾಗಿತ್ತು. ಕೋವಿಡ್‌ನಿಂದ ಆರ್ಥಿಕ ಮುಗ್ಗಟ್ಟು ಎದುರಿಸುತ್ತಿರುವ ಸಂದರ್ಭದಲ್ಲಿ ಹೊಸ ಕಟ್ಟಡಕ್ಕಾಗಿ ₹ 250 ಕೋಟಿಗೂ ಅಧಿಕ ಹೂಡಿಕೆ ಮಾಡುವ ಔಚಿತ್ಯದ ಬಗ್ಗೆಯೂ ಆಕ್ಷೇಪ ವ್ಯಕ್ತವಾಗಿತ್ತು.

2021ರ ಮೇ 17ರ ಬಳಿಕ ಬಿಡಿಎ ಆಡಳಿತ ಮಂಡಳಿ ಸಭೆ ನಡೆದಿಲ್ಲ. ಆ ಬಳಿಕ ಮೂರು ಬಾರಿ ಸಭೆ ನಡೆಸುವ ಪ್ರಯತ್ನಗಳು ನಡೆದಿದ್ದವು. ಆದರೆ, ಕೊನೆಯ ಕ್ಷಣಗಳಲ್ಲಿ ಸಭೆಯನ್ನು ಮುಂದೂಡಲಾಗಿತ್ತು.

ಬಿಕರಿಯಾಗದ ಫ್ಲ್ಯಾಟ್: ಅಸಮಾಧಾನ

ವಸತಿ ಸಮುಚ್ಚಯಗಳನ್ನು ನಿರ್ಮಿಸಿ ಅವುಗಳನ್ನು ಮಾರಾಟ ಮಾಡಲು ಹೆಣಗಾಡುತ್ತಿರುವ ಬಿಡಿಎ ವೈಫಲ್ಯದತ್ತಲೂ ಮುಖ್ಯಮಂತ್ರಿ ಬೊಟ್ಟು ಮಾಡಿದ್ದಾರೆ.

'ವಿವಿಧ ವಸತಿ ಯೋಜನೆಗಳಲ್ಲಿ ಫ್ಲ್ಯಾಟ್‌ಗಳು ಮಾರಾಟವಾಗದೇ ದೀರ್ಘಕಾಲದಿಂದ ಹಾಗೆಯೇ ಉಳಿದಿವೆ. ಇದರಿಂದ ಹಣಕಾಸಿನ ಹರಿವಿಗೆ ಅಡ್ಡಿಯಾಗಿದೆ. ಹೊಸ ವಸತಿ ಯೋಜನೆಗಳನ್ನು ಕೈಗೆತ್ತಿಕೊಳ್ಳುವ ಮುನ್ನವೂ ಪ್ರಾಧಿಕಾರ ಎಚ್ಚರಿಕೆ ವಹಿಸಬೇಕು' ಎಂದು ಮುಖ್ಯಮಂತ್ರಿ ಸೂಚಿಸಿದ್ದಾರೆ.

ಕುಂದುಕೊರತೆ ಜನದನಿ

ನಿಮ್ಮ ಪ್ರದೇಶದಲ್ಲಿ ಜಲಮಂಡಳಿ ಸಮರ್ಪಕವಾಗಿ ನೀರು ಪೂರೈಸುತ್ತಿಲ್ಲವೇ? ನೀವು ಓಡಾಡುವ ರಸ್ತೆಯಲ್ಲಿ ಗುಂಡಿ ಬಿದ್ದಿದೆಯೇ? ಕಸ ರಾಶಿ ಬಿದ್ದಿದೆಯೇ ಅಥವಾ ನಿತ್ಯ ವಿಹಾರಕ್ಕೆ ಹೋಗುವ ಉದ್ಯಾನ ಪಾಳುಬಿದ್ದಿದೆಯೇ? ಬಸ್‌ಗಳು ಬರುತ್ತಿಲ್ಲವೇ? ಸಮಸ್ಯೆಗಳು ತಾಂಡವವಾಡುತ್ತಿವೆಯೇ? . . .
ನಿಮ್ಮ ಅಹವಾಲುಗಳಿಗೆ 'ಪ್ರಜಾವಾಣಿ' ಧ್ವನಿಯಾಗಲಿದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ), ಜಲಮಂಡಳಿ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ (ಬಿಎಂಟಿಸಿ), ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಗೆ (ಬೆಸ್ಕಾಂ) ಸಂಬಂಧಿಸಿದ ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.
ನಿಮ್ಮ ಅಹವಾಲುಗಳನ್ನು ಇ ಮೇಲ್ ಮಾಡಬೇಕಾದ ವಿಳಾಸ: peoplesproblem@prajavani.co.in.
ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (9606038256) ಸಹ ಮಾಡಬಹುದು.

ಆದ್ಯತಾ ಪಥ: ಐ.ಟಿ ಕಂಪನಿ ಬಸ್‌ಗಳಿಗೂ ಅನುಮತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊರವರ್ತುಲ ರಸ್ತೆಯಲ್ಲಿನ ಬಸ್ ಆದ್ಯತಾ ಪಥದಲ್ಲಿ ಮಾಹಿತಿ ತಂತ್ರಜ್ಞಾನ (ಐ.ಟಿ) ಕಂಪನಿಗಳ ಬಸ್‌ಗಳ ಸಂಚಾರಕ್ಕೂ ನಗರ ಭೂಸಾರಿಗೆ ನಿರ್ದೇಶನಾಲಯ (ಡಲ್ಟ್) ಅನುಮತಿ ನೀಡಿದೆ.

ಸಿಲ್ಕ್ ಬೋರ್ಡ್‌ನಿಂದ ಟಿನ್ ಫ್ಯಾಕ್ಟರಿ ತನಕ ಒಟ್ಟು 16 ಕಿಲೋ ಮೀಟರ್‌ನಲ್ಲಿ ಆರು ಪಥದ ರಸ್ತೆ ಇದೆ. ಎರಡೂ ಕಡೆ ತಲಾ ಮೂರು ಪಥದ ರಸ್ತೆ ಇದ್ದು, ಇದರಲ್ಲಿ ಒಂದನ್ನು ಬಸ್ ಆದ್ಯತಾ ಪಥವಾಗಿ ಪರಿವರ್ತಿಸಲಾಗಿದೆ. ಉಳಿದ ಎರಡು ಪಥದಲ್ಲಿ ಬಹುತೇಕ ಒಂದು ಪಥದಲ್ಲಿ ಮೆಟ್ರೊ ಮಾರ್ಗದ (ರೀಚ್2ಎ) ಕಾಮಗಾರಿಗೆ ಬ್ಯಾರಿಕೇಡ್ ಜೋಡಿಸಲಾಗಿದೆ. ಉಳಿದ ಒಂದು ಪಥದಲ್ಲಿ ಲಾರಿ, ಕಾರು, ಆಟೋರಿಕ್ಷಾ, ದ್ವಿಚಕ್ರ ವಾಹನ, ಖಾಸಗಿ ಬಸ್‌ಗಳು ಸಂಚರಿಸಬೇಕಿದೆ.

ಈ ರಸ್ತೆಯ ಉದ್ದಕ್ಕೂ ಇರುವ ಐ.ಟಿ ಕಂಪನಿಗಳು ಲಾಕ್‌ಡೌನ್ ತೆರವಾದ ಬಳಿಕ ನಿಧಾನವಾಗಿ ಕಚೇರಿಯಿಂದ ಕೆಲಸ ಆರಂಭಿಸುತ್ತಿವೆ. ಈ ಕಂಪನಿಗಳ ಸುಮಾರು 1,500 ಬಸ್‌ಗಳು ಪ್ರತಿನಿತ್ಯ ಸಂಚರಿಸಲಿವೆ ಎಂದು ಅಂದಾಜಿಸಲಾಗಿದೆ. ಬಸ್ ಆದ್ಯತಾ ಪಥದಲ್ಲಿ ಈ ಬಸ್‌ಗಳ ಸಂಚಾರಕ್ಕೆ ಅನುಮತಿ ನೀಡಿರುವುದು ಐ.ಟಿ ಕಂಪನಿ ಉದ್ಯೋಗಿಗಳಿಗೆ ಮಾತ್ರವಲ್ಲದೇ, ಸಾಮಾನ್ಯ ವಾಹನಗಳ ಸಂಚಾರಕ್ಕೆ ಉಳಿದಿದ್ದ ಒಂದೇ ಒಂದು ಪಥದಲ್ಲೂ ದಟ್ಟಣೆ ಕಡಿಮೆ ಮಾಡಲಿದೆ.

'ಕಂಪನಿ ಬಸ್‌ಗಳು ಅಲ್ಲಲ್ಲಿ ನಿಲ್ಲಿಸಲು ಅನುಮತಿ ನೀಡಲಾಗಿದ್ದು, ಈ ಸಂಬಂಧ ಜಂಟಿ ಪೊಲೀಸ್ ಆಯುಕ್ತ(ಸಂಚಾರ) ರವಿಕಾಂತೇಗೌಡ ಅವರೊಂದಿಗೆ ಚರ್ಚೆ ನಡೆಸಲಾಗಿದೆ' ಎಂದು ಡಲ್ಟ್ ಆಯುಕ್ತೆ ವಿ. ಮಂಜುಳಾ ತಿಳಿಸಿದರು.

'ಆದ್ಯತಾ ಪಥದಲ್ಲಿ ಸಂಚರಿಸುವ ಬಸ್‌ಗಳು ತಮ್ಮ ಕಂಪನಿಯ ಹೆಸರು ಮತ್ತು ಲಾಂಛನವನ್ನು ಪ್ರದರ್ಶಿಸಬೇಕು. ಟ್ಯಾಕ್ಸಿಯಲ್ಲಿ ಸಂಚರಿಸುವ ಉದ್ಯೋಗಿಗಳು ಬಸ್ ಆದ್ಯತಾ ಪಥದಲ್ಲಿ ಸಂಚರಿಸಲು ಅವಕಾಶ ಇರುವುದಿಲ್ಲ' ಎಂದು ಹೇಳಿದರು.

ಡಲ್ಟ್ ನೀಡಿರುವ ಈ ಅನುಮತಿಯನ್ನು ಹೊರ ವರ್ತುಲ ರಸ್ತೆ ಕಂಪನಿಗಳ ಸಂಘ(ಒಆರ್‌ಆರ್‌ಸಿಎ) ಸ್ವಾಗತಿಸಿದೆ. 'ನಾವು ನೀಡಿದ್ದ ಮನವಿಗೆ ಡಲ್ಟ್ ಸ್ಪಂದಿಸಿದೆ. ಉದ್ಯೋಗಿಗಳು ಸರಿಯಾದ ಸಮಯಕ್ಕೆ ಕರ್ತವ್ಯಕ್ಕೆ ಹಾಜರಾಗಲು ಇದು ಸಹಾಯ ಆಗಲಿದೆ' ಎಂದು ಸಂಘದ ಕಾರ್ಯನಿರ್ವಾಹಕ ವ್ಯವಸ್ಥಾಪಕ ಕೃಷ್ಣಕುಮಾರ್ ಗೌಡ ತಿಳಿಸಿದರು.

ಹೊರ ವರ್ತುಲ ರಸ್ತೆಯಲ್ಲಿ ಮೆಟ್ರೊ ರೈಲು ಮಾರ್ಗದ ಕಾಮಗಾರಿ ನಡೆಯುತ್ತಿರುವುದು

ಕೋವಿಡ್: ₹ 12 ಕೋಟಿ ನೆರವು ಘೋಷಣೆ

ಬೆಂಗಳೂರು: 'ಕೋವಿಡ್‌ನಿಂದ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ ಕೋಲಾರದ 2.40 ಲಕ್ಷ ಜನರಿಗೆ ಹಾಗೂ 20 ಸಾವಿರ ವಿದ್ಯಾರ್ಥಿಗಳಿಗೆ ₹ 12 ಕೋಟಿ ನೆರವು ನೀಡಲಾಗುವುದು' ಎಂದು ಉಮ್ರಾ ಚಾರಿಟಬಲ್ ಟ್ರಸ್ಟ್‌ನ ಸಂಸ್ಥಾಪಕ ಕೆ.ಜಿ.ಎಫ್. ಬಾಬು ತಿಳಿಸಿದರು.

ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಕೋವಿಡ್ ಕಾಣಿಸಿಕೊಂಡ ಬಳಿಕ ಹಲವಾರು ಮಂದಿ ಉದ್ಯೋಗ ಕಳೆದುಕೊಂಡಿದ್ದಾರೆ. ಇದರಿಂದ ಹಲವರಿಗೆ ಕುಟುಂಬ ನಿರ್ವಹಣೆ ಸವಾಲಾಗಿದೆ. ಸಂಕಷ್ಟದಲ್ಲಿರುವ ಕುಟುಂಬಗಳಿಗೆ ಸದಸ್ಯರ ಸಂಖ್ಯೆಯನ್ನು ಆಧರಿಸಿ ₹ 2 ಸಾವಿರದಿಂದ ₹ 5 ಸಾವಿರದವರೆಗೆ ನೆರವು ನೀಡಲಾಗುವುದು. ಈ ಕಾರ್ಯಕ್ಕೆ ಅ.10ರಂದು ನರಸಾಪುರದಲ್ಲಿ ಚಾಲನೆ ನೀಡಲಾಗುತ್ತದೆ' ಎಂದರು.

'ಈ ಆರ್ಥಿಕ ನೆರವು ಪಡೆಯಲು ಇಚ್ಛಿಸುವವರು ಮತದಾರರ ಗುರುತಿನ ಚೀಟಿ, ಆಧಾರ್ ಕಾರ್ಡ್ ಮತ್ತು ಬ್ಯಾಂಕ್ ಖಾತೆಯ ವಿವರದ ಜೊತೆಗೆ ಅರ್ಜಿ ಸಲ್ಲಿಸಬೇಕು. ಈ ಬಗ್ಗೆ ಹೆಚ್ಚಿನ ಮಾಹಿತಿಗೆ ಮೊ. 9845070999ಕ್ಕೆ ಸಂಪರ್ಕಿಸಬಹುದು' ಎಂದು ಹೇಳಿದರು.

ಕೋವಿಡ್-19 ಪ್ರಕರಣ 29.76 ಲಕ್ಷಕ್ಕೆ ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಶುಕ್ರವಾರ 589 ಮಂದಿ ಕೋವಿಡ್ ಪೀಡಿತರಾಗಿರುವುದು ದೃಢಪಟ್ಟಿದ್ದು, ಈವರೆಗೆ ಸೋಂಕಿತರಾದವರ ಒಟ್ಟು ಸಂಖ್ಯೆ 29.76 ಲಕ್ಷ ದಾಟಿದೆ.

14 ದಿನಗಳಿಂದ ಹೊಸ ಪ್ರಕರಣಗಳು ಸಾವಿರದ ಗಡಿಯೊಳಗಡೆ ಇವೆ. ಒಂದು ದಿನದ ಅವಧಿಯಲ್ಲಿ 1.26 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಸೋಂಕು ದೃಢ ಪ್ರಮಾಣವು ಶೇ 0.46 ರಷ್ಟು ವರದಿಯಾಗಿದೆ. 10 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ, 12 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ. ಬಾಗಲಕೋಟೆ, ಬೀದರ್, ಗದಗ, ಕಲಬುರ್ಗಿ, ರಾಯಚೂರು, ವಿಜಯಪುರ, ಹಾಗೂ ಯಾದಗಿರಿಯಲ್ಲಿ ಹೊಸ ಪ್ರಕರಣ ವರದಿಯಾಗಿಲ್ಲ.

ಕೇರಳಕ್ಕೆ ಹೊಂದಿಕೊಂಡಿರುವ ಗಡಿ ಜಿಲ್ಲೆಗಳಾದ ದಕ್ಷಿಣ ಕನ್ನಡದಲ್ಲಿ 86, ಮೈಸೂರಿನಲ್ಲಿ 37 ಹಾಗೂ ಕೊಡಗಿನಲ್ಲಿ 34 ಪ್ರಕರಣಗಳು ಪತ್ತೆಯಾಗಿವೆ. ಬೆಂಗಳೂರಿನಲ್ಲಿ 221 ಮಂದಿ ಸೋಂಕಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 50ರ ಗಡಿಯೊಳಗೆ ಇವೆ.

ಕೋವಿಡ್ ಪೀಡಿತರಲ್ಲಿ 13 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ. 8 ಜಿಲ್ಲೆಗಳಲ್ಲಿ ಹೊಸದಾಗಿ ಮರಣ ಪ್ರಕರಣಗಳು ವರದಿಯಾಗಿವೆ. ಬೆಂಗಳೂರಿನಲ್ಲಿ 5, ದಕ್ಷಿಣ ಕನ್ನಡದಲ್ಲಿ 2, ಬಾಗಲಕೋಟೆ, ಬೆಳಗಾವಿ, ಬೆಂಗಳೂರು ಗ್ರಾಮಾಂತರ, ಹಾವೇರಿ, ಮೈಸೂರು ಹಾಗೂ ರಾಮನಗರದಲ್ಲಿ ತಲಾ ಒಬ್ಬರು ಸಾವಿಗೀಡಾಗಿದ್ದಾರೆ.

ಮರಣ ಪ್ರಮಾಣ ದರವು ಶೇ 2.20 ರಷ್ಟು ವರದಿಯಾಗಿದೆ. ಕೋವಿಡ್‌ನಿಂದ ಮೃತಪಟ್ಟವರ ಒಟ್ಟು ಸಂಖ್ಯೆ 37,807ಕ್ಕೆ ತಲುಪಿದೆ.

ಸೋಂಕಿತರಲ್ಲಿ 887 ಮಂದಿ ಚೇತರಿಸಿಕೊಂಡಿದ್ದಾರೆ. ಗುಣಮುಖರಾದವರ ಒಟ್ಟು ಸಂಖ್ಯೆ 29.26 ಲಕ್ಷ ದಾಟಿದೆ. ಕೋವಿಡ್ ಸಕ್ರಿಯ ಪ್ರಕರಣಗಳ ಸಂಖ್ಯೆ 12,469ಕ್ಕೆ ಇಳಿಕೆಯಾಗಿದೆ.

ಬೆಂಗಳೂರು ನಗರ ಜಿಲ್ಲಾ ಕೋವಿಡ್ ಅಂಕಿ-ಅಂಶ

12,46,651 ಒಟ್ಟು ಪ್ರಕರಣಗಳು ▲
(12,46,430 ನಿನ್ನೆಯ ವಿವರ)

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
7,627 ▲	12,22,863 ▲	16,160 ▲

ದಿನದ ಏರಿಕೆ

ಹೊಸ ಪ್ರಕರಣ	221 ▼
ಗುಣಮುಖ	212 ▲
ಸಾವು	05

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಕೋವಿಡ್ ಅಂಕಿ–ಅಂಶ
ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	23.48 ಕೋಟಿ ▲	3.37 ಕೋಟಿ
ಸಕ್ರಿಯ ಪ್ರಕರಣ	1.84 ಕೋಟಿ ▲	2.67 ಲಕ್ಷ ▼
ಗುಣಮುಖ	21.15 ಕೋಟಿ ▲	3.30 ಕೋಟಿ
ಸಾವು	48.01 ಲಕ್ಷ ▲	4.48 ಲಕ್ಷ

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	4.89 ಲಕ್ಷ ▼	23,873 ▼
ಗುಣಮುಖ	4.74 ಲಕ್ಷ ▼	24,470 ▲
ಸಾವು	7,828 ▼	233 ▼

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)
1.13 ಲಕ್ಷ ಅಮೆರಿಕ ▼
36,480 ಬ್ರಿಟನ್ ▲
27,527 ಬ್ರೆಜಿಲ್

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ)
98.75 ಅಮೆರಿಕ ▲
13.46 ಬ್ರಿಟನ್ ▲
4.05 ಬ್ರೆಜಿಲ್
* ರಾತ್ರಿ 12 ಗಂಟೆಯ ವರೆಗಿನ ಮಾಹಿತಿ

ಎಲ್ಲಿ ಹೆಚ್ಚು ಸಾವು
1.39 ಲಕ್ಷ ಮಹಾರಾಷ್ಟ್ರ
35,603 ತಮಿಳುನಾಡು ▲
25,087 ದೆಹಲಿ

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)
65.53 ಮಹಾರಾಷ್ಟ್ರ
46.94 ಕೇರಳ ▲
26.65 ತಮಿಳುನಾಡು ▲

ಪ್ರಜಾವಾಣಿ ಗ್ರಾಫಿಕ್ಸ್

'ಒತ್ತಡಕ್ಕೆ ಮಣಿಯದೆ ಅರ್ಹರನ್ನೇ ಆಯ್ಕೆ ಮಾಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯೋತ್ಸವ ಪ್ರಶಸ್ತಿಗೆ ನನ್ನ ಕಡೆಯಿಂದ ಯಾವುದೇ ಹೆಸರುಗಳನ್ನು ಶಿಫಾರಸು ಮಾಡುವುದಿಲ್ಲ. ನೀವೂ ಒತ್ತಡಕ್ಕೆ ಒಳಗಾಗದೇ ಅರ್ಹರನ್ನೇ ಆಯ್ಕೆ ಮಾಡಿ' ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ.ಸುನಿಲ್ ಕುಮಾರ್ ಪ್ರಶಸ್ತಿ ಆಯ್ಕೆ ಸಮಿತಿಗೆ ಸೂಚಿಸಿದ್ದಾರೆ.

ಸಮಿತಿ ರಚನೆ ಆದ ಬಳಿಕ ಗುರುವಾರ ಸಮಿತಿ ಸದಸ್ಯರ ಮೊದಲ ಸಭೆಯನ್ನು ಕರೆದಿದ್ದ ಅವರು, 'ಸಾಧನೆ, ಅರ್ಹತೆ ಮತ್ತು ವಯಸ್ಸು ಇವುಗಳಿಗಷ್ಟೇ ಗಮನ ಕೊಡಿ. ಆಯ್ಕೆ ಪ್ರಕ್ರಿಯೆ ವಿಚಾರದಲ್ಲಿ ತಲೆ ಹಾಕುವುದಿಲ್ಲ. ಶ್ರೇಷ್ಠ ವ್ಯಕ್ತಿಗಳನ್ನೇ ಆಯ್ಕೆ ಮಾಡುವ ಪರಂಪರೆಗೆ ನಾಂದಿ ಹಾಡಬೇಕು. ಮುಂದಿನ ವರ್ಷಕ್ಕೆ ಇನ್ನಷ್ಟು ಸುಧಾರಣೆ ಮಾಡಬಹುದು' ಎಂದು ಹೇಳಿರುವುದಾಗಿ ಮೂಲಗಳು ತಿಳಿಸಿವೆ.

'ಸಮಿತಿ ಕೋಟಾ, ಸದಸ್ಯರ ಕೋಟಾ ಎಂಬುದು ಇಲ್ಲ. ಸ್ವಯಂ ಹಿತಾಸಕ್ತಿಯೂ ಬೇಕಾಗಿಲ್ಲ. ಒಟ್ಟು 180 ಹೆಸರುಗಳನ್ನು ಮುಖ್ಯಮಂತ್ರಿಯವರಿಗೆ ಕಳುಹಿಸಲಾಗುವುದು. ಅಂತಿಮವಾಗಿ ಮುಖ್ಯಮಂತ್ರಿ ನೇತೃತ್ವದ ಸಮಿತಿ 66 ಮಂದಿಯನ್ನು ಆಯ್ಕೆ ಮಾಡಲಿದೆ' ಎಂದು ಅವರು ಸಭೆಗೆ ಮಾಹಿತಿ ನೀಡಿದರು.

ಪ್ರಶಸ್ತಿಗೆ ಅರ್ಹರ ಹೆಸರನ್ನು ಸೂಚಿಸುವಂತೆ ಸುನಿಲ್ ಕುಮಾರ್ ಅವರು ಸಾರ್ವಜನಿಕರಿಗೆ ಕರೆ ನೀಡಿದ ಬಳಿಕ ಸಾಕಷ್ಟು ಹೆಸರುಗಳನ್ನು ಸಾರ್ವಜನಿಕರು ಸೂಚಿಸಲಾರಂಭಿಸಿದ್ದಾರೆ. ಅಲ್ಲದೆ, ಸಚಿವರು ಮತ್ತು ಪ್ರಭಾವಿಗಳ ಮೂಲಕವೂ ಕೆಲವರು ಪ್ರಶಸ್ತಿಗಾಗಿ ಪ್ರಯತ್ನ ಆರಂಭಿಸಿದ್ದಾರೆ ಎಂದೂ ಮೂಲಗಳು ಹೇಳಿವೆ.

60 ವರ್ಷ ವಯಸ್ಸು ಮೇಲ್ಪಟ್ಟ ಮತ್ತು ನಾಡು- ನುಡಿಗಾಗಿ ಹಾಗೂ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿರುವವರಿಗೆ ರಾಜ್ಯೋತ್ಸವ ಪ್ರಶಸ್ತಿ ನೀಡಲಾಗುವುದು. ಈ ಹಿಂದೆ ಸಾಕಷ್ಟು ಬಾರಿ ಅರ್ಹರಲ್ಲದವರಿಗೂ ಪ್ರಶಸ್ತಿ ನೀಡಿ ಸರ್ಕಾರ ಟೀಕೆಗೆ ಒಳಗಾಗಿತ್ತು. ಪ್ರಶಸ್ತಿಗಾಗಿ ಕೆಲವರು ಸಚಿವ ಮನೆಗಳ ಮುಂದೆ ಧರಣಿ ಮಾಡಿದ, ಆತ್ಮಹತ್ಯೆ ಮಾಡಿಕೊಳ್ಳುವ ಬೆದರಿಕೆ ಹಾಕಿದ ಪ್ರಸಂಗಗಳೂ ನಡೆದಿವೆ.

'ಚುನಾವಣೆಯಲ್ಲಿ ಬೊಮ್ಮಾಯಿ ನಾಯಕತ್ವಕ್ಕೆ ಬೆಂಬಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನಾಯಕತ್ವದಲ್ಲೇ ಬಿಜೆಪಿ ಮುಂದಿನ ವಿಧಾನಸಭಾ ಚುನಾವಣೆ ಎದುರಿಸಲಿದೆ ಎಂಬ ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿಕೆಗೆ ನಾನು ಬದ್ಧ. ಬೊಮ್ಮಾಯಿ ನಾಯಕತ್ವಕ್ಕೆ ನನ್ನ ಬೆಂಬಲವಿದೆ' ಎಂದು ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿಯೂ ಆಗಿರುವ ಶಾಸಕ ಎಂ.ಪಿ. ರೇಣುಕಾಚಾರ್ಯ ಹೇಳಿದರು.

ವಿಕಾಸಸೌಧದಲ್ಲಿ ಶುಕ್ರವಾರ ತಮ್ಮ ಅಧಿಕೃತ ಕಚೇರಿಯ ಪೂಜೆ ನೆರವೇರಿಸಿದ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಮುಖ್ಯಮಂತ್ರಿ ಹುದ್ದೆಯಲ್ಲಿರುವವರ ನೇತೃತ್ವದಲ್ಲೇ ಚುನಾವಣೆ ಎದುರಿಸುವುದು ಸಹಜ ಸಂಗತಿ. ಬಿ.ಎಸ್. ಯಡಿಯೂರಪ್ಪ ಸೇರಿದಂತೆ ಸಾಮೂಹಿಕ ನಾಯಕತ್ವದಲ್ಲಿ ಚುನಾವಣೆ ಎದುರಿಸುತ್ತೇವೆ ಎಂದು ಬೊಮ್ಮಾಯಿ ಈಗಾಗಲೇ ಹೇಳಿದ್ದಾರೆ. ನಮಗೆ ಗೆಲುವು ಮುಖ್ಯ' ಎಂದರು.

'ಯಡಿಯೂರಪ್ಪ ಅವರು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲೂ ರಾಜಕೀಯ ಕಾರ್ಯದರ್ಶಿ ಹುದ್ದೆಯಲ್ಲಿದ್ದೆ. ಈಗಲೂ ಅದೇ ಹುದ್ದೆ ನೀಡಿದ್ದಾರೆ. ನಾನು ಯಾವತ್ತೂ ಬದಲಾಗುವುದಿಲ್ಲ. ಅದೇ ರೀತಿ ಕೆಲಸ ಮಾಡುತ್ತೇನೆ' ಎಂದರು.

ಹೆಣ್ಣೂರು ಜಂಕ್ಷನ್‌ನಲ್ಲಿ 'ಕಾಸಾಗ್ರ್ಯಾಂಡ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹೆಣ್ಣೂರು ಜಂಕ್ಷನ್‌ನಲ್ಲಿ 'ಕಾಸಾಗ್ರ್ಯಾಂಡ್' ಕಂಪನಿಯು 'ಕಾಸಾಗ್ರ್ಯಾಂಡ್ ಒರ್ಲೆನಾ' ಎನ್ನುವ ಹೊಸ ಯೋಜನೆಯನ್ನು ಅನಾವರಣಗೊಳಿಸಿದೆ.

ನಾಲ್ಕು ಎಕರೆ ಪ್ರದೇಶದಲ್ಲಿ 296 ಆಧುನಿಕ ಅಪಾರ್ಟ್‌ಮೆಂಟ್ ಸಮುಚ್ಚಯಗಳನ್ನು ನಿರ್ಮಿಸಲಾಗಿದೆ. ಅತ್ಯಾಧುನಿಕ ಐಷಾರಾಮಿ ಸೌಲಭ್ಯಗಳನ್ನು ಇಲ್ಲಿ ಕಲ್ಪಿಸಲಾಗಿದೆ. 1,078 ಚದರ ಅಡಿಯಿಂದ 1,733 ಚದರ ಅಡಿಯವರೆಗಿನ 2 ಮತ್ತು 3 ಬಿಎಚ್‌ಕೆ ಹೊಂದಿರುವ ಐಷಾರಾಮಿ ಅಪಾರ್ಟ್‌ಮೆಂಟ್ ಸಮುಚ್ಚಯಗಳನ್ನು ನಿರ್ಮಿಸಲಾಗಿದೆ.

24,500 ಚದರ ಅಡಿಯ ಕ್ಲಬ್‌ಹೌಸ್ ಅನ್ನು ಸಹ ನಿರ್ಮಿಸಲಾಗಿದೆ. ಒಳಾಂಗಣ ಬ್ಯಾಡ್ಮಿಂಟನ್ ಮೈದಾನ, ಈಜುಕೊಳ, ಜಿಮ್ ಸೇರಿದಂತೆ ಹಲವಾರು ಸೌಲಭ್ಯಗಳನ್ನು ಕಲ್ಪಿಸಲಾಗಿದೆ.

'ವೃತ್ತಿಪರರಿಗೆ ಈ ಯೋಜನೆಯು ಅತ್ಯಂತ ಅನುಕೂಲವಾಗಿದೆ. ಮಾನ್ಯತಾ ಟೆಕ್ ಪಾರ್ಕ್‌ಗೆ ಅತಿ ಹತ್ತಿರದಲ್ಲಿದೆ. ಕಾಸಾಗ್ರ್ಯಾಂಡ್‌ನ ಹಿಂದಿನ ಯೋಜನೆಗಳಿಗೆ ಖರೀದಿದಾರರಿಂದ ಅತ್ಯುತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ನಗರದಲ್ಲಿ ಮನೆ ಹೊಂದಲು ಬಯಸುವವರಿಗೆ ಈ ಯೋಜನೆಯು ಅತ್ಯುತ್ತಮವಾಗಿದೆ' ಎಂದು ಕಾಸಾಗ್ರ್ಯಾಂಡ್‌ನ ಬೆಂಗಳೂರು ವಲಯದ ನಿರ್ದೇಶಕ ಸಿ.ಜಿ. ಸತೀಶ್ ತಿಳಿಸಿದ್ದಾರೆ.

'ಮನೆಗಳನ್ನು ಯೋಗ್ಯದರದಲ್ಲಿ ಮಾರಾಟ ಮಾಡಲು ಕಂಪನಿ ಮುಂದಾಗಿದ್ದು, ಚದರ ಅಡಿಗೆ ₹4,999 ದರ ನಿಗದಿ ಮಾಡಲಾಗಿದೆ. ಈ ಅಪಾರ್ಟ್‌ಮೆಂಟ್ ಸಮುಚ್ಚಯಗಳು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ, ಶಾಲೆ ಮತ್ತು ಕಾಲೇಜುಗಳು ಹಾಗೂ ಆಸ್ಪತ್ರೆಗಳ ಸಮೀಪದಲ್ಲಿವೆ' ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹೆಣ್ಣೂರು ಜಂಕ್ಷನ್‌ನಲ್ಲಿ 'ಕಾಸಾಗ್ರ್ಯಾಂಡ್' ಕಂಪನಿಯ ಅಪಾರ್ಟ್‌ಮೆಂಟ್‌ಗಳು

ಸಂಜಯ್ ಪಾಟೀಲ ವಿರುದ್ಧ ಕಾಂಗ್ರೆಸ್ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾತ್ರಿ ರಾಜಕೀಯದಿಂದ ಲಕ್ಷ್ಮಿ ಹೆಬ್ಬಾಳಕರ ಶಾಸಕಿಯಾಗಿದ್ದಾರೆ' ಎಂಬ ಹೇಳಿಕೆ ನೀಡಿರುವ ಬಿಜೆಪಿ ಬೆಳಗಾವಿ ಗ್ರಾಮಾಂತರ ಜಿಲ್ಲಾ ಘಟಕದ ಅಧ್ಯಕ್ಷ ಸಂಜಯ ಪಾಟೀಲ ವಿರುದ್ಧ ಮಹಿಳಾ ಕಾಂಗ್ರೆಸ್ ಮತ್ತು ಯುವ ಕಾಂಗ್ರೆಸ್ ಕಾರ್ಯಕರ್ತರು ಶುಕ್ರವಾರ ಪ್ರತಿಭಟನೆ ನಡೆಸಿದರು.

ನಗರದ ಆನಂದರಾವ್ ವೃತ್ತದ ಮಹಾತ್ಮ ಗಾಂಧಿ ಪ್ರತಿಮೆ ಎದುರು ಪ್ರತಿಭಟನೆ ನಡೆಸಿದ ಮಹಿಳಾ ಕಾಂಗ್ರೆಸ್ ಕಾರ್ಯಕರ್ತರು, ಸಂಜಯ ಪಾಟೀಲ ವಿರುದ್ಧ ಕ್ರಮ ಜರುಗಿಸುವಂತೆ ಆಗ್ರಹಿಸಿದರು. ಸಂಜಯ ಪಾಟೀಲ ಮತ್ತು ಬಿಜೆಪಿ ವಿರುದ್ಧ ಪ್ರತಿಭಟನಕಾರರು ಘೋಷಣೆಗಳನ್ನು ಕೂಗಿದರು.

ಪ್ರತಿಭಟನಾ ಸಭೆಯಲ್ಲಿ ಮಾತನಾಡಿದ ಮಾಜಿ ಮೇಯರ್ ಜಿ. ಪದ್ಮಾವತಿ, 'ಬಿಜೆಪಿ ನಾಯಕರು ದೇಶಭಕ್ತಿ, ಸಂಸ್ಕೃತಿ ಹೆಸರಿನಲ್ಲಿ ಬಡಾಯಿ ಕೊಚ್ಚಿಕೊಳ್ಳುತ್ತಾರೆ. ಆದರೆ, ಮಹಿಳೆಯರ ಬಗ್ಗೆ ಅವರಿಗೆ ಎಳ್ಳಷ್ಟೂ ಗೌರವವಿಲ್ಲ' ಎಂದರು.

ಬೆಂಗಳೂರು ಉತ್ತರ ಜಿಲ್ಲಾ ಮಹಿಳಾ ಕಾಂಗ್ರೆಸ್ ಸಮಿತಿ ಅಧ್ಯಕ್ಷೆ ವಿಮಲಾ ವೆಂಕಟ್, ಮುಖಂಡರಾದ ಉಮಾ ಬಾಯಿ, ಸಲ್ಮಾ ತಾಜ್, ಪಲ್ಲವಿ ಪ್ರಭು ಮತ್ತಿತರರು ಇದ್ದರು.

ಯುವ ಕಾಂಗ್ರೆಸ್‌ನಿಂದಲೂ ಪ್ರತಿಭಟನೆ: ಅದೇ ಸ್ಥಳದಲ್ಲಿ ಪ್ರತಿಭಟನೆ ನಡೆಸಿದ ಯುವ ಕಾಂಗ್ರೆಸ್ ಕಾರ್ಯಕರ್ತರು, ಸಂಜಯ ಪಾಟೀಲ ಭಾವಚಿತ್ರಕ್ಕೆ ಪೊರಕೆಯಿಂದ ಹೊಡೆದು, ನಂತರ ದಹಿಸಿ ಆಕ್ರೋಶ ವ್ಯಕ್ತಪಡಿಸಿದರು.

ಎಸ್. ಮನೋಹರ್, ವಿ. ಶಂಕರ್, ವಿಜಯ್ ಮುಳುಗುಂದ, ಜಿ. ಜನಾರ್ದನ್, ಎ. ಆನಂದ್, ಜಿ. ಜಯಸಿಂಹ, ಎ. ಸಲೀಂ, ಆದಿತ್ಯ ಪ್ರಕಾಶ್, ಪುಟ್ಟರಾಜು, ಚಂದ್ರಶೇಖರ್, ತೇಜಸ್, ಅಶ್ವತ್ಥ್ ಸೇರಿದಂತೆ ಹಲವರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಶೇ 100 ಅವಕಾಶ: ಪ್ರೇಕ್ಷಕರ ಪ್ರತಿಕ್ರಿಯೆ ನೀರಸ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿತ್ರಮಂದಿರಗಳಲ್ಲಿ ಶೇ 100ರಷ್ಟು ಪ್ರೇಕ್ಷಕರ ಆಸನ ಭರ್ತಿಗೆ ಅವಕಾಶ ಕೊಟ್ಟರೂ ಪ್ರೇಕ್ಷಕರ ಪ್ರತಿಕ್ರಿಯೆ ಮಾತ್ರ ನೀರಸವಾಗಿದೆ.

ಒರಾಯನ್ ಮಾಲ್, ಗರುಡಾಮಾಲ್, ಯಶವಂತಪುರದ ಗೋವರ್ಧನ, ಮಾಗಡಿ ರಸ್ತೆಯ ಪ್ರಸನ್ನ ಚಿತ್ರಮಂದಿರಗಳಲ್ಲೂ ಅಷ್ಟಾಗಿ ಪ್ರೇಕ್ಷಕರ ದಟ್ಟಣೆ ಇರಲಿಲ್ಲ. ಮೆಜೆಸ್ಟಿಕ್ ಪ್ರದೇಶದ ಕೆಲವು ಚಿತ್ರಮಂದಿರಗಳು ಇನ್ನೂ ನಿರ್ವಹಣೆಯ ಹಂತದಲ್ಲಿದ್ದವು.

ರಾಜ್ಯದ ಇತರ ಭಾಗಗಳಲ್ಲಿಯೂ ಪರಿಸ್ಥಿತಿ ಭಿನ್ನವಾಗಿಲ್ಲ ಎಂದು ಚಿತ್ರಮಂದಿರಗಳ ಮಾಲೀಕರು ತಿಳಿಸಿದರು.

ಶುಕ್ರವಾರ ಸಾಮಾನ್ಯ ಕೆಲಸದ ದಿನ ಆಗಿರುವುದು, ಬಹುತೇಕರು ಇನ್ನೂ ಮನೆಯಿಂದಲೇ ಕೆಲಸ ಮಾಡುವ ವ್ಯವಸ್ಥೆಯಲ್ಲಿರುವುದು, ಆನ್‌ಲೈನ್ ವೀಕ್ಷಣೆ ಸಾಧ್ಯವಾಗಿರುವುದು ಇದಕ್ಕೆ ಕಾರಣವಾಗಿರಬಹುದು ಎಂಬ ವಿಶ್ಲೇಷಣೆಯೂ ಚಿತ್ರಮಂದಿರಗಳ ನಿರ್ವಾಹಕರು ಮತ್ತು ಈ ಕ್ಷೇತ್ರದ ಪ್ರಮುಖರಿಂದ ಕೇಳಿಬಂದಿದೆ.

ಚಿತ್ರಪ್ರದರ್ಶಕರ ಒಕ್ಕೂಟದ ಅಧ್ಯಕ್ಷ ಕೆ.ವಿ. ಚಂದ್ರಶೇಖರ್ ಪ್ರತಿಕ್ರಿಯಿಸಿ, 'ಹೊಸ ಚಿತ್ರಗಳೇನೋ ಬಿಡುಗಡೆಯಾಗಿವೆ. ಆದರೆ, ಪ್ರೇಕ್ಷಕರ ಪ್ರಮಾಣ ಪ್ರತಿ ಪ್ರದರ್ಶನದಲ್ಲಿ ಶೇ 10ರಿಂದ ಶೇ 20ರ ಒಳಗಿದೆ. ಜನರ ನಾಡಿಮಿಡಿತ ಅರಿಯುವುದೇ ಕಷ್ಟ' ಎಂದರು.

'ಹೊಸ ಚಿತ್ರಗಳು ಪರಿಣಾಮಕಾರಿ ವಿಷಯ ಹೊಂದಿಲ್ಲದಿರುವುದು. ಅವುಗಳ ಬಗ್ಗೆ ಜನಾಭಿಪ್ರಾಯ ಮೂಡದಿರುವುದೂ ಕಾರಣವಿರಬಹುದು ಎಂದ ಅವರು, ಅನೇಕರು ಒಟಿಟಿ ಪ್ಯಾಕೇಜ್‌ಗಳನ್ನು ಹಾಕಿಕೊಂಡಿರುವುದರಿಂದ ಅದರಲ್ಲಿ ಈ ಚಿತ್ರಗಳು ಬಿಡುಗಡೆಯಾಗುವವರೆಗೆ ಕಾಯುವ ಪ್ರವೃತ್ತಿಯೂ ಕಾರಣವಾಗಿರಬಹುದು' ಎಂದು ಚಂದ್ರಶೇಖರ್ ಅಭಿಪ್ರಾಯಪಟ್ಟರು.

'ಅ. 14ರ ನಂತರ ಖ್ಯಾತನಟರ ದೊಡ್ಡ ಬಜೆಟ್ ಚಿತ್ರಗಳು ಬರಲಿವೆ. ಆಗ ಬುಕ್ಕಿಂಗ್ ಆಧಾರದಲ್ಲಿ ಪ್ರೇಕ್ಷಕರ ಪ್ರತಿಕ್ರಿಯೆ ತಿಳಿಯಲಿದೆ' ಎಂದು ಅವರು ಹೇಳಿದರು.

'ಶೇ 50ರ ಆಸನ ಭರ್ತಿವರೆಗೆ ಇದ್ದ ಪರಿಸ್ಥಿತಿಯೇ ಇಂದೂ ಇದೆ. ಕೆಲ ದಿನಗಳ ನಂತರ ಜನರ ಪ್ರತಿಕ್ರಿಯೆ ಗೊತ್ತಾಗಬಹುದು' ಎಂದು ಉತ್ತರ ಕರ್ನಾಟಕ ಚಿತ್ರ ಪ್ರದರ್ಶಕರ ಮಹಾಮಂಡಳದ ಅಧ್ಯಕ್ಷ ಓದುಗೌಡರ್ ಹೇಳಿದರು.

ಇ.ಡಿ.ಯಿಂದ ಶಾಸಕ ಜಮೀರ್ ವಿಚಾರಣೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಅಕ್ರಮ ಆಸ್ತಿ ಹೊಂದಿರುವ ಆರೋಪ ಎದುರಿಸುತ್ತಿರುವ ಕಾಂಗ್ರೆಸ್ ಶಾಸಕ ಜಮೀರ್ ಅಹ್ಮದ್ ಅವರು ಶುಕ್ರವಾರ ಜಾರಿ ನಿರ್ದೇಶನಾಲಯ (ಇ.ಡಿ)ದ ವಿಚಾರಣೆ ಎದುರಿಸಿದರು.

ಇಲ್ಲಿನ ಖಾನ್ ಮಾರುಕಟ್ಟೆ ಪ್ರದೇಶದಲ್ಲಿರುವ ಲೋಕನಾಯಕ ಕಟ್ಟಡದಲ್ಲಿನ ಇ.ಡಿ ಕಚೇರಿಗೆ ಬೆಳಿಗ್ಗೆ ಕೆಲವು ದಾಖಲೆಗಳೊಂದಿಗೆ ಹಾಜರಾದ ಜಮೀರ್, ಅಧಿಕಾರಿಗಳ ಪ್ರಶ್ನೆಗೆ ಉತ್ತರಿಸಿದರು.



ಜಮೀರ್ ಅಹ್ಮದ್

'ತನಿಖಾಧಿಕಾರಿಗಳ ಸೂಚನೆ ಮೇರೆಗೆ ಎರಡು ವಾರಗಳ ಹಿಂದೆ ಅಗತ್ಯ ದಾಖಲೆ ಸಲ್ಲಿಸಿದ್ದೆ. ನಾಲ್ಕೈದು ವಿಚಾರಗಳ ಬಗ್ಗೆ ಸ್ಪಷ್ಟನೆ ಕೇಳಿದ್ದು, ಸೂಕ್ತ ಉತ್ತರ ನೀಡಿದ್ದೇನೆ' ಎಂದು ವಿಚಾರಣೆ ನಂತರ ಜಮೀರ್ ಸುದ್ದಿಗಾರರಿಗೆ ತಿಳಿಸಿದರು.

'ಐಎಂಎ ವಂಚನೆ ಪ್ರಕರಣಕ್ಕೂ, ಈ ವಿಚಾರಣೆಗೂ ಸಂಬಂಧ ಇಲ್ಲ. ನನ್ನ ನಿವಾಸದ ಮೇಲೆ ನಡೆದ ದಾಳಿ, ಸಾರಿಗೆ ವ್ಯವಹಾರದ ಬಗ್ಗೆ ಅಧಿಕಾರಿಗಳು ಮಾಹಿತಿ ಕೇಳಿದರು. ಅವರ ಸೂಚನೆಯ ಮೇರೆಗೆ ಮನೆ ಕಟ್ಟಲು ಖರೀದಿಸಲಾದ ನಿವೇಶನದ ಬಗ್ಗೆಯೂ ಮಾಹಿತಿ ನೀಡಿದ್ದೇನೆ' ಎಂದು ಅವರು ವಿವರಿಸಿದರು.

ಯಾವ ರೀತಿಯ ಪ್ರಶ್ನೆ ಕೇಳಲಾಯಿತು ಎಂಬುದೂ ಸೇರಿದಂತೆ ವಿಚಾರಣೆಯ ಸಂಪೂರ್ಣ ವಿವರ ನೀಡಲು ಸಾಧ್ಯವಿಲ್ಲ. ಮತ್ತೆ ವಿಚಾರಣೆಗೆ ಹಾಜರಾಗುವಂತೆ ಅಧಿಕಾರಿಗಳು ಸೂಚನೆ ನೀಡಿಲ್ಲ. ಅವಶ್ಯಕತೆ ಇದ್ದರೆ ದೂರವಾಣಿ ಮೂಲಕವೇ ಮಾಹಿತಿ ಪಡೆಯುವುದಾಗಿ ತಿಳಿಸಿದ್ದಾರೆ ಎಂದು ಹೇಳಿದ ಜಮೀರ್, ಇನ್ನೂ ನಾಲ್ಕು ದಿನ ದೆಹಲಿಯಲ್ಲೇ ಇರುವುದಾಗಿ ಹೇಳಿದರು.

ಜೆ.ಎಚ್. ಪಟೇಲ್ ಅವರ 91ನೇ ಜನ್ಮ ದಿನಾಚರಣೆಯಲ್ಲಿ ಬಿ.ಎಲ್. ಶಂಕರ್

'ಧಾರ್ಮಿಕ ಕ್ಷೇತ್ರದ ವ್ಯಾಪಾರೀಕರಣ ದೊಡ್ಡ ಅಪಾಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜಾತಿ ಮತ್ತು ಹಣದ ರಾಜಕಾರಣದ ಜತೆ ಧಾರ್ಮಿಕ ಕ್ಷೇತ್ರವು ಅತಿ ಹೆಚ್ಚು ವ್ಯಾಪಾರೀಕರಣಗೊಂಡಿದೆ' ಎಂದು ಕರ್ನಾಟಕ ಚಿತ್ರಕಲಾ ಪರಿಷತ್ ಅಧ್ಯಕ್ಷ ಬಿ.ಎಲ್. ಶಂಕರ್ ವಿಷಾದ ವ್ಯಕ್ತಪಡಿಸಿದರು.

ಜೆ.ಎಚ್. ಪಟೇಲ್ ಪ್ರತಿಷ್ಠಾನದ ವತಿಯಿಂದ ನಗರದಲ್ಲಿ ಶುಕ್ರವಾರ ಆಯೋಜಿಸಿದ್ದ ಜೆ.ಎಚ್. ಪಟೇಲ್ ಅವರ 91ನೇ ಜನ್ಮ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಜಾತಿ ಮತ್ತು ಹಣ ಬಲವೇ ಅಧಿಕಾರ ಕೇಂದ್ರೀಕೃತವಾಗುತ್ತಿರುವ ಇಂದಿನ ಸಂದರ್ಭದಲ್ಲಿ ಧಾರ್ಮಿಕ ಕ್ಷೇತ್ರದ ವ್ಯಾಪಾರೀಕರಣವಾಗುತ್ತಿರುವುದು ಮತ್ತಷ್ಟು ಅಪಾಯದ ಮುನ್ಸೂಚನೆಯೊಡ್ಡಿದೆ' ಎಂದರು.

'ರಾಜಕಾರಣ ನಾಯಕರಿಂದಲೇ ದಾರಿ ತಪ್ಪಿದೆ ಹೊರತು ಜನರಿಂದಲ್ಲ. ಇಂದು ವ್ಯಕ್ತಿ ಕೇಂದ್ರಿತ ರಾಜಕೀಯವೂ ಹೆಚ್ಚು ಪ್ರಬಲವಾಗುತ್ತಿದೆ. ಹಿಂದೆಯೂ ಇದೇ ರೀತಿಯಲ್ಲಿತ್ತು. ಈಗ ಮತ್ತೆ ಮುನ್ನೆಲೆಗೆ ಬಂದಿದೆ. ಇಂತಹ ಸನ್ನಿವೇಶಗಳ ನಡುವೆ, ಸಕಾರಾತ್ಮಕ ರಾಜಕಾರಣವನ್ನು ಮರುಸ್ಥಾಪಿಸುವ ಅಗತ್ಯವಿದೆ' ಎಂದು ಪ್ರತಿಪಾದಿಸಿದರು.

'ಜೆ.ಎಚ್. ಪಟೇಲ್ ಅವರು ತಮ್ಮ ದೌರ್ಬಲ್ಯ ಮತ್ತು ಸಾಮರ್ಥ್ಯಗಳನ್ನು ಬಹಿರಂಗವಾಗಿಯೇ ಹೇಳುತ್ತಿದ್ದರು. ಇದೇ ಕಾರಣಕ್ಕೆ ಅವರನ್ನು ಹೆಚ್ಚು ಮಂದಿ ಅಪಾರ್ಥ ಮಾಡಿಕೊಂಡಿದ್ದರು. ಜಾತ್ಯತೀತ ಮತ್ತು ಮಾನವೀಯತೆಯುಳ್ಳ ವ್ಯಕ್ತಿತ್ವ ಹೊಂದಿದ್ದ ಪಟೇಲ್ ಅವರು, ಎಂದಿಗೂ ಅಧಿಕಾರಕ್ಕೆ ಅಂಟಿಕೊಂಡಿರಲಿಲ್ಲ' ಎಂದು ಸ್ಮರಿಸಿದರು.

'ಇಂದು ಸ್ಮಾರ್ಟ್ ನಗರಗಳಿಗಿಂತಲೂ ಸ್ಮಾರ್ಟ್ ಗ್ರಾಮಗಳು ಹೆಚ್ಚಾಗ ಬೇಕಾಗಿವೆ. ಎಲ್ಲ ಸೌಲಭ್ಯಗಳು ಹಳ್ಳಿಯಲ್ಲೂ ದೊರೆಯಬೇಕು. ಜನರು ನಗರಗಳಿಗೆ ವಲಸೆ ಹೋಗುವುದು ತಪ್ಪಬೇಕಾಗಿದೆ' ಎಂದರು.

'ಮಾಧ್ಯಮ ಮತ್ತು ಜೆ.ಎಚ್. ಪಟೇಲ್' ಪುಸ್ತಕ ಬಿಡುಗಡೆ ಮಾಡಿದ ಜೆಡಿಎಸ್ ಮುಖಂಡ ವೈ.ಎಸ್. ವಿ. ದತ್ತ, 'ಜೆ.ಎಚ್. ಪಟೇಲ್ ಅವರು ರಾಮ ಮನೋಹರ ಲೋಹಿಯಾ ಸಿದ್ಧಾಂತಕ್ಕೆ ಕೊನೆಯವರೆಗೂ ಬದ್ಧವಾಗಿಯೇ ಉಳಿದಿದ್ದರು. ರಾಜಕೀಯ ಇತಿಹಾಸದಲ್ಲಿ ಪಟೇಲ್ ಅವರು ಪ್ರತ್ಯೇಕ ವ್ಯಕ್ತಿಯಾಗಿ ಗುರುತಿಸಿಕೊಳ್ಳುತ್ತಾರೆ. ಜತೆಗೆ, ನಿರಂತರವಾಗಿ ಕಾಂಗ್ರೆಸ್ ವಿರೋಧಿಯಾಗಿಯೇ ರಾಜಕಾರಣ ಮಾಡಿದರು' ಎಂದು ವಿಶ್ಲೇಷಿಸಿದರು.

ಜೆ.ಎಚ್. ಪಟೇಲ್ ಪ್ರತಿಷ್ಠಾನದ ವ್ಯವಸ್ಥಾಪಕ ಟ್ರಸ್ಟಿ ಮಹಿಮ ಜೆ. ಪಟೇಲ್, ಉಪಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ, ಚಿತ್ರಕಲಾ ಪರಿಷತ್‌ನ ಉಪಾಧ್ಯಕ್ಷ ಟಿ. ಪ್ರಭಾಕರ್, ರೈತ ಸಂಘದ ರಾಜ್ಯ ಘಟಕದ ಅಧ್ಯಕ್ಷ ಲಕ್ಷ್ಮೀ ನಾರಾಯಣಗೌಡ, ಸಹಜ ಕೃಷಿಕರಾದ ಸುನೀತಾ ಶಂಕರಗೌಡ, 'ಮಾಧ್ಯಮ ಮತ್ತು ಜೆ.ಎಚ್. ಪಟೇಲ್' ಪುಸ್ತಕದ ಸಂಪಾದಕ ಎಂ.ಎಚ್. ಶಂಕರಲಿಂಗಪ್ಪ, ಜೆಡಿಯು ಮುಖಂಡ ಡಾ.ಎಂ.ಪಿ. ನಾಡಗೌಡ, ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ವಕ್ತಾರ ರಮೇಶ್ ಬಾಬು ಇದ್ದರು.



ವೈ. ಎಸ್. ವಿ. ದತ್ತ ಅವರು 'ಮಾಧ್ಯಮ ಮತ್ತು ಜೆ.ಎಚ್. ಪಟೇಲ್' ಪುಸ್ತಕ ಬಿಡುಗಡೆ ಮಾಡಿದರು. ಪುಸ್ತಕದ ಸಂಪಾದಕ ಎಂ.ಎಲ್. ಶಂಕರಲಿಂಗಪ್ಪ, ಉಪ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ, ಕರ್ನಾಟಕ ಚಿತ್ರಕಲಾ ಪರಿಷತ್ ಅಧ್ಯಕ್ಷ ಬಿ.ಎಲ್. ಶಂಕರ್, ಜೆ.ಎಚ್. ಪಟೇಲ್ ಪ್ರತಿಷ್ಠಾನದ ಮಹಿಮ ಜೆ.ಪಟೇಲ್ ಮತ್ತು ಕರ್ನಾಟಕ ಚಿತ್ರಕಲಾ ಪರಿಷತ್ ಉಪಾಧ್ಯಕ್ಷ ಟಿ. ಪ್ರಭಾಕರ್ ಇದ್ದರು – ಪ್ರಜಾವಾಣಿ ಚಿತ್ರ

ಕೆನರಾ ಬ್ಯಾಂಕ್ केनरा बैंक Canara Bank
ಸಿಂಡಿಕೇಟ್ सिंडिकेट Syndicate
Together We Can

ಪ್ರಾಂಗಣ ಮತ್ತು ವಸತಿ ವಿಭಾಗ, ವೃತ್ತ ಕಚೇರಿ,
ನಂ.86, ಎಂ.ಜಿ.ರಸ್ತೆ, ಬೆಂಗಳೂರು–560001. ಫೋನ್: 25310039/25310038

ಸ್ಥಳಾವಕಾಶ ಬೇಕಾಗಿದೆ

ಕೆಳಕಂಡ ಸ್ಥಳಗಳಲ್ಲಿ ಶಾಖೆ/ಕಛೇರಿ ಸ್ಥಳಾವಕಾಶಕ್ಕಾಗಿ ವಾಣಿಜ್ಯ ಸ್ಥಳಾವಕಾಶ ಹೊಂದಿರುವ ಮಾಲಿಕರಿಂದ ಮೊಹರಾದ ಆಫರ್‌ಗಳನ್ನು ಆಹ್ವಾನಿಸಲಾಗಿದೆ:

ಕ್ರ.ಸಂ.	ಸ್ಥಳ	ಕ್ರ.ಸಂ.	ಸ್ಥಳ
1	ಮೇಲುಕೋಟೆ, ಮಂಡ್ಯ ಜಿಲ್ಲೆ	5	ಮಾದಾಪುರ, ಮೈಸೂರು ಜಿಲ್ಲೆ
2	ಮಂಚೇನಹಳ್ಳಿ, ಚಿಕ್ಕಬಳ್ಳಾಪುರ ಜಿಲ್ಲೆ	6	ಎಸ್‌ಎಮ್‌ಇ, ಮಂಚನಾಯಕನಹಳ್ಳಿ, ರಾಮನಗರ ಜಿಲ್ಲೆ
3	ಮುತ್ತೆಗೆರೆ, ಮಂಡ್ಯ ಜಿಲ್ಲೆ	7	ತಳಗವಾಡಿ, ಮಂಡ್ಯ ಜಿಲ್ಲೆ
4	ತಾವರೆಕೆರೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ	8	ಸೋಮನಹಳ್ಳಿ, ಮಂಡ್ಯ ಜಿಲ್ಲೆ

ವಿವರಗಳನ್ನು ಬ್ಯಾಂಕ್‌ನ ಸದರಿ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ: http://www.canarabank.com. ಅಗತ್ಯ ಅರ್ಜಿ ನಮೂನೆಗಳನ್ನು ಮೇಲ್ಕಾಣಿಸಿದ ಕಛೇರಿಯಲ್ಲಿ ಪಡೆದುಕೊಳ್ಳಬಹುದು ಅಥವಾ ಬ್ಯಾಂಕ್‌ನ ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ. ನಮ್ಮ ಕಛೇರಿಗೆ ಅರ್ಜಿಗಳು ತಲುಪಲು ಅಂತಿಮ **ದಿನಾಂಕವು 18.10.2021 ರಂದು ಅಪರಾಹ್ನ 3.00** ಆಗಿರುತ್ತದೆ.
ಮುಂದುವರಿದಂತೆ, ಯಾವುದೇ ಸಂವಹನ, ತಿದ್ದುಪಡಿ, ಮಾರ್ಪಾಡು ಎದುರಾದಲ್ಲಿ, ಅಂತಹುದನ್ನು ಬ್ಯಾಂಕ್‌ನ ವೆಬ್‌ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುತ್ತದೆ. **"ಮಧ್ಯವರ್ತಿಗಳಿಗೆ ಅವಕಾಶವಿಲ್ಲ".**
ಸ್ಥಳ: ಬೆಂಗಳೂರು
ದಿನಾಂಕ: 02.10.2021
ಸಹಾಯಕ ಮಹಾ ಪ್ರಬಂಧಕರು

'ರೋಸ್‌ಮೆರ್ಟಾ ಟೆಕ್ನಾಲಜಿಸ್' ಕಂಪನಿ ವಿರುದ್ಧ ಮತ್ತೊಂದು ಎಫ್‌ಐಆರ್ ● ಸಿಐಡಿ ತನಿಖೆ ಚುರುಕು

'ಆರ್‌ಟಿಒ' ಸ್ಮಾರ್ಟ್‌ಕಾರ್ಡ್ ₹12 ಕೋಟಿ ಗುಳುಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರ್‌ಟಿಒ ವತಿಯಿಂದ ವಿತರಿಸಲಾಗುವ ಸ್ಮಾರ್ಟ್‌ಕಾರ್ಡ್‌ಗಳನ್ನು ಪೂರೈಸುವ ಉಪ ಗುತ್ತಿಗೆ ನೀಡುವುದಾಗಿ ಹೇಳಿ ₹ 12 ಕೋಟಿ ಪಡೆದು ವಂಚಿಸಿರುವ ಆರೋಪದಡಿ 'ರೋಸ್‌ಮೆರ್ಟಾ ಟೆಕ್ನಾಲಜಿಸ್' ಕಂಪನಿ ವಿರುದ್ಧ ಅಶೋಕನಗರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ರಿಚ್ಮಂಡ್ ರಸ್ತೆಯಲ್ಲಿರುವ 'ಕಾಲ್ಕ್ಯೂ ಇನ್ಫೊ ಸರ್ವೀಸ್' ಕಂಪನಿ ಪಾಲುದಾರ ಅನೂಪ್ ಕಿರಣ್ ಎಂಬುವರು ದೂರು ನೀಡಿದ್ದಾರೆ. 'ರೋಸ್‌ಮೆರ್ಟಾ ಟೆಕ್ನಾಲಜಿಸ್' ಕಂಪನಿ ಮುಖ್ಯಸ್ಥ ವಿವೇಕ್ ನಾಗಪಾಲ್, ಪಾಲುದಾರರಾದ ಕರಣ್ ನಾಗಪಾಲ್, ಗೌರವ್ ನಾಗಪಾಲ್,

ವಿವೇಕ್ ನಾಗಪಾಲ್

ಪಂಕಜ್ ಮದನ್, ಸಂದೀಪ್ ಮಲ್ಲಿಕ್, ಸಾಹೇಂದ್ರ ಪಾಲ್ ಸಿಂಗ್, ಮೊಹಮ್ಮದ್ ತಬ್ರೇಜ್ ಅಹ್ಮದ್, ಸುಭೂದ್‌ಕುಮಾರ್ ಜಯಸ್ವಾಲ್ ಹಾಗೂ ಇತರರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'₹ 13 ಕೋಟಿ ವಂಚಿಸಿದ್ದ ಆರೋಪದಡಿ ಕಂಪನಿ ವಿರುದ್ಧ ಮೈಸೂರಿನಲ್ಲಿ ಈಗಾಗಲೇ ಒಂದು ಎಫ್‌ಐಆರ್ ದಾಖಲಾಗಿದೆ. ಇದರ ತನಿಖೆಯನ್ನು ಸಿಐಡಿ ನಡೆಸುತ್ತಿದೆ. ಬೆಂಗಳೂರಿನ ಅಶೋಕನಗರದಲ್ಲಿ ದಾಖಲಾಗಿರುವ ಈ ಪ್ರಕರಣವನ್ನೂ ಸಿಐಡಿಗೆ ಹಸ್ತಾಂತರಿಸುವ ಪ್ರಕ್ರಿಯೆ ಚಾಲ್ತಿಯಲ್ಲಿದೆ' ಎಂದೂ ಮೂಲಗಳು ತಿಳಿಸಿವೆ.

ಮುಖ್ಯಸ್ಥನನ್ನು ವಶಕ್ಕೆ ಪಡೆದಿದ್ದ ಸಿಐಡಿ

₹ 13 ಕೋಟಿ ವಂಚನೆ ಆರೋಪದಡಿ ಮೈಸೂರಿನಲ್ಲಿ 2016ರಲ್ಲಿ ದಾಖಲಾಗಿದ್ದ ಪ್ರಕರಣದಲ್ಲಿ 'ರೋಸ್‌ಮೆರ್ಟಾ ಟೆಕ್ನಾಲಜಿಸ್' ಕಂಪನಿ ಮುಖ್ಯಸ್ಥ ವಿವೇಕ್ ನಾಗಪಾಲ್‌ನನ್ನು ಇತ್ತೀಚೆಗೆ ಸಿಐಡಿ ವಶಕ್ಕೆ ಪಡೆದಿತ್ತು. ವಿಚಾರಣೆ ನಡೆಸಿ ಆತನ ಹೇಳಿಕೆ ಪಡೆದಿರುವುದಾಗಿ ಗೊತ್ತಾಗಿದೆ. ಹೆಚ್ಚಿನ ಮಾಹಿತಿ ನೀಡಲು ಸಿಐಡಿ ಅಧಿಕಾರಿಗಳು ನಿರಾಕರಿಸುತ್ತಿದ್ದಾರೆ.

ಉಪಗುತ್ತಿಗೆ ನೆಪದಲ್ಲಿ ವಂಚನೆ: 'ಕಾಲ್ಕ್ಯೂ ಇನ್ಫೊ ಸರ್ವೀಸ್' ಕಂಪನಿ ಪ್ರತಿನಿಧಿಗಳನ್ನು ಸಂಪರ್ಕಿಸಿದ್ದ ಆರೋಪಿಗಳು, 'ದೇಶದ ಎಲ್ಲ ರಾಜ್ಯಗಳ ಸಾರಿಗೆ ಇಲಾಖೆಯ ಆರ್‌ಟಿಒ ಕಚೇರಿಗೆ ಸಂಬಂಧಪಟ್ಟ ಸ್ಮಾರ್ಟ್‌ಕಾರ್ಡ್‌ಗಳನ್ನು ತಯಾರಿಸಿ ಪೂರೈಸುವ ಟೆಂಡರ್, ನಮ್ಮ ರೋಸ್‌ಮೆರ್ಟಾ ಟೆಕ್ನಾಲಜಿಸ್ ಕಂಪನಿಗೆ ಸಿಕ್ಕಿದೆ. ಚಾಲನಾ ಪರವಾನಗಿ, ವಾಹನ ನೋಂದಣಿ ಸೇರಿ ಎಲ್ಲ ಬಗೆಯ ಸ್ಮಾರ್ಟ್‌ಕಾರ್ಡ್‌ಗಳನ್ನು ನಿಗದಿತ ದಿನದೊಳಗೆ ಪೂರೈಸುವ ಜವಾಬ್ದಾರಿ ಕಂಪನಿ ಮೇಲಿದೆ' ಎಂಬುದಾಗಿ ಹೇಳಿದ್ದರು' ಎಂದು ಪೊಲೀಸ್ ಮೂಲಗಳು ವಿವರಿಸಿವೆ.

'ನಮ್ಮ ಯೋಜನೆಗೆ ಅಗತ್ಯವಿರುವ ಹಣಕಾಸಿನ ಸೌಲಭ್ಯವಿಲ್ಲ. ಕಾಲ್ಕ್ಯೂ ಇನ್ಫೊ ಸರ್ವೀಸ್ ಕಂಪನಿಯನ್ನು ಪಾಲುದಾರರನ್ನಾಗಿಸಿಕೊಂಡು, ಉಪಗುತ್ತಿಗೆ ಮೂಲಕ ಸ್ಮಾರ್ಟ್‌ಕಾರ್ಡ್ ಪೂರೈಸುವ ಒಪ್ಪಂದ ಮಾಡಿಕೊಳ್ಳುತ್ತೇವೆ' ಎಂದೂ ಆರೋಪಿಗಳು ಹೇಳಿದ್ದರು. ಅದನ್ನು ನಂಬಿದ್ದ ಕಾಲ್ಕ್ಯೂ ಇನ್ಫೊ ಸರ್ವೀಸ್ ಕಂಪನಿ ಪಾಲುದಾರರು, ₹ 12 ಕೋಟಿಯನ್ನು ರೋಸ್‌ಮೆರ್ಟಾ ಟೆಕ್ನಾಲಜಿಸ್ ಕಂಪನಿಗೆ ನೀಡಿ ಒಪ್ಪಂದ ಮಾಡಿಕೊಂಡಿದ್ದರು' ಎಂದೂ ಮೂಲಗಳು ಹೇಳಿವೆ.

'ಹಣ ಪಡೆದ ನಂತರ ಆರೋಪಿಗಳು, ಯಾವುದೇ ಉಪಗುತ್ತಿಗೆ ನೀಡಿಲ್ಲ. ಹಣ ವಾಪಸು ಕೇಳಿದಾಗ, ಜೀವ ಬೆದರಿಕೆ ಹಾಕಲಾರಂಭಿಸಿದ್ದರು. ಈ ಸಂಗತಿ ದೂರಿನಲ್ಲಿದೆ' ಎಂದೂ ತಿಳಿಸಿವೆ.

ಖಾಸಗಿ ಮೊಕದ್ದಮೆ ಹೂಡಿದ್ದ ದೂರುದಾರ: ರೋಸ್‌ಮೆರ್ಟಾ ಟೆಕ್ನಾಲಜಿಸ್ ಕಂಪನಿ ವಿರುದ್ಧ ಪೊಲೀಸರು ಆರಂಭದಲ್ಲಿ ದೂರು ದಾಖಲಿಸಿಕೊಂಡಿರಲಿಲ್ಲ. ನೊಂದ ಕಾಲ್ಕ್ಯೂ ಇನ್ಫೊ ಸರ್ವೀಸ್ ಕಂಪನಿ ಪಾಲುದಾರರು, 4ನೇ ಎಸಿಎಂಎಂ ನ್ಯಾಯಾಲಯದಲ್ಲಿ ಖಾಸಗಿ ಮೊಕದ್ದಮೆ ಹೂಡಿದ್ದರು. ವಿಚಾರಣೆ ನಡೆಸಿದ ನ್ಯಾಯಾಲಯ, ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುವಂತೆ ಪೊಲೀಸರಿಗೆ ಸೂಚನೆ ನೀಡಿದೆ. ಇದರನ್ವಯ ಇದೀಗ ಎಫ್‌ಐಆರ್ ದಾಖಲಾಗಿದೆ.

'ಆಜಾದಿ ಕಾ ಅಮೃತ ಮಹೋತ್ಸವ'

'ಆಜಾದಿ ಕಾ ಅಮೃತ ಮಹೋತ್ಸವ'ದ ಅಂಗವಾಗಿ ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯವು ನೆಹರೂ ಯುವ ಕೇಂದ್ರ ಹಾಗೂ ಆರ್.ವಿ.ಫಿಸಿಯೋಥೆರಪಿ ಕಾಲೇಜಿನ ಸಹಯೋಗದಲ್ಲಿ ಹಮ್ಮಿಕೊಂಡಿದ್ದ 'ಕ್ಲೀನ್ ಇಂಡಿಯಾ' ಕಾರ್ಯಕ್ರಮಕ್ಕೆ ಬೆಂಗಳೂರು ನಗರ ಜಿಲ್ಲಾಧಿಕಾರಿ ಜೆ.ಮಂಜುನಾಥ್ ಶುಕ್ರವಾರ ಚಾಲನೆ ನೀಡಿದರು. ವಿಶ್ವವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನೆ ಘಟಕದ ಕಾರ್ಯಕ್ರಮ ಸಂಯೋಜನಾಧಿಕಾರಿ ಹಾಗೂ ಉಪ ಕುಲಸಚಿವ ಡಾ.ಬಿ.ವಸಂತ ಶೆಟ್ಟಿ, ಆರ್.ವಿ.ಫಿಸಿಯೋಥೆರಪಿ ಕಾಲೇಜಿನ ಪ್ರಾಂಶುಪಾಲ ಪೃಥ್ವಿರಾಜ್, ನೆಹರೂ ಯುವ ಕೇಂದ್ರದ ರಾಜ್ಯ ನಿರ್ದೇಶಕ ನಟರಾಜ್, ಪ್ರಾದೇಶಿಕ ನಿರ್ದೇಶಕ ಪಟ್ನಾಯಕ್ ಹಾಗೂ ವಿನಯ್‌ಕುಮಾರ್ ಇದ್ದರು. ಮೊದಲ ದಿನ ಎನ್‌ಎಸ್‌ಎಸ್ ಸ್ವಯಂಸೇವಕರು ಒಟ್ಟು 47 ಕೆ.ಜಿ.ಪ್ಲಾಸ್ಟಿಕ್ ತ್ಯಾಜ್ಯ ಸಂಗ್ರಹಿಸಿದರು.

ಸೌಜನ್ಯಾ ಸಾವು: ತನಿಖೆ ಚುರುಕು

ಪ್ರಜಾವಾಣಿ ವಾರ್ತೆ

ರಾಮನಗರ: ನಟಿ ಸೌಜನ್ಯಾ (ಸವಿ ಮಾದಪ್ಪ) ಸಾವು ಪ್ರಕರಣದ ತನಿಖೆ ಚುರುಕುಗೊಂಡಿದ್ದು, ಆತ್ಮಹತ್ಯೆಯಿಂದಲೇ ಆಕೆ ಸಾವನ್ನಪ್ಪಿರುವುದು ಮರಣೋತ್ತರ ಪರೀಕ್ಷೆಯಿಂದ ತಿಳಿದುಬಂದಿದೆ.

ಸೌಜನ್ಯಾ

ಸೌಜನ್ಯಾ ತಂದೆ ಪ್ರಭು ಮಾದಪ್ಪ ದೂರಿನ ಅನ್ವಯ, ನಟಿಯ ಸಹಾಯಕ ಮಹೇಶ್‌ರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ದೊಡ್ಡಬೆಲೆ ಗ್ರಾಮದ ಅಪಾರ್ಟ್‌ಮೆಂಟ್‌ನಲ್ಲಿ ಪೊಲೀಸರ ತಂಡ ಶುಕ್ರವಾರ ಮಹಜರ್ ನಡೆಸಿದ್ದು, ಮಹೇಶ್‌ರನ್ನು ಸ್ಥಳಕ್ಕೆ ಕರೆದೊಯ್ದು ಮಾಹಿತಿ ಪಡೆಯಿತು. ಪ್ರಭು ಮಾದಪ್ಪ ಸಹ ಹಾಜರಿದ್ದರು. ಮನೆಯಲ್ಲಿದ್ದ ನಟಿಯ ಮೊಬೈಲ್ ಕಾಣೆಯಾಗಿದೆ ಎನ್ನಲಾಗಿದ್ದು, ಪೊಲೀಸರು ಅದಕ್ಕಾಗಿ ಹುಡುಕಾಟ ನಡೆಸಿದ್ದರು.

ಮರಣೋತ್ತರ ಪರೀಕ್ಷೆ ಬಳಿಕ ಮಧ್ಯಾಹ್ನ ನಟಿಯ ಶವವನ್ನು ಆಕೆಯ ಪೋಷಕರಿಗೆ ಹಸ್ತಾಂತರಿಸಲಾಯಿತು. ಕೊಡಗು ಜಿಲ್ಲೆಯ ಸುಂಟಿಕೊಪ್ಪ ಸಮೀಪದ ಅಂದಗೋವೆ ಗ್ರಾಮದಲ್ಲಿ ನಟಿಯ ಅಂತ್ಯಕ್ರಿಯೆ ಸಂಜೆ ನೆರವೇರಿತು.

ಪ್ರೇಮ ಪ್ರಕರಣದ ನಂಟು

ಸೌಜನ್ಯಾ ಹಾಗೂ ನಟ ವಿವೇಕ್ ನಡುವೆ ಪ್ರೇಮಾಂಕುರವಾಗಿತ್ತು ಎನ್ನಲಾಗಿದೆ. ಮದುವೆ ಮತ್ತಿತರ ಕಾರಣಗಳಿಗೆ ನಟಿ ಮನನೊಂದಿರಬಹುದು ಎಂದು ಹೇಳಲಾಗಿದೆ. 'ವಿವೇಕ್ ನನ್ನ ಮಗಳಿಗೆ ಕಿರುಕುಳ ನೀಡಿರುವ ಸಾಧ್ಯತೆ ಇದೆ' ಎಂದು ಪ್ರಭು ಮಾದಪ್ಪ ಆರೋಪಿಸಿದ್ದಾರೆ.

'ವಿವೇಕ್ ಜೊತೆಗಿನ ಪ್ರೀತಿಗೆ ನಮ್ಮ ವಿರೋಧ ಇತ್ತು. ಆದರೆ ಮಗಳು ಎಂದೂ ನಮ್ಮಲ್ಲಿ ಈ ವಿಷಯ ಪ್ರಸ್ತಾಪ ಮಾಡಿರಲಿಲ್ಲ. ಈಚೆಗಷ್ಟೇ ದೊಡ್ಡ ಮಗಳ ಮದುವೆ ಮಾಡಿದ್ದೆವು. ಹಣದ ಕೊರತೆ ಇದ್ದ ಕಾರಣ ಸದ್ಯಕ್ಕೆ ಇನ್ನೊಬ್ಬ ಮಗಳ ಮದುವೆ ಬೇಡ ಎಂದುಕೊಂಡಿದ್ದೆವು. ಮಹೇಶ್‌ಗೆ ನನ್ನ ಮಗಳ ಎಲ್ಲ ವಿವರ ಗೊತ್ತಿತ್ತು' ಎಂದು ಪ್ರಭು ಮಾದಪ್ಪ ಶುಕ್ರವಾರ ಮಾಧ್ಯಮಗಳಿಗೆ ಹೇಳಿಕೆ ನೀಡಿದರು.

ಈ ಕುರಿತು ನಟ ವಿವೇಕ್ ಪ್ರತಿಕ್ರಿಯಿಸಿ 'ಸೌಜನ್ಯಾ ನನಗೆ ಕಳೆದೊಂದು ವರ್ಷದಿಂದ ಪರಿಚಯ. ನಾವಿಬ್ಬರೂ ಉತ್ತಮ ಸ್ನೇಹಿತರಾಗಿದ್ದು ಆಗಾಗ್ಗೆ ಭೇಟಿ ಆಗುತ್ತಿದ್ದೆವು. ಆಕೆ ಮನಸ್ಸಿಗೆ ಬೇಜಾರಾದಾಗ ನನ್ನ ಜೊತೆ ಮಾತನಾಡುತ್ತಿದ್ದಳು. ಆಕೆ ಯಾವ ಕಾರಣಕ್ಕೆ ಆತ್ಮಹತ್ಯೆ ಮಾಡಿಕೊಂಡಳು ಗೊತ್ತಿಲ್ಲ. ಪೋಷಕರ ಆರೋಪದ ಬಗ್ಗೆ ನಾನು ಪ್ರತಿಕ್ರಿಯಿಸಲಾರೆ. ಪೊಲೀಸರ ತನಿಖೆಯಿಂದ ಎಲ್ಲ ಸತ್ಯ ಹೊರಬರಲಿದೆ' ಎಂದರು.

ಸುದ್ದಿ 2 ನಿಮಿಷ

ಸಹಕಾರ: 3 ಸಭೆಗೆ ಗೈರಾದರೆ ಮತದಾನದ ಹಕ್ಕಿಲ್ಲ– ಹೈಕೋರ್ಟ್

ಬೆಂಗಳೂರು: ಸಹಕಾರ ಸಂಘಗಳ ಐದು ವಾರ್ಷಿಕ ಮಹಾಸಭೆಗಳಲ್ಲಿ ಕನಿಷ್ಠ 3 ಸಭೆಗಳಿಗೆ ಗೈರಾಗುವ ಮತ್ತು ಸತತ ಮೂರು ವರ್ಷ ಸಂಘದ ಕನಿಷ್ಠ ಸೇವೆಯನ್ನು ಬಳಸಿಕೊಳ್ಳದ ಸದಸ್ಯರು ಸಂಘದ ಚುನಾವಣೆಯಲ್ಲಿ ಮತದಾನದ ಹಕ್ಕು ಕಳೆದುಕೊಳ್ಳಲಿದ್ದಾರೆ.

ಸಹಕಾರ ಸಂಘಗಳ ಕಾಯ್ದೆ –1959ಗೆ ತಿದ್ದುಪಡಿ ಮೂಲಕ ಸೆಕ್ಷನ್ 20(ಎ) ಸೇರ್ಪಡೆ ಮಾಡಿರುವ ಕ್ರಮವನ್ನು ಹೈಕೋರ್ಟ್ ಎತ್ತಿ ಹಿಡಿದಿದೆ. ಸೆಕ್ಷನ್ 20(ಎ) ಪ್ರಕಾರ ಈ ನಿಯಮ ಜಾರಿಯಾಗಲಿದೆ.



ತಿದ್ದುಪಡಿ ಪ್ರಶ್ನಿಸಿ ವಿವಿಧ ಸಹಕಾರ ಸಂಘಗಳ ಸದಸ್ಯರು ಸಲ್ಲಿಸಿದ್ದ ನೂರಾರು ಅರ್ಜಿಗಳನ್ನು ವಜಾಗೊಳಿಸಿದ ನ್ಯಾಯಮೂರ್ತಿ ಪಿ.ಎಸ್. ದಿನೇಶ್ ಕುಮಾರ್ ಅವರಿದ್ದ ಪೀಠ, ಈ ತಿದ್ದುಪಡಿ ಮಾಡಿದ ಎರಡೂ ನಿಬಂಧನೆಗಳು 2021ರ ಆಗಸ್ಟ್ 4ರ ನಂತರ ನಡೆಯುವ ಚುನಾವಣೆಗಳಿಗೆ ಅನ್ವಯವಾಗುತ್ತವೆ ಎಂದು ಹೇಳಿದೆ.

ತಿದ್ದುಪಡಿ ತಂದು ಐದು ವರ್ಷವಾದರೂ ಜಾರಿಗೆ ತಾರದಿರುವುದನ್ನು ಗಮನದಲ್ಲಿಟ್ಟುಕೊಂಡು ಸದಸ್ಯರಿಗೆ ಮತದಾನ ಮಾಡಲು ಮತ್ತು ಚುನಾವಣೆಯಲ್ಲಿ ಸ್ಪರ್ಧಿಸಲು ನ್ಯಾಯಾಲಯ ಮಧ್ಯಂತರ ಆದೇಶದಲ್ಲಿ ಅನುಮತಿ ನೀಡಿತ್ತು. ತಡಕಲ್ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದ ಮತ್ತು ರಾಜ್ಯ ಸರ್ಕಾರ ನಡುವಿನ ಪ್ರಕರಣದಲ್ಲಿ ತಿದ್ದುಪಡಿಯನ್ನು ನ್ಯಾಯಾಲಯ ಈಗಾಗಲೇ ಎತ್ತಿ ಹಿಡಿದಿದೆ.

'ಪ್ರಭಾವ ಉಳಿಸಿಕೊಂಡಿರುವ ಮುದ್ರಣ ಮಾಧ್ಯಮ'

ಬೆಂಗಳೂರು: ನಗರದ ಸರ್ಕಾರಿ ಮುದ್ರಣ ತಂತ್ರಜ್ಞಾನ ಸಂಸ್ಥೆಯಲ್ಲಿ 2021–22ನೇ ಸಾಲಿಗೆ ಪ್ರಥಮ ಸೆಮಿಸ್ಟರ್‌ನ ಡಿಪ್ಲೊಮಾ ಮುದ್ರಣ ತಂತ್ರಜ್ಞಾನದ ಕೋರ್ಸ್‌ಗೆ ಪ್ರವೇಶ ಪಡೆದ ವಿದ್ಯಾರ್ಥಿಗಳಿಗಾಗಿ ಶುಕ್ರವಾರ 'ಇಂಡಕ್ಷನ್' ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮ ಉದ್ಘಾಟಿಸಿದ ತಾಂತ್ರಿಕ ಶಿಕ್ಷಣ ಇಲಾಖೆಯ ಜಂಟಿ ನಿರ್ದೇಶಕ ಶಿವಶಂಕರ್ ನಾಯ್ಕ ಅವರು, ಆಧುನಿಕ ಬದುಕಿನಲ್ಲಿ ಮುದ್ರಣ ತಂತ್ರಜ್ಞಾನದ ಶಿಕ್ಷಣದ ಮಹತ್ವದ ಬಗ್ಗೆ ವಿವರಿಸಿದರು.

ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್‌ನ ಸಹಾಯಕ ವ್ಯವಸ್ಥಾಪಕ ಜಿ. ಲೋಕನಾಥ್ ಅವರು, ಮುದ್ರಣ ಕ್ಷೇತ್ರದಲ್ಲಿನ ಉದ್ಯೋಗ ಅವಕಾಶಗಳ ಕುರಿತು ವಿವರಿಸಿದರು.

'ಎಸ್ಕೊ ಗ್ರಾಫಿಕ್ಸ್' ಪ್ರೈವೇಟ್ ಲಿಮಿಟೆಡ್‌ನ ಸಿ. ಸಮರ್ಥ ಮಾತನಾಡಿ, ಮುದ್ರಣ ಮಾಧ್ಯಮ ಇಂದಿಗೂ ತನ್ನ ಪ್ರಭಾವವನ್ನು ಉಳಿಸಿಕೊಂಡಿದೆ ಎಂದು ಹೇಳಿದರು. ತಾಂತ್ರಿಕ ಶಿಕ್ಷಣ ಇಲಾಖೆಯ ಸಹಾಯಕ ನಿರ್ದೇಶಕ ಡಾ. ದೊಡ್ಡಮನಿ, ಸಂಸ್ಥೆಯ ಪ್ರಾಂಶುಪಾಲ ಡಾ.ಎಸ್. ವಿಜಯ್‌ಕುಮಾರ್, ಜೆ.ಬಿ. ಪ್ರಕಾಶ್ ಇದ್ದರು.

ಬ್ಯಾಡರಹಳ್ಳಿ: ಆತ್ಮಹತ್ಯೆಗೆ ಪ್ರಚೋದನೆ ನೀಡಿದ ಆರೋಪದಡಿ ಎಫ್‌ಐಆರ್

ಐವರ ಸಾವು; ಹಲ್ಲೇಗೆರೆ ಶಂಕರ್, ಅಳಿಯಂದಿರ ಬಂಧನ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಬ್ಯಾಡರಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ಒಂದೇ ಕುಟುಂಬದ ಐವರು ಮೃತಪಟ್ಟ ಪ್ರಕರಣಕ್ಕೆ ತಿರುವು ಸಿಕ್ಕಿದ್ದು, ಆತ್ಮಹತ್ಯೆಗೆ ಪ್ರಚೋದನೆ ನೀಡಿದ ಆರೋಪದಡಿ ಕುಟುಂಬದ ಯಜಮಾನ ಹಲ್ಲೇಗೆರೆ ಶಂಕರ್ ಹಾಗೂ ಅವರ ಇಬ್ಬರು ಅಳಿಯಂದಿರನ್ನು ಪೊಲೀಸರು ಶುಕ್ರವಾರ ಬಂಧಿಸಿದ್ದಾರೆ.

ತಿಗಳರಪಾಳ್ಯದಲ್ಲಿ ಭಾರತಿ (51), ಅವರ ಮಕ್ಕಳಾದ ಸಿಂಚನಾ (34), ಸಿಂಧುರಾಣಿ (33) ಹಾಗೂ ಮಧುಸಾಗರ್ (25) ಇತ್ತೀಚೆಗೆ ಆತ್ಮಹತ್ಯೆ ಮಾಡಿಕೊಂಡಿದ್ದರು. ಸಿಂಧೂರಾಣಿ ಅವರ ಒಂಬತ್ತು ತಿಂಗಳ ಮಗು ಸಹ ಮೃತಪಟ್ಟ ಸ್ಥಿತಿಯಲ್ಲಿ ಪತ್ತೆಯಾಗಿತ್ತು. 'ಮಗುವಿನದ್ದು ಕೊಲೆ' ಎಂಬುದು ಮರಣೋತ್ತರ ಪರೀಕ್ಷೆಯಿಂದ ದೃಢಪಟ್ಟಿದ್ದು, ತಾಯಿ ಹಾಗೂ ಇತರರ ವಿರುದ್ಧ ಈಗಾಗಲೇ ಕೊಲೆ ಪ್ರಕರಣ ದಾಖಲಾಗಿದೆ.

ಎಲ್ಲ ಆಯಾಮದಲ್ಲಿ ತನಿಖೆ ನಡೆಸುತ್ತಿರುವ ಬ್ಯಾಡರಹಳ್ಳಿ

ಹಲ್ಲೇಗೆರೆ ಶಂಕರ್

ಪೊಲೀಸರು, ಘಟನೆ ನಡೆದಿದ್ದ ಮನೆ ಹಾಗೂ ಹಲವೆಡೆ ಶೋಧ ನಡೆಸಿ ಪುರಾವೆಗಳನ್ನು ಸಂಗ್ರಹಿಸಿದ್ದರು. ಮೃತ ಸಿಂಚನಾ, ಸಿಂಧುರಾಣಿ ಹಾಗೂ ಮಧುಸಾಗರ್ ಬರೆದಿದ್ದ ಮರಣಪತ್ರಗಳು ಸಿಕ್ಕಿದ್ದವು. ಮೂವರ ಲ್ಯಾಪ್‌ಟಾಪ್‌ನಲ್ಲಿ ಪ್ರಕರಣಕ್ಕೆ ಸಂಬಂಧಪಟ್ಟ ಮಾಹಿತಿ ಲಭ್ಯವಾಗಿತ್ತು.

ಪುರಾವೆಗಳನ್ನು ಪರಿಶೀಲಿಸಿದ್ದ ಪೊಲೀಸರು, ಆತ್ಮಹತ್ಯೆಗೆ ಪ್ರಚೋದನೆ ನೀಡಿದ್ದ ಆರೋಪದಡಿ ಶಂಕರ್ ಹಲ್ಲೇಗೆರೆ(ಮೃತ ಭಾರತಿ ಪತಿ), ಅಳಿಯಂದಿರಾದ ಶ್ರೀಕಾಂತ್ ಹಾಗೂ ಪ್ರದೀಪ್ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡಿದ್ದಾರೆ. ಪ್ರದೀಪ್ ತಂದೆ–ತಾಯಿಯನ್ನೂ ಆರೋಪಿಯನ್ನಾಗಿ ಮಾಡಿದ್ದಾರೆ.

ಹಲವು ವರ್ಷಗಳಿಂದ ಕಿರುಕುಳ: 'ಪ್ರಮುಖ ಆರೋಪಿ ಶಂಕರ್, ಪತ್ನಿ ಹಾಗೂ ಮಕ್ಕಳಿಗೆ ಹಲವು ವರ್ಷಗಳಿಂದ ಕಿರುಕುಳ ನೀಡುತ್ತಿದ್ದ. ಇದರಿಂದ ಅವರೆಲ್ಲ ಬೇಸತ್ತಿದ್ದರು. ಅಳಿಯಂದಿರಾದ ಶ್ರೀಕಾಂತ್ ಹಾಗೂ ಪ್ರದೀಪ್, ತಮ್ಮ ಪತ್ನಿಯಂದಿರಾದ ಮೃತ ಸಿಂಚನಾ ಹಾಗೂ ಸಿಂಧುರಾಣಿ ಅವರಿಗೂ ಕಿರುಕುಳ ನೀಡುತ್ತಿದ್ದರು. ಅವಾಚ್ಯ ಶಬ್ದಗಳಿಂದ ಬೈದು, ಹಲ್ಲೆ ಮಾಡಿ ಮಾನಸಿಕವಾಗಿ ಕುಗ್ಗುವಂತೆ ಮಾಡುತ್ತಿದ್ದ ಸಂಗತಿ ತನಿಖೆಯಿಂದ ಹೊರಬಂದಿದೆ' ಎಂದು ಅಧಿಕಾರಿಯೊಬ್ಬರು ತಿಳಿಸಿದರು.

'ಬಂಧಿತ ಮೂವರನ್ನೂ ನ್ಯಾಯಾಲಯಕ್ಕೆ ಹಾಜರುಪಡಿಸಲಾಗುವುದು. ಹೆಚ್ಚಿನ ವಿಚಾರಣೆಗಾಗಿ ಕಸ್ಟಡಿಗೆ ನೀಡುವಂತೆ ನ್ಯಾಯಾಧೀಶರನ್ನು ಕೋರಲಾಗುವುದು. ಇನ್ನಿಬ್ಬರು ಆರೋಪಿಗಳು ತಲೆಮರೆಸಿಕೊಂಡಿದ್ದಾರೆ' ಎಂದೂ ಮಾಹಿತಿ ನೀಡಿದರು.

'ಟಾವರ್ ಎಕ್ಸ್‌ಚೆಂಜ್' ಹೆಸರಿನಲ್ಲಿ ₹ 7 ಲಕ್ಷ ವಂಚನೆ

ಬೆಂಗಳೂರು: ದಿನದ ಲೆಕ್ಕದಲ್ಲಿ ಲಾಭ ನೀಡುವುದಾಗಿ ಹೇಳಿ ಅಕ್ಕಸಾಲಿಗರೊಬ್ಬರಿಂದ ₹ 7 ಲಕ್ಷ ಪಡೆದು ವಂಚಿಸಿರುವ ಆರೋಪದಡಿ ನಗರದ ಸಿಐಡಿ ಸೈಬರ್ ಕ್ರೈಂ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ಉತ್ತರ ಕನ್ನಡ ಜಿಲ್ಲೆಯ ಶಿರಸಿಯ ಸಚಿನ್ ಪ್ರಕಾಶ್ ಸೇಠ್ ದೂರು ನೀಡಿದ್ದಾರೆ. ಅಪರಿಚಿತರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದ್ದು, ತನಿಖೆ ಮುಂದುವರಿದಿದೆ' ಎಂದು ಸಿಐಡಿ ಸೈಬರ್ ಠಾಣೆ ಮೂಲಗಳು ಹೇಳಿವೆ.

'ಚಿನ್ನದ ಕೆಲಸ ಮಾಡುವ ದೂರುದಾರರಿಗೆ ಸ್ನೇಹಿತರೊಬ್ಬರ ಮೂಲಕ 'ಟಾವರ್ ಎಕ್ಸ್‌ಚೆಂಜ್' ಆ್ಯಪ್ ವ್ಯವಹಾರದ ಬಗ್ಗೆ ಗೊತ್ತಾಗಿತ್ತು. ಹಣ ಹೂಡಿಕೆ ಮಾಡಿದರೆ, ದಿನದ ಲೆಕ್ಕದಲ್ಲಿ ಲಾಭ ನೀಡುವುದಾಗಿ ಆ್ಯಪ್‌ನ ಜಾಹೀರಾತಿನಲ್ಲಿ ಆಮಿಷ ಒಡ್ಡಲಾಗಿತ್ತು. ಅದನ್ನು ನಂಬಿದ್ದ ದೂರುದಾರ, ಆ್ಯಪ್ ಇನ್‌ಸ್ಟಾಲ್ ಮಾಡಿಕೊಂಡು ಆರಂಭದಲ್ಲಿ ₹ 1,000 ಹೂಡಿಕೆ ಮಾಡಿದ್ದರು. ಅದಕ್ಕೆ ಪ್ರತಿಯಾಗಿ ಕೆಲದಿನ ₹ 800 ವಾಪಸು ಬಂದಿತ್ತು' ಎಂದೂ ತಿಳಿಸಿವೆ.

'ಹೆಚ್ಚಿನ ಹೂಡಿಕೆ ಮಾಡಿ ಹೆಚ್ಚಿನ ಲಾಭ ಪಡೆಯುತ್ತಿರುವುದಾಗಿ ಸ್ನೇಹಿತ ಹೇಳಿದ್ದ. ಅದನ್ನೂ ನಂಬಿದ್ದ ದೂರುದಾರ, ಹಂತ ಹಂತವಾಗಿ ₹ 7 ಲಕ್ಷ ಹೂಡಿಕೆ ಮಾಡಿದ್ದರು. ಇದಾದ ನಂತರ, ಯಾವುದೇ ಲಾಭ ಬಂದಿಲ್ಲ. ಈ ಬಗ್ಗೆ ವಿಚಾರಿಸಿದಾಗ ಆ್ಯಪ್ ಕಡೆಯಿಂದಲೂ ಪ್ರತಿಕ್ರಿಯೆ ಸಿಕ್ಕಿಲ್ಲ' ಎಂದೂ ಮೂಲಗಳು ಹೇಳಿವೆ.

ಷೇರು ಮಾರುಕಟ್ಟೆಯಲ್ಲಿ ಲಾಭದ ಆಮಿಷ; ವಂಚನೆ

ಬೆಂಗಳೂರು: ಷೇರು ಮಾರುಕಟ್ಟೆಯಲ್ಲಿ ಹಣ ಹೂಡಿಕೆ ಮಾಡಿ ಹೆಚ್ಚಿನ ಲಾಭ ಗಳಿಸಿ ಕೊಡುವುದಾಗಿ ಹೇಳಿ ನಗರದ ಮಹಿಳೆಯೊಬ್ಬರಿಂದ ₹ 26.37 ಲಕ್ಷ ಪಡೆದು ವಂಚಿಸಲಾಗಿದೆ.

ಈ ಸಂಬಂಧ ದಕ್ಷಿಣ ವಿಭಾಗದ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಜೆ.ಪಿ. ನಗರ ನಿವಾಸಿಯಾದ 45 ವರ್ಷದ ಮಹಿಳೆ, ಷೇರು ವಹಿವಾಟು ಮಾಡುತ್ತಿದ್ದರು. ಉತ್ತಮ ಲಾಭ ಗಳಿಸಿಕೊಡುವ ಷೇರು ವ್ಯವಹಾರ ಕಂಪನಿ ಯಾವುದು ಎಂಬುದನ್ನು ತಿಳಿಯಲು ಜಾಲತಾಣದಲ್ಲಿ ಹುಡುಕಾಡುತ್ತಿದ್ದರು. 'ಗ್ಯಾಲಕ್ಸಿ ಟ್ರೇಡರ್ಸ್' ಕಂಪನಿ ಬಗ್ಗೆ ಮಾಹಿತಿ ಸಿಕ್ಕಿತ್ತು. ಕಂಪನಿ ಜಾಲತಾಣದಲ್ಲಿ ಸಿಕ್ಕ ಮೊಬೈಲ್ ನಂಬರ್‌ಗೆ ಮಹಿಳೆ ಕರೆ ಮಾಡಿ ಮಾತನಾಡಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಷೇರು ಮಾರುಕಟ್ಟೆಯಿಂದ ಉತ್ತಮ ಲಾಭ ಗಳಿಸಿ ಕೊಡುವುದಾಗಿ ಹೇಳಿದ್ದ ಗ್ಯಾಲಕ್ಸಿ ಟ್ರೇಡರ್ಸ್ ಕಂಪನಿ ಪ್ರತಿನಿಧಿಗಳು, 'ಸದ್ಯ ₹ 4 ಲಕ್ಷ ಹೂಡಿಕೆ ಮಾಡಿ. ಕೆಲವೇ ದಿನಗಳಲ್ಲಿ ₹ 41 ಲಕ್ಷ ಲಾಭ ಬರುತ್ತದೆ' ಎಂದಿದ್ದರು. ಅವರ ಮಾತು ನಂಬಿದ್ದ ಮಹಿಳೆಯು ಹಣ ಕಟ್ಟಿದ್ದರು.'

'₹ 41 ಲಕ್ಷ ಲಾಭ ಕೈ ಸೇರಬೇಕಾದರೆ, ಕೆಲ ಶುಲ್ಕಗಳನ್ನು ಪಾವತಿಸಬೇಕೆಂದು ಆರೋಪಿಗಳು ಹೇಳಿದ್ದರು. ಅದನ್ನೂ ನಂಬಿದ್ದ ಮಹಿಳೆ, ಹಂತ ಹಂತವಾಗಿ ಒಟ್ಟು ₹ 26.37 ಲಕ್ಷ ಪಾವತಿಸಿದ್ದರು. ಇದಾದ ನಂತರ ಆರೋಪಿಗಳು ಯಾವುದೇ ಲಾಭ ನೀಡಿಲ್ಲ. ಅಸಲು ಸಹ ವಾಪಸು ಕೊಟ್ಟಿಲ್ಲವೆಂದು ಮಹಿಳೆ ದೂರಿನಲ್ಲಿ ತಿಳಿಸಿದ್ದಾರೆ' ಎಂದೂ ಪೊಲೀಸ್ ಮೂಲಗಳು ತಿಳಿಸಿವೆ.

ಪೋಷಕರ ಪ್ರತಿಭಟನೆ ಇಂದು

ಬೆಂಗಳೂರು: ಕರ್ನಾಟಕ ಖಾಸಗಿ ಶಾಲಾ ಪೋಷಕ ಸಂಘಟನೆಗಳ ಸಮನ್ವಯ ವೇದಿಕೆ ವತಿಯಿಂದ ಅ.2ರಂದು ಮೌರ್ಯ ವೃತ್ತದ ಬಳಿಯ ಗಾಂಧಿ ಪ್ರತಿಮೆ ಮುಂದೆ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ.

ಕರ್ನಾಟಕದಲ್ಲಿ ಶುಲ್ಕ ನಿಯಂತ್ರಣ ಹಾಗೂ ಮೇಲುಸ್ತುವಾರಿ ಆಯೋಗ ಅಥವಾ ಕಾನೂನು ರೂಪಿಸುವಂತೆ ಆಗ್ರಹಿಸಿ ಈ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ವೇದಿಕೆ ತಿಳಿಸಿದೆ.

ಆ್ಯಪ್, ಜಾಲತಾಣ ಮೂಲಕ ಕ್ರಿಕೆಟ್ ಬೆಟ್ಟಿಂಗ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೊಬೈಲ್ ಆ್ಯಪ್ ಹಾಗೂ ಜಾಲತಾಣಗಳ ಮೂಲಕ ಅಕ್ರಮವಾಗಿ ಕ್ರಿಕೆಟ್ ಬೆಟ್ಟಿಂಗ್ ದಂಧೆ ನಡೆಸುತ್ತಿದ್ದ ಆರೋಪಿ ಎನ್.ಎಸ್. ನವೀನ್ (31) ಎಂಬಾತನನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

'ಇಂದಿರಾನಗರದ ನವೀನ್, ಐಪಿಎಲ್ ಕ್ರಿಕೆಟ್ ಆರಂಭವಾದ ದಿನದಿಂದಲೂ ಬೆಟ್ಟಿಂಗ್‌ನಲ್ಲಿ ತೊಡಗಿದ್ದ. ಆತನ ಬಗ್ಗೆ ಮಾಹಿತಿ ಸಿಗುತ್ತಿದ್ದಂತೆ ಕಾರ್ಯಾಚರಣೆ ನಡೆಸಿ ಬಂಧಿಸಲಾಗಿದೆ. ಆತನಿಂದ ₹ 15 ಲಕ್ಷ ನಗದು ಹಾಗೂ ಮೊಬೈಲ್ ಜಪ್ತಿ ಮಾಡಲಾಗಿದೆ' ಎಂದು ಸಿಸಿಬಿ ಪೊಲೀಸರು ಹೇಳಿದರು.

'ಇಂದಿರಾನಗರ ಠಾಣೆ ವ್ಯಾಪ್ತಿಯಲ್ಲಿ ಸೆ. 30ರಂದು ಕಾಣಿಸಿಕೊಂಡಿದ್ದ ಆರೋಪಿ, ಸನ್‌ರೈಸರ್ಸ್ ಹೈದರಾಬಾದ್ ಹಾಗೂ ಚೆನ್ನೈ ಸೂಪರ್ ಕಿಂಗ್ಸ್ ನಡುವಿನ ಕ್ರಿಕೆಟ್ ಪಂದ್ಯಗಳ ಮೇಲೆ ಬೆಟ್ಟಿಂಗ್ ಕಟ್ಟಿಸಿಕೊಳ್ಳುತ್ತಿದ್ದ. ಮೊಬೈಲ್ ಆ್ಯಪ್ ಹಾಗೂ ಜಾಲತಾಣ ಮೂಲಕವೂ ಸಾರ್ವಜನಿಕರು ಹಣ ಕಟ್ಟುತ್ತಿದ್ದರು. ಕೆಲವರು ನೇರವಾಗಿ ನಗದು ನೀಡುತ್ತಿದ್ದರು.'

'ಸೋಲು ಹಾಗೂ ಗೆಲುವಿನ ಲೆಕ್ಕಾಚಾರದಲ್ಲಿ ಆರೋಪಿ ಬೆಟ್ಟಿಂಗ್ ನಡೆಸುತ್ತಿದ್ದ. ಇದುವರೆಗೂ ಆತ ಲಕ್ಷಾಂತರ ರೂಪಾಯಿ ಗಳಿಸಿರುವ ಮಾಹಿತಿ ಇದೆ' ಎಂದೂ ತಿಳಿಸಿದರು.

ನಗರದಲ್ಲಿ ಇಂದು

ವನ್ಯಜೀವಿ ಸಂರಕ್ಷಣೆಗಾಗಿ ನಡಿಗೆ ಮತ್ತು 67ನೇ ವನ್ಯಜೀವಿ ಸಪ್ತಾಹ ಉದ್ಘಾಟನಾ ಕಾರ್ಯಕ್ರಮ: ಉದ್ಘಾಟನೆ: ಥಾವರಚಂದ್ ಗೆಹಲೋತ್, ಗೌರವ ಅತಿಥಿ: ಉಮೇಶ್ ಕತ್ತಿ, ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಮುಖ್ಯ ಅತಿಥಿಗಳು: ಪಿ.ಸಿ. ಮೋಹನ್, ಜಾವೇದ್ ಅಖ್ತರ್, ಸಂಜಯ್ ಮೋಹನ್, ಆಯೋಜನೆ: ಅರಣ್ಯ ಇಲಾಖೆ, ಸ್ಥಳ: ಕಬ್ಬನ್ ಉದ್ಯಾನ (ಹೈಕೋರ್ಟ್ ಅಂಚೆ ಕಚೇರಿ ದ್ವಾರ), ಬೆಳಿಗ್ಗೆ 8

ರಾಗಿ ಕಣ ಸಂತೆ ಪುನರಾರಂಭ: 'ಖಾದಿ ಮತ್ತು ಕೈಮಗ್ಗದಲ್ಲಿ ಪ್ರಸ್ತುತ ಸವಾಲುಗಳು' ವಿಚಾರ ಸಂಕಿರಣ: ಪವಿತ್ರಾ ಮುದ್ದಯ್ಯ, ರವಿ ಕಿರಣ್, ಸ್ವಾಮಿನಾಥನ್ ವೈತಲಿಂಗಂ, ಗಾಂಧಿ ಭಜನೆ: ನಿಶಾಂತ್ ಗುರವ್, ಭರತನಾಟ್ಯ: ಸುಹಾಸಿನಿ ಕೌಲಗಿ, ಆಯೋಜನೆ: ರಾಗಿಕಣ ತಂಡ, ಸ್ಥಳ: ರಾಗಿ ಕಣ, ಬನ್ನೇರುಘಟ್ಟ ರಸ್ತೆ, ಬೆಳಿಗ್ಗೆ 11

ಅಖಿಲ ಭಾರತೀಯ ಕಾವ್ಯೋತ್ಸವ: ಉದ್ಘಾಟನೆ: ಎಚ್.ಎಸ್. ವೆಂಕಟೇಶಮೂರ್ತಿ, ಅಧ್ಯಕ್ಷತೆ: ಚಂದ್ರಶೇಖರ ಕಂಬಾರ, ಗೌರವ ಅತಿಥಿ: ಮೈಥಿಲಿ ಪಿ. ರಾವ್, ಉಪಸ್ಥಿತಿ: ಸರಜೂ ಕಾಟ್ಕರ್, ಕೆ. ಶ್ರೀನಿವಾಸರಾವ್, ಆಯೋಜನೆ: ಕೇಂದ್ರ ಸಾಹಿತ್ಯ ಅಕಾಡೆಮಿ, ಸ್ಥಳ: ಜೈನ್ ಕಾಲೇಜು, ಜೆ.ಸಿ. ರಸ್ತೆ, ಬೆಳಿಗ್ಗೆ 10

ಡಾ. ಚಂದ್ರಶೇಖರ ಕಂಬಾರ

ವಿದಿಶಾ ರವೀಂದ್ರನಾಥ ನಿರ್ದೇಶನದ 'ಶೈಲಜಾ ಸುರೇಶ್' ಸಾಕ್ಷ್ಯಚಿತ್ರ ಬಿಡುಗಡೆ: ಉಪಸ್ಥಿತಿ: ಡಾ. ತಮಿಳ್ ಸೆಲ್ವಿ, ಕೆ.ಎಂ. ಲೋಲಾಕ್ಷಿ, ಆಯೋಜನೆ: ಲೇಖಿಕಾ ಸಾಹಿತ್ಯ ವೇದಿಕೆ, ಸಂಜೆ 4 (ಆನ್‌ಲೈನ್ ಕಾರ್ಯಕ್ರಮ)

ರಾಮಕೃಷ್ಣ ಉಪಾಧ್ಯ ಅವರ 'ನಗ್ನಸತ್ಯ' ಪುಸ್ತಕ ಬಿಡುಗಡೆ: ಸಿದ್ದರಾಮಯ್ಯ, ಎಂ.ಸಿ. ನಾಣಯ್ಯ, ಕೆ. ಶ್ರೀನಿವಾಸನ್, ಆಯೋಜನೆ: ಅನು ಪ್ರಕಾಶನ, ಸ್ಥಳ: ಭಾರತ್ ಸ್ಕೌಟ್ಸ್ ಆ್ಯಂಡ್ ಗೈಡ್ಸ್ ಭವನ, ಏಟ್ರಿಯಾ ಹೋಟೆಲ್ ಸಮೀಪ, ಸಂಜೆ 4.30

ನಾಗತಿಹಳ್ಳಿ ಚಂದ್ರಶೇಖರ್ ಅವರ 'ವಲಸೆ ಹಕ್ಕಿಯ ಹಾಡು' ಹಾಗೂ 'ಬಾ ನಲ್ಲೆ ಮಧುಚಂದ್ರಕೆ': ಪುಸ್ತಕ ಬಿಡುಗಡೆ: ಚಂದ್ರಶೇಖರ ಕಂಬಾರ, ಆಯೋಜನೆ: ಪ್ರಭಾತ್ ಪ್ರಕಾಶನ, ಸ್ಥಳ: ಟೆಂಟ್ ಸಿನಿಮಾ, ಬನಶಂಕರಿ ಎರಡನೇ ಹಂತ, ಸಂಜೆ 5

ನಾಗತಿಹಳ್ಳಿ ಚಂದ್ರಶೇಖರ್

ಮನೋರಂಗದಲ್ಲಿ ಕನ್ನಡ ನಾಟಕಗಳು: ಮೂವತ್ತೊಂದು ದಿನ ಮೂವತ್ತೊಂದು ಉಪನ್ಯಾಸ, ವಿಷಯ: ಇಗ್ಗಪ್ಪ ಹೆಗಡೇ ವಿವಾಹ ಪ್ರಹಸನ: ಕರ್ಕಿ ವೆಂಕಟರಮಣ ಶಾಸ್ತ್ರಿ ಸೂರಿ, ಉಪನ್ಯಾಸಕ: ಶ್ರೀಪಾದ ಭಟ್, ಆಯೋಜನೆ: ಕರ್ನಾಟಕ ಸಾಹಿತ್ಯ ಅಕಾಡೆಮಿ, ಸಂಜೆ 5.30 (ಆನ್‌ಲೈನ್ ಕಾರ್ಯಕ್ರಮ)

ಗಾಂಧಿ ಜಯಂತಿ ಕಾರ್ಯಕ್ರಮಗಳು



ಗಾಂಧಿ ಪ್ರತಿಮೆಗೆ ಮಾಲಾರ್ಪಣೆ: ಗೌರವ್ ಗುಪ್ತ, ಆಯೋಜನೆ: ಬಿಬಿಎಂಪಿ, ಸ್ಥಳ: ಮಹಾತ್ಮಗಾಂಧಿ ಪ್ರತಿಮೆ ಆವರಣ, ಎಂ.ಜಿ.ರಸ್ತೆ, ಬೆಳಿಗ್ಗೆ 9

ಬಿಇಎಲ್ ಲಲಿತ ಕಲಾ ಸಂಘ ಮತ್ತು ಬಿಇಎಲ್ ಶೈಕ್ಷಣಿಕ ಸಂಸ್ಥೆಗಳು: ಮುಖ್ಯ ಅತಿಥಿ: ಆರ್.ಪಿ. ಮೋಹನ್, ಅಧ್ಯಕ್ಷತೆ: ಸಂತೋಷ್ ಕುಮಾರ್ ಡಿ., ಉಪಸ್ಥಿತಿ: ವಿಠ್ಠಲ್ ರಾವ್ ಪಿ.ಎನ್., ಕಾಂತ ಶಂಕರ್, ಸ್ಥಳ: ರಾಷ್ಟ್ರಕವಿ ಕುವೆಂಪು ಕಲಾಕ್ಷೇತ್ರ, ಬಿಇಎಲ್, ಬೆಳಿಗ್ಗೆ 9.30

ಬೆಂಗಳೂರು ರಾಷ್ಟ್ರಪಿತ ಮಹಾತ್ಮಗಾಂಧಿ ಚಿಂತನ ವೇದಿಕೆ: ಅಧ್ಯಕ್ಷತೆ: ಎಂ.ಪಿ. ನಾಡಗೌಡ, ಮುಖ್ಯ ಭಾಷಣ: ಬಿ.ಟಿ. ಲಲಿತಾ ನಾಯಕ್, ಮಹಿಮ ಜೆ. ಪಟೇಲ್, ಪುಷ್ಪನಮನ: ಕುಮಾರ ಮನೀಷ್, ಎಸ್.ಪಿ. ದಯಾನಂದ್, ನುಡಿನಮನ: ಮಂಜುಳಾ ಉಮೇಶ್, ಆಯೋಜನೆ: ರಾಷ್ಟ್ರಪಿತ ಮಹಾತ್ಮಗಾಂಧಿ ಚಿಂತನ ವೇದಿಕೆ, ಸ್ಥಳ: ಜ್ಯೋತಿವೃಕ್ಷ, ಹೋಟೆಲ್ ಅಶೋಕ್, ಬೆಳಿಗ್ಗೆ 11

ಸ್ವಾತಂತ್ರ್ಯೋತ್ಸವ 75 ಅಮೃತ ಮಹೋತ್ಸವ ವರ್ಷಾಚರಣೆ, ಮಹಾತ್ಮ ಗಾಂಧೀಜಿ ಅವರ ಜನ್ಮದಿನಾಚರಣೆ ಹಾಗೂ 'ಮಹಾತ್ಮ ಗಾಂಧಿ ಸೇವಾ ಪ್ರಶಸ್ತಿ' ಪ್ರದಾನ: ಬಸವರಾಜ ಬೊಮ್ಮಾಯಿ, ಮುಖ್ಯ ಅತಿಥಿ: ವೂಡೇ ಪಿ. ಕೃಷ್ಣ, ಗೌರವ ಉಪಸ್ಥಿತಿ: ನ್ಯಾ. ಅಶೋಕ್ ಬಂಗಾರೆಪ್ಪ ಹಿಂಚಿಗೇರಿ, ಪ್ರಶಸ್ತಿ ಪುರಸ್ಕೃತರು: ಸಿದ್ಧಲಿಂಗ ಸ್ವಾಮೀಜಿ, ಮೀರಾತಾಯಿ ಕೊಪ್ಪಿಕರ್, ಆಯೋಜನೆ: ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಕರ್ನಾಟಕ ಗಾಂಧೀ ಸ್ಮಾರಕ ನಿಧಿ, ಸ್ಥಳ: ಮಹಾದೇವ ದೇಸಾಯಿ ಸಭಾಂಗಣ, 2ನೇ ಮಹಡಿ, ಗಾಂಧಿ ಭವನ, ಬೆಳಿಗ್ಗೆ 11

ಮಹಾತ್ಮ ಗಾಂಧೀಜಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರಿ ಜನ್ಮದಿನಾಚರಣೆ: ಡಿ.ಕೆ. ಶಿವಕುಮಾರ್, ಸಿದ್ದರಾಮಯ್ಯ, ಮಲ್ಲಿಕಾರ್ಜುನ ಖರ್ಗೆ, ಎಸ್.ಆರ್. ಪಾಟೀಲ, ಆಯೋಜನೆ: ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ (ಕೆಪಿಸಿಸಿ), ಸ್ಥಳ: ಕೆಪಿಸಿಸಿ ಕಚೇರಿ, ಕ್ವೀನ್ಸ್ ರಸ್ತೆ, ಬೆಳಿಗ್ಗೆ 11

ಗಾಂಧಿ ಸಂಸ್ಮರಣೆ: ಗಾಂಧಿ ತತ್ವಗಳನ್ನು ಬಿಂಬಿಸುವ ಕಲಾಕೃತಿಗಳ ವೀಕ್ಷಣೆ: ಬಸವರಾಜ ಬೊಮ್ಮಾಯಿ, ಆಯೋಜನೆ ಹಾಗೂ ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಬೆಳಿಗ್ಗೆ 11.30

ಗಾಂಧಿ ಜಯಂತಿ ಮತ್ತು ಲಾಲ್‌ಬಹದ್ದೂರ್ ಶಾಸ್ತ್ರಿಯವರ ಜಯಂತಿ ಅಂಗವಾಗಿ ಕಾರ್ಯಕ್ರಮಗಳು ಹಾಗೂ ಡಾ.ಕೆ. ನಾಗಪ್ಪ ಆಳ್ವ ಮತ್ತು ಕಲ್ಯಾಣಿ ಆಳ್ವ ದತ್ತಿ ನಿಧಿ ಸ್ಪರ್ಧೆ: ಅಧ್ಯಕ್ಷತೆ: ಟಿ.ವಿ. ಮಾರುತಿ, ಮುಖ್ಯತಿಥಿಗಳು: ಎನ್. ಚಂದ್ರಶೇಖರ್, ಪ್ರೊ.ಎ. ಪ್ರಕಾಶ್, ಆಯೋಜನೆ: ಅಖಿಲ ಕರ್ನಾಟಕ ಮಕ್ಕಳ ಕೂಟ, ಸ್ಥಳ: ಮಕ್ಕಳ ಕೂಟದ ಸಭಾಂಗಣ, ಕೋಟೆ, ಸಂಜೆ 4

ಗಾಂಧಿ ಸಂಸ್ಕೃತಿ ಹಬ್ಬ: ಅಧ್ಯಕ್ಷತೆ: ಎಸ್.ಟಿ. ಸೋಮಶೇಖರ್, ಮುಖ್ಯ ಅತಿಥಿ: ಬಿ. ಸುರೇಶ್, ಆಯೋಜನೆ: ಗಾಂಧಿ ಪಾರ್ಕ್ ನಡಿಗೆದಾರರ ಕೂಟ, ಸ್ಥಳ: ಗಾಂಧಿ ಪಾರ್ಕ್, ಭಾರತ್ ನಗರ 2ನೇ ಹಂತ, ಸಂಜೆ 6

'ಸ್ವಾತಂತ್ರ್ಯ ಸಮರ–ಕರುನಾಡು ಅಮರ' ಐತಿಹಾಸಿಕ ನಾಟಕ: ಉದ್ಘಾಟನೆ: ಎಸ್. ರಂಗಪ್ಪ, ಅಧ್ಯಕ್ಷತೆ: ಹನಿಯೂರು ಚಂದ್ರೇಗೌಡ, ಮುಖ್ಯ ಅತಿಥಿಗಳು: ದೀಪಕ್ ಖರ್ವಾಡ್ಕರ್, ಭಾಸ್ಕರ್ ಪೈ, ಯಶವಂತ ಸರದೇಶಪಾಂಡೆ, ಟಿ. ಲಕ್ಷ್ಮೀನಾರಾಯಣ, ಮಾಲೂರು ವಿಜಿ, ಆಯೋಜನೆ: ದಕ್ಷಿಣ ಮಧ್ಯ ವಲಯ ಸಾಂಸ್ಕೃತಿಕ ಕೇಂದ್ರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ಡಾ.ಸಿ. ಅಶ್ವತ್ ಕಲಾಭವನ, ಎನ್.ಆರ್. ಕಾಲೊನಿ, ಸಂಜೆ 6

ಇಬ್ಬರು ಅಧಿಕಾರಿಗಳ ಬಳಿ ಇದ್ದ ₹62ಸಾವಿರ ನಗದು ಮಾತ್ರ ವಶಕ್ಕೆ

ಬರಿಗೈಯಲ್ಲಿ ತೆರಳಿದ ಎಸಿಬಿ ಅಧಿಕಾರಿಗಳು

ಪ್ರಜಾವಾಣಿ ವಾರ್ತೆ

ದೊಡ್ಡಬಳ್ಳಾಪುರ: ನಗರಸಭೆಯಲ್ಲಿನ ವ್ಯಾಪಕ ಭ್ರಷ್ಟಾಚಾರ ಕುರಿತಂತೆ ಸಾರ್ವಜನಿಕರಿಂದ ದೂರು ಕೇಳಿ ಬಂದಿದ್ದ ಹಿನ್ನೆಲೆಯಲ್ಲಿ ಗುರುವಾರ ಬೆಂಗಳೂರು ಗ್ರಾಮಾಂತರ ಜಿಲ್ಲಾ ಎಸಿಬಿ ಡಿವೈಎಸ್ಪಿ ಜಗದೀಶ್ ನೇತೃತ್ವದಲ್ಲಿ 30ಜನ ಅಧಿಕಾರಿಗಳು ನಗರಸಭೆ ಕಚೇರಿಗೆ ದಿಢೀರ್ ಭೇಟಿ ನೀಡಿ ರಾತ್ರಿ 11ಗಂಟೆ ವರೆಗೂ ಪರಿಶೀಲನೆ ನಡೆಸಿದರು.

ಆದರೆ, ನಗರಸಭೆಯಿಂದ ಯಾವುದೇ ದಾಖಲೆ ವಶಕ್ಕೆ ಪಡೆದಿಲ್ಲ. ಇಬ್ಬರು ಅಧಿಕಾರಿಗಳ ಬಳಿ ಇದ್ದ ₹62 ಸಾವಿರ ನಗದು ಮಾತ್ರ ವಶಕ್ಕೆ

ದೊಡ್ಡಬಳ್ಳಾಪುರ ನಗರಸಭೆ ಕಾರ್ಯಾಲಯ

ಪಡೆಯಲಾಗಿದೆ ಎಂದು ಎಸಿಬಿ ಮೂಲಗಳು ತಿಳಿಸಿವೆ.

ಎಸಿಬಿ ಅಧಿಕಾರಿಗಳು ದಾಳಿ ನಡೆಸಿದ್ದರ ಕುರಿತಂತೆ ನಿಖರ ಉದ್ದೇಶ ಹಾಗೂ ಇತರೆ ಯಾವುದೇ ಮಾಹಿತಿ ಅಧಿಕೃತವಾಗಿ ಮಾಧ್ಯಮಗಳಿಗೆ ನೀಡಿಲ್ಲ. ಎಸಿಬಿ ಅಧಿಕಾರಿಗಳ ತಂಡ ಕಚೇರಿಗೆ ಭೇಟಿ ನೀಡಿ ಪರಿಶೀಲನೆ ನಡೆಸಲು ಪ್ರಾರಂಭಿಸಿದ ನಂತರ ಎಂಜಿನಿಯರ್ ಸೇರಿದಂತೆ ಕೆಲ ಅಧಿಕಾರಿಗಳು ಸೂಕ್ತ ರೀತಿಯಲ್ಲಿ ಸ್ಪಂದಿಸದೆ ಹಾಗೂ ಕಚೇರಿಗೆ ಬಾರದೆ ತಪ್ಪಿಸಿಕೊಂಡಿದ್ದರ ಕುರಿತಂತೆ ಕಾರಣ ಕೇಳಿ ನೋಟಿಸ್ ನೀಡಲಾಗುವುದು ಎಂದು ಎಸಿಬಿ ಅಧಿಕಾರಿಗಳು ತಿಳಿಸಿದ್ದಾರೆ.

ಬರಿಗೈಯಲ್ಲಿ ಹೋದ ಅಧಿಕಾರಿಗಳು: ನಗರಸಭೆಯಲ್ಲಿ ಗುರುವಾರ ಸಂಜೆ 4ಗಂಟೆಯಿಂದ ರಾತ್ರಿ 11 ಗಂಟೆವರೆಗೂ ಪರಿಶೀಲನೆ ನಡೆಸಿದರು. ಯಾವುದೇ ಕಡತ ಅಧಿಕಾರಿಗಳು ಕೊಂಡೊಯ್ದಿಲ್ಲ. ಸಕಾಲದಲ್ಲಿ ಸಲ್ಲಿಕೆಯಾಗಿದ್ದ ಅರ್ಜಿಪರಿಶೀಲನೆ ಮಾತ್ರ ನಡೆಸಿದ್ದಾರೆ. ಆದರೆ, ಆರೋಗ್ಯ, ಕಂದಾಯ ಹಾಗೂ ಎಂಜಿನಿಯರಿಂಗ್ ವಿಭಾಗದ ಕಡತ ಬಗ್ಗೆ ಮಾತ್ರ ಹೆಚ್ಚಿನ ತಪಾಸಣೆ ನಡೆಸಿದ್ದು, ಮುಂದಿನ ದಿನಗಳಲ್ಲಿ ಯಾವ ರೀತಿಯ ಕ್ರಮ ಕೈಗೊಳ್ಳಲಿದ್ದಾರೆ ಎನ್ನುವ ಬಗ್ಗೆ ನಗರಸಭೆ ಅಧಿಕಾರಿಗಳಲ್ಲಿ ಆತಂಕ ಮೂಡಿಸಿದೆ.

ಎಸಿಬಿ ಅಧಿಕಾರಿಗಳ ತಂಡ ನಗರ ಸಭೆ ಕಚೇರಿಗೆ ಭೇಟಿ ನೀಡಿದ್ದ ವೇಳೆ ಪೌರಾಯುಕ್ತ ರಮೇಶ್ ಎಸ್.ಸುಣಗಾರ್ ಮಾತ್ರ ಹಾಜರಿದ್ದು ಎಲ್ಲ ಮಾಹಿತಿ ನೀಡಿದ್ದಾರೆ. ಉಳಿದಂತೆ ಬಹುತೇಕ ಅಧಿಕಾರಿಗಳು ಕಚೇರಿಗೆ ಬಾರದೆ ತಪ್ಪಿಸಿಕೊಂಡಿದ್ದರ ಬಗ್ಗೆ ಎಸಿಬಿ ಅಧಿಕಾರಿಗಳು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ನಿಧನ ಸುದ್ದಿ

ಎಲ್.ನಟರಾಜು

ನೆಲಮಂಗಲ: ಕೃಷಿ ಅಧಿಕಾರಿ ಎಲ್. ನಟರಾಜು (58) ಸುಭಾಷ್‌ನಗರದ ಸ್ವಗೃಹದಲ್ಲಿ ಶುಕ್ರವಾರ ಬೆಳಿಗ್ಗೆ ಹೃದಯಾಘಾತದಿಂದ ನಿಧನರಾದರು. ಅವರಿಗೆ ಪತ್ನಿ, ಪುತ್ರಿ ಡಾ.ಮೇಘನಾ, ಸಹೋದರ ತಾಲ್ಲೂಕು ಪಂಚಾಯತಿ ಕಾರ್ಯನಿರ್ವಹಣಾಧಿಕಾರಿ ಮೋಹನ್ ಇದ್ದಾರೆ. ಮಧ್ಯಾಹ್ನ ಕೆಂಪಲಿಂಗನಹಳ್ಳಿಯಲ್ಲಿ ಅಂತ್ಯಸಂಸ್ಕಾರ ನಡೆಯಿತು.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಮರಣ ಪತ್ರ ಪತ್ತೆ; ಪ್ರಾಂಶುಪಾಲ ವಿರುದ್ಧ ಎಫ್‌ಐಆರ್

ಕಾಲೇಜಿನಲ್ಲೇ ಸಂಸ್ಥಾಪಕ ಆತ್ಮಹತ್ಯೆ

ಬೆಂಗಳೂರು: ಹೆಸರಘಟ್ಟ ಮುಖ್ಯರಸ್ತೆಯಲ್ಲಿರುವ ಕಲ್ಪವೃಕ್ಷ ಕಾಲೇಜಿನ ಕೊಠಡಿಯಲ್ಲಿ ಕೆ.ಎನ್. ಮಂಜುನಾಥ್ (33) ಎಂಬುವರು ಆತ್ಮಹತ್ಯೆ ಮಾಡಿಕೊಂಡಿದ್ದು, ಈ ಬಗ್ಗೆ ಬಾಗಲಗುಂಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಮೃತ ಮಂಜುನಾಥ್, ಕಲ್ಪವೃಕ್ಷ ಕಾಲೇಜಿನ ಸಂಸ್ಥಾಪಕ. ಕಾಲೇಜಿನ 2ನೇ ಮಹಡಿಯಲ್ಲಿರುವ ಕೊಠಡಿಯಲ್ಲಿ ಫ್ಯಾನ್‌ಗೆ ಬಟ್ಟೆಯಿಂದ ನೇಣುಹಾಕಿಕೊಂಡು ಸೆ. 28ರಂದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮೃತದೇಹದ ಮರಣೋತ್ತರ ಪರೀಕ್ಷೆ ಮಾಡಿಸಲಾಗಿದ್ದು, ವರದಿಗಾಗಿ ಕಾಯುತ್ತಿದ್ದೇವೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಘಟನಾ ಸ್ಥಳದಲ್ಲಿ ಮರಣ ಪತ್ರ ಸಿಕ್ಕಿದೆ. 'ನನ್ನ ಸಾವಿಗೆ ಮಲ್ಲಿಕಾರ್ಜುನ್ ಹಾಗೂ ಚಂದ್ರು ಕಾರಣ' ಎಂಬುದಾಗಿ ಬರೆಯಲಾಗಿದೆ. ಅದನ್ನು ಬರೆದಿದ್ದು ಮಂಜುನಾಥ್ ಅವರೇನಾ ಎಂಬುದನ್ನು ಕೈಬರಹ ಪರಿಶೀಲನೆಯಿಂದ ತಿಳಿದುಕೊಳ್ಳಬೇಕಿದೆ' ಎಂದೂ ತಿಳಿಸಿವೆ.

'ಮಂಜುನಾಥ್ ಸಾವಿನ ಬಗ್ಗೆ ಪತ್ನಿ ಕವಿತಾ ದೂರು ನೀಡಿದ್ದಾರೆ. ಕಾಲೇಜಿನ ಪ್ರಾಂಶುಪಾಲ ಮಲ್ಲಿಕಾರ್ಜುನ್ ಹಾಗೂ ಉಪನ್ಯಾಸಕ ಚಂದ್ರು ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ. ನೋಟಿಸ್ ನೀಡಿ ಅವರಿಬ್ಬರ ವಿಚಾರಣೆ ನಡೆಸಬೇಕಿದೆ. ಪುರಾವೆ ಸಂಗ್ರಹಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು' ಎಂದೂ ಮೂಲಗಳು ವಿವರಿಸಿವೆ.

₹ 25 ಲಕ್ಷ ಕಳೆದುಕೊಂಡಿದ್ದರು: 'ಮಂಜುನಾಥ್ ಅವರು 2019ರಲ್ಲಿ ಕಲ್ಪವೃಕ್ಷ ಕಾಲೇಜು ಆರಂಭಿಸಿದ್ದರು. ಕಾಲೇಜು ಪ್ರವೇಶಕ್ಕೆ ವಿದ್ಯಾರ್ಥಿಗಳನ್ನು ಕರೆತಂದಿದ್ದ ಆರೋಪಿಗಳು, ಶುಲ್ಕದ ಹಣವನ್ನು ಕಾಲೇಜಿಗೆ ನೀಡಿರಲಿಲ್ಲ' ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಅನಿಶ್ಚಿತತೆ’: ಕರ್ನಾಟಕ ಚಿತ್ರಕಲಾ ಪರಿಷತ್‌ನಲ್ಲಿ ವಿಶೇಷ ಪ್ರದರ್ಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅನಿಶ್ಚಿತತೆ (ಅನ್‌ಸರ್ಟೈನಿಟಿ)’ ಎಂಬ ವಿಚಾರ ಇಟ್ಟುಕೊಂಡು ‘ವುಡ್‌ಕಟ್ ಪ್ರಿಂಟ್ಸ್-2021’ ಎಂಬ ವಿಶೇಷ ಪ್ರದರ್ಶನವನ್ನು ಕರ್ನಾಟಕ ಚಿತ್ರಕಲಾ ಪರಿಷತ್‌ನಲ್ಲಿ ಆಯೋಜಿಸಲಾಗಿದೆ.

75 ಕಲಾವಿದರು ಮೂರು ತಿಂಗಳಿನಿಂದ ಶ್ರಮಿಸಿ, ತಮ್ಮ ರಚನೆಗಳನ್ನು ಇಲ್ಲಿ ಪ್ರದರ್ಶಿಸಿದ್ದಾರೆ. ಸೆಪ್ಟೆಂಬರ್ 22ರಂದು ಆರಂಭವಾಗಿರುವ ಈ ಪ್ರದರ್ಶನ ಅಕ್ಟೋಬರ್ 3ರ ವರೆಗೆ ನಡೆಯಲಿದೆ.

ವುಡ್ ಕಟ್ ಪ್ರಿಂಟ್ಸ್ ಅನ್ನುವ ವಿಶೇಷ ಸ್ವರೂಪದ ರಚನೆಯ ಮೂಲಕ ಇಲ್ಲಿ ಚಿತ್ರಗಳನ್ನು 4 ಅಡಿ - 8 ಅಡಿ ಫ್ರೇಮ್‌ನಲ್ಲಿ ತಯಾರಿಸಲಾಗಿದೆ. ಪ್ರಸಕ್ತ ಸಮಾಜದ ಆಗುಹೋಗುಗಳು, ಇಂದಿನ ಸ್ಥಿತಿಗತಿಗೆ ಸ್ಪಂದನೆಯ ರೀತಿಯಲ್ಲಿ ಮತ್ತು ಜನಸಾಮಾನ್ಯರ ದಿನನಿತ್ಯದ ಕಥೆಯನ್ನು ಇಲ್ಲಿ ಕಲಾವಿದರು ತಮ್ಮ ಕ್ರಿಯಾಶೀಲತೆಯ ಮೂಲಕ ಪ್ರಸ್ತುತಪಡಿಸಿದ್ದಾರೆ.

ಚಿತ್ರ ಪ್ರದರ್ಶನ ಕುರಿತಂತೆ ‘ಪ್ರಜಾವಾಣಿ’ ಜತೆ ಮಾತನಾಡಿದ ಕಲಾವಿದ ಗಣಪತಿ ಅಗ್ನಿಹೋತ್ರಿ, ‘ಮೂರು ತಿಂಗಳ ಪರಿಶ್ರಮದಿಂದ ಇಲ್ಲಿ ಸುಂದರ ರಚನೆಗಳು ‘ವುಡ್ ಕಟ್ ಪ್ರಿಂಟ್ಸ್’ ಎನ್ನುವ ವಿಶಿಷ್ಟವಾದ ಚಿತ್ರಕಲೆಯ ಪ್ರಕಾರದಲ್ಲಿ ಮೂಡಿಬಂದಿದೆ. ಕೋವಿಡ್ ಕಾಲದಲ್ಲಿ ಜನಸಾಮಾನ್ಯರು, ಕಲಾವಿದರು ಸಹಿತ ಸಮಾಜದ ವಿವಿಧ ವರ್ಗ ಎದುರಿಸಿದ ಸಮಸ್ಯೆಗಳು, ದಿನನಿತ್ಯದ ಜೀವನಶೈಲಿಯನ್ನು ಸರಳವಾಗಿ ಪ್ರತಿಬಿಂಬಿಸುವಂತೆ ಪ್ರದರ್ಶಿಸಲಾಗಿದೆ’ ಎಂದರು.

ಚಿತ್ರಕಲಾ ಪರಿಷತ್ತಿನಲ್ಲಿ ಪ್ರದರ್ಶನಗೊಂಡಿರುವ ರಚನೆಗಳು

ವಸತಿ ಗೃಹ ಮಾರಾಟ ರದ್ದು: ಕೆಎಚ್‌ಬಿಗೆ ₹1 ಲಕ್ಷ ದಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲ್ಲೂಕಿನಲ್ಲಿ ಸೇವೆಯಲ್ಲಿರುವ ಮತ್ತು ನಿವೃತ್ತ ಸರ್ಕಾರಿ ನೌಕರರಿಗೆ ಕರ್ನಾಟಕ ಗೃಹ ಮಂಡಳಿಯ (ಕೆಎಚ್‌ಬಿ) 10 ವಸತಿ ಗೃಹಗಳನ್ನು ಮಾರಾಟ ಮಾಡಿದ್ದ ಪ್ರಕ್ರಿಯೆಯನ್ನು ಹೈಕೋರ್ಟ್ ರದ್ದುಗೊಳಿಸಿದೆ. ಕಾಯ್ದೆಯಲ್ಲಿನ ನಿಯಮಗಳನ್ನು ಉಲ್ಲಂಘಿಸಿದ ಕೆಎಚ್‌ಬಿಗೆ ₹1 ಲಕ್ಷ ದಂಡ ವಿಧಿಸಿದೆ.

ಕೆ.ಎ.ಚಂದ್ರಶೇಖರ್ ಮತ್ತು ಇತರ ಮೂವರು ಸ್ಥಳೀಯರು ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದರು. ‘ವರ್ಗಾವಣೆಗೊಂಡ 10 ನೌಕರರು ಮನೆ ಖಾಲಿ ಮಾಡಬೇಕಾದ ಸಂದರ್ಭದಲ್ಲಿ ಅವರಿಗೇ ಕೆಎಚ್‌ಬಿ ಮಾರಾಟ ಮಾಡಿದೆ. ಇದು ಮಂಡಳಿಯ ನಿಯಮಗಳ ಉಲ್ಲಂಘನೆ ಮತ್ತು ಹೈಕೋರ್ಟ್ ಆದೇಶಕ್ಕೆ ವಿರುದ್ಧವಾಗಿದೆ’ ಎಂದು ಆರೋಪಿಸಿದ್ದರು.

‘ಈ ರೀತಿಯ ಅಭ್ಯಾಸಕ್ಕೆ ಒಮ್ಮೆ ಅನುಮತಿ ನೀಡಿದರೆ ಸರ್ಕಾರದ ಮನೆ ಮತ್ತು ಆಸ್ತಿಗಳನ್ನು ಹಾಲಿ ಮತ್ತು ನಿವೃತ್ತ ನೌಕರರಿಗೆ ಕೆಎಚ್‌ಬಿ ಮಾರಾಟ ಮಾಡಿಬಿಡುತ್ತದೆ’ ಎಂದು ಹಂಗಾಮಿ ಮುಖ್ಯ ನ್ಯಾಯಮೂರ್ತಿ ಸತೀಶ್ ಚಂದ್ರ ಶರ್ಮಾ ನೇತೃತ್ವದ ವಿಭಾಗೀಯ ಪೀಠ ಹೇಳಿತು.

‘ಕಾರ್ಯವಿಧಾನಗಳನ್ನು ಅನುಸರಿಸದೆ ಕೆಎಚ್‌ಬಿ ತನ್ನ ಆಸ್ತಿಯನ್ನು ಯಾವುದೇ ವ್ಯಕ್ತಿಗೆ ಮಾರಾಟ ಅಥವಾ ಗುತ್ತಿಗೆ ಆಧಾರದಲ್ಲಿ ನೀಡಬಾರದು. ವಸತಿ ಗೃಹ ಖರೀದಿ ಮಾಡಿದ್ದ 10 ಜನರಿಗೆ ಶೇ 12.5ರ ಬಡ್ಡಿ ದರದಲ್ಲಿ ಮೊತ್ತ ಮರು ಪಾವತಿ ಮಾಡಬೇಕು’ ಎಂದು ಆದೇಶಿಸಿತು.

‘ಗಾಂಧಿ ಆಶ್ರಮದ ಸೇವೆ ಶ್ಲಾಘನೀಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹಿರಿಯ ನಾಗರಿಕರ ಪುನರ್ವಸತಿ ಹಾಗೂ ಆರೈಕೆಯ ಉದ್ದೇಶದಿಂದ ನಗರದ ಮಾಚೋಹಳ್ಳಿಯಲ್ಲಿ ಆರಂಭಿಸಿರುವ ಗಾಂಧಿ ಆಶ್ರಮದ ಸೇವೆ ಶ್ಲಾಘನೀಯ’ ಎಂದು ಕಂದಾಯ ಸಚಿವ ಆರ್. ಅಶೋಕ ಹೇಳಿದರು.

ಶುಕ್ರವಾರ ಗಾಂಧಿ ಆಶ್ರಮದ ನೂತನ ಅನ್ನಪೂರ್ಣ ಭೋಜನಾಲಯ ಹಾಗೂ ಹಿರಿಯ ನಾಗರಿಕರ ಕೊಠಡಿಗಳ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, ‘ಪ್ರತಿ ಜಿಲ್ಲೆಗಳಲ್ಲೂ ಗಾಂಧಿ ಆಶ್ರಮದ ಪರಿಕಲ್ಪನೆಯ ಹಿರಿಯ ನಾಗರಿಕರ ತಾಣಗಳು ಆರಂಭಗೊಳ್ಳಬೇಕಿದೆ’ ಎಂದು ಹೇಳಿದರು.

ನೂತನ ಕೊಠಡಿಗಳನ್ನು ಉದ್ಘಾಟಿಸಿದ ವಿಶ್ವವಾಣಿ ಫೌಂಡೇಷನ್ ಅಧ್ಯಕ್ಷರಾದ ವಾಣಿ ವಿಶ್ವನಾಥ್ ಅವರು, ‘ಆಶ್ರಮಕ್ಕೆ ಸರ್ಕಾರದಿಂದ ಎಲ್ಲ ರೀತಿಯ ಸೌಲಭ್ಯಗಳನ್ನು ಕಲ್ಪಿಸಲು ಪ್ರಯತ್ನಿಸಲಾಗುವುದು’ ಎಂದು ಭರವಸೆ ನೀಡಿದರು.

ಡಾ. ಭೂಪಾಲಂ ಸುನೀಲ್ ಅವರು ಬರೆದಿರುವ ‘ಮಾಸ್ಟರ್ ಯುವರ್ ಮ್ಯಾರೇಜ್’ ಕೃತಿಯನ್ನು ಸಾಹಿತಿ ಡಾ. ಕೆ.ಪಿ. ಪುತ್ತೂರಾಯ ಬಿಡುಗಡೆ ಮಾಡಿದರು.

ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಡಾ. ಉದ್ದಂಡಯ್ಯ, ಗಾಂಧಿ ವೃದ್ಧಾಶ್ರಮದ ಅಧ್ಯಕ್ಷರಾದ ಎಸ್. ಲಕ್ಷ್ಮೀದೇವಿ, ಸಿ. ಉಗ್ರಯ್ಯ, ವಿಕಾಸ ಸಂಸ್ಥೆಯ ಹನುಮೇಶ್ ಯಾವಗಲ್, ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಶಿಕ್ಷಕ ಪುಟ್ಟ ನರಸಯ್ಯ, ಮಾಚೋಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷ ರಾಮಕೃಷ್ಣಯ್ಯ ಇದ್ದರು.

ಡಾ. ಭೂಪಾಲಂ ಸುನೀಲ್ ಅವರು ಬರೆದಿರುವ ‘ಮಾಸ್ಟರ್ ಯುವರ್ ಮ್ಯಾರೇಜ್’ ಕೃತಿಯನ್ನು ಸಾಹಿತಿ ಡಾ. ಕೆ.ಪಿ. ಪುತ್ತೂರಾಯ ಬಿಡುಗಡೆ ಮಾಡಿದರು. ಸಚಿವ ಆರ್. ಅಶೋಕ ಹಾಜರಿದ್ದರು

ಎಸ್‌ಡಿಆರ್‌ಎಫ್ 2ನೇ ಕಂತು ಬಿಡುಗಡೆಗೆ ಅಸ್ತು

ನವದೆಹಲಿ: ಕೋವಿಡ್–19ನಿಂದ ಮೃತಪಟ್ಟವರ ಕುಟುಂಬಕ್ಕೆ ಪರಿಹಾರ ನೀಡಲು ರಾಜ್ಯ ವಿಕೋಪ ಸ್ಪಂದನೆ ನಿಧಿಗೆ (ಎಸ್‌ಡಿಆರ್‌ಎಫ್) ಸಂಬಂಧಿಸಿದ ತನ್ನ ಪಾಲಿನ ಎರಡನೇ ಕಂತಿನ ಮೊತ್ತ ₹7,274 ಕೋಟಿಯನ್ನು 23 ರಾಜ್ಯಗಳಿಗೆ ಮುಂಗಡವಾಗಿ ಬಿಡುಗಡೆ ಮಾಡಲು ಕೇಂದ್ರ ಸರ್ಕಾರ ಶುಕ್ರವಾರ ಅನುಮೋದನೆ ನೀಡಿದೆ.

ಕೋವಿಡ್–19ನಿಂದ ಮೃತಪಟ್ಟವರ ಕುಟುಂಬಗಳಿಗೆ ಪರಿಹಾರ ನೀಡುವಂತೆ ಕೋರಿ ಕೆಲವರು ಸುಪ್ರೀಂಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ನಂತರ, ಈ ಸಂಬಂಧ ಕೇಂದ್ರ ಸರ್ಕಾರಕ್ಕೆ ಸುಪ್ರೀಂಕೋರ್ಟ್ ನಿರ್ದೇಶನ ನೀಡಿತ್ತು. ಕೋವಿಡ್ ಸಂತ್ರಸ್ತರ ಕುಟುಂಬಗಳಿಗೆ ₹50 ಸಾವಿರ ಪರಿಹಾರ ನೀಡುವುದಾಗಿ ಕೇಂದ್ರ ಸರ್ಕಾರ ಕಳೆದ ತಿಂಗಳು ಸುಪ್ರೀಂಕೋರ್ಟ್‌ಗೆ ಹೇಳಿತ್ತು.

ಎಸ್‌ಡಿಆರ್‌ಎಫ್ ಅಡಿಯಲ್ಲಿ ಮಾನದಂಡಗಳನ್ನು ಪರಿಷ್ಕರಿಸಿ ಕೋವಿಡ್‌ನಿಂದ ಮೃತರಾದವರ ಹತ್ತಿರದ ಸಂಬಂಧಿಕರಿಗೆ ಎಕ್ಸ್ ಗ್ರೇಷಿಯಾ ಪಾವತಿಸುವ ಸಂಬಂಧ ಕೇಂದ್ರ ಸರ್ಕಾರ ಸೆಪ್ಟೆಂಬರ್ 25 ರಂದು ಆದೇಶ ಹೊರಡಿಸಿತ್ತು.

ಧೂಮಪಾನ: ಬಿಎಂಸಿಆರ್‌ಐ, ‘ಮಾಯಾ’ ಸಂಸ್ಥೆಯಿಂದ ಸಮೀಕ್ಷೆ

ಅಳವಡಿಕೆಯಾಗದ ನಿಷೇಧ ಫಲಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿನ ಹೋಟೆಲ್, ಬಾರ್ ಮತ್ತು ರೆಸ್ಟೋರೆಂಟ್‌ಗಳು ತಂಬಾಕು ಉತ್ಪನ್ನಗಳ ಸಾರ್ವಜನಿಕ ಬಳಕೆ ನಿಯಂತ್ರಣ ಕಾಯ್ದೆಯನ್ನು (ಕೋಟ್ಪಾ) ಪಾಲಿಸುತ್ತಿಲ್ಲ ಎಂಬುದು ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ (ಬಿಎಂಸಿಆರ್‌ಐ) ಹಾಗೂ ಸರ್ಕಾರೇತರ ಸಂಸ್ಥೆ ‘ಮಾಯಾ’ ನಡೆಸಿದ ಸಮೀಕ್ಷೆಯಿಂದ ತಿಳಿದುಬಂದಿದೆ.

ಜಯನಗರ ಮತ್ತು ಇಂದಿರಾನಗರದಲ್ಲಿ ಈ ಸಮೀಕ್ಷೆಯನ್ನು ನಡೆಸಲಾಗಿದೆ. ಧೂಮಪಾನ ನಿಷೇಧ ಫಲಕವು ಶೇ 10.5 ರಷ್ಟು ಸ್ಥಳಗಳಲ್ಲಿ ಮಾತ್ರ ಗೋಚರಿಸಿದ್ದು, ನಿರ್ದಿಷ್ಟ ಧೂಮಪಾನ ಪ್ರದೇಶ (ಡಿಎಸ್‌ಎ) ಸ್ಥಾಪಿಸಲು ಶೇ 1.9 ರಷ್ಟು ಹೋಟೆಲ್, ಬಾರ್ ಮತ್ತು ರೆಸ್ಟೋರೆಂಟ್‌ಗಳು ಮಾತ್ರ ಬಿಬಿಎಂಪಿಯಿಂದ ನಿರಾಕ್ಷೇಪಣಾ ಪ್ರಮಾಣಪತ್ರ ಪಡೆದಿವೆ ಎನ್ನುವುದನ್ನು ಸಮೀಕ್ಷಾ ವರದಿಯಲ್ಲಿ ತಿಳಿಸಲಾಗಿದೆ.

‘ಸಮೀಕ್ಷೆಯ ವೇಳೆ ನಿರ್ದಿಷ್ಟ ಧೂಮಪಾನ ಪ್ರದೇಶ ಹಾಗೂ ನಿರಾಕ್ಷೇಪಣಾ ಪ್ರಮಾಣಪತ್ರದ ಬಗ್ಗೆ ಸಮೀಕ್ಷೆಯಲ್ಲಿ ಮಾಹಿತಿ ಕಲೆ ಹಾಕಲಾಗಿತ್ತು. ನಿರ್ದಿಷ್ಟ ಧೂಮಪಾನ ಪ್ರದೇಶ ಸ್ಥಾಪನೆ ಬಗ್ಗೆ ಶೇ 86.6 ರಷ್ಟು ಹೋಟೆಲ್, ಬಾರ್ ಮತ್ತು ರೆಸ್ಟೋರೆಂಟ್‌ಗಳ ಮಾಲೀಕರಿಗೆ ಮಾಹಿತಿಯೇ ಇರಲಿಲ್ಲ. ಶೇ 9.5 ರಷ್ಟು ಸ್ಥಳಗಳಲ್ಲಿ ಮಾತ್ರ ನಿರ್ದಿಷ್ಟ ಧೂಮಪಾನ ಪ್ರದೇಶ ಸ್ಥಾಪನೆ ಮಾಡಲಾಗಿದೆ’ ಎಂದು ಸಂಸ್ಥೆಯ ಸಮುದಾಯ ಆರೋಗ್ಯ ವಿಭಾಗದ ಮುಖ್ಯಸ್ಥ ಡಾ. ರಂಗನಾಥ್ ಟಿ. ಎಸ್ ತಿಳಿಸಿದರು.

‘ಎರಡು ದಶಕಗಳಿಂದ ಕೋಟ್ಪಾ ಕಾಯ್ದೆ ಅಸ್ತಿತ್ವದಲ್ಲಿದ್ದರೂ ಗಮನಾರ್ಹ ಸಂಖ್ಯೆಯಲ್ಲಿ ಕಾನೂನಿನ ಉಲ್ಲಂಘನೆ ಆಗುತ್ತಿರುವುದು ಸಮೀಕ್ಷೆಯಿಂದ ತಿಳಿದುಬಂದಿದೆ. ಕೂಡಲೇ ಈ ಕುರಿತು ಕ್ರಮಕೈಗೊಂಡು, ಕಾನೂನನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕಿದೆ’ ಎಂದು ಹೇಳಿದರು.

ಕಾಯ್ದೆಗೆ ತಿದ್ದುಪಡಿ ಅಗತ್ಯ: ‘ನಿರ್ದಿಷ್ಟ ಧೂಮಪಾನ ಪ್ರದೇಶಗಳ ನಿಯಮಗಳು ಕಟ್ಟುನಿಟ್ಟಾಗಿ ಪಾಲನೆಯಾಗುವಂತೆ ನೋಡಿಕೊಳ್ಳಬೇಕು. ಕೋಟ್ಪಾ ಕಾಯ್ದೆಗೆ ತಿದ್ದುಪಡಿ ತರಬೇಕು’ ಎಂದು ‘ಮಾಯಾ’ದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಅಲೆಕ್ಸ್ ರೊಡ್ರಿಗಸ್ ಆಗ್ರಹಿಸಿದರು.

ತಂಬಾಕು ಮುಕ್ತ ಕರ್ನಾಟಕ ಒಕ್ಕೂಟದ ಸಲಹೆಗಾರ ಡಾ. ರಮೇಶ್ ಬಿಳಿಮಗ್ಗ, ‘ನೇರ ಮತ್ತು ಪರೋಕ್ಷ ಧೂಮಪಾನಗಳೆರಡೂ ನಮ್ಮ ಆರೋಗ್ಯಕ್ಕೆ ಅತ್ಯಂತ ಅಪಾಯಕಾರಿ. ಸಾರ್ವಜನಿಕ ಸ್ಥಳಗಳು ಶೇ 100 ರಷ್ಟು ಧೂಮಪಾನ ಹೊಗೆ ಮುಕ್ತವಾಗಿರಬೇಕು. ನಿರ್ದಿಷ್ಟ ಧೂಮಪಾನ ಪ್ರದೇಶಗಳಲ್ಲಿ ನಿಯಮಗಳನ್ನು ಗಾಳಿಗೆ ತೂರುತ್ತಿರುವುದರಿಂದ ಅವುಗಳನ್ನು ನಿಷೇಧಿಸುವುದು ಉತ್ತಮ’ ಎಂದು ತಿಳಿಸಿದರು.

ನಟಿ ವಿಜಯಲಕ್ಷ್ಮೀಗೆ ನೆರವಿನ ಮಹಾಪೂರ

ಬೆಂಗಳೂರು: ಸಂಕಷ್ಟದಲ್ಲಿ ಸಿಲುಕಿದ್ದ ನಟಿ ವಿಜಯಲಕ್ಷ್ಮೀ ಅವರಿಗೆ ಸಿನಿಮಾ ಕ್ಷೇತ್ರ ಸೇರಿ ಅಭಿಮಾನಿಗಳಿಂದ ನೆರವಿನ ಮಹಾಪೂರವೇ ಹರಿದುಬಂದಿದೆ.

ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನೆರವಾದ ವಾಣಿಜ್ಯ ಮಂಡಳಿ, ಸಿನಿ ಕ್ಷೇತ್ರದ ಪ್ರಮುಖರು, ಸಂಘಟನೆಗಳು ಹಾಗೂ ಅಭಿಮಾನಿಗಳಿಗೆ ಧನ್ಯವಾದ ಅರ್ಪಿಸಿದರು.

ತಾಯಿಯ ನಿಧನ, ಕೆಲಕಾಲದ ಅನಾರೋಗ್ಯ, ಆರ್ಥಿಕ ಸಂಕಷ್ಟ ಸೇರಿದಂತೆ ಹಲವಾರು ಸಮಸ್ಯೆಗಳಿಗೆ ಸಿಲುಕಿದ್ದ ಅವರು ಆಗಾಗ ಸಾಮಾಜಿಕ ಜಾಲತಾಣಗಳ ಮೂಲಕ ನೆರವಿಗೆ ಮನವಿ ಮಾಡುತ್ತಿದ್ದರು.

ವಿಜಯಲಕ್ಷ್ಮೀ ಅವರ ಪರವಾಗಿ ನಗರದ ಜನಸ್ನೇಹಿ ಅನಾಥಾಶ್ರಮ ನೆರವಿಗೆ ಮನವಿ ಮಾಡಿತ್ತು.

‘ಆ ಮನವಿಗೆ ₹ 3.2 ಲಕ್ಷ ಹರಿದು ಬಂದಿದೆ. ಆ ಹಣವನ್ನು ವಾಣಿಜ್ಯ ಮಂಡಳಿ ಮೂಲಕ ತಮಗೆ ಹಸ್ತಾಂತರಿಸಲಾಗಿದೆ. ಮಾತ್ರವಲ್ಲ ರಾಜ್ಯದ ವಿವಿಧ ಭಾಗಗಳ ಜನರು ₹1ರಿಂದ ಸಾವಿರಾರು ರೂಪಾಯಿವರೆಗೆ ನೆರವಾಗಿದ್ದಾರೆ’ ಎಂದು ವಿಜಯಲಕ್ಷ್ಮೀ ಕೃತಜ್ಞತೆಯಿಂದ ಸ್ಮರಿಸಿದರು.

ವಿಜಯಲಕ್ಷ್ಮೀ

ಭಾವುಕರಾಗಿ ಮಾತನಾಡಿದ ಅವರು, ‘ಕರ್ನಾಟಕದಲ್ಲಿ ನಾನು ಭಿಕ್ಷುಕಿಯೇ. ಎಲ್ಲದಕ್ಕೂ ನಾವು ಭಿಕ್ಷೆ ಬೇಡುತ್ತೇವೆ’ ಎಂದರು.

‘ಅಕ್ಕ ಉಷಾ ಅವರು ಅನಾರೋಗ್ಯದಿಂದ ಇದ್ದಾರೆ. ಚೇತರಿಸಿಕೊಂಡ ಬಳಿಕ ನಾನು ಮತ್ತೆ ನಟನೆಗೆ ಬರುತ್ತೇನೆ. ಕರ್ನಾಟಕದಲ್ಲೇ ಇರುತ್ತೇನೆ’ ಎಂದರು.

ಕಾಂಗ್ರೆಸ್ ಉಪಾಧ್ಯಕ್ಷ ಎಸ್‌ಪಿಗೆ ಸೇರ್ಪಡೆ

ಲಖನೌ (ಪಿಟಿಐ): ಕಾಂಗ್ರೆಸ್‌ನ ಉತ್ತರ ಪ್ರದೇಶ ಘಟಕದ ಉಪಾಧ್ಯಕ್ಷ ಗಾಯದೀನ್ ಅನುರಾಗಿ ಅವರು ಶುಕ್ರವಾರ ಪಕ್ಷ ತೊರೆದು, ಸಮಾಜವಾದಿ ಪಕ್ಷ ಸೇರಿದ್ದಾರೆ.

ಮುಂದಿನ ವರ್ಷ ನಡೆಯಲಿರುವ ಉತ್ತರ ಪ್ರದೇಶ ವಿಧಾನಸಭೆ ಚುನಾವಣೆಗೆ ಮೊದಲೇ ತಮ್ಮ ಪಕ್ಷಕ್ಕೆ ವಿದಾಯ ಹೇಳಿರುವ ಅನುರಾಗಿ, ಸಮಾಜವಾದಿ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಅಖಿಲೇಶ್ ಯಾದವ್ ಸಮ್ಮುಖದಲ್ಲಿ ಪಕ್ಷ ಸೇರಿದರು. ‘ಕಾಂಗ್ರೆಸ್‌ನಲ್ಲಿ ನಮ್ಮ ಧ್ವನಿಗೆ ಬೆಲೆ ಇಲ್ಲ’ ಎಂದು ಆರೋಪಿಸಿದರು.

ಕಾಂಗ್ರೆಸ್ ಹಿರಿಯ ನಾಯಕರಾಗಿದ್ದ ದಿವಂಗತ ಕಮಲಪತಿ ತ್ರಿಪಾಠಿಯವರ ಮೊಮ್ಮಗ ಲಲಿತೇಶ್ ಪತಿ ತ್ರಿಪಾಠಿ ಇತ್ತೀಚೆಗಷ್ಟೇ ಪಕ್ಷಕ್ಕೆ ವಿದಾಯ ಹೇಳಿದ್ದರು. ಕೇಂದ್ರದ ಮಾಜಿ ಸಚಿವ ಜಿತಿನ್ ಪ್ರಸಾದ ಅವರು ಬಿಜೆಪಿ ಸೇರಿದ ಕೆಲವು ತಿಂಗಳ ನಂತರ ಕಾಂಗ್ರೆಸ್ ನಾಯಕರ ಪಕ್ಷ ತೊರೆಯುವ ಬೆಳವಣಿಗೆ ಮುಂದುವರಿದಿದೆ.

₹15 ಲಕ್ಷಕ್ಕೆ ಹೆಚ್ಚಳ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿಕೆ

ವೃದ್ಧಾಶ್ರಮಗಳಿಗೆ ಅನುದಾನ ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೇಂದ್ರ ಸರ್ಕಾರದ ಸಹಯೋಗದೊಂದಿಗೆ ನಡೆಸುತ್ತಿರುವ ವೃದ್ಧಾಶ್ರಮಗಳಿಗೆ ರಾಜ್ಯ ಸರ್ಕಾರದ ವತಿಯಿಂದ ಪ್ರಸ್ತುತ ₹8 ಲಕ್ಷ ಅನುದಾನ ನೀಡಲಾಗುತ್ತಿದೆ. ಇದನ್ನು ₹15 ಲಕ್ಷಕ್ಕೆ ಹೆಚ್ಚಿಸಲು ಕ್ರಮ ಕೈಗೊಳ್ಳಲಾಗುತ್ತದೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ನಿರ್ದೇಶನಾಲಯ ಹಮ್ಮಿಕೊಂಡಿದ್ದ ವಿಶ್ವ ಹಿರಿಯ ನಾಗರಿಕರ ದಿನಾಚರಣೆ ಮತ್ತು ರಾಷ್ಟ್ರೀಯ ಹಿರಿಯ ನಾಗರಿಕರ ಸಹಾಯವಾಣಿ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಅವರು ಶುಕ್ರವಾರ ಮಾತನಾಡಿದರು.

‘ಕೇಂದ್ರ ಸರ್ಕಾರ ₹25 ಲಕ್ಷ ಅನುದಾನ ನೀಡುತ್ತಿದೆ. ನಾವು ₹15 ಲಕ್ಷ ಕೊಟ್ಟರೆ ಇನ್ನಷ್ಟು ಉತ್ತಮವಾಗಿ ವೃದ್ಧಾಶ್ರಮಗಳನ್ನು ನಿರ್ವಹಿಸಬಹುದು’ ಎಂದರು.

‘ಹಿರಿಯ ಜೀವಗಳು ಹಾಸ್ಯ ಮನೋಭಾವ ಬೆಳೆಸಿಕೊಳ್ಳಬೇಕು. ‘ನಾನು ಮಾಜಿ ಯುವಕ, ನೀನು ಭಾವಿ ಮುದುಕ’ ಎಂದು ದಿವಂಗತ ಸಿ.ಎಂ. ಉದಾಸಿ ಅವರು ಆಗಾಗ ಹೇಳುತ್ತಿದ್ದರು. ಅವರು ಬದುಕಿದಷ್ಟು ದಿನ ಲವಲವಿಕೆಯಿಂದ ಇದ್ದರು. ಬದುಕಿನ ಬಗೆಗಿನ ಸಂತೃಪ್ತ ಭಾವ ಅವರಲ್ಲಿತ್ತು. ಅದನ್ನು ಎಲ್ಲರೂ ಮೈಗೂಡಿಸಿಕೊಳ್ಳಬೇಕು. ಆತ್ಮಚೈತನ್ಯ ಜೀವಂತವಾಗಿಟ್ಟುಕೊಳ್ಳಬೇಕು’ ಎಂದು ಸಲಹೆ ನೀಡಿದರು.

‘ಹಿರಿಯರು ಅನುಭವದ ಭಂಡಾರ, ಸಂಪತ್ತು ಇದ್ದಂತೆ. ಈ ಸಂಪತ್ತು ನಾಡು ಕಟ್ಟಲು, ಸಮಾಜದಲ್ಲಿ ಮೌಲ್ಯಗಳನ್ನು ಬಿತ್ತಲು ಅವರ ಅನುಭವ ಬಳಕೆಯಾಗಬೇಕು’ ಎಂದರು.

ಕಾರ್ಯಕ್ರಮದಲ್ಲಿ (ಕುಳಿತವರು ಎಡದಿಂದ) ಉಷಾ ದಾತಾರ್ (ನೃತ್ಯ ಹಾಗೂ ಸಂಗೀತ ಕಲಾವಿದೆ; ಹಾಸನ), ಹನುಮಂತಪ್ಪ ಭೀಮಪ್ಪ ಗಲಗಲಿ (ಪಶು ಶುಶ್ರೂಷಕರು; ಜಮಖಂಡಿ), ಜಿ.ಎನ್‌.ನರಸಿಂಹಮೂರ್ತಿ (ಕನ್ನಡ ಗಣಕ ಪರಿಷತ್ ಪ್ರಧಾನ ಕಾರ್ಯದರ್ಶಿ; ಬೆಂಗಳೂರು) ಮತ್ತು ಭೀಮವ್ವ ದೊಡ್ಡಬಾಳಪ್ಪ ಶಿಳ್ಳೇಕ್ಯಾತರ (ತೊಗಲುಗೊಂಬೆ ಕಲಾವಿದೆ; ಕೊಪ್ಪಳ) ಅವರಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಿಶೇಷ ಸಾಧನೆ ಪ್ರಶಸ್ತಿ ನೀಡಿ ಗೌರವಿಸಿದರು. (ಹಿಂದಿನ ಸಾಲು; ಎಡದಿಂದ) ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿ ಅಧ್ಯಕ್ಷೆ ಕೆ.ಪೂರ್ಣಿಮಾ, ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ, ಸಚಿವ ಎ. ನಾರಾಯಣಸ್ವಾಮಿ, ಶಾಸಕ ಉದಯ್ ಗರುಡಾಚಾರ್ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವ ಆಚಾರ ಹಾಲಪ್ಪ ಬಸಪ್ಪ ಇದ್ದರು —ಪ್ರಜಾವಾಣಿ ಚಿತ್ರ/ಎಂ.ಎಸ್‌.ಮಂಜುನಾಥ್

ಸಹಾಯವಾಣಿಯ ಮೂಲಕ ಸಿಗುವ ಸೇವೆಗಳು

- ಮನೆ ಆರೈಕೆ, ಆಸ್ಪತ್ರೆ, ವೃದ್ಧಾಶ್ರಮ, ಕೋವಿಡ್ ಹಾಗೂ ಇನ್ನಿತರ ಸೇವೆಗಳ ಬಗ್ಗೆ ಮಾಹಿತಿ.
- ಸಾರ್ವಜನಿಕ ಕುಂದುಕೊರತೆ, ಪಿಂಚಣಿ ಸೌಲಭ್ಯ, ಸರ್ಕಾರದ ಕಾರ್ಯಕ್ರಮಗಳು, ಮಾರ್ಗಸೂಚಿಗಳ ಕುರಿತ ಮಾಹಿತಿ.
- ಹಿರಿಯ ನಾಗರಿಕರ ಕಾಯ್ದೆ 2007ರ ಬಗ್ಗೆ ಅರಿವು.
- ಭಾವನಾತ್ಮಕ ಹಾಗೂ ನೈತಿಕ ಬೆಂಬಲ ನೀಡುವುದು. ಸಮಾಲೋಚನೆಗಳನ್ನು ನಡೆಸುವುದು.
- ಕರೆ ಮಾಡಬೇಕಾದ ಶುಲ್ಕ ರಹಿತ ದೂರವಾಣಿ ಸಂಖ್ಯೆ: 14567

‘ಎನ್‌ಜಿಒ ಕೆಲಸಗಳ ಬಗ್ಗೆ ದಾಖಲೆ ಸಲ್ಲಿಸಬೇಕು’

‘ಖಾಸಗಿ ಸ್ವಯಂ ಸೇವಾ ಸಂಸ್ಥೆಗಳು (ಎನ್‌ಜಿಒ) ತಾವು ಮಾಡುವ ಎಲ್ಲಾ ಕೆಲಸಗಳ ಬಗ್ಗೆ ದಾಖಲೆ ಇಡಬೇಕು. ಅದನ್ನು ಕೇಂದ್ರಕ್ಕೆ ಸಲ್ಲಿಸಬೇಕು. ಇಲ್ಲದಿದ್ದರೆ ಅವುಗಳ ಅನುದಾನ ಸ್ಥಗಿತಗೊಳಿಸಲಾಗುತ್ತದೆ’ ಎಂದು ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಇಲಾಖೆಯ ರಾಜ್ಯ ಸಚಿವ ಎ.ನಾರಾಯಣಸ್ವಾಮಿ ಎಚ್ಚರಿಸಿದರು.

‘ಹಿರಿಯರ ಪ್ರೀತಿಗೆ ಮನಸೋಲುವ ಮನಸ್ಸುಗಳೇ ಇಲ್ಲ. ಬಾಲ್ಯದಲ್ಲಿ ಅಜ್ಜ ಅಜ್ಜಿಯ ಮನೆಗೆ ಹೋಗುವುದೇ ಒಂದು ಸಂಭ್ರಮ. ಹೀಗಾಗಿ ಶಾಲೆಗೆ ರಜೆ ಸಿಗುವುದನ್ನೇ ಕಾಯುತ್ತಿರುತ್ತಿದ್ದೆವು. ವೃದ್ಧಾಶ್ರಮ ಮತ್ತು ವೃದ್ಧಾಪ್ಯ ವೇತನದ ಸಂಸ್ಕೃತಿ ವಿದೇಶಿಯರದ್ದು. ಇದನ್ನು ತೊಡೆದುಹಾಕಬೇಕು’ ಎಂದರು.

ಬಾಲಕಿ ಸಾವು: ವಾಮಾಚಾರ ಶಂಕೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಜಿಲ್ಲೆಯ ಅಥಣಿ ತಾಲ್ಲೂಕಿನ ಹಲ್ಯಾಳ ಗ್ರಾಮದ ಸಮೀಪ ರಸ್ತೆ ಪಕ್ಕದ ಕಬ್ಬಿನ ಗದ್ದೆಯಲ್ಲಿ ಅರೆಪ್ರಜ್ಞಾವಸ್ಥೆ ಮತ್ತು ಬೆತ್ತಲೆ ಸ್ಥಿತಿಯಲ್ಲಿ ಸೆ.23ರಂದು ಪತ್ತೆಯಾಗಿದ್ದ 2 ವರ್ಷದ ಬಾಲಕಿ ಚಿಕಿತ್ಸೆಗೆ ಸ್ಪಂದಿಸದೆ ಜಿಲ್ಲಾಸ್ಪತ್ರೆಯಲ್ಲಿ ಗುರುವಾರ ತಡರಾತ್ರಿ ಅಸುನೀಗಿದ್ದಾಳೆ.

ಎಸ್ಪಿ ಲಕ್ಷ್ಮಣ ನಿಂಬರಗಿ ಈ ವಿಷಯವನ್ನು ‘ಪ್ರಜಾವಾಣಿ’ಗೆ ಖಚಿತಪಡಿಸಿದ್ದಾರೆ. ಬಾಲಕಿಯ ಗುಪ್ತಾಂಗವೂ ಸೇರಿ ಮೈಮೇಲೆ ಅಲ್ಲಲ್ಲಿ ಸುಟ್ಟ ಗಾಯಗಳು ಕಂಡುಬಂದಿದ್ದವು. ಪೊಲೀಸರು ಆಕೆಯನ್ನು ರಕ್ಷಿಸಿ, ಆಸ್ಪತ್ರೆಗೆ ದಾಖಲಿಸಿದ್ದರು. ದುಷ್ಕರ್ಮಿಗಳು ಬಾಲಕಿಯನ್ನು ಕ್ಯಾರೆ ಬೀಜದಿಂದ ಸುಟ್ಟು, ವಾಮಾಚಾರಕ್ಕೆ ಬಳಸಿರುವ ಶಂಕೆ ವ್ಯಕ್ತವಾಗಿದೆ. ಮಗು ಪತ್ತೆಯಾಗಿ ಹಲವು ದಿನಗಳು ಕಳೆದಿದ್ದರೂ ಪೋಷಕರು ಪೊಲೀಸರ ಬಳಿಗೆ ಬಂದಿಲ್ಲ. ಅಪಹರಣ ಅಥವಾ ನಾಪತ್ತೆ ಪ್ರಕರಣವನ್ನಾಗಲಿ ದಾಖಲಿಸಿಲ್ಲ. ಹೀಗಾಗಿ, ಪೋಷಕರೇ ಮಗುವನ್ನು ವಾಮಾಚಾರಕ್ಕೆ ಬಳಸಿರಬಹುದು ಎಂದೂ ಪೊಲೀಸರು ಶಂಕೆ ವ್ಯಕ್ತಪಡಿಸಿದ್ದು, ಆ ಆಯಾಮದಲ್ಲೂ ತನಿಖೆ ನಡೆಸುತ್ತಿದ್ದಾರೆ.

ವಿಶ್ವ ಹೃದಯ ದಿನ ಸಂದರ್ಭದಲ್ಲಿ ನಗರದ ಹೃದ್ರೋಗ ತಜ್ಞರ ಕಳವಳ

ಅನ್ಯ ಕಾಯಿಲೆ: ಹೃದಯದ ಮೇಲೆ ಪರಿಣಾಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅಧಿಕ ರಕ್ತದೊತ್ತಡ, ಮಧುಮೇಹದಂತಹ ಅನ್ಯ ಕಾಯಿಲೆಗಳೂ ಹೃದಯದ ಆರೋಗ್ಯದ ಮೇಲೆ ಹಾಗೂ ಹೃದಯ ಚಿಕಿತ್ಸೆಯ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತವೆ’ ಎಂದು ನಗರದ ಹೃದ್ರೋಗ ತಜ್ಞರು ಕಳವಳ ವ್ಯಕ್ತಪಡಿಸಿದರು.

ವಿಶ್ವ ಹೃದಯ ದಿನದ ಅಂಗವಾಗಿ ‘ಪ್ರಜಾವಾಣಿ’ ಮತ್ತು ‘ಡೆಕ್ಕನ್ ಹೆರಾಲ್ಡ್’ ಮಣಿಪಾಲ್ ಆಸ್ಪತ್ರೆಯ ಸಹಯೋಗದಲ್ಲಿ ಆಯೋಜಿಸಿದ್ದ ವೆಬಿನಾರ್‌ನಲ್ಲಿ ಸರ್ಜಾಪುರದ ಕೊಲಂಬಿಯಾ ಏಷ್ಯಾ ಆಸ್ಪತ್ರೆಯ ಡಾ. ಮೋಹನ್ ಕುಮಾರ್ ಎಚ್.ಎನ್, ವಿಕ್ರಮ್ ಆಸ್ಪತ್ರೆಯ ಡಾ. ರಂಗನಾಥ್ ನಾಯಕ್ ಪಿ., ಹಳೆ ವಿಮಾನ ನಿಲ್ದಾಣ ರಸ್ತೆಯ ಮಣಿಪಾಲ್ ಆಸ್ಪತ್ರೆಯ ಡಾ. ರಂಜನ್ ಶೆಟ್ಟಿ ಹಾಗೂ ಡಾ. ದವಿಂದರ್ ಸಿಂಗ್ ಅವರು ‘ಹಲವು ಕಾಯಿಲೆಗಳನ್ನು ಹೊಂದಿರುವವರಲ್ಲಿ ಹೃದ್ರೋಗದ ಅಪಾಯ’ ಎಂಬ ಕುರಿತು ವೈದ್ಯರು ಮಾತನಾಡಿದರು.

‘ಹೃದಯ ಸಂಬಂಧಿ ಅನಾರೋಗ್ಯ ಸಮಸ್ಯೆಗೆ ಒಳಪಡುವವರ ಸಂಖ್ಯೆ ಏರುಗತಿ ಪಡೆದಿದೆ. ಅನಾರೋಗ್ಯಕರ ಆಹಾರ ಪದ್ಧತಿ, ಜೀವನಶೈಲಿಯ ಬದಲಾವಣೆ, ಮದ್ಯಪಾನ, ಜಡತ್ವ, ಧೂಮಪಾನದಂತಹ ವ್ಯಸನಗಳು ಹಾಗೂ ಅನ್ಯ ಕಾಯಿಲೆಯಿಂದ ಇತ್ತೀಚಿನ ವರ್ಷಗಳಲ್ಲಿ 20ರಿಂದ 40 ವರ್ಷದವರೂ ಹೆಚ್ಚಾಗಿ ಹೃದಯಾಘಾತಕ್ಕೆ ಒಳಗಾಗುತ್ತಿದ್ದಾರೆ’ ಎಂದು ಹೃದ್ರೋಗ ತಜ್ಞರು ತಿಳಿಸಿದರು.

ಕಡೆಗಣಿಸಿದರೆ ಅಪಾಯ: ಸರ್ಜಾಪುರದ ಕೊಲಂಬಿಯಾ ಏಷ್ಯಾ ಆಸ್ಪತ್ರೆಯ ಡಾ. ಮೋಹನ್ ಕುಮಾರ್ ಎಚ್. ಎನ್., ‘ದೇಹದಲ್ಲಿ ಕೊಬ್ಬಿನಾಂಶ ಅಧಿಕವಾದರೆ ಹೃದಯ ಸಂಬಂಧಿ ಸಮಸ್ಯೆಗಳು ಕಾಣಿಸಿಕೊಳ್ಳುವ ಸಾಧ್ಯತೆ ಇರುತ್ತದೆ. ಕೊಬ್ಬಿನಾಂಶದ ಮಟ್ಟವನ್ನು ಸಕಾಲದಲ್ಲಿ ನಿರ್ವಹಿಸದಿದ್ದರೆ ಅಪಧಮನಿಗಳಲ್ಲಿ ಅಡಚಣೆ ಉಂಟಾಗಿ, ಹೃದಯಾಘಾತವಾಗಬಹುದು. ಅನಿಯಂತ್ರಿತ ಅಧಿಕ ರಕ್ತದೊತ್ತಡವೂ ಹೃದಯದ ಸ್ನಾಯುಗಳಿಗೆ ಹಾನಿ ಮಾಡುತ್ತವೆ. ಹೃದಯದ ಆರೋಗ್ಯ ಕಾಪಾಡಲು ರಕ್ತದೊತ್ತಡ ನಿಯಂತ್ರಿಸಬೇಕು’ ಎಂದು ಹೇಳಿದರು.

ಹಳೆ ವಿಮಾನ ನಿಲ್ದಾಣ ರಸ್ತೆಯ ಮಣಿಪಾಲ್ ಆಸ್ಪತ್ರೆಯ ಡಾ. ರಂಜನ್ ಶೆಟ್ಟಿ, ‘ಬದಲಾದ ಜೀವನಶೈಲಿ ಸೇರಿದಂತೆ ವಿವಿಧ ಕಾರಣಗಳಿಂದ ವಿದೇಶಿಗರಿಗೆ ಹೋಲಿಸಿದರೆ ಭಾರತೀಯರಿಗೆ ಬೇಗ ಹೃದಯಾಘಾತವಾಗುತ್ತಿದೆ. ಒಂದರಿಂದ ಎರಡು ದಶಕಗಳ ಮೊದಲು ಹೃದಯಾಘಾತವಾಗುತ್ತಿರುವುದು ಕಳವಳಕಾರಿ. ವಿದೇಶದಲ್ಲಿ ಅಲ್ಲಿನ ಜನರಿಗೆ 50ರಿಂದ 55 ವರ್ಷಗಳಾದ ಹೃದಯಾಘಾತ ಸಂಭವಿಸುವ ಸಾಧ್ಯತೆ ಇರುತ್ತದೆ. ಆದರೆ, ನಮ್ಮಲ್ಲಿ ಅನ್ಯರೋಗಗಳು ಹಲವರನ್ನು ಕಾಡುತ್ತಿರುವುದರಿಂದ 35ರಿಂದ 40 ವರ್ಷದ ವೇಳೆಯೇ ಹೃದಯಾಘಾತವಾಗುತ್ತಿದೆ’ ಎಂದು ತಿಳಿಸಿದರು.

ಫಾರೆಸ್ಟ್ ಕ್ರಿಯೇಟಿವ್ ಕಮ್ಯುನಿಕೇಷನ್ಸ್ ನಿರ್ದೇಶಕ ರಂಜಿತ್ ಪದ್ಮಕುಮಾರ್ ಕಾರ್ಯಕ್ರಮ ನಿರ್ವಹಿಸಿದರು.

ಅಪರೂಪದ ರೋಗದ ಮಗುವಿಗೆ ಚಿಕಿತ್ಸೆ ನೀಡಲು ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆನ್ನು ಹುರಿಯ ಸ್ನಾಯು ಕ್ಷೀಣಿಸುವಿಕೆ (ಎಸ್‌ಎಂಎ ಟೈಪ್-1) ಎಂಬ ಅಪರೂಪದ ರೋಗದಿಂದ ಬಳಲುತ್ತಿರುವ ಒಂದೂವರೆ ವರ್ಷದ ಮಗುವನ್ನು ಇಂದಿರಾ ಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಗೆ ಕೂಡಲೇ ದಾಖಲಿಸುವಂತೆ ಹೈಕೋರ್ಟ್ ಮಧ್ಯಂತರ ಆದೇಶ ನೀಡಿದೆ.

ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ಪೀಠ, ‘ಮೊದಲಿಗೆ ಮಕ್ಕಳ ತಜ್ಞ ಡಾ. ಜಿ.ಎನ್.ಸಂಜೀವ್ ಅವರು ಮಗುವಿನ ಪರೀಕ್ಷೆ ನಡೆಸಬೇಕು ಮತ್ತು ನಂತರ ತಜ್ಞರ ಸಮಿತಿಯು ಮಗುವಿನ ತಪಾಸಣೆ ಮಾಡಬಹುದು’ ಎಂದು ಹೇಳಿದೆ.

ತಂದೆ ಮೂಲಕ ಮಗುವಿನ ಹೆಸರಿನಲ್ಲಿ ಅರ್ಜಿ ಸಲ್ಲಿಕೆಯಾಗಿದ್ದು, ‘ಅಪರೂಪದ ಈ ಕಾಯಿಲೆಯಿಂದ ಜೀವ ಉಳಿಸಲು ಔಷಧಿಗೆ ₹16 ಕೋಟಿ ವೆಚ್ಚವಾಗುತ್ತದೆ. ಪೋಷಕರು ಸುಮಾರು ₹8.24 ಕೋಟಿಯನ್ನು ದಾನಿಗಳು ಮತ್ತು ಸಾರ್ವಜನಿಕರಿಂದ ಸಂಗ್ರಹಿಸಿದ್ದಾರೆ. ಉಳಿದ ₹7.8 ಕೋಟಿ ನೆರವನ್ನು ರಾಜ್ಯ ಮತ್ತು ಕೇಂದ್ರ ಸರ್ಕಾರದಿಂದ ಕೊಡಿಸಲು ನ್ಯಾಯಾಲಯ ಮಧ್ಯಸ್ಥಿಕೆ ವಹಿಸಬೇಕು’ ಎಂದು ಅರ್ಜಿಯಲ್ಲಿ ಕೋರಲಾಗಿದೆ.

ಅರ್ಜಿದಾರರು ಡಾ.ಸಂಜೀವ್ ಅವರನ್ನು ಇ-ಮೇಲ್ ಅಥವಾ ಮೊಬೈಲ್ ದೂರವಾಣಿ ಮೂಲಕ ಸಂಪರ್ಕಿಸಲು ನ್ಯಾಯಾಲಯ ಅನುಮತಿ ನೀಡಿತು. ವೈದ್ಯರು ತಕ್ಷಣವೇ ಪ್ರತಿಕ್ರಿಯಿಸಬೇಕು ಎಂದು ಪೀಠ ಸೂಚಿಸಿತು. ‘ಪ್ರತಿಕ್ರಿಯಿಸದಿದ್ದರೆ ನ್ಯಾಯಾಲಯ ಗಂಭೀರವಾಗಿ ಪರಿಗಣಿಸಲಿದೆ. ವೈದ್ಯರ ವಾದ-ಪ್ರತಿವಾದದಿಂದ ಮಗುವಿನ ಜೀವಕ್ಕೆ ಅಪಾಯವಾದರೆ ಅವರನ್ನೇ ಹೊಣೆಗಾರರನ್ನಾಗಿ ಮಾಡಲಾಗುವುದು’ ಎಂದು ಆದೇಶದಲ್ಲಿ ಎಚ್ಚರಿಸಿತು.

ಚಿಕಿತ್ಸೆಯ ಪ್ರಗತಿ ಬಗ್ಗೆ ವರದಿ ಸಲ್ಲಿಸಲು ಸೂಚಿಸಿದ ಪೀಠ, ವಿಚಾರಣೆಯನ್ನು ಅ.7ಕ್ಕೆ ಮುಂದೂಡಿತು.

ಬೆಳಿಗ್ಗೆಯಿಂದ ಸಂಜೆವರೆಗೆ ಭೌತಿಕ ತರಗತಿಗೆ ಸೂಚನೆ

ಚಿಕ್ಕಮಗಳೂರು: ‘6ರಿಂದ 12ನೇ ತರಗತಿವರೆಗೆ ಬೆಳಿಗ್ಗೆಯಿಂದ ಸಂಜೆವರೆಗೆ ಭೌತಿಕ ತರಗತಿ ನಡೆಸುವಂತೆ ಮೌಖಿಕ ಸೂಚನೆ ನೀಡಲಾಗಿದೆ. ದಸರಾ ನಂತರ ಮುಂದಿನ ಕ್ರಮದ ಬಗ್ಗೆ ಯೋಚನೆ ಮಾಡುತ್ತೇವೆ’ ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ತಿಳಿಸಿದರು.

ನಗರದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿ, ‘ಯಾವ ವಿದ್ಯಾರ್ಥಿಗೂ ತರಗತಿಗೆ ಹಾಜರಾಗುವಂತೆ ಬಲವಂತ ಮಾಡಬಾರದು ಎಂದು ಸೂಚಿಸಲಾಗಿದೆ. ಭೌತಿಕ ತರಗತಿ ಆರಂಭಿಸಿರುವುದು ವಿದ್ಯಾರ್ಥಿಗಳಿಗೂ ಖುಷಿಯಾಗಿದೆ’ ಎಂದು ಪ್ರತಿಕ್ರಿಯಿಸಿದರು.

‘ಬಹಳಷ್ಟು ಜಿಲ್ಲೆಗಳಲ್ಲಿ ಕೋವಿಡ್ ಪಾಸಿಟಿವಿಟಿ ಪ್ರಮಾಣ ಕಡಿಮೆಯಾಗಿದೆ. ಹಲವು ಜಿಲ್ಲೆಗಳಲ್ಲಿ ಈ ಪ್ರಮಾಣ ಸೊನ್ನೆಗೆ ಇಳಿದಿದೆ. ಹೀಗಾಗಿ, ಶಾಲೆ ನಡೆಸಲು ತೊಂದರೆ ಆಗುವುದಿಲ್ಲ’ ಎಂದರು.

ಅ.11ರಂದು ಟಿಟಿಡಿಯ ಕನ್ನಡ, ಹಿಂದಿ ಚಾನೆಲ್‌ಗೆ ಚಾಲನೆ

ತಿರುಪತಿ (ಪಿಟಿಐ): ತಿರುಮಲ ತಿರುಪತಿ ದೇವಸ್ಥಾನ (ಟಿಟಿಡಿ) ಒಡೆತನದ ಶ್ರೀ ವೆಂಕಟೇಶ್ವರ ಭಕ್ತಿ ಚಾನೆಲ್‌ನ (ಎಸ್‌ವಿಬಿಸಿ) ಕನ್ನಡ ಹಾಗೂ ಹಿಂದಿ ವಾಹಿನಿಗಳು ಅಕ್ಟೋಬರ್ 11ರಂದು ಕಾರ್ಯಾರಂಭ ಮಾಡಲಿವೆ.

ಮುಖ್ಯಮಂತ್ರಿ ವೈ.ಎಸ್. ಜಗನ್‌ಮೋಹನ್ ರೆಡ್ಡಿ ಅವರು ಅಂದು ಈ ಎರಡು ಚಾನೆಲ್‌ಗಳಿಗೆ ಚಾಲನೆ ನೀಡುವರು. ಕರ್ನಾಟಕ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು ಎಂದು ಟಿಟಿಡಿ ಶುಕ್ರವಾರ ತಿಳಿಸಿದೆ.

‘ಚಾಲನೆ ವೇಳೆ ಹೆಡ್‌ ಫೋನ್, ಬ್ಲೂ ಟೂತ್ ಬಳಸಿದರೆ ದಂಡ’

ಬೆಂಗಳೂರು: ವಾಹನ ಚಲಾಯಿಸುವ ವೇಳೆ ಹೆಡ್ ಫೋನ್ ಹಾಗೂ ಬ್ಲೂ ಟೂತ್ ಬಳಕೆಯನ್ನು ನಿರ್ಬಂಧಿಸಲಾಗಿದ್ದು, ಈ ನಿಯಮ ಉಲ್ಲಂಘಿಸಿದವರಿಗೆ ಸಂಚಾರ ಪೊಲೀಸರು ₹ 1,000 ದಂಡ ವಿಧಿಸಲಿದ್ದಾರೆ.

‘ಮೋಟಾರು ವಾಹನಗಳ ಕಾಯ್ದೆ ಪ್ರಕಾರ, ವಾಹನ ಚಾಲನೆ ಸಂದರ್ಭದಲ್ಲಿ ಗಮನ ಬೇರೆಡೆ ಸೆಳೆಯುವ ಉಪಕರಣಗಳ ಬಳಕೆಯನ್ನು ನಿರ್ಬಂಧಿಸಲಾಗಿದೆ. ಚಾಲನೆ ವೇಳೆ ಯಾರಾದರೂ ಮೊಬೈಲ್, ಹೆಡ್‌ಫೋನ್, ಬ್ಲೂಟೂತ್ ಹಾಗೂ ಇತರೆ ಎಲೆಕ್ಟ್ರಾನಿಕ್ ಉಪಕರಣ ಬಳಸಿದರೆ ದಂಡ ವಿಧಿಸಲಾಗುವುದು. ಈ ಬಗ್ಗೆ ಸಿಬ್ಬಂದಿಗೆ ಈಗಾಗಲೇ ಸೂಚನೆ ನೀಡಲಾಗಿದೆ’ ಎಂದು ಸಂಚಾರ ವಿಭಾಗದ ಜಂಟಿ ಕಮಿಷನರ್ ಬಿ.ಆರ್. ರವಿಕಾಂತೇಗೌಡ ‘ಪ್ರಜಾವಾಣಿ’ಗೆ ಹೇಳಿದರು.

‘ನ್ಯಾವಿಗೇಷನ್ ಉದ್ದೇಶಕ್ಕಾಗಿ ಮಾತ್ರ ಉಪಕರಣ ಬಳಸಲು ಅವಕಾಶವಿದೆ’ ಎಂದೂ ತಿಳಿಸಿದರು.

ಅಪಘಾತಕ್ಕೆ ಕಾರಣ: ‘ಜೇಬಿನಲ್ಲಿ ಮೊಬೈಲ್ ಇಟ್ಟುಕೊಳ್ಳುವ ಬಹುತೇಕರು, ಹೆಡ್‌ಫೋನ್ ಹಾಗೂ ಬ್ಲೂಟೂತ್ ಉಪಕರಣ ಬಳಕೆ ಮಾಡುತ್ತಿರುತ್ತಾರೆ. ವಾಹನ ಚಲಾಯಿಸುತ್ತಲೇ ಮೊಬೈಲ್‌ನಲ್ಲಿ ಮಾತನಾಡುತ್ತಾರೆ ಹಾಗೂ ಹಾಡು ಕೇಳುತ್ತಾರೆ. ಇಂಥ ವರ್ತನೆಯಿಂದ ಗಮನ ಬೇರೆಡೆ ಹೋಗಿ, ಅಪಘಾತಗಳು ಹೆಚ್ಚುತ್ತವೆ. ಅಮಾಯಕರು ಜೀವ ಕಳೆದುಕೊಳ್ಳುತ್ತಾರೆ’ ಎಂದೂ ರವಿಕಾಂತೇಗೌಡ ಹೇಳಿದರು.

ಬಜೆಟ್‌ನಲ್ಲಿ ಮೀಸಲಿಟ್ಟಿರುವ ₹ 1 ಕೋಟಿ ಬಿಡುಗಡೆಗೆ ರಂಗಾಯಣ ಮನವಿ

ಪರ್ವ: 12 ರಂಗ ಪ್ರದರ್ಶನಕ್ಕೆ ₹49 ಲಕ್ಷ ವೆಚ್ಚ!

ಪ್ರಜಾವಾಣಿ ವಾರ್ತೆ

ಮೈಸೂರು: ರಂಗಾಯಣವು ಮೈಸೂರಿನಲ್ಲಿ ನಡೆಸಿದ ‘ಪರ್ವ’ ಕಾದಂಬರಿಯ 12 ರಂಗ ಪ್ರದರ್ಶನಗಳಿಗೆ ₹ 49.48 ಲಕ್ಷ ಖರ್ಚು ಮಾಡಿದ್ದು, ರಾಜ್ಯದ ವಿವಿಧ ಜಿಲ್ಲೆ ಹಾಗೂ ಹೊರರಾಜ್ಯಗಳಲ್ಲಿ ಪ್ರದರ್ಶನಕ್ಕಾಗಿ ಬಜೆಟ್‌ನಲ್ಲಿ ಮೀಸಲಿಟ್ಟಿರುವ ₹ 1 ಕೋಟಿ ಬಿಡುಗಡೆ ಮಾಡುವಂತೆ ಸರ್ಕಾರಕ್ಕೆ ಬೇಡಿಕೆ ಇಟ್ಟಿದೆ.

ರಾಜ್ಯದಲ್ಲಿ ಒಟ್ಟು 50 ಪ್ರದರ್ಶನ ಹಾಗೂ ಇತರ ಐದು ರಾಜ್ಯಗಳಲ್ಲಿ 10 ಪ್ರದರ್ಶನ ಆಯೋಜಿಸಲು ರಂಗಾಯಣ ಮುಂದಾಗಿದೆ. ಇದೇ 23 ಹಾಗೂ 24 ರಂದು ಬೆಂಗಳೂರಿನ ಕಲಾಕ್ಷೇತ್ರದಲ್ಲಿ ನಾಟಕ ಆಯೋಜಿಸಿದೆ. ಇದು ಮೈಸೂರಿನಿಂದ ಹೊರಗೆ ನಡೆಯುತ್ತಿರುವ ಮೊದಲ ಪ್ರದರ್ಶನ.

ಮುಖ್ಯಾಂಶಗಳು

- ಬೆಂಗಳೂರಿನಲ್ಲಿ ಅ.23, 24ಕ್ಕೆ ಪ್ರದರ್ಶನ
- 5 ರಾಜ್ಯಗಳಲ್ಲಿ 10 ಪ್ರದರ್ಶನಕ್ಕೆ ನಿರ್ಧಾರ
- ಟಿಕೆಟ್‌ನಿಂದ ₹ 9 ಲಕ್ಷ ಸಂಗ್ರಹ

‘ಸರ್ಕಾರಕ್ಕೆ ಮಾಹಿತಿ ಕೊಟ್ಟಾಗ ₹49.48 ಲಕ್ಷ ಖರ್ಚಾಗಿತ್ತು. ಆನಂತರ ಕಲಾವಿದರ ವೇತನ, ಇತರ ವೆಚ್ಚ ಸೇರಿ ₹ 53 ಲಕ್ಷಕ್ಕೇರಿದೆ. ಪ್ರವೇಶ ಶುಲ್ಕದಲ್ಲಿ ನಿರ್ವಹಣೆ ಮಾಡುತ್ತಿದ್ದೇವೆ’ ಎಂದು ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ‘ಪ್ರಜಾವಾಣಿ’ಗೆ ಶುಕ್ರವಾರ ತಿಳಿಸಿದರು.

‘ಅರವಿಂದ ಲಿಂಬಾವಳಿ ಅವರು ಕನ್ನಡ ಮತ್ತು ಸಂಸ್ಕೃತಿ ಸಚಿವರಾಗಿದ್ದಾಗ, ನಾಟಕಕ್ಕೆ ತಯಾರಿ ನಡೆಸಲು ₹ 50 ಲಕ್ಷ ಅನುದಾನ ಬಿಡುಗಡೆಯಾಗಿತ್ತು. ನಾಟಕದ ವಸ್ತ್ರವಿನ್ಯಾಸಕ ಪ್ರಸಾದ್ ಬಿದ್ದಪ್ಪ ಅವರಿಗೆ ₹ 95 ಸಾವಿರ ಸಂಭಾವನೆ ನೀಡಲಾಗಿದೆ. ನಿರ್ದೇಶಕ ಪ್ರಕಾಶ್ ಬೆಳವಾಡಿ ಸಂಭಾವನೆ ಬೇಡವೆಂದರು. ಬದಲಾಗಿ ಹಣವನ್ನು ಕೊರೊನಾ ಕಾಲದಲ್ಲಿ ಆಮ್ಲಜನಕದ ಸಿಲಿಂಡರ್ ಖರೀದಿಸಿ ರೋಟರಿಗೆ ಹಸ್ತಾಂತರಿಸಲು ಹೇಳಿದರು. ಅದಕ್ಕೆ ₹ 1.32 ಲಕ್ಷ ಖರ್ಚಾಗಿದೆ’ ಎಂದರು.

‘24 ಕಲಾವಿದರಿಗೆ ತಲಾ ₹ 18 ಸಾವಿರದಂತೆ ಆರು ತಿಂಗಳಿಂದ ವೇತನ ನೀಡಲಾಗುತ್ತಿದೆ. ಕೊರೊನಾ ಸಮಯದಲ್ಲಿ ಅವರ ಜೀವನೋಪಾಯಕ್ಕಾಗಿ ತಿಂಗಳಿಗೆ ₹ 9 ಸಾವಿರ ಪಾವತಿಸಲಾಗಿದೆ. ಬಟ್ಟೆ, ಪರಿಕರ, ಆಭರಣ, ರಂಗ ಸಜ್ಜಿಕೆಗೆ ಖರ್ಚಾಗಿದೆ. ಸಂಗೀತ ನಿರ್ದೇಶಕರಿಗೆ, ತಂತ್ರಜ್ಞರಿಗೆ ಸಂಭಾವನೆ ನೀಡಲಾಗುತ್ತಿದೆ’ ಎಂದು ಮಾಹಿತಿ ನೀಡಿದರು.

ಕಾದಂಬರಿಕಾರ ಎಸ್.ಎಲ್. ಭೈರಪ್ಪ ಅವರ ‘ಪರ್ವ’ ಕಾದಂಬರಿ ಆಧಾರಿತ ರಂಗ ಪ್ರದರ್ಶನದ ಟಿಕೆಟ್ ಪ್ರವೇಶ ಶುಲ್ಕದಿಂದ ಸುಮಾರು ₹ 9 ಲಕ್ಷ ರಂಗಾಯಣ ಬೊಕ್ಕಸ ಸೇರಿದೆ.

ಇದುವರೆಗೆ ನಾಟಕಕ್ಕೆ ಆಗಿರುವ ವೆಚ್ಚದ ಬಗ್ಗೆ ರಂಗಾಯಣ ಮಾಹಿತಿ ನೀಡಿದೆ. ಇತರೆ ಜಿಲ್ಲೆಗಳಲ್ಲಿ ಪ್ರದರ್ಶನಕ್ಕೂ ಅನುದಾನ ಬಿಡುಗಡೆ ಮಾಡಲಾಗುವುದು

ವಿ.ಸುನಿಲ್ ಕುಮಾರ್, ಕನ್ನಡ ಮತ್ತು ಸಂಸ್ಕೃತಿ ಸಚಿವ

ಬಜೆಟ್‌ನಲ್ಲಿ ಮೀಸಲಿಟ್ಟಿರುವ ಅನುದಾನ ಕೊಡುವಂತೆ ಕೋರಲಾಗಿದೆ. ಆಗ ಬೇರೆ ಕಡೆ ಪ್ರದರ್ಶನ ನೀಡಬಹುದು. ಹೆಚ್ಚುವರಿ ಅನುದಾನಕ್ಕೆ ಬೇಡಿಕೆ ಇಟ್ಟಿಲ್ಲ

ಅಡ್ಡಂಡ ಸಿ.ಕಾರ್ಯಪ್ಪ, ಮೈಸೂರು ರಂಗಾಯಣ ನಿರ್ದೇಶಕ

❦ ಸುಭಾಷಿತ ❦

ಪ್ರಜಾಪ್ರಭುತ್ವ ಮತ್ತು ಹಿಂಸೆ ಎಂದಿಗೂ ಒಟ್ಟಿಗೆ ಸಾಗಲಾರವು.

–ಮಹಾತ್ಮ ಗಾಂಧಿ

ಶಿಥಿಲ ಕಟ್ಟಡ ತೆರವಿಗೆ ವಿಳಂಬ ಧೋರಣೆ ಸಲ್ಲದು

ಬೆಂಗಳೂರು ನಗರದ ಲಕ್ಕಸಂದ್ರದಲ್ಲಿ ಶಿಥಿಲಗೊಂಡಿದ್ದ ಬಹುಮಹಡಿ ಕಟ್ಟಡವೊಂದು ಸೆ. 27ರಂದು ಕುಸಿಯಿತು. ಅದರ ಮರುದಿನವೇ ಬೆಂಗಳೂರು ಹಾಲು ಒಕ್ಕೂಟದ (ಬಮೂಲ್) ಆವರಣದಲ್ಲಿದ್ದ ಎರಡು ಅಂತಸ್ತಿನ ಕಟ್ಟಡ ಭಾಗಶಃ ಕುಸಿಯಿತು. ಈ ಕಟ್ಟಡಗಳಲ್ಲಿ ವಾಸವಿದ್ದವರನ್ನು ಕೊನೆಯ ಕ್ಷಣದಲ್ಲಿ ತೆರವುಗೊಳಿಸಿದ್ದರಿಂದ ದುರಂತ ಸಂಭವಿಸುವುದು ತಪ್ಪಿದೆ. ಈ ಘಟನೆಗಳಿಂದ ಎಚ್ಚೆತ್ತ ಬಿಬಿಎಂಪಿಯು ಶಿಥಿಲಾವಸ್ಥೆಯಲ್ಲಿರುವ ಕಟ್ಟಡಗಳ ಸಮಗ್ರ ಸಮೀಕ್ಷೆ ನಡೆಸಲು ಮುಂದಾಗಿದೆ. ಸಮೀಕ್ಷೆಯನ್ನು 15 ದಿನಗಳಲ್ಲಿ ಪೂರ್ಣಗೊಳಿಸುವಂತೆ ಗಡುವನ್ನೂ ನಿಗದಿಪಡಿಸಿದೆ. ಬೆಂಗಳೂರಿನಲ್ಲಿ ಇಂತಹ ಅವಘಡಗಳು ಇದೇ ಮೊದಲೇನಲ್ಲ. ಶಿಥಿಲಗೊಂಡ ಕಟ್ಟಡಗಳು ಕುಸಿದ ಅನೇಕ ಪ್ರಕರಣಗಳು ಈ ಹಿಂದೆಯೂ ನಡೆದಿದ್ದವು. 2019ರಲ್ಲಿ ಪುಟ್ಟೇನಹಳ್ಳಿಯಲ್ಲಿ ಶಿಥಿಲಗೊಂಡ ಕಟ್ಟಡವೊಂದು ಕುಸಿದಾಗ ಬಿಬಿಎಂಪಿ ಪ್ರತೀ ವಾರ್ಡ್‌ನಲ್ಲಿರುವ ವಾಸಯೋಗ್ಯವಲ್ಲದ ಕಟ್ಟಡಗಳ ಸಮೀಕ್ಷೆ ಕೈಗೊಂಡಿತ್ತು. ಇಂತಹ 185 ಕಟ್ಟಡಗಳನ್ನು ಗುರುತಿಸಿದ್ದ ಬಿಬಿಎಂಪಿ, ಅವುಗಳನ್ನು ತೆರವುಗೊಳಿಸುವಂತೆ ಮಾಲೀಕರಿಗೆ ನೋಟಿಸ್ ಜಾರಿ ಮಾಡಿತ್ತು. ಆದರೆ, ಇವುಗಳಲ್ಲಿ ತೆರವಾಗಿದ್ದು 10 ಕಟ್ಟಡಗಳು ಮಾತ್ರ. ಇನ್ನುಳಿದವು ಎರಡು ವರ್ಷಗಳ ಬಳಿಕವೂ ಹಾಗೆಯೇ ಇವೆ. ಇತ್ತೀಚೆಗೆ ಕುಸಿದ ಎರಡೂ ಕಟ್ಟಡಗಳು 2019ರಲ್ಲಿ ತಯಾರಿಸಿದ್ದ ಶಿಥಿಲ ಕಟ್ಟಡಗಳ ಪಟ್ಟಿಯಲ್ಲಿ ಇರಲೇ ಇಲ್ಲ. 2019ರ ಸಮೀಕ್ಷೆ ಸಮರ್ಪಕವಾಗಿ ನಡೆದಿಲ್ಲ ಎಂಬ ತೀರ್ಮಾನಕ್ಕೆ ಬಂದಿರುವ ಬಿಬಿಎಂಪಿ, ಈಗ ಮತ್ತೆ ಶಿಥಿಲ ಕಟ್ಟಡಗಳ ಸಮೀಕ್ಷೆ ನಡೆಸುತ್ತಿದೆ. [illegible] ಈ ಸಮೀಕ್ಷೆಯೂ ಮತ್ತೊಂದು ವ್ಯರ್ಥ ಕಸರತ್ತು ಆಗಲಿದೆ.

ಅಪಾಯ ಸಂಭವಿಸಿದ ಬಳಿಕ ಎಚ್ಚೆತ್ತುಕೊಂಡಂತೆ ತೋರಿಸಿಕೊಂಡು ಆನಂತರ ಜಾಣ ಮರೆವು ಪ್ರದರ್ಶಿಸುವುದನ್ನು ಬಿಬಿಎಂಪಿ ಬಿಡಬೇಕು

ಯಾವುದಾದರೂ ಕಟ್ಟಡ ವಾಸಯೋಗ್ಯವಲ್ಲ ಎಂಬುದು ಗಮನಕ್ಕೆ ಬಂದರೆ, 2020ರ ಬಿಬಿಎಂಪಿ ಕಾಯ್ದೆಯ ಸೆಕ್ಷನ್ 263ರ ಪ್ರಕಾರ ಮುಖ್ಯ ಆಯುಕ್ತರು ಈ ವಿಚಾರವನ್ನು ಸ್ಥಾಯಿ ಸಮಿತಿಯ ಗಮನಕ್ಕೆ ತರಬಹುದು. ಅಂತಹ ಕಟ್ಟಡವನ್ನು ವಾಸಕ್ಕೆ ಬಳಸದಂತೆ ಸ್ಥಾಯಿ ಸಮಿತಿಯು ನೋಟಿಸ್ ಜಾರಿಗೊಳಿಸಬಹುದು. ಆ ಕಟ್ಟಡದಲ್ಲಿರುವವರು ವಾಸ್ತವ್ಯ ಬದಲಿಸುವುದಕ್ಕೆ, ನೋಟಿಸ್ ಜಾರಿಯಾದ ಬಳಿಕ ಕನಿಷ್ಠ 30 ದಿನಗಳ ಕಾಲಾವಕಾಶ ನೀಡಬೇಕು. ಕಟ್ಟಡವನ್ನು ದುರಸ್ತಿಗೊಳಿಸಲು ಅವಕಾಶ ನೀಡಬಹುದು. ದುರಸ್ತಿ ಬಳಿಕವೂ ಕಟ್ಟಡ ವಾಸಯೋಗ್ಯವಲ್ಲ ಎಂದು ಕಂಡುಬಂದರೆ ಅಥವಾ ಅದರಿಂದ ಅಕ್ಕಪಕ್ಕದ ನಿವಾಸಿಗಳಿಗೂ ಅಪಾಯವಿದ್ದರೆ ಅದನ್ನು ನೆಲಸಮ ಮಾಡಲು ಮುಖ್ಯ ಆಯುಕ್ತರು ಸೂಚಿಸಬಹುದು. ಇಂತಹ ಕಟ್ಟಡಗಳನ್ನು 6 ತಿಂಗಳ ಒಳಗೆ ತೆರವುಗೊಳಿಸಬೇಕು. ಒಂದು ಕಟ್ಟಡ ಎಷ್ಟು ವರ್ಷಗಳವರೆಗೆ ವಾಸಯೋಗ್ಯ ಎಂಬ ಬಗ್ಗೆ ಖಚಿತ ಲೆಕ್ಕಾಚಾರ ಬಿಬಿಎಂಪಿ ಬಳಿ ಇಲ್ಲ. ಕನಿಷ್ಠ, 50- 60 ವರ್ಷ ಹಳೆಯ ಕಟ್ಟಡಗಳ ದೃಢತೆಯನ್ನಾದರೂ ಕಾಲ ಕಾಲಕ್ಕೆ ಪರಿಶೀಲಿಸುವ ಪದ್ಧತಿಯೂ ಇಲ್ಲ. ಹಳೆ ಕಟ್ಟಡಗಳು ಮಾತ್ರ ಅಪಾಯಕಾರಿಯಲ್ಲ; ಹೊಸ ಕಟ್ಟಡಗಳನ್ನೂ ಅಸುರಕ್ಷಿತವಾಗಿ ನಿರ್ಮಿಸುವ ಪರಿಪಾಠ ನಗರದಲ್ಲಿ ಹೆಚ್ಚುತ್ತಿದೆ. ಕಟ್ಟಡ ನಕ್ಷೆಗೆ ವ್ಯತಿರಿಕ್ತವಾಗಿ ಹೊಸ ರಚನೆಗಳನ್ನು ಸೇರಿಸಲಾಗುತ್ತಿದೆ. ಇಂತಹ ಉಲ್ಲಂಘನೆಗಳು ಕಟ್ಟಡ ಕುಸಿಯುವ ಅಪಾಯವನ್ನು ಹೆಚ್ಚಿಸುತ್ತವೆ. ಇಂತಹ ಕಟ್ಟಡಗಳ ಅಕ್ಕಪಕ್ಕದ ನಿವಾಸಿಗಳಿಗೂ ಆತಂಕ ತಪ್ಪಿದ್ದಲ್ಲ. ಕಟ್ಟಡ ನಕ್ಷೆಗೆ ಮಂಜೂರಾತಿ ನೀಡಿದ ಬಳಿಕ, ಅದರ ನಿರ್ಮಾಣ ಚಟುವಟಿಕೆ ಮೇಲೆ ಆಯಾ ವಾರ್ಡ್‌ನ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ನಿಗಾ ಇಡಬೇಕು. ಮಂಜೂರಾತಿ ಪಡೆದ ನಕ್ಷೆಗೆ ಅನುಗುಣವಾಗಿಯೇ ಕಟ್ಟಡ ನಿರ್ಮಾಣಗೊಳ್ಳುತ್ತಿದೆ ಎಂಬುದನ್ನು ಖಾತರಿಪಡಿಸಿಕೊಳ್ಳಬೇಕು. ಉಲ್ಲಂಘನೆಯಾಗಿದ್ದರೆ ಕಟ್ಟಡ ಮಾಲೀಕರ ವಿರುದ್ಧ ಕ್ರಮ ಕೈಗೊಳ್ಳಬೇಕು. ಆದರೆ, ಈ ನಿಯಮಗಳು ಭ್ರಷ್ಟಾಚಾರಕ್ಕೆ ದುರ್ಬಳಕೆಯಾಗುತ್ತಿವೆಯೇ ಹೊರತು ಕಟ್ಟಡಗಳ ಸುರಕ್ಷತೆಗಾಗಿ ಅಲ್ಲ ಎಂಬ ದೂರುಗಳಿವೆ. ನಿರ್ಮಾಣ ಕಾರ್ಯ ಪೂರ್ಣಗೊಂಡ ಬಳಿಕ ಸ್ವಾಧೀನಾನುಭವ ಪತ್ರ (ಒ.ಸಿ) ಪಡೆಯುವ ಕಟ್ಟಡ ಮಾಲೀಕರು, ಆ ಬಳಿಕ ಕಟ್ಟಡದಲ್ಲಿ ಅಸುರಕ್ಷಿತವಾಗಿ ಕೆಲವೊಂದು ಮಾರ್ಪಾಡುಗಳನ್ನು ಮಾಡುವುದು ಸರ್ವೇಸಾಮಾನ್ಯ ಎಂಬಂತಾಗಿದೆ. ಇವುಗಳನ್ನು ತಡೆಯುವ ಪ್ರಯತ್ನಗಳೂ ನಡೆಯುತ್ತಿಲ್ಲ. ಅಪಾಯ ಸಂಭವಿಸಿದ ಬಳಿಕ ಎಚ್ಚೆತ್ತುಕೊಂಡಂತೆ ತೋರಿಸಿಕೊಂಡು ಆನಂತರ ಜಾಣ ಮರೆವು ಪ್ರದರ್ಶಿಸುವುದನ್ನು ಬಿಬಿಎಂಪಿ ಬಿಡಬೇಕು. ಶಿಥಿಲಗೊಂಡ ಅಪಾಯಕಾರಿ ಕಟ್ಟಡಗಳನ್ನು ತ್ವರಿತವಾಗಿ ತೆರವುಗೊಳಿಸಬೇಕು. ಕಟ್ಟಡಗಳ ದೃಢತೆಯನ್ನು ಕಾಲಕಾಲಕ್ಕೆ ಪರಿಶೀಲಿಸುವುದಕ್ಕೂ ಕ್ರಮ ಕೈಗೊಳ್ಳಬೇಕು.

ದಿನದ ಟ್ವೀಟ್

ಗ್ರಾಹಕರಿಗೆ ಬರೆ

ಪೆಟ್ರೋಲ್, ಡೀಸೆಲ್, ಎಲ್‌ಪಿಜಿ ದರ ಮತ್ತೆ ಏರಿಕೆಯಾಗಿದೆ. ಹಬ್ಬದ ಸೀಸನ್‌ನಲ್ಲಿ ಖರೀದಿಗೆ ಗ್ರಾಹಕರನ್ನು ಪ್ರೋತ್ಸಾಹಿಸುವ ಮೂಲಕ ಆರ್ಥಿಕ ಚಟುವಟಿಕೆಯನ್ನು ಉತ್ತೇಜಿಸಬೇಕಾದ ಅಗತ್ಯ ಇರುವಾಗ, ಅವರ ಉಳಿತಾಯವು ಮತ್ತಷ್ಟು ಕ್ಷೀಣಿಸುವಂತೆ ಮಾಡಲಾಗಿದೆ.

ರಾಹುಲ್ ಶಿವಶಂಕರ್, ಪತ್ರಕರ್ತ

ಕಿಡಿನುಡಿ

ಅಫ್ಗನ್ ಬೆಳವಣಿಗೆ ಕುರಿತಂತೆ ಭಾರತ–ಅಮೆರಿಕದ ಚಿಂತನೆ ಏಕಪ್ರಕಾರವಾಗಿ ಇದ್ದರೂ ಅಮೆರಿಕ ಮತ್ತು ತಾಲಿಬಾನ್ ನಡುವೆ ಕಳೆದ ವರ್ಷ ನಡೆದಿದ್ದ ದೋಹಾ ಒಪ್ಪಂದದ ವೇಳೆ, ಅನೇಕ ವಿಷಯಗಳಿಗೆ ಸಂಬಂಧಿಸಿದಂತೆ ಭಾರತವನ್ನು ವಿಶ್ವಾಸಕ್ಕೆ ತೆಗೆದುಕೊಂಡಿರಲಿಲ್ಲ. ಇದರ ಅರಿವು ಅಮೆರಿಕಕ್ಕೂ ಇದೆ.

ಎಸ್.ಜೈಶಂಕರ್, ವಿದೇಶಾಂಗ ವ್ಯವಹಾರಗಳ ಸಚಿವ

25 ವರ್ಷಗಳ ಹಿಂದೆ

ಬುಧವಾರ, 2-10-1996

● **ನ್ಯಾಯಮೂರ್ತಿ ಅಹ್ಮದಿ– ಪ್ರಧಾನಿ 'ಮಧ್ಯರಾತ್ರಿ' ಭೇಟಿಗೆ ಪ್ರತಿಭಟನೆ**

ನವದೆಹಲಿ, ಅ. 1 (ಪಿಟಿಐ)– ಹಲವಾರು ಪ್ರಮುಖ ರಾಜಕೀಯ ವ್ಯಕ್ತಿಗಳು ಭಾಗಿಯಾಗಿದ್ದಾರೆ ಎನ್ನಲಾದ ಪ್ರಕರಣಗಳ ಬಗ್ಗೆ ವಿಚಾರಣೆ ನಡೆಯುತ್ತಿರುವಾಗ, ಸುಪ್ರೀಂ ಕೋರ್ಟಿನ ಮುಖ್ಯ ನ್ಯಾಯಮೂರ್ತಿ ಎ.ಎಂ.ಅಹ್ಮದಿ ಅವರು ಪ್ರಧಾನಿ ಎಚ್.ಡಿ. ದೇವೇಗೌಡ ಅವರನ್ನು ಮಧ್ಯರಾತ್ರಿ ವೇಳೆ 'ನಿಗೂಢ'ವಾಗಿ ಭೇಟಿಯಾಗಿರುವುದನ್ನು ಸುಪ್ರೀಂ ಕೋರ್ಟ್ ವಕೀಲರ ಸಂಘದ 200 ಸದಸ್ಯರು ಪ್ರತಿಭಟಿಸಿದ್ದಾರೆ.

ನ್ಯಾಯಮೂರ್ತಿ ಅವರು ಪ್ರಧಾನಿ ಅವರನ್ನು ಭೇಟಿ ಮಾಡಿದ ವಿಷಯದ ಚರ್ಚೆಗೆ ಸಂಘದ ತುರ್ತು ಸರ್ವ ಸಾಮಾನ್ಯ ಸಭೆಯನ್ನು ಕರೆಯಬೇಕೆಂದು ವಕೀಲರು ಆಗ್ರಹಿಸಿದ್ದಾರೆ. ಸಭೆಯಲ್ಲಿ ಮಂಡಿಸಲಾಗುವ ನಿರ್ಣಯದ ಕರಡು ಪ್ರತಿಯನ್ನು ಇಂದು ಸಂಘದ ಸದಸ್ಯರಿಗೆ ವಿತರಿಸಲಾಗಿದ್ದು, 'ಮಧ್ಯರಾತ್ರಿಯಲ್ಲಿ ಪ್ರಧಾನಿ ಅವರೊಂದಿಗೆ ನ್ಯಾಯಮೂರ್ತಿ ಅವರ ಭೇಟಿ ನ್ಯಾಯಾಂಗದ ಸ್ವಾತಂತ್ರ್ಯವನ್ನು ಪ್ರಶ್ನಿಸುತ್ತದೆ' ಎಂದು ನಿರ್ಣಯದಲ್ಲಿ ಹೇಳಲಾಗಿದೆ.

● **ದಂತ ಕಾಲೇಜು: ಹೈಕೋರ್ಟ್ ಕಟ್ಟಪ್ಪಣೆ**

ಬೆಂಗಳೂರು, ಅ. 1–ರಾಜ್ಯದಲ್ಲಿರುವ 41 ದಂತವೈದ್ಯ ಕಾಲೇಜುಗಳಲ್ಲಿ 17 ಕಾಲೇಜುಗಳಲ್ಲಿ ಕೊರತೆಯಿರುವ ಮೂಲಸೌಲಭ್ಯಗಳನ್ನು ಹಾಗೂ ಭಾರತೀಯ ದಂತವೈದ್ಯ ಮಂಡಳಿ ವಿಧಿಸಿರುವ ಷರತ್ತುಗಳನ್ನು ಕೂಡಲೇ ಪೂರೈಸದಿದ್ದಲ್ಲಿ ಅವುಗಳಿಗೆ ಈ ವರ್ಷ ಪ್ರವೇಶ ನೀಡಕೂಡದು ಎಂದು ಹೈಕೋರ್ಟ್ ಇಂದು ಆದೇಶಿಸಿತು.

50 ವರ್ಷಗಳ ಹಿಂದೆ

ಶನಿವಾರ, 2-10-1971

● **ಸಂಸ್ಥಾ ಕಾಂಗ್ರೆಸ್ಸಿಗರಿಗೆ 'ಸದಾಚಾರ ಸಂಹಿತೆ'**

ನವದೆಹಲಿ, ಅ. 1– ಸೋಮವಾರ ಇಲ್ಲಿ ನಡೆಯುವ ಸಂಸ್ಥಾ ಕಾಂಗ್ರೆಸ್ಸಿನ ಕಾರ್ಯಕಾರಿ ಸಮಿತಿ ಸಭೆಯು ತನ್ನ ಸದಸ್ಯರಿಗಾಗಿ 'ಸದಾಚಾರ ಸಂಹಿತೆ'ಯೊಂದನ್ನು ಸಿದ್ಧಪಡಿಸುವ ನಿರೀಕ್ಷೆಯಿದೆ.

ಡಾ. ರಾಮಸುಭಗ್ ಸಿಂಗ್ ಮತ್ತು ಶ್ರೀಮತಿ ತಾರಕೇಶ್ವರಿ ಸಿನ್ಹಾ ಅವರ ನೇತೃತ್ವದಲ್ಲಿಯ ಯುವಕರ ಗುಂಪು ಪಕ್ಷದ ಉನ್ನತ ನಾಯಕರನ್ನು ಬಹಿರಂಗವಾಗಿ ಟೀಕೆ ಮಾಡುತ್ತಿರುವುದರಿಂದ ಈ ಕ್ರಮ ಅಗತ್ಯವಾಗಿದೆ ಎಂದು ಪಕ್ಷದ ವೃತ್ತಗಳು ತಿಳಿಸಿವೆ.

● **ಕುಂದುಕೊರತೆ ಅರಿಯಲು ದೆಹಲಿವರೆಗೆ ರೈಲಿನಲ್ಲಿ ಕೆಂಗಲ್‌ರ ಖುದ್ದು ಪ್ರವಾಸ**

ಬೆಂಗಳೂರು, ಅ. 1– ರೈಲು ಪ್ರಯಾಣ ಹೆಚ್ಚು ಸುಖಕರವಾಗುವಂತೆ ಮಾಡಲು ರೈಲ್ವೆ ಸಚಿವ ಶ್ರೀ ಕೆ. ಹನುಮಂತಯ್ಯ ಅವರು ರಾಷ್ಟ್ರವ್ಯಾಪಿ ಚಳವಳಿಯೊಂದನ್ನು ಆರಂಭಿಸಿದ್ದಾರೆ.

ಈ ಉದ್ದೇಶವನ್ನು ಸಾಧಿಸಲು ಖುದ್ದಾಗಿ ಪರಿಸ್ಥಿತಿಯನ್ನು ಅರಿತುಕೊಳ್ಳುವುದಕ್ಕಾಗಿ ಸಚಿವರು ಇಂದು ರಾತ್ರಿ ಇಲ್ಲಿಂದ ರೈಲಿನಲ್ಲಿ ಮದ್ರಾಸ್ ಮಾರ್ಗವಾಗಿ ದೆಹಲಿಗೆ ಹೊರಟರು.

ಬಿಕ್ಕಟ್ಟುಗಳನ್ನು ಪ್ರಬುದ್ಧವಾಗಿ ನಿಭಾಯಿಸುವುದಕ್ಕೆ ಕುಟುಂಬದ ನಿಯಂತ್ರಣ ಅಡ್ಡಿಯಾಗಿದೆ

'ಪರಿವಾರವಾದ'ದ ಸಮಸ್ಯೆಯಲ್ಲಿ ಕಾಂಗ್ರೆಸ್

ಸೂರ್ಯ–ನಮಸ್ಕಾರ

ಎ.ಸೂರ್ಯ ಪ್ರಕಾಶ್

ನೆಹರೂ ನಂತರದ ಕಾಲಘಟ್ಟದಲ್ಲಿ ಕಾಂಗ್ರೆಸ್ ಪಕ್ಷದಲ್ಲಿ ಕುಟುಂಬದ ನಿಯಂತ್ರಣದಿಂದಾಗಿ ಶುರುವಾದ ಕಾಯಿಲೆಯು ಇನ್ನೂ ಕಾಡುತ್ತಿದೆ, ಪಕ್ಷದ ಪ್ರಭಾವವನ್ನು ಕುಗ್ಗಿಸುತ್ತಿದೆ ಎಂಬುದರ ಸೂಚಕ ಪಕ್ಷವು ಅಧಿಕಾರದಲ್ಲಿ ಇರುವ ಪಂಜಾಬ್, ಚತ್ತೀಸಗಡ ಮತ್ತು ರಾಜಸ್ಥಾನದಲ್ಲಿನ ಸಮಸ್ಯೆಗಳು.

ರಾಜಸ್ಥಾನ ಮತ್ತು ಚತ್ತೀಸಗಡದ ಮುಖ್ಯಮಂತ್ರಿಗಳು ಆಂತರಿಕ ಭಿನ್ನಮತವನ್ನು ಎದುರಿಸುತ್ತಿದ್ದಾರೆ. ಅವರು ತಮ್ಮ ಸ್ಥಾನದಲ್ಲಿ ಸಂತೃಪ್ತಿಯಿಂದ ಮುಂದುವರಿಯುತ್ತಿರುವಂತೆ ಕಾಣುತ್ತಿಲ್ಲ. ಪಕ್ಷದ ಹೈಕಮಾಂಡ್ ಎಂದು ಕರೆಸಿಕೊಂಡಿರುವ ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಮತ್ತು ಪ್ರಿಯಾಂಕಾ ಗಾಂಧಿ ಅವರು ಪಕ್ಷದ ಹಿರಿಯ ನಾಯಕ, ಪಂಜಾಬ್‌ನ ಮುಖ್ಯಮಂತ್ರಿ ಆಗಿದ್ದ ಅಮರಿಂದರ್ ಸಿಂಗ್ ಅವರನ್ನು ಅವಮಾನಿಸಿದ್ದಾರೆ. ಅಮರಿಂದರ್ ಅವರಿಗೆ ಆಗಿರುವ ಅವಮಾನವು ಮುಂದಿನ ದಿನಗಳಲ್ಲಿ ಪಕ್ಷದ ಮೇಲೆ ಪರಿಣಾಮ ಬೀರಲಿದೆ.

ಚತ್ತೀಸಗಡದಲ್ಲಿನ ವ್ಯವಹಾರಗಳಲ್ಲಿ ಹೈಕಮಾಂಡ್ ಮಧ್ಯಪ್ರವೇಶಿಸಿದ ಬಗೆ ಕೂಡ ಅಲ್ಲಿ ಸಮಸ್ಯೆ ಸೃಷ್ಟಿಸಬಲ್ಲದು. ರಾಜಸ್ಥಾನದಲ್ಲಿ ನೆಹರೂ–ಗಾಂಧಿ ಕುಟುಂಬವು ಸಚಿನ್ ಪೈಲಟ್ ಅವರ ನಾಯಕತ್ವದ ಶಕ್ತಿಯನ್ನು ಗುರುತಿಸುವಲ್ಲಿ ವಿಫಲವಾಯಿತು. ಪೈಲಟ್ ಅವರಿಗೆ ಚುನಾವಣೆಯಲ್ಲಿ ಗೆಲುವು ಸಾಧಿಸಲು ನೆಹರೂ–ಗಾಂಧಿ ಕುಟುಂಬದ ನೆರವು ಬೇಕಿಲ್ಲ ಎಂಬ ಸಂಗತಿಯೂ ಹೈಕಮಾಂಡ್‌ಗೆ ಸರಿಬರುತ್ತಿಲ್ಲ. ಮುಂದಿನ ವರ್ಷಗಳಲ್ಲಿ ಇದಕ್ಕೆ ಪಕ್ಷ ಬೆಲೆ ತೆರಬೇಕಾಗುತ್ತದೆ.

ಕ್ಯಾಪ್ಟನ್ ಅಮರಿಂದರ್ ಸಿಂಗ್ ಅವರು ರಾಜೀವ್ ಗಾಂಧಿ ಅವರ ಶಾಲಾ ಸಹಪಾಠಿ. ಅವರಿಗೆ ನೆಹರೂ–ಗಾಂಧಿ ಕುಟುಂಬವು ಅರವತ್ತಕ್ಕೂ ಹೆಚ್ಚು ವರ್ಷಗಳಿಂದ ಗೊತ್ತು. ತಲೆ ಎತ್ತಿ ನಡೆಯುವ ರಾಜಕೀಯ ನಾಯಕರ ಸಾಲಿಗೆ ಸೇರಿದವರು ಅಮರಿಂದರ್. ಅವರು ಘನತೆಯಿಂದ ನಡೆದುಕೊಳ್ಳುವ ವ್ಯಕ್ತಿತ್ವದವರು. ಇಂದಿರಾ ಗಾಂಧಿ ಅವಧಿಯಲ್ಲಿ ಪಕ್ಷದಲ್ಲಿ ಬೆಳೆದುಬಂದ, ರಾಜೀವ್ ಗಾಂಧಿ ಮತ್ತು ಸೋನಿಯಾ ಗಾಂಧಿ ಅವಧಿಯಲ್ಲಿ ಮುಂದುವರಿದ ಭಟ್ಟಂಗಿತನಕ್ಕೆ ಇವರು ಒಗ್ಗುವವರಲ್ಲ. ಅದಕ್ಕಿಂತಲೂ ಹೆಚ್ಚಾಗಿ ಅಮರಿಂದರ್ ಅವರು ತಮ್ಮದೇ ಆದ ವರ್ಚಸ್ಸು ಹೊಂದಿದ್ದಾರೆ, ಮತ ಪಡೆಯಲು ಅವರಿಗೆ ನೆಹರೂ–ಗಾಂಧಿಗಳು ಬೇಕಾಗಿಲ್ಲ.

ಕಾಂಗ್ರೆಸ್ ಈಗ ಪ್ರೈವೇಟ್ ಲಿಮಿಟೆಡ್ ಕಂಪನಿಯಾಗಿದೆ. ನಾಲ್ಕು ಜನ, ಅದರ ಮೂರೂವರೆ ಷೇರುಗಳನ್ನು ಹೊಂದಿದ್ದಾರೆ– ಸೋನಿಯಾ, ರಾಹುಲ್ ಮತ್ತು ಪ್ರಿಯಾಂಕಾ ಜೊತೆಗೆ ರಾಬರ್ಟ್ ವಾದ್ರಾ ಅವರು ಅರ್ಧ ಷೇರು ಹೊಂದಿದ್ದಾರೆ. ಈ ಕಂಪನಿಯ ಆಡಳಿತ ಮಂಡಳಿ ನಿರ್ದೇಶಕರಿಗೆ ತಮ್ಮ ಆಸ್ಥಾನಿಕರು ತೋರುವ ಅತಿಯಾದ ನಿಷ್ಠೆಯನ್ನು ಕಂಡು ಅಭ್ಯಾಸವಾಗಿಬಿಟ್ಟಿದೆ. ರಾಜಕೀಯ ಶಕ್ತಿಯಿರುವ ನಾಯಕರು ಪಕ್ಷದ 'ಪ್ರಥಮ ಕುಟುಂಬ'ದ ವಲಯದಲ್ಲಿ ಪ್ರಭಾವ ಕಳೆದುಕೊಳ್ಳುತ್ತಿದ್ದಾರೆ. ಭಟ್ಟಂಗಿಗಳು ಪ್ರವೇಶಿಸಿ, ಮೊದಲಿನಿಂದ ವಿಶ್ವಾಸ ಇರಿಸಿಕೊಂಡು ಬಂದಿದ್ದವರು ಹಾಗೂ ಕುಟುಂಬದ ನಡುವೆ ಸಂಘರ್ಷ ಸೃಷ್ಟಿಸುತ್ತಾರೆ. ಒತ್ತಡಕ್ಕೆ ಮಣಿಯುವ ಹೈಕಮಾಂಡ್ ಒಳ್ಳೆಯ ನಾಯಕರನ್ನು ಕೈಬಿಡುತ್ತದೆ. ಇದಾದ ನಂತರದಲ್ಲಿ ಅವನತಿ ಶುರುವಾಗುತ್ತದೆ.

ರಾಜ್ಯಗಳ ಮಟ್ಟದಲ್ಲಿ ಗೌರವ ಸಂಪಾದಿಸಿದ್ದ ನಾಯಕರನ್ನು ಪಕ್ಷದ ನಾಯಕರು ಅವಮಾನಿಸಿದ ಹಲವು ಉದಾಹರಣೆಗಳು ಇವೆ. ಎರಡು ನಿದರ್ಶನಗಳು ತಕ್ಷಣಕ್ಕೆ ಮನಸ್ಸಿಗೆ ಬರುತ್ತಿವೆ. ರಾಜೀವ್ ಗಾಂಧಿ ಅವರು ಪಕ್ಷದ ಪ್ರಧಾನ ಕಾರ್ಯದರ್ಶಿಯಾಗಿದ್ದಾಗ ಆಂಧ್ರ ಪ್ರದೇಶದ ಮುಖ್ಯಮಂತ್ರಿ ಟಿ. ಅಂಜಯ್ಯ ಅವರನ್ನು ಸಾರ್ವಜನಿಕವಾಗಿ ಅವಮಾನಿಸಿದರು. ನಂತರ ಪ್ರಧಾನಿ ಹಾಗೂ ಪಕ್ಷದ ಅಧ್ಯಕ್ಷರಾಗಿದ್ದಾಗ ಕರ್ನಾಟಕದ ಮುಖ್ಯಮಂತ್ರಿಯಾಗಿದ್ದ ವೀರೇಂದ್ರ ಪಾಟೀಲರನ್ನು ಹುದ್ದೆಯಿಂದ ಕೆಳಗಿಳಿಸಿದರು. ಅಂಜಯ್ಯ ಪ್ರಕರಣವು ಆಂಧ್ರಪ್ರದೇಶದ ಜನರ ಆತ್ಮಗೌರವಕ್ಕೆ ಧಕ್ಕೆ ತಂದಿತು, ಅಲ್ಲಿ ಕಾಂಗ್ರೆಸ್ಸಿನ ಸೋಲು ಹಾಗೂ ತೆಲುಗುದೇಶಂ ಪಕ್ಷದ ಬಲವರ್ಧನೆಗೆ ಕಾರಣವಾಯಿತು. ಈಗ ಅಲ್ಲಿ ಪಕ್ಷವು ಅಳಿವಿನತ್ತ ಸಾಗಿದೆ.

ವೀರೇಂದ್ರ ಪಾಟೀಲ್ ಪ್ರಕರಣವು ಪಕ್ಷದ ವರ್ಚಸ್ಸಿಗೆ ಧಕ್ಕೆ ತಂದಿತು. ಕರ್ನಾಟಕದ ಪ್ರಬಲ ಲಿಂಗಾಯತ ಸಮುದಾಯದಿಂದ ಪಕ್ಷವನ್ನು ದೂರ ಮಾಡಿತು. ಆಂಧ್ರ ಪ್ರದೇಶ, ತೆಲಂಗಾಣಕ್ಕೆ ಹೋಲಿಸಿದರೆ, ಕರ್ನಾಟಕದಲ್ಲಿ ಪಕ್ಷದ ಸ್ಥಿತಿ ಚೆನ್ನಾಗಿ ಇದೆಯಾದರೂ, ಆಗ ಪಕ್ಷಕ್ಕೆ ಆದ ಹಾನಿಯು ಇಂದಿಗೂ ಪರಿಣಾಮ ಉಂಟುಮಾಡುತ್ತಿದೆ. ಹೀಗಾಗಿ, ಪಕ್ಷದ ಕುಸಿತಕ್ಕೆ ಬಹುದೊಡ್ಡ ಕಾರಣ 'ಪರಿವಾರವಾದ', ಅಂದರೆ ಕುಟುಂಬದ ನಿಯಂತ್ರಣ. ಇದು ಬಿಕ್ಕಟ್ಟುಗಳನ್ನು ಪ್ರಬುದ್ಧವಾಗಿ ನಿಭಾಯಿಸುವುದಕ್ಕೆ ಅಡ್ಡಿಯಾಗಿದೆ.

ಇಂದಿರಾ ಗಾಂಧಿ ಅವರು ಪಕ್ಷದ ಚುಕ್ಕಾಣಿ ಹಿಡಿದ ನಂತರ ಪರಿಸ್ಥಿತಿ ಬದಲಾಗಲು ಆರಂಭಿಸಿತು. ಹೆಚ್ಚಿನ ರಾಜಕೀಯ ಹಾಗೂ ಆಡಳಿತಾತ್ಮಕ ಅನುಭವವಿದ್ದ ನಾಯಕರನ್ನು ಅನಿವಾರ್ಯವಾಗಿ ಸರ್ಕಾರದಲ್ಲಿ ಉಳಿಸಿಕೊಳ್ಳಲಾಯಿತು. ಅವರ ಜೊತೆ ಎಲ್ಲ ಬಾರಿಯೂ ಸಮಾಲೋಚಿಸುತ್ತಿರಲಿಲ್ಲ. ಲೋಕಸಭೆ ಅಥವಾ ವಿಧಾನಸಭಾ ಚುನಾವಣೆಗಳಲ್ಲಿ ಗೆಲ್ಲಲು ಆಗದಿದ್ದವರಿಗೆ ಬಡ್ತಿ ನೀಡಲಾಯಿತು. ಏಕೆಂದರೆ, ಕುಟುಂಬಕ್ಕೆ ನಿಷ್ಠೆ ತೋರುತ್ತಿದ್ದವರಿಗೆ ಆದ್ಯತೆ ಕೊಡಲಾಯಿತು. ಆದರೆ ಇದರಿಂದಾದ ಪರಿಣಾಮವೆಂದರೆ, ಪಕ್ಷವು ವೋಟು ಗಳಿಸಲು ಕುಟುಂಬವನ್ನೇ ನೆಚ್ಚಿಕೊಳ್ಳಬೇಕಾಯಿತು. ಟಿಕೆಟ್ ದಕ್ಕಿಸಿಕೊಂಡವರು ಮತಗಳ ಲೆಕ್ಕದಲ್ಲಿ ಪಕ್ಷಕ್ಕೆ ಏನನ್ನೂ ತಂದುಕೊಡಲಿಲ್ಲ.

ತಮ್ಮ ಸಾಮರ್ಥ್ಯದ ಆಧಾರದಲ್ಲಿ ಚುನಾವಣೆಯಲ್ಲಿ ಗೆಲುವು ಸಾಧಿಸುತ್ತಿದ್ದ ನಾಯಕರು ಪಕ್ಷವನ್ನು ತೊರೆದು ತಮ್ಮದೇ ಆದ ಪಕ್ಷ ಸ್ಥಾಪಿಸಿದ್ದು ಅಥವಾ ಇತರ ಪಕ್ಷಗಳನ್ನು ಸೇರುವುದು 1970ರ ನಂತರ ಶುರುವಾಗಿದ್ದಕ್ಕೆ ಕಾರಣ ಇದು. ಕಾಂಗ್ರೆಸ್ ಮೂಲಕ ತಮ್ಮ ರಾಜಕೀಯ ಜೀವನ ಆರಂಭಿಸಿ, ನಂತರದಲ್ಲಿ ಬೇರೆ ಮಾರ್ಗವನ್ನು ತುಳಿದ ರಾಜಕೀಯ ನಾಯಕರ ದೊಡ್ಡ ಪಟ್ಟಿಯೇ ಇದೆ. ಈ ಪಟ್ಟಿಯಲ್ಲಿ ಎಚ್.ಡಿ. ದೇವೇಗೌಡ, ರಾಮಕೃಷ್ಣ ಹೆಗಡೆ, ಚಂದ್ರಬಾಬು ನಾಯ್ಡು, ಆರಿಫ್ ಮೊಹಮ್ಮದ್ ಖಾನ್, ವಿ.ಪಿ. ಸಿಂಗ್, ಶರದ್ ಪವಾರ್, ಪಿ.ಎ. ಸಂಗ್ಮಾ ಮತ್ತು ಮಮತಾ ಬ್ಯಾನರ್ಜಿ ಅವರ ಹೆಸರು ಇವೆ. ಜ್ಯೋತಿರಾದಿತ್ಯ ಸಿಂಧಿಯಾ ಅವರ ಹೆಸರು ತೀರಾ ಈಚೆಗಿನ ಸೇರ್ಪಡೆ. ಇಂತಹ ವಿದ್ಯಮಾನಗಳು ಪ್ರತೀ ರಾಜ್ಯದಲ್ಲಿಯೂ ಇವೆ. ಇಂತಹ ನಾಯಕರು ಪಕ್ಷದಿಂದ ಹೊರಗೆ ನಡೆದಿದ್ದಕ್ಕೂ ಪಕ್ಷವು ಚುನಾವಣಾ ರಾಜಕೀಯದಲ್ಲಿ ಹಿನ್ನಡೆ ಅನುಭವಿಸುತ್ತ ಬಂದಿದ್ದಕ್ಕೂ ನೇರ ಸಂಬಂಧ ಇದೆ.

ಈ ಎಲ್ಲ ಬೆಳವಣಿಗೆಗಳಿಂದ ಚುನಾವಣೆಗಳಲ್ಲಿ ಆಗಿರುವ ಪರಿಣಾಮ ಸ್ಪಷ್ಟವಾಗಿ ಕಾಣಿಸುತ್ತಿದೆ. ನೆಹರೂ ಮತ್ತು ಇಂದಿರಾ ಗಾಂಧಿ ಅವರ ದಿನಗಳಲ್ಲಿ ಲೋಕಸಭಾ ಚುನಾವಣೆಗಳಲ್ಲಿ ಪಕ್ಷವು ಒಟ್ಟು ಚಲಾವಣೆಯಾದ ಮತಗಳಲ್ಲಿ ಶೇಕಡ 42ರಿಂದ ಶೇ 45ರಷ್ಟು ಮತಗಳನ್ನು ಗಳಿಸುತ್ತಿತ್ತು. ಒಟ್ಟು ಸ್ಥಾನಗಳ ಪೈಕಿ ಶೇ 65ರಷ್ಟನ್ನು ಗೆದ್ದುಕೊಳ್ಳುತ್ತಿತ್ತು. 1957ರಲ್ಲಿ ಶೇ 47.8ರಷ್ಟು ಮತಗಳನ್ನು ಪಡೆದುಕೊಂಡಿದ್ದು ಪಕ್ಷದ ಅತ್ಯುತ್ತಮ ಸಾಧನೆ. ಇಂದಿರಾ ಗಾಂಧಿ ಅವರ ಹತ್ಯೆ ನಂತರ ನಡೆದ ಚುನಾವಣೆಯಲ್ಲಿ ಚಲಾವಣೆಯಾದ ಮತಗಳಲ್ಲಿ ಪಕ್ಷವು ಶೇ 48.1ರಷ್ಟು ಮತಗಳನ್ನು ಪಡೆದಿತ್ತು. ಆದರೆ, ಇವೆಲ್ಲ ಈಗ ಇತಿಹಾಸ. 2000ನೆಯ ಇಸವಿಯಿಂದ 2010ನೆಯ ಇಸವಿ ನಡುವೆ ಕಾಂಗ್ರೆಸ್ ಪಕ್ಷದ ಮತಗಳಿಕೆ ಪ್ರಮಾಣವು ಶೇ 25ರಿಂದ ಶೇ 28ರ ನಡುವೆ ಹೊಯ್ದಾಡಿದೆ. ಲೋಕಸಭೆಗೆ ನಡೆದ ಕೊನೆಯ ಎರಡು ಸಾರ್ವತ್ರಿಕ ಚುನಾವಣೆಗಳಲ್ಲಿ ಕಾಂಗ್ರೆಸ್ಸಿನ ಮತಗಳಿಕೆ ಪ್ರಮಾಣವು ಶೇ 20ರ ಗಡಿ ದಾಟಿಲ್ಲ.

ಇನ್ನೊಂದು ರೀತಿಯಲ್ಲಿ ಹೇಳಬೇಕು ಎಂದಾದರೆ, ಕಾಂಗ್ರೆಸ್ ಪಕ್ಷವು ಈಗ ವಾಸಿ ಆಗಲಾರದಂತಹ ಬಿಕ್ಕಟ್ಟಿನಲ್ಲಿ ಸಿಲುಕಿಕೊಂಡಿದೆ. ಜನಬೆಂಬಲ ಹೊಂದಿರುವ ಮತ್ತು ಪಕ್ಷಕ್ಕೆ ಮತ ಸೆಳೆಯಬಲ್ಲ ನಾಯಕರನ್ನು ಪಕ್ಷದ ಮುಂಚೂಣಿ ಸ್ಥಾನಗಳಿಗೆ ನೇಮಕ ಮಾಡದ ಹೊರತು, ತೀರ್ಮಾನಗಳನ್ನು ಕೈಗೊಳ್ಳಲು ಶಕ್ತಿಯುತ ನಾಯಕರ ತಂಡವೊಂದನ್ನು ರಚಿಸದ ಹೊರತು ದೇಶದ ಅತ್ಯಂತ ಹಳೆಯ ಪಕ್ಷವು ಕುಸಿತವನ್ನು ಮುಂದುವರಿಸಲಿದೆ. ಮತಗಳನ್ನು ಗಳಿಸಲು ಹಾಗೂ ಪಕ್ಷಕ್ಕೆ ಪುನಶ್ಚೇತನ ನೀಡಲು ನೆಹರೂ–ಗಾಂಧಿಗಳ ಬಳಿ ಮಂತ್ರದಂಡ ಇಲ್ಲ.

ಚುರುಮುರಿ

ಕರೆಂಟ್ ಅಫೇರ್ಸ್

• ಕೆ.ವಿ.ರಾಜಲಕ್ಷ್ಮಿ

'ಕರೆಂಟ್ ಸ್ಕೂಟರ್ ಆಯಿತು, ಕರೆಂಟ್ ಬಸ್ಸು ಶುರುವಾಗಿದೆಯಂತೆ? ವಾಯುಮಾಲಿನ್ಯ ಕಡಿಮೆಯಾಗುತ್ತೆ, ಒಳ್ಳೇದೇ ಆಯಿತು' ಅತ್ತೆಯವರಿಂದ ಅಪ್‌ಡೇಟ್.

'ಇವತ್ತಿಂದ ನೂರಕ್ಕೆ ನೂರು' ನಾನೆಂದೆ.

'ಪುಟ್ಟಿಯ ಪರೀಕ್ಷೆ ರಿಸಲ್ಟ್ ಬಂತೇ?' ಅತ್ತೆ ಕನ್ನಡಕ ಸರಿಪಡಿಸಿಕೊಳ್ಳುತ್ತ ಕೇಳಿದರು.

'ನಿನ್ನ ಭ್ರಮೆ, ಬುದ್ಧಿಗೂ ಅಂಕಕ್ಕೂ ತಾಳೆ ಹಾಕಬಾರದು ಅಂತ ಅವಳ ವಾದ. ಥಿಯೇಟರ್‌ಗಳಲ್ಲಿ, ಹೌಸ್‌ಫುಲ್ ಬೋರ್ಡ್ ಕಾಣೋ ಅದೃಷ್ಟ ಇದೆ ಅಂತ ಹೇಳ್ತಿರೋದು' ನನ್ನವಳು ಮಾತಲ್ಲೇ ಮೊಟಕಿದಳು.

'ಇನ್ನೇನು ದೇವಸ್ಥಾನಗಳಲ್ಲೂ ಮೊದಲಿನ ಹಾಗೆ ಪೂಜೆ ಪುನಸ್ಕಾರ ನಡೆಯುತ್ತೆ, ಹೊಸ ಸೀರೆ, ಉಡುಗೆ ತೊಟ್ಟು ಹೋಗಬಹುದು' ಶಮನಗೊಳಿಸುವ ನುಡಿ ಚೆಲ್ಲಿದೆ.

'ಮುಖ್ಯವಾಗಿ ಎಲ್ಲರ ಲಸಿಕೆ ಸರ್ಟಿಫಿಕೇಟು ಒಂದಷ್ಟು ಕಾಪಿ ಮಾಡಿ ಇಟ್ಕೊಂಡ್ರೆ ಒಳ್ಳೇದು' ಅತ್ತೆಯ ಸಲಹೆ. 'ಒಂದು ಸಾಲದೇ? ಒಂದಷ್ಟು ಯಾಕೋ?' ನನ್ನ ಡೌಟು.

'ಅಯ್ಯೋ ಅಪ್ಪಾ... ಎಲ್ಲಾ ಜಂಬದ ಚೀಲಗಳಲ್ಲಿ ಒಂದೊಂದು ಇದ್ರೆ ಯಾವುದು ತೊಗೊಂಡು ಹೋದ್ರೂ ನಿರಾಳ' ಪುಟ್ಟಿ ಕಾಲೆಳೆದಳು. 'ಬೆಳಿಗ್ಗೆಯಿಂದ ನಮ್ಮ ಏರಿಯಾಲಿ ಕರೆಂಟ್ ಇಲ್ಲ, ಅದಕ್ಕೆ ಇಲ್ಲಿಗ್ಬಂದೆ' ಎನ್ನುತ್ತಲೇ ಕಂಠಿ ಕಾಲಿಟ್ಟ.

'ಈ ಕರೆಂಟ್ ಬಗ್ಗೆ ಏನ್ ಹೇಳೋದು? ನಿನ್ನೆ ಇಡೀ ದಿನ ಕರೆಂಟ್ ಇರೋಲ್ಲ ಅಂತ ಪೇಪರ್‌ನಲ್ಲಿ ಓದಿ ಬೆಳಿಗ್ಗೆ ಹತ್ತರ ಒಳಗೆ ಎಲ್ಲ ಕೆಲಸ ಮುಗಿಸಿದ್ವಿ, ಮೋಟರ್ ಹಾಕಿ ನೀರು ತುಂಬಿಕೊಂಡಿದ್ವಿ'.

'ಮೊಬೈಲ್‌ಗಳನ್ನೂ ಫುಲ್ ಚಾರ್ಜ್ ಮಾಡಿದ್ವಿ, ಇಡೀ ದಿನ ಕಳೀಬೇಕಲ್ಲ?'

'ಆದರೆ ಕರೆಂಟು ಹೋಗಲೇ ಇಲ್ಲ. ಇವತ್ತು ಕರೆಂಟ್ ಇರೋಲ್ಲ ಅಂತ ಮುನ್ಸೂಚನೆ ಕೊಟ್ಟಿಲ್ಲ, ಒಂದು ಕೆಲಸವೂ ಆಗಿಲ್ಲ, ಸ್ನಾನಕ್ಕೆ ಗ್ಯಾಸ್‌ನಲ್ಲಿ ಕಾಸೋಣಾಂದ್ರೆ ಸಿಲಿಂಡರ್ ಬೆಲೆ ಶಾಕ್ ಹೊಡೆಯುತ್ತೆ' ನನ್ನವಳು ಅಲವತ್ತುಕೊಂಡಳು.

'ಅದಕ್ಕೇ ಹೇಳೋದು, ಇಂಥದ್ದನ್ನೆಲ್ಲ ಸೀರಿಯಸ್ಸಾಗಿ ತೊಗೋಬಾರ್ದು. ನಮ್ಮ ರಾಜಕೀಯದವರ ಮಾತುಗಳ ಹಾಗೆ' ನಾನೆಂದೆ. ಅಷ್ಟರಲ್ಲೇ ಕರೆಂಟ್ ಬಂದಿತ್ತು. ನಿಂತಿದ್ದ ಫ್ಯಾನ್ ಓಡತೊಡಗಿತ್ತು.

ಸಂಗತ

ಬಾಪೂ, ಒಮ್ಮೆ ಶಾಲೆಗೆ ಬನ್ನಿ...

ಗಾಂಧೀಜಿ ಕಂಡ ಕನಸಿನ ಭಾರತ ಅವರ ಮೂಲ ಶಿಕ್ಷಣದ ಪರಿಕಲ್ಪನೆ ಆಧರಿಸಿದ್ದು

• ಬಿ.ಎಸ್. ಭಗವಾನ್

ನಿವೃತ್ತ ಐಎಎಸ್ ಅಧಿಕಾರಿಯೊಬ್ಬರೊಂದಿಗೆ ಇತ್ತೀಚೆಗೆ ಮಾತಿಗಿಳಿಯುವ ಅವಕಾಶ ಒದಗಿತು. 'ನಿಮಗೆ ಕುದುರೆ ಸವಾರಿ, ಗೋಡೆ ಹಾರುವುದು, ಜಿಗಿಯುವುದು, ಇಟ್ಟಿಗೆ ತಯಾರಿಸುವುದು, ಬ್ರೆಡ್ ತಯಾರಿ, ಬೈಕ್ ರಿಪೇರಿ... ಇಂಥದ್ದಕ್ಕೆಲ್ಲ ತರಬೇತಿ ಕೊಡುತ್ತಾರಂತೆ ಹೌದೇ ಸಾರ್' ಅಂತ ಕೇಳಿದೆ. ಅವರು 'ನಿಜ, ಏಕಾಏಕಿ ಜಿಲ್ಲೆಯ ಉನ್ನತಾಧಿಕಾರ ವಹಿಸಿಕೊಂಡ ಮಾತ್ರಕ್ಕೆ ಗಾಡಿ ಹೊಡೆಯುವವರ, ಧಾನ್ಯ ಒಕ್ಕುವವರ, ಇಟ್ಟಿಗೆ ಸುಡುವವರ, ಬಾವಿ ತೋಡುವವರ ಕಷ್ಟ, ಪರಿಶ್ರಮ ಅರ್ಥವಾದೀತೆ? ಒಂದು ವೇಳೆ ನಮಗೆ ಶಾಲಾ ಕಾಲೇಜಿನಲ್ಲಿ ಅವನ್ನು ಹೇಳಿಕೊಟ್ಟಿದ್ದಿದ್ದರೆ ಅಂಥ ತರಬೇತಿಯ ಅಗತ್ಯವೇ ಇರುತ್ತಿರಲಿಲ್ಲ ನೋಡಿ' ಎಂದು ಅವರು ಮಾರ್ಮಿಕವಾಗಿ ಪ್ರತಿಕ್ರಿಯಿಸಿದರು.

ಎಂತಹ ಮೌಲಿಕ ಅಭಿಪ್ರಾಯವಿದು. ಒಳಿತು-ಕೆಡುಕುಗಳ, ಸತ್ಯಾಸತ್ಯಗಳ, ರುಚಿ-ಅರುಚಿಗಳ ನಡುವಿನ ಭೇದ ತಿಳಿಸದ ಶಿಕ್ಷಣ ನಿರರ್ಥಕ ಎಂದರು ಮಹಾತ್ಮ ಗಾಂಧಿ. ಶಿಕ್ಷಣ ಕುರಿತ ಅವರ ಚಿಂತನೆಗಳು ಸಾರ್ವಕಾಲಿಕ. ಗಾಂಧೀಜಿ ಕಂಡ ಕನಸಿನ ಭಾರತವು ಅವರ ಮೂಲ ಶಿಕ್ಷಣದ ಪರಿಕಲ್ಪನೆ ಆಧರಿಸಿದ್ದು. ಶಿಕ್ಷಣದಲ್ಲಿ ಮಕ್ಕಳ ಸ್ವಾಭಾವಿಕ ಪ್ರವೃತ್ತಿಯೊಂದಿಗೆ ಆದರ್ಶವಾದ ಮತ್ತು ವ್ಯಾವಹಾರಿಕತೆ ಬೆಸೆದಿರಬೇಕೆಂದು ಅವರು ಆಶಿಸಿದರು.

ವೃತ್ತಿಪರ ಶಿಕ್ಷಣ ಕ್ರಮಕ್ಕೆ ಗಾಂಧೀಜಿ ವಿಶೇಷ ಒತ್ತು ನೀಡಿದರು. ಸಾಂಕೇತಿಕವಾಗಿ ನೂಲುವುದು, ನೇಯ್ಗೆ ರಾಷ್ಟ್ರೀಯ ಶಿಕ್ಷಣದ ಅಂಗವಾಗಬೇಕೆಂದು ಹಂಬಲಿಸಿದರು. ಮರಗೆಲಸ, ಟೈಲರಿಂಗ್, ಕಟ್ಟಡ ಕಾಮಗಾರಿ, ಕುಂಬಾರಿಕೆ, ಪುಸ್ತಕ ಬೈಂಡಿಂಗ್, ಅಡುಗೆ, ತೋಟಗಾರಿಕೆ... ಹೀಗೆ ಒಂದಲ್ಲೊಂದು ಕಾಯಕವನ್ನು ಮಕ್ಕಳಿಗೆ ಶಾಲಾ ಕಾಲೇಜುಗಳಲ್ಲಿ ಕಲಿಸದಿದ್ದರೆ ಶಿಕ್ಷಣ ಕೇವಲ ಗಿಳಿಯೋದು. ಅಂಕಗಳಿಗಾಗಿ ಮಕ್ಕಳಿಗೆ ಉರು ಹೊಡೆಸಿದರೆ ಅವರಲ್ಲಿ ಕಲಿಕೆಯ ಉತ್ಸಾಹದ ಕಾರಂಜಿಯೇ ಬತ್ತುವುದು. ಮಾಹಿತಿ, ಅಂಕಿ ಅಂಶಗಳನ್ನು ಒಂದು ಯಂತ್ರವೂ ಕಲೆ ಹಾಕಬಲ್ಲದು! ಆದರೆ ಪ್ರಾಯೋಗಿಕ ಜ್ಞಾನ, ವಿವೇಕ? ಓದು, ಬರಹಗಳಾಚೆಗೆ ಅವಕ್ಕೆ ಸಂಬಂಧಿಸಿದ ಕಾರ್ಯ, ಕಸುಬು ರೂಢಿಸಿಕೊಂಡಲ್ಲಿ ಅನುಕರಣ-ಪಟುತ್ವಕ್ಕೆ ಶರಣಾಗದೆ ಮಕ್ಕಳು ತಮ್ಮದೇ ವ್ಯಕ್ತಿತ್ವ ಹೊಂದುವರು.

ಆಧುನಿಕ ಜಗತ್ತಿನ ಸವಾಲುಗಳನ್ನು ಎದುರಿಸುವಲ್ಲಿ ಶಿಕ್ಷಣ ಸೋಲಲು ಕಾರಣ ವಿಜ್ಞಾನ, ತಂತ್ರಜ್ಞಾನದ ಅತಿ ಅವಲಂಬನೆ. ಅದಕ್ಕೂ ಹೆಚ್ಚಾಗಿ ಶಿಕ್ಷಣವನ್ನು ಕೈಭರ್ತಿ ಸಂಬಳ, ಸಂಪತ್ತು ಅರ್ಜನೆ, ಸವಲತ್ತುಗಳಿಗೇ ಸೀಮಿತಗೊಳಿಸುವ ಸಂಕುಚಿತ ಪ್ರವೃತ್ತಿ. ಅದಕ್ಕಾಗಿಯೇ ಗಾಂಧೀಜಿ 'ಕೈ, ಹೃದಯ, ಮಿದುಳನ್ನು ಆರೋಗ್ಯಯುತವಾಗಿ ಅಣಿಗೊಳಿಸುವುದೇ ಶಿಕ್ಷಣ' ಅಂತ ನಿರ್ವಚಿಸಿದರು. ದೈಹಿಕ ಪರಿಶ್ರಮ ಬೌದ್ಧಿಕ ಬೆಳವಣಿಗೆಗೂ ಪೂರಕ. 'ಗಳಿಕೆಯೊಂದಿಗೆ ಕಲಿಕೆ' ಮೂಲಕ ದೈಹಿಕ ಪರಿಶ್ರಮದ ಮಹತ್ವವನ್ನು ಮಕ್ಕಳಲ್ಲಿ ಜಾಗೃತಗೊಳಿಸಬೇಕು.

ಮಾತೃಭಾಷೆಯ ಮೂಲಕವೇ ಮಕ್ಕಳಿಗೆ ಶಿಕ್ಷಣ ಇರದಿದ್ದರೆ ಅದು ನಿಸ್ಸಂದೇಹವಾಗಿ ಅವರಿಗೆ ಹೊರೆಯೇ ಹೌದು. ಕಲಿಯಬೇಕಾದ್ದು ಭಾಷೆಯನ್ನೋ ವಿಷಯವನ್ನೋ ಎನ್ನುವ ಗೊಂದಲದಲ್ಲಿ ಮಗುವನ್ನು ಸಿಲುಕಿಸಬಾರದು.

ಅಧ್ಯಾಪಕರಲ್ಲಿ ಮಿತಿಮೀರಿದ ಇಂಗ್ಲಿಷ್ ವ್ಯಾಮೋಹವಿದ್ದರೆ ಕನ್ನಡದ ಮಕ್ಕಳಿಗೆ ಏನು ಬೇಕು, ಅವರಿಗೆ ಏನನ್ನು, ಹೇಗೆ ವಿವರಿಸಬೇಕು ಎನ್ನುವುದರ ಸಂಪೂರ್ಣ ಅರಿವಿರುವ ಸಂದರ್ಭಗಳು ಬಹುತೇಕ ವಿರಳವೆನ್ನಿ. ಅಂದಹಾಗೆ ನೊಬೆಲ್ ಪ್ರಶಸ್ತಿ ಪಡೆದ ಅದೆಷ್ಟೋ ಸಾಧಕರಿಗೆ ಇಂಗ್ಲಿಷ್ ತಿಳಿಯದು. ಒಬ್ಬರ ಮಾತೃಭಾಷೆ ಯಾವುದೇ ಕಾರಣಕ್ಕೂ ಎಂತಹದ್ದೇ ಸನ್ನಿವೇಶಕ್ಕೂ ಸಂಪರ್ಕಕ್ಕೆ ಬಲಹೀನವಾಗದು. ಗಾಂಧೀಜಿ ತಮ್ಮ 76ನೇ ಇಳಿವಯಸ್ಸಿನಲ್ಲೂ ಬಂಗಾಲಿ ಕಲಿತಿದ್ದು ಅವರ ಲವಲವಿಕೆಗೆ, ಪರಭಾಷಾ ಸಹಿಷ್ಣುತೆಗೆ ಸಾಕ್ಷಿ.



ಇಸವಿ 1897. ದಕ್ಷಿಣ ಆಫ್ರಿಕಾದ ಡರ್ಬನ್. ಗಾಂಧೀಜಿಗೆ ತಮ್ಮ ಒಂಬತ್ತು ವರ್ಷ ಮತ್ತು ಐದು ವರ್ಷದ ಪುತ್ರರನ್ನು ಹಾಗೂ ತಮ್ಮ ಸಹೋದರಿಯ ಹತ್ತು ವರ್ಷದ ಪುತ್ರನನ್ನು ಅಲ್ಲಿನ ವಸತಿಶಾಲೆಗೆ ಕಳಿಸಲು ಮನಸ್ಸಾಗಲಿಲ್ಲ. ಸಮಯದ ಅಭಾವದ ನಡುವೆಯೂ ಮನೆಯಲ್ಲಿ ತಾವೇ ಬೋಧಿಸಲು ನಿರ್ಧರಿಸುತ್ತಾರೆ. ಆಗಲೇ ಅವರಿಗೆ ದಕ್ಷ ಬೋಧನೆಯೆಂದರೆ ಮಕ್ಕಳ ಸಾಮರ್ಥ್ಯ ಪ್ರಚೋದನೆ ಎಂಬ ತಥ್ಯ ಅನುಭವವಾಗಿದ್ದು.

ಪುಸ್ತಕದಲ್ಲಿ ತಲೆಯೆತ್ತದೆ ತನ್ಮಯರಾದರೆ ವಿದ್ಯಾರ್ಥಿಗಳಲ್ಲಿ ಸತ್ಯ, ಅಹಿಂಸೆ, ಪರೋಪಕಾರದಂತಹ ನೈತಿಕ ಮೌಲ್ಯಗಳು ಮೈದಳೆಯುವುದು ಎಂತು? ಧೈರ್ಯ, ಆತ್ಮವಿಶ್ವಾಸವಿಲ್ಲದ ಕಲಿಕೆಯನ್ನು ಗಾಂಧೀಜಿ ಮೇಣದ ಮೂರ್ತಿಗೆ ಹೋಲಿಸುತ್ತಾರೆ. ಬಿಸಿ ತಾಗಿದರೆ ಮೂರ್ತಿ ಕರಗಿಬಿಡುತ್ತದೆ! ಒಮ್ಮೆ ಕಾಲೇಜು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾಡಿದ ತಮ್ಮ ಭಾಷಣದ ಕೊನೆಯಲ್ಲಿ ಗಾಂಧೀಜಿ ಕಿವಿಮಾತಿದು: 'ನೀವು ಕಲಿತಿದ್ದು ಸುತ್ತಮುತ್ತಲನ್ನು ಪರಿಮಳಯುಕ್ತಗೊಳಿಸಲಿ. ನೀವು ಪ್ರತಿನಿತ್ಯ ನಿಮ್ಮ ಅಷ್ಟು ಸಮಯ ಜನಸೇವೆಗೆ ಮೀಸಲಿಡಿ. ಸದಾ ಸಾಮಾಜಿಕ ಎಚ್ಚರವಿರಲಿ. ಪೊರಕೆ, ಬುಟ್ಟಿ ಹಿಡಿಯಿರಿ. ಈ ಪವಿತ್ರ ಸ್ಥಳದ ಜಾಡಮಾಲಿಗಳಾಗಿ...'

ಕವಿ ಪು.ತಿ.ನ ತಮ್ಮ 'ನೆರಳು' ಕವನದಲ್ಲಿ ಗಾಂಧಿ ಅವರನ್ನು ಬಿಂಬಿಸುವ ಪರಿ ವಿಶಿಷ್ಟವಾಗಿದೆ. ಹಾರುವ ಗರುಡನನ್ನು ಬಣ್ಣಿಸುತ್ತ ಕವಿ ಕೊನೇ ಸಾಲಿನಲ್ಲಿ ಅಚ್ಚರಿ ಮೂಡಿಸುತ್ತಾರೆ: 'ಇದ ನೋಡಿ ನಾನು ನೆನೆವೆನಿಂದು.../ಇಂಥ ನೆಳಲೇನು ಗಾಂಧಿಯೆಂದು!/ ಹರಿವತ್ತ ಹರಿಚಿತ್ತ ಈ ಧೀರ ನಡೆವನತ್ತ//'.

ವಾಚಕರ ವಾಣಿ

ಅನಾಥರಿಗೆ ಪಿಂಡಪ್ರದಾನ: ಶ್ಲಾಘನೀಯ ನಡೆ

ಕೋವಿಡ್‌ನಿಂದ ಮೃತಪಟ್ಟ 1,200 ಅನಾಥ ಶವಗಳ ಸಾಮೂಹಿಕ ಅಸ್ಥಿ ವಿಸರ್ಜನೆಯನ್ನು ಕಂದಾಯ ಸಚಿವರು ಈ ಮೊದಲು ಶಾಸ್ತ್ರೋಕ್ತವಾಗಿ ನೆರವೇರಿಸಿದ್ದರು. ಈಗ ಅವರು ಈ ವ್ಯಕ್ತಿಗಳಿಗೆ ಪಿತೃಪಕ್ಷದ ವೇಳೆ ಪಿಂಡಪ್ರದಾನ ಮಾಡಲು ಮುಂದಾಗಿರುವುದು ಸರ್ವರೂ ಮೆಚ್ಚುವಂತಹ ಮತ್ತು ಸಂತಸಪಡುವಂತಹ ಕಾರ್ಯವಾಗಿದೆ. ಕೋವಿಡ್ ತೀವ್ರವಾಗಿದ್ದ ಸಂದರ್ಭದಲ್ಲಿ ತಮ್ಮ ಕ್ಷೇತ್ರಕ್ಕೆ ಭೇಟಿ ಕೊಟ್ಟು ಸಂದರ್ಭವನ್ನು ಸಮರ್ಪಕವಾಗಿ ನಿಭಾಯಿಸಲು ಮುಂದಾಗದ ಶಾಸಕರಿಗೆ ಮಾದರಿಯಾಗುವಂತಹ ನಡೆ ಇದಾಗಿದೆ.

ರಾ.ಬಾ.ವರದರಾಜನ್, ಬೆಂಗಳೂರು

ದಿಢೀರ್ ಅಧಿಸೂಚನೆ ಸಾಧುವಲ್ಲ

ಸ್ನಾತಕೋತ್ತರ ಪದವಿಯ ಶೈಕ್ಷಣಿಕ ವರ್ಷ ಸಾಮಾನ್ಯವಾಗಿ ಜೂನ್-ಜುಲೈ ತಿಂಗಳಲ್ಲಿ ಕೊನೆಗೊಳ್ಳಬೇಕಿತ್ತು. ಆದರೆ ಕೋವಿಡ್ ಪರಿಣಾಮದಿಂದಾಗಿ, ನಿಗದಿಗೊಂಡ ಪರೀಕ್ಷೆಗಳು ಮುಂದೂಡಲ್ಪಟ್ಟವು. ಇಂತಹ ಸಂದರ್ಭದಲ್ಲಿ, ಪ್ರಥಮ ದರ್ಜೆ ಕಾಲೇಜಿನ ಸಹಾಯಕ ಪ್ರಾಧ್ಯಾಪಕರು ಹಾಗೂ ಪ್ರಾಂಶುಪಾಲರ ನೇಮಕಾತಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಕೆಇಎ) ವೆಬ್‌ಸೈಟ್‌ನಲ್ಲಿ ಏಕಾಏಕಿ ಅಧಿಸೂಚನೆ ಪ್ರಕಟವಾಗಿದೆ. ಇದರಿಂದ, ಸ್ನಾತಕೋತ್ತರ ಪದವಿಯ ಅಂತಿಮ ವರ್ಷದಲ್ಲಿದ್ದು, ಕೆ-ಸೆಟ್ ಪಾಸಾದ ಸಾವಿರಾರು ವಿದ್ಯಾರ್ಥಿಗಳು ಗೊಂದಲದೊಂದಿಗೆ ಆಘಾತಕ್ಕೊಳಗಾಗಿದ್ದಾರೆ. ಹಾಗಾಗಿ ಇಂತಹ ವಿದ್ಯಾರ್ಥಿಗಳಿಗೆ ಸಹಾಯಕ ಪ್ರಾಧ್ಯಾಪಕರ ನೇಮಕಾತಿಗೆ ಅರ್ಜಿ ಹಾಕಲು ಅವಕಾಶ ಮಾಡಿಕೊಡಬೇಕು. ಇಲ್ಲವೇ ರಾಜ್ಯದ ಎಲ್ಲ ವಿಶ್ವವಿದ್ಯಾಲಯಗಳ ಸ್ನಾತಕೋತ್ತರ ಪದವಿಯ ಅಂತಿಮ ವರ್ಷದ ಫಲಿತಾಂಶ ಪ್ರಕಟವಾಗುವವರೆಗೂ ಅಧಿಸೂಚನೆಯನ್ನು ಮುಂದೂಡಿ, ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡಬೇಕು.

ಉಮೇಶಗೌಡ ಹಳೇಮನಿ ಹಲಗೇರಿ, ಧಾರವಾಡ

ಮತಾಂತರಕ್ಕೆ ಕುಮ್ಮಕ್ಕು ಒಳಗಿನದೋ ಹೊರಗಿನದೋ?

ಮತಾಂತರ ನಿಷೇಧ ಕಾಯ್ದೆಯ ಅಗತ್ಯವನ್ನು ಪ್ರತಿಪಾದಿಸಿ ತಾವು ಬರೆದಿದ್ದ ಪತ್ರದಲ್ಲಿನ ಅಂಶಗಳನ್ನು ಆಕ್ಷೇಪಿಸಿದ್ದ ನನ್ನ ಪತ್ರಕ್ಕೆ ಬಿ.ಎಸ್.ಜಯಪ್ರಕಾಶ ನಾರಾಯಣ ಪ್ರತಿಕ್ರಿಯಿಸಿದ್ದಾರೆ (ವಾ.ವಾ., ಸೆ. 25). ಈ ಸಂದರ್ಭದಲ್ಲಿ ಅವರು, ಈ ಚರ್ಚೆಗೆ ಸಂಬಂಧಪಡದ ಗಾಂಧೀಜಿಯವರ ಹೆಸರನ್ನು ಎಳೆದುತಂದು ಅವರ ವಿರುದ್ಧ ಅಸಂಬದ್ಧ ಟೀಕೆಗಳನ್ನು ಮಾಡಿರುವುದು ವಿಷಾದಕರ.

ಗಾಂಧಿ ಬಾಲ್ಯದಲ್ಲೇ ಅಸ್ಪೃಶ್ಯತೆಯ ಅರ್ಥಹೀನತೆಯನ್ನು ಹೇಗೆ ಮನಗಂಡಿದ್ದರು ಎಂಬುದು ಅವರ ಆತ್ಮಚರಿತ್ರೆಯಲ್ಲೇ ದಾಖಲಾಗಿದೆ. 1898ರಷ್ಟು ಹಿಂದೆಯೇ ದಕ್ಷಿಣ ಆಫ್ರಿಕಾದಲ್ಲಿ ಅಸ್ಪೃಶ್ಯತೆ ಆಚರಣೆಯ ಕಾರಣದಿಂದ ತಮ್ಮ ಪತ್ನಿಯನ್ನೇ ಮನೆಯಿಂದ ಆಚೆ ನೂಕಲು ಹೊರಡುವ ಆವೇಶಕ್ಕೊಳಗಾಗುವಷ್ಟು ಅಸ್ಪೃಶ್ಯತೆ ನಿವಾರಣೆಗೆ ಬದ್ಧರಾದವರನ್ನು, ಅವರು ಹಿಂದೂ ಸಮಾಜದ ಈ ಪಿಡುಗಿನ ಬಗ್ಗೆ ದೀರ್ಘ ಕಾಲ ಸ್ಪಷ್ಟತೆಯನ್ನು ಹೊಂದಿರಲಿಲ್ಲ ಎಂದು ಹೇಳುವುದನ್ನು ಏನೆಂದು ಕರೆಯಬೇಕು? ಹಾಗೇ, ಅದು ಅಂತರ್ಜಾತಿ ವಿವಾಹವಾಗದ ಹೊರತು ಅದಕ್ಕೆ ತಮ್ಮ ಆಶ್ರಮದಲ್ಲಿ ಜಾಗವಿಲ್ಲವೆಂದೂ ಅಂತಹ ವಿವಾಹಗಳಲ್ಲಿ ವಧು-ವರರಲ್ಲಿ ಒಬ್ಬರು ಅಸ್ಪೃಶ್ಯರಾಗದ ಹೊರತು ಆ ದಂಪತಿಗೆ ತಮ್ಮ ವೈಯಕ್ತಿಕ ಆಶೀರ್ವಾದ ಲಭಿಸದು ಎಂದೂ ಬಹಿರಂಗವಾಗಿ ಘೋಷಿಸಿದ ವ್ಯಕ್ತಿಯನ್ನು, ಅವರ ಯಾವುದೋ ಕಾಲದ ನಂಬಿಕೆಯನ್ನು ಉಲ್ಲೇಖಿಸುತ್ತಾ ಅವರು ವರ್ಣಾಶ್ರಮ ಧರ್ಮದ ಪ್ರತಿಪಾದಕರಾಗಿದ್ದರು ಎಂದು ಪ್ರಚಾರ ಮಾಡುವುದನ್ನು ಏನೆಂದು ಕರೆಯಬೇಕು?

ಗಾಂಧಿಯವರು ಇಂಗ್ಲಿಷ್ ಶಿಕ್ಷಣ, ರೈಲು, ಅಂಚೆ, ಆಧುನಿಕ ಆಸ್ಪತ್ರೆಯ ವಿರುದ್ಧವಿದ್ದರು ಎಂದು ಬರೆದಿರುವುದನ್ನು ಗಾಂಧಿ ಕುರಿತ ಅರೆ ಸಾಕ್ಷರತೆ ಎನ್ನಬಹುದು. ಹಿಂದೂಸ್ತಾನದ ಸ್ವಾತಂತ್ರ್ಯಹರಣಕ್ಕೆ ಕಾರಣವೆಂದು ಗಾಂಧೀಜಿ ವಿಶ್ಲೇಷಿಸಿದ್ದ, ಪಶ್ಚಿಮದ ಆಧುನಿಕ ನಾಗರಿಕತೆಯ ಸಾಧನಗಳಾದ ಇವುಗಳಿಗೆ 'ನಿಮ್ಮ ಬೇರುಗಳು ಕಳಚಿಹೋಗುವಷ್ಟು ಮರುಳಾಗದಿರಿ' ಎಂದು ಅವರು ನೀಡಿದ್ದ ಎಚ್ಚರಿಕೆಯ ಕ್ರಮ ಅದಾಗಿತ್ತಷ್ಟೆ. ಹೌದು, ಗಾಂಧಿ ಗೋಮಾಂಸ ಸೇವನೆಯ ಪರವಾಗಿರಲಿಲ್ಲ. ಆದರೆ ತಮ್ಮ ಈ ನಂಬಿಕೆಯನ್ನು ಇತರರ ಮೇಲೆ ಹಿಂಸೆಯ ಮೂಲಕ ಹೇರುವುದರ ಪರವಾಗಿಯೂ ಇರಲಿಲ್ಲ. ಅವರು ಗೋ ರಕ್ಷಣೆಗಾಗಿ ಮನುಷ್ಯರನ್ನು ಕೊಲ್ಲುವುದರ ವಿರುದ್ಧವಿದ್ದರು.

ಇನ್ನು ಸಾವರ್ಕರ್ ಅವರು ಅಂಡಮಾನ್ ಜೈಲಿನಲ್ಲಿನ ಮುಸ್ಲಿಂ ಸಿಬ್ಬಂದಿಯ ಕಿರುಕುಳದಿಂದಾಗಿ ಮುಸ್ಲಿಂ ವಿರೋಧಿಯಾದರೆಂದು ಹೇಳುವುದು, ಒಬ್ಬನದ್ದೋ ಅಥವಾ ಹಲವರದ್ದೋ ಕಿರುಕುಳದಿಂದ ಒಂದು ಇಡೀ ಧರ್ಮದವರ ವಿರುದ್ಧ ಒಂದು ಸಿದ್ಧಾಂತವನ್ನು ಮಂಡಿಸಿ, ಅವರ ವಿರುದ್ಧ ಬರ್ಬರ ಹಿಂಸಾಚಾರವನ್ನು ಪ್ರಚೋದಿಸುವ ವ್ಯಕ್ತಿಯ ಬಗ್ಗೆ ಆಲೋಚಿಸುವಂತೆ ಮಾಡುತ್ತದೆ. ಈ ದೃಷ್ಟಿಯಿಂದ, 1939ರಲ್ಲಿ ಭಾರತವನ್ನು ಬ್ರಿಟಿಷ್ ಪ್ರಭುತ್ವವು ಎರಡನೇ ಮಹಾಯುದ್ಧದಲ್ಲಿ ಭಾಗವಹಿಸುವಂತೆ ಮಾಡಿದ ತೀರ್ಮಾನದ ವಿರುದ್ಧ ಪ್ರತಿಭಟಿಸಲು, ಕಾಂಗ್ರೆಸ್ ತಾನು ಅಧಿಕಾರದಲ್ಲಿದ್ದ ಪ್ರಾಂತೀಯ ಸರ್ಕಾರಗಳಿಗೆ ರಾಜೀನಾಮೆ ನೀಡಿದಾಗ, ಸಾವರ್ಕರ್ ಅವರ ಹಿಂದೂ ಮಹಾಸಭಾ ಆ ಹೊತ್ತಿಗಾಗಲೇ ಪ್ರತ್ಯೇಕ ರಾಷ್ಟ್ರದ ಸೊಲ್ಲೆತ್ತಿದ್ದ ಜಿನ್ನಾರ ಮುಸ್ಲಿಂ ಲೀಗ್ ಜೊತೆ ಸೇರಿ ಎರಡು ಪ್ರಾಂತ್ಯಗಳಲ್ಲಿ ಸರ್ಕಾರ ರಚಿಸಿ, ಬ್ರಿಟಿಷ್ ಪ್ರಭುತ್ವಕ್ಕೆ ತನ್ನ ನಿಷ್ಠೆ ಪ್ರದರ್ಶಿಸಿದ್ದನ್ನು ಅರ್ಥ ಮಾಡಿಕೊಳ್ಳಲು ಕಷ್ಟವೇನೂ ಆಗದು.

ಇದೆಲ್ಲ ಅಂಬೇಡ್ಕರ್ ಅವರೂ ಸಕ್ರಿಯವಾಗಿ ಭಾಗವಹಿಸಿದ್ದ ಗಾಂಧಿ ವಿರೋಧಿ ರಾಜಕಾರಣದ ಭಾಗವಾಗಿತ್ತು. ಹಾಗಿರುವಾಗ, ಹತ್ತು ಜನ ಸಾವರ್ಕರ್‌ಗಳು ಇದ್ದರೆ ಅಸ್ಪೃಶ್ಯತೆ ಸಂಪೂರ್ಣ ನಾಶವಾಗುವುದೆಂದು ಅಂಬೇಡ್ಕರ್ ಹೇಳಿದ್ದರಲ್ಲಿ ಆಶ್ಚರ್ಯವೇನಿರದು. ಆದರೆ ಭಾರತದ ದುರದೃಷ್ಟವೆಂದರೆ ಸಾವರ್ಕರ್ ಮಾರ್ಗದ ಹಿಂದೂವಾದಿ ಸಂಘಟನೆಗಳು ಬಾಬಾಸಾಹೇಬರು ಈ ಮಾತನ್ನಾಡಿದ ನಂತರದ ಎಂಟು ದಶಕಗಳಲ್ಲಿ ದೇಶದಲ್ಲಿ ಭದ್ರ ಸರ್ಕಾರ ರಚಿಸುವಷ್ಟು ಬೆಳೆದಿದ್ದರೂ ಹತ್ತು ಜನ ಸಾವರ್ಕರರು ತಯಾರಾಗಿ ಅಸ್ಪೃಶ್ಯತೆ ಸಂಪೂರ್ಣ ನಿವಾರಣೆ ಮಾಡಲು ಸಾಧ್ಯವಾಗಿಲ್ಲವಲ್ಲ? ಪ್ರತಿದಿನವೂ ದೇಶದ ಒಂದಲ್ಲ ಒಂದು ಮೂಲೆಯಿಂದ ಅಸ್ಪೃಶ್ಯರ ಮೇಲಿನ ಒಂದಲ್ಲ ಒಂದು ರೀತಿಯ ದೌರ್ಜನ್ಯಗಳು ವರದಿಯಾಗುತ್ತಲೇ ಇರುತ್ತವಲ್ಲ? ಮೊನ್ನೆ ತಾನೇ ನಮ್ಮ ಕರ್ನಾಟಕದ ಎರಡು ಹಳ್ಳಿಗಳಿಂದ ಕ್ರಮವಾಗಿ ಒಬ್ಬ ಯುವಕ ಪೂಜೆ ಮಾಡಲೆಂದು ಮತ್ತು ಒಂದು ಮಗು ತನ್ನ ಹುಟ್ಟುಹಬ್ಬದ ಸಂತೋಷದಲ್ಲಿ ದೇವರ ದರ್ಶನಕ್ಕಾಗಿ ದೇವಾಲಯ ಪ್ರವೇಶಿಸಿತೆಂದು, ಅವರಿಬ್ಬರೂ ಅಸ್ಪೃಶ್ಯ ಜಾತಿಗೆ ಸೇರಿದ್ದಕ್ಕಾಗಿ ಊರುಗಳೇ ಒಂದಾಗಿ ದಂಡ ವಿಧಿಸಿದ ವರದಿಗಳು ಇವೆಯಲ್ಲ? ಹಾಗಾದರೆ ಮತಾಂತರಕ್ಕೆ ಕುಮ್ಮಕ್ಕು ಒಳಗಿನಿಂದ ಇದೆಯೋ ಹೊರಗಿನಿಂದ ಇದೆಯೋ?!

ಡಿ.ಎಸ್.ನಾಗಭೂಷಣ, ಶಿವಮೊಗ್ಗ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕರ್ನಾಟಕದಲ್ಲಿ ಮತಾಂತರ ತಡೆ ಕಾಯ್ದೆಯ ಅಗತ್ಯ ಇದೆಯೇ?

ಮತಾಂತರವು ಬಿಡುಗಡೆಯ ದಾರಿಯಲ್ಲವೇ?



ಧರ್ಮ ಎನ್ನುವುದು ಧರ್ಮವಾಗುವುದು ಯಾವಾಗೆಂದರೆ ಅದು ಎಲ್ಲರನ್ನೂ ಒಳಗೊಂಡಾಗ. ಧರ್ಮ ಎನ್ನುವುದು ಅಧರ್ಮವಾಗುವುದು ಯಾವಾಗೆಂದರೆ ಅದು ಭೇದಭಾವದಲ್ಲಿ ಒಡೆದಾಳಿದಾಗ. ಮತಾಂತರವೆಂಬುದು ಒಂದು ಸಂಘಟನೆಯಿಂದ ಮತ್ತೊಂದು ಸಂಘಟನೆಗೆ ಬಲಿಹೋಗುವುದಲ್ಲ. ನೋವಿನ ಯಾತನೆಯಿಂದ ಸುಖದ ಸಂತೋಷದ ಕಡೆಗೆ ಚಲಿಸುವುದು

ಪ್ರಜಾವಾಣಿ ಚರ್ಚೆ

● ಎಸ್. ಜಿ. ಸಿದ್ಧರಾಮಯ್ಯ

ವಿಚಾರ ಮಾಡಲೊಲ್ಲದವನು ಮತಾಂಧ
ವಿಚಾರ ಮಾಡಲರಿಯದವನು ಮೂರ್ಖ
ವಿಚಾರ ಮಾಡಲಂಜುವವನು ಗುಲಾಮ

ತತ್ವಜ್ಞಾನಿ ಎಚ್. ಡ್ರಮಂಡ್ ಅವರ ಈ ಮಾತು ಸಾರ್ವಕಾಲಿಕ ಸತ್ಯ. ಎಲ್ಲಿ ಸ್ವತಂತ್ರವಾದ ವಿಚಾರಶೀಲತೆ ಇರುವುದಿಲ್ಲವೋ ಅಲ್ಲಿ ಈ ರೀತಿಯ ಮೂರು ವರ್ಗದ ಜನರಿಂದ ಸಾಮಾಜಿಕ ವಾತಾವರಣ ಹಾಳಾಗಿರುತ್ತದೆ. ಇವರ ಬಲ ಅಧಿಕವಾಗಿರುವಾಗ ಅದೇ ಆಳುವವರಿಗೆ ನಿರ್ದೇಶನ ನೀಡುವ ಸೂತ್ರವಾಗಿರುತ್ತದೆ. ರಾಜ ಮಹಾರಾಜರುಗಳ ಕಾಲದಲ್ಲಿ ಆದದ್ದೂ ಇದೇ. ಆದರೆ ಇದು ಪ್ರಜಾಪ್ರಭುತ್ವದ ಕಾಲ. ಪ್ರಶ್ನೆ ಮಾಡದೇ ಯಾವುದನ್ನೂ ಒಪ್ಪಿಕೊಳ್ಳದಿರುವ ಕಾಲ. ರಾಷ್ಟ್ರಕ್ಕೆ ಸಂವಿಧಾನವೇ ಬದುಕಿನ ಧರ್ಮ. ಇಲ್ಲಿ ವ್ಯಕ್ತಿ ಸ್ವಾತಂತ್ರ್ಯ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯಗಳನ್ನು ಕೇವಲ ಹಕ್ಕಾಗಿ ಅಲ್ಲ, ಬಾಧ್ಯತೆಯ ಕರ್ತವ್ಯವಾಗಿ ನೀಡಲಾಗಿದೆ. ಹಕ್ಕು ಮತ್ತು ಕರ್ತವ್ಯಗಳು ಸ್ವಾತಂತ್ರ್ಯವೆಂಬ ಒಂದು ನಾಣ್ಯದ ಎರಡು ಮುಖಗಳು; ಅವು ಪರಸ್ಪರ ಪೂರಕವಾಗಿ ಇರುವಂಥವು.

ವ್ಯಕ್ತಿ ಸ್ವಾತಂತ್ರ್ಯದ ಮೇಲೆ ಬರೆ ಎಳೆಯುವ ರೀತಿಯಲ್ಲಿ ಮತಾಂತರ ನಿಷೇಧ ಕಾಯ್ದೆಯನ್ನು ಕರ್ನಾಟಕ ಸರ್ಕಾರ ಜಾರಿಗೆ ತರಲು ಹೊರಟಿದೆ. ಆ ಮುನ್ನ ಸರ್ಕಾರ ಈ ದೇಶದ ಚಾರಿತ್ರಿಕ ಸತ್ಯಗಳನ್ನು ಅವಲೋಕಿಸುತ್ತಾ ವರ್ತಮಾನದ ಉರಿಯುವ ಸಂಗತಿಗಳಿಗೆ ಆತ್ಮಾವಲೋಕನ ಮಾಡಿಕೊಂಡು ಉತ್ತರ ಕೊಟ್ಟುಕೊಳ್ಳಬೇಕಾಗಿದೆ.

‘ಭಾರತದ ಹಿಂದೂ ಧರ್ಮವು ಮೂಲಭೂತವಾಗಿ ಪುರಾತನವಾದದ್ದು. ಕಾಲ ಮತ್ತು ನಾಗರಿಕತೆಯಲ್ಲಿ ಪ್ರಗತಿಯಾಗಿದ್ದೂ ಅದರ ಪ್ರಾಚೀನ ನಿಯಮಗಳು ತಮ್ಮೆಲ್ಲ ಆದಿಮ ಸ್ಥಿತಿಯ ಕ್ರೌರ್ಯದಲ್ಲಿ ಇಂದಿಗೂ ಜಾರಿಯಲ್ಲಿವೆ’ ಎಂದು ಅಂಬೇಡ್ಕರ್ ಅವರೇ ಭಾರತದ ಜಾತಿವ್ಯವಸ್ಥೆಯ ಬಗ್ಗೆ ಮಾತನಾಡಿದ್ದಾರೆ. ಶ್ರೇಣೀಕೃತ ವ್ಯವಸ್ಥೆಯ ಹಿಂದೂ ಧರ್ಮದಲ್ಲಿ ದಲಿತರನ್ನು, ತಳಸಮುದಾಯಗಳನ್ನು, ಅಲ್ಪಸಂಖ್ಯಾತರನ್ನು ನಡೆಸಿಕೊಳ್ಳುತ್ತಿರುವ ರೀತಿ ಈಗಲೂ ತೀರ ಅಮಾನವೀಯವಾಗಿದೆ. ದೇವಾಲಯಗಳಿಗೆ ದಲಿತರಿಗೆ ಪ್ರವೇಶವಿಲ್ಲ. ಹಳ್ಳಿಗಳ ಕಡೆ ಈಗಲೂ ದಲಿತರಿಗೆ ಕೆರೆಬಾವಿಗಳ ನೀರನ್ನು ಮುಟ್ಟಲೂ ಬಿಡುತ್ತಿಲ್ಲ. ಹೋಟೆಲ್‌ಗಳಲ್ಲಿ ತಟ್ಟೆ ಲೋಟಗಳನ್ನು ಪ್ರತ್ಯೇಕವಾಗಿ ಇಡಲಾಗಿದೆ. ದಲಿತರಿಗೆ ಕ್ಷೌರ ಮಾಡದಿರುವ ಸ್ಥಿತಿಯಿದೆ. ದಲಿತ ಮಹಿಳೆಯರ ಮೇಲೆ ಅತ್ಯಾಚಾರ ಪ್ರಕರಣಗಳು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿವೆ. ದಲಿತರ ಮೇಲಿನ ದಬ್ಬಾಳಿಕೆ, ಕ್ರೌರ್ಯಗಳು ದಿನದಿಂದ ದಿನಕ್ಕೆ ಉಲ್ಬಣಗೊಳ್ಳುತ್ತಿವೆ. ಹೀಗಿದ್ದೂ ನಾವು ನಮ್ಮ ಸನಾತನ ಹಿಂದೂ ಧರ್ಮದ ಬಗ್ಗೆ ‘ಜಗತ್ತಿಗೆ ಶಾಂತಿಯನ್ನು ಬೋಧಿಸಿದ ಧರ್ಮ, ಸಹನಾವವತು ಸಹನೌಭುನಕ್ತು, ಹಿಂದೂ ಎಂದೆಂದೂ ಒಂದು’– ಈ ಇತ್ಯಾದಿ ತಾತ್ವಿಕ ಆದರ್ಶಗಳ ಪ್ರತಿಪಾದನೆಯನ್ನು ಮಾಡುತ್ತೇವೆ. ಇದನ್ನು ಕೇಳಿದಾಗ ‘ತನ್ನೊಳಗೆ ಭವ್ಯತೆಯೇ ಇರದ ಭವ್ಯವಾದ ಹೆಸರು’ ಎಂದ ಮ್ಯಾಥ್ಯೂ ಅರ್ನಾಲ್ಡ್ ಅವರ ಮಾತು ನೆನಪಾಗುತ್ತದೆ. ಹಿಂದೂ ಧರ್ಮ ಅಸಮಾನತೆಯ ಆಗರವಾಗಿದೆ. ಮೇಲು ಕೀಳಿನ ಶ್ರೇಷ್ಠ–ಕನಿಷ್ಠದ ತಾರತಮ್ಯದ ಬೀಡಾಗಿದೆ. ಈ ಕಾರಣದಿಂದಲೂ ಹಿಂದೂ ಧರ್ಮದ ವಿರುದ್ಧವಾಗಿ ಈ ದೇಶದಲ್ಲಿ ಹಲವು ಪರ್ಯಾಯ ಧರ್ಮಗಳು ಹುಟ್ಟಿವೆ. ಭಗವಾನ್ ಬುದ್ಧ, ಮಹಾವೀರ, ಬಸವಣ್ಣ, ಗುರುನಾನಕ್ ಇವರು ಸಮಾನತೆಯ ಆಶಯದೊಂದಿಗೆ ಪರ್ಯಾಯ ಧರ್ಮಗಳ ಹುಟ್ಟು, ಬೆಳವಣಿಗೆಗೆ ಕಾರಣರಾಗಿದ್ದಾರೆ. ಇಂಥ ಪರ್ಯಾಯ ಧರ್ಮಗಳಿಗೆ ಕೋಟ್ಯಂತರ ಹಿಂದೂಗಳು ಮತಾಂತರ ಹೊಂದಿದ್ದು ಚಾರಿತ್ರಿಕ ಸತ್ಯ.

ಬಸವಣ್ಣನವರು ತಾವು ಹುಟ್ಟಿದ ಧರ್ಮ ಮೂಲವನ್ನು ಕುರಿತು ‘ಉತ್ತಮ ಕುಲದಲ್ಲಿ ಹುಟ್ಟಿದೆನೆಂಬ ಕಷ್ಟದ ಹೊರೆಯ ಹೊರಿಸದಿರಯ್ಯ’ ಎಂದು ಆತ್ಮಾವಲೋಕನ ಮಾಡಿಕೊಂಡರು. ಕರ್ಮಲತೆಯಂತಿದ್ದ ಜನಿವಾರವನ್ನು ಕಿತ್ತು ಬಿಸುಟು ಹೊರಬಂದರು. ಅಸ್ಪೃಶ್ಯತೆ ಮೂಲದಲ್ಲಿ ತಮ್ಮ ಹುಟ್ಟನ್ನು ಅಪವರ್ಣೀಕರಣದ ಮೂಲಕ ಪವಿತ್ರೀಕರಿಸಿಕೊಂಡರು. ಇವರ ಪ್ರಭಾವಕ್ಕೆ ಒಳಗಾದಂತೆ ನೀಚರೆನಿಸಿಕೊಂಡಿದ್ದ ಹಲವು ಜಾತಿಗಳ ಮೂಲದ ಜನರು ಲಿಂಗಾಯತರಾದರು. ಹೀಗೆ ಬಸವಣ್ಣನಿಂದ ಲಿಂಗ ದೀಕ್ಷೆ ಪಡೆದ ಅಸ್ಪೃಶ್ಯ ಡೋಹರ ಕಕ್ಕಯ್ಯನ ಮಾತುಗಳು ಇಲ್ಲಿ ಮನನೀಯವಾಗಿವೆ:

ಎನ್ನ ಕಷ್ಟಕುಲದಲ್ಲಿ ಹುಟ್ಟಿದೆನೆಂಬ
ಕರ್ಮವ ಕಳೆದು
ಮುಟ್ಟಿ ಪಾವನವ ಮಾಡಿ ಕೊಟ್ಟನಯ್ಯಾ
ಎನ್ನ ಕರಸ್ಥಲಕ್ಕೆ ಲಿಂಗವ
ಆ ಲಿಂಗ ಬಂದು ಸೋಕಲೊಡನೆ ಎನ್ನ
ಸರ್ವಾಂಗದ ಅವಲೋಹವಳಿಯಿತ್ತಯ್ಯಾ

ಎಂದು ನರಕದಿಂದ ಬಿಡುಗಡೆ ಹೊಂದಿದ ಭಾವದಲ್ಲಿ ಧನ್ಯತೆಯ ಮಾತನಾಡಿದ್ದಾನೆ. ಹೀಗೆ ಸನಾತನ ಕರ್ಮಸಿದ್ಧಾಂತದ ಕೂಪದಿಂದ ಬಿಡುಗಡೆ ಹೊಂದಿ ಪರ್ಯಾಯ ಧರ್ಮಗಳ ಕಡೆ ಮತಾಂತರ ಹೊಂದಿದವರ ದೊಡ್ಡ ಚರಿತ್ರೆಯೇ ಈ ದೇಶದ ಚರಿತ್ರೆಯಾಗಿದೆ.

ಮತಾಂತರದ ಬಗ್ಗೆ ವಿಶ್ವಸಂಸ್ಥೆಯ ವೇದಿಕೆಯಲ್ಲಿ ಎಸ್.ಎನ್. ಗೋಯೆಂಕಾ ಅವರು ಹೇಳಿರುವ ಮಾತುಗಳು ಇಲ್ಲಿ ಉಲ್ಲೇಖನೀಯ: ‘ಧರ್ಮ ಎನ್ನುವುದು ಧರ್ಮವಾಗುವುದು ಯಾವಾಗೆಂದರೆ ಅದು ಎಲ್ಲರನ್ನೂ ಒಳಗೊಂಡಾಗ. ಧರ್ಮ ಎನ್ನುವುದು ಅಧರ್ಮವಾಗುವುದು ಯಾವಾಗೆಂದರೆ ಅದು ಭೇದಭಾವದಲ್ಲಿ ಒಡೆದಾಳಿದಾಗ. ಮತಾಂತರವೆಂಬುದು ಒಂದು ಸಂಘಟನೆಯಿಂದ ಮತ್ತೊಂದು ಸಂಘಟನೆಗೆ ಬಲಿಹೋಗುವುದಲ್ಲ. ನೋವಿನ ಯಾತನೆಯಿಂದ ಸುಖದ ಸಂತೋಷದ ಕಡೆಗೆ ಚಲಿಸುವುದು. ಅವಮಾನದ ಬಂಧನದಿಂದ ಗೌರವದ ಬಿಡುಗಡೆಯ ಕಡೆಗೆ ಪಯಣಿಸುವುದು. ಕ್ರೌರ್ಯದ ನರಕದಿಂದ ಸಮಾನತೆಯ ಸ್ವರ್ಗದ ಕಡೆಗೆ ನಡೆಯುವುದು. ಇಂಥ ಮತಾಂತರ ಇಂದಿನ ಅಗತ್ಯವಾಗಿದೆ. ನಾನು ಮತಾಂತರದ ಪರವಾಗಿ ಇದ್ದೇನೆ; ಮತಾಂತರದ ವಿರೋಧಿಯಾಗಿ ಅಲ್ಲ’.

ಈ ಎಲ್ಲ ಕಾರಣಗಳಿಂದ ಮತಾಂತರವೆಂಬುದು ಜಾತಿವ್ಯವಸ್ಥೆಯ ಅವಮಾನ, ಹಿಂಸೆ, ಕ್ರೌರ್ಯ, ದಬ್ಬಾಳಿಕೆಗಳಲ್ಲಿ ನರಳುತ್ತಿರುವ ಸಮುದಾಯಗಳ ಜನರಿಗೆ ಸಂವಿಧಾನದತ್ತ ಹಕ್ಕು. ಆದ್ದರಿಂದಲೇ ತಮ್ಮ ಬಾಳ ಕೊನೆ ದಿನಗಳಲ್ಲಿ ಅಂಬೇಡ್ಕರ್ ಅವರು ‘ನಾನು ಹಿಂದೂವಾಗಿ ಸಾಯಲಾರೆ’ ಎಂದು ಬೌದ್ಧಧರ್ಮ ಸ್ವೀಕರಿಸಿದರು. ಅವರನ್ನು ಅನುಸರಿಸಿದಂತೆ ಲಕ್ಷಾಂತರ ಜನ ಬೌದ್ಧಧರ್ಮಕ್ಕೆ ಮತಾಂತರವಾದರು.

ಡಾ. ಬಿ. ಆರ್. ಅಂಬೇಡ್ಕರ್ ಹಾಗೂ ಎಸ್. ಎನ್. ಗೋಯೆಂಕಾ ಅಂಥ ಮೇಧಾವಿಗಳು ಮತಾಂತರದ ಪರವಾಗಿ ಮಾತನಾಡುವುದರ ಹಿಂದೆ ದೇಶದ ಅವಮಾನಿತರ ನೋವಿನ ಚರಿತ್ರೆಯೇ ಇದೆ. ಸರ್ಕಾರ ಕಾನೂನು ಕಟ್ಟಳೆಗಳ ರಕ್ಷಣೆಯನ್ನು ಬಳಸಿ ಹಿಂದೂ ಧರ್ಮದ ತಾರತಮ್ಯ ನೀತಿಯನ್ನು ಬದಲಿಸಲು ಸಾಧ್ಯವಾಗಿದೆಯೇ? ಹೋಗಲಿ ಶಿಕ್ಷಣದ ಮುಖೇನವಾದರೂ ಈ ಜಾತಿ ನರಕದಿಂದ ಸಮಾಜವನ್ನು ಮುಕ್ತಗೊಳಿಸಲು ಸಾಧ್ಯವಾಗಿದೆಯೇ? ಹೀಗಿರುವಾಗ ಮತಾಂತರ ನಿಷೇಧ ಕಾಯ್ದೆಯಿಂದ ನೊಂದವರ ಹಕ್ಕುಗಳನ್ನು ಕಸಿದುಕೊಂಡಂತಾಗುವುದಿಲ್ಲವೇ? ಸರ್ಕಾರ ಆತ್ಮಾವಲೋಕನದಲ್ಲಿ ಉತ್ತರ ಕಂಡುಕೊಳ್ಳಲಿ. ಮತಾಂತರ ಕಾಯ್ದೆ ಎಂಬುದು ಅಂತರ ಜಾತೀಯ ವಿವಾಹಗಳಿಗೆ ಮಾರಕವಲ್ಲವೇ? ಜಾತಿ–ಧರ್ಮಗಳ ನಡುವಿನ ವೈಷಮ್ಯಗಳು ಕಡಿಮೆಯಾಗಲು ತರತಮಗಳು ನಿವಾರಣೆಯಾಗಲು ಅಂತರ ಜಾತೀಯ ಅಂತರ ಧರ್ಮೀಯ ವಿವಾಹಗಳು ಅನಿವಾರ್ಯವಲ್ಲವೇ? ಮೂಲಭೂತವಾದಿಗಳ ಮನಸ್ಸು ಪರಿವರ್ತನೆಯಾಗದೇ ಯಾವ ಕಾನೂನು ಏನೂ ಮಾಡಲಾಗದು. ಕಾನೂನುಗಳು ದುರ್ಬಳಕೆಗೆ ಬಲಿಹೋಗುವುದು ನಡೆದೇ ಇದೆ.

ಲೇಖಕ: ಚಿಂತಕ, ಸಾಹಿತಿ



ಸಚ್ಚಿದಾನಂದ ಸತ್ಯಸಂದೇಶ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ

ಅಹಿಂಸೆ: ಮಾನವಧರ್ಮ

ಹಿಂಸೆ ಮತ್ತು ಶೋಷಣೆ ಮಾನವನ ಕ್ರೂರ ಮನಃಸ್ಥಿತಿಯ ಎರಡು ಮುಖಗಳು. ಇವೆರಡು ಭಿನ್ನವಾಗಿ ಕಂಡರೂ, ಅವುಗಳ ಭಾವ ಒಂದೇ. ಅದು ಅಮಾನುಷತೆ. ಮಾನವ ಒಂದು ಪ್ರಾಣಿಪ್ರಭೇದವಾದರೂ, ಆತ ಪ್ರಾಣಿಗಳಿಗಿಂತ ಭಿನ್ನ ನೆಲೆಯಲ್ಲಿ ಕಂಡು ಬರಲು ಕಾರಣ, ಆತನ ಗುಣಸ್ವಭಾವ. ಮನುಷ್ಯನ ಗುಣಧರ್ಮದಿಂದಲೇ ಪ್ರಾಣಿಗುಂಪಿನಿಂದ ಹೊರಗಿದ್ದಾನೆ. ಮಾನವ ತನ್ನ ಸದ್ಗುಣ ಕಳೆದುಕೊಂಡಾಗ ಆತ ಪ್ರಾಣಿಗುಂಪಿನಲ್ಲೇ ಗುರುತಿಸಲ್ಪಡುತ್ತಾನೆ. ಈ ಹಿನ್ನೆಲೆಯಲ್ಲಿ ಮಾನವರು ತಮ್ಮ ಮನುಷ್ಯತನ ಕಾಪಾಡಿಕೊಳ್ಳಲು ಗುಣಮೌಲ್ಯಗಳನ್ನು ನಿತ್ಯ ಉನ್ನತೀಕರಿಸಿಕೊಳ್ಳುತ್ತಿರಬೇಕು. ಬಹುಮುಖ್ಯವಾಗಿ ಮನುಷ್ಯನಲ್ಲಿ ಆಗಾಗ ಕಾಣಿಸಿಕೊಳ್ಳುವ ತನ್ನ ಮೂಲ ಪ್ರಾಣಿಸ್ವಭಾವವಾದ ಕ್ರೌರ್ಯವನ್ನು ಹತ್ತಿಕ್ಕಿ ಮಾನವರಾಗಿ ಉಳಿಯಲು ಪ್ರಯತ್ನಿಸಬೇಕು. ಮಾನವರಲ್ಲಿ ಪ್ರಾಣಿಪ್ರವೃತ್ತಿ ಬೆಳೆಯದಂತೆ, ಅವರಲ್ಲಿ ಸದ್ಗುಣ ಮೂಡಿಸುವ ಸದುದ್ದೇಶದಿಂದ ಸ್ಥಾಪಿತವಾದ ಸನ್ಮಾರ್ಗವೇ ಧರ್ಮ.

ಧರ್ಮದ ಮೂಲ ಉದ್ದೇಶವೇ ಮಾನವನಲ್ಲಿ ಹುಟ್ಟುವ ಹಿಂಸಾಪ್ರವೃತ್ತಿಯನ್ನು ನಿಗ್ರಹಿಸುವುದು. ಅಂದರೆ, ಅಹಿಂಸೆಯೇ ಮಾನವ ಧರ್ಮ. ಪರಪೀಡನೆಯ ಕುಕೃತ್ಯ ಮೃಗಕ್ಕೆ ಸಮನಾಗುವುದರಿಂದ, ಮಾನವರು ಅಹಿಂಸಾಮಾರ್ಗದಲ್ಲಿ ನಡೆಯಬೇಕು. ದುರಾದೃಷ್ಟವಶಾತ್, ಇಂದು ಮಾನವರ ಸದ್ವರ್ತನೆಗೆ ಹುಟ್ಟಿಕೊಂಡ ಧರ್ಮದಿಂದಲೇ ಹಿಂಸೆಯ ಪರಾಕಾಷ್ಠೆ ಮೆರೆಯುತ್ತಿದೆ. ಇದಕ್ಕೆ ಕಾರಣ ಮಾನವರಲ್ಲಿ ಧರ್ಮದ ಬಗೆಗಿನ ಅಜ್ಞಾನ. ಪ್ರಾಣಿ ಮತ್ತು ಮಾನವರನ್ನು ಪ್ರತ್ಯೇಕವಾಗಿಸುವುದೇ ಜ್ಞಾನ. ಪ್ರಾಣಿಗಳಲ್ಲಿ ಬುದ್ಧಿ ಕಡಿಮೆ ಇರುವುದರಿಂದ ಕ್ರೂರ ಮನಃಸ್ಥಿತಿ ಹೊಂದಿರುತ್ತವೆ. ಮನುಷ್ಯನ ಗುಣಾವಗುಣಗಳೂ ಸಹ ನಿಷ್ಕರ್ಷೆಯಾಗುವುದು ಅವನ ಬುದ್ಧಿಯಿಂದಲೇ. ಬುದ್ಧಿ ಕಡಿಮೆ ಇದ್ದವರಲ್ಲಿ ಹಿಂಸಾಪ್ರವೃತ್ತಿ ಹೆಚ್ಚು. ಬುದ್ಧಿ ಹೆಚ್ಚಿರುವ ಮಾನವರಲ್ಲಿ ಹಿಂಸಾಗುಣಗಳು ಕಾಣುವುದಿಲ್ಲ. ಬುದ್ಧಿ ಇಲ್ಲದ ಜನ ಮಾತ್ರ ಮತ್ತೊಬ್ಬರನ್ನು ಶೋಷಿಸುವ ಮತ್ತು ಹಿಂಸಿಸುವ ದುರ್ಗುಣವನ್ನು ಬೆಳೆಸಿಕೊಂಡಿರುತ್ತಾರೆ. ಹೀಗಾಗಿ, ಒಂದು ಜೀವವನ್ನು ಹಿಂಸಿಸುವ ಮತ್ತು ಕೊಲ್ಲುವ ಗುಣವುಳ್ಳವರನ್ನು ಮಾನವರೆಂದು ಕರೆಯಲಾಗುವುದಿಲ್ಲ. ಬುದ್ಧಿ ಕಡಿಮೆ ಇರುವ ಕ್ರೂರಪ್ರಾಣಿಗಳೆಂದೇ ಗುರುತಿಸಬೇಕಾಗುತ್ತದೆ.

ಶ್ರೀಕೃಷ್ಣ ಹೇಳಿದಂತೆ ‘ವಿಶಾಲವಾದ ಮನೋಭಾವ ಹೊಂದಿರುವವರು ಎಲ್ಲೆಲ್ಲೂ, ಎಲ್ಲರಲ್ಲೂ ಸಮಭಾವನೆಯನ್ನು ಹೊಂದಿರುತ್ತಾರೆ. ಜಗತ್ತಿನ ಸಕಲ ಚರಾಚರ ವಸ್ತುಗಳಲ್ಲೂ ಪರಮಾತ್ಮನನ್ನೇ ಕಾಣುತ್ತಾರೆ. ಅಂದರೆ ಒಳ್ಳೆಯದನ್ನೇ ಕಾಣುತ್ತಾರೆ. ಆದರೆ ಸಂಕುಚಿತ ಬುದ್ಧಿಯುಳ್ಳವರು ಮಾತ್ರ ಮನುಷ್ಯರಲ್ಲೂ ಭಿನ್ನವಾಗಿ ನೋಡುತ್ತಾರೆ.’

ಕುರುಕ್ಷೇತ್ರಯುದ್ಧ ನಡೆದದ್ದು ದುರ್ಯೋಧನನ ಸಂಕುಚಿತ ಬುದ್ಧಿಯಿಂದ. ಧರ್ಮರಾಯ ಯುದ್ಧವನ್ನು ಗೆದ್ದಿದ್ದು ವಿಶಾಲ ಮನೋಭಾವದಿಂದ. ಸೋದರಸಂಬಂಧಿಗಳಾದ ಪಾಂಡವರ ಮೇಲೆ ದ್ವೇಷ ಕಾರುತ್ತಲೇ ಇದ್ದ ದುರ್ಯೋಧನ ತನ್ನ ದುರಂತವನ್ನು ತಾನೇ ತಂದುಕೊಂಡ. ತಿಳಿಗೇಡಿತನ ಅವನ ಸರ್ವನಾಶ ಮಾಡಿತು.

ಇತ್ತೀಚೆಗೆ ದುರ್ಯೋಧನನಂಥ ಮಾನವರು ಹೆಚ್ಚಾಗುತ್ತಿದ್ದಾರೆ. ದ್ವೇಷಾಸೂಯೆಗಳಿಂದ ಮನಸ್ಸನ್ನು ಮಲಿನ ಮಾಡಿಕೊಂಡಿರುವ ಮಾನವರು ಸೋದರಸಂಬಂಧಗಳಲ್ಲೂ ಸಾಮರಸ್ಯವಿಲ್ಲದೆ ಬದುಕುತ್ತಿದ್ದಾರೆ. ಸಮಾಜದಲ್ಲಿ ಜಾತಿ-ಧರ್ಮದ ಹೆಸರಲ್ಲಿ ಹಿಂಸಾಚಾರ ಮಾಡುತ್ತಿದ್ದಾರೆ. ಧರ್ಮದ ತಿರುಳನ್ನು ಸರಿಯಾಗಿ ತಿಳಿಯದ ಜನ ಮನುಷ್ಯ-ಮನುಷ್ಯರ ನಡುವೆ ಕಂದಕ ನಿರ್ಮಿಸುತ್ತಿದ್ದಾರೆ. ಧರ್ಮ ಯಾವತ್ತೂ ಸಂಕುಚಿತವಾಗಿಲ್ಲ, ಯಾವ ಧರ್ಮವೂ ಹಿಂಸೆಯನ್ನು ಪ್ರತಿಪಾದಿಸುವುದಿಲ್ಲ ಮತ್ತು ಪ್ರಚೋದಿಸುವುದೂ ಇಲ್ಲ. ಆದರೆ ಧರ್ಮದ ಹುಟ್ಟಿನ ಹಿನ್ನೆಲೆ, ಮತ್ತದರ ಸದಾಶಯಗಳನ್ನು ಅರ್ಥೈಸದ ಜನರಿಂದ ಧರ್ಮ ದುರ್ಬಳಕೆಯಾಗುತ್ತಿದೆ. ಮಾನವ ಧರ್ಮದ ಮೂಲ ಆಶಯವಾದ ಅಹಿಂಸಾತತ್ವವನ್ನು ಮರೆತ ತಿಳಿಗೇಡಿಗಳಿಂದ ಧರ್ಮ ಸಂಘರ್ಷಿಸುತ್ತಿದೆ. ಮಾನವರಲ್ಲಿ ಸಂಕುಚಿತ ಬುದ್ಧಿ ಅಳಿಯದಿದ್ದರೆ ವಿಶ್ವ ವಿನಾಶವಾಗುತ್ತದೆ. ಆದ್ದರಿಂದ ಮಾನವರೆಲ್ಲಾ ಒಂದೇ ಎಂಬ ಭ್ರಾತೃತ್ವಪ್ರೇಮದಿಂದ ಬದುಕುವುದನ್ನು ರೂಢಿಸಿಕೊಂಡು, ನಾವೆಲ್ಲಾ ‘ಸಚ್ಚಿದಾನಂದ’ದ ನೆಮ್ಮದಿಯ ಬದುಕನ್ನು ಸಾಕಾರಗೊಳಿಸಿಕೊಳ್ಳಬೇಕು.

ಮತಾಂತರ ನಿಷೇಧಕ್ಕೆ ಸಂವಿಧಾನ ತಿದ್ದುಪಡಿ ಅಗತ್ಯ

● ರಾಬರ್ಟ್ ರೊಸಾರಿಯೊ

ಭಾರತದ ಸಂವಿಧಾನ ‘ರಿಲಿಜನ್’ ಸ್ವಾತಂತ್ರ್ಯ ನೀಡಿದೆ. ರಿಲಿಜನ್ ಮೂಲ ಉದ್ದೇಶವೇ ಶುಭ ಸಂದೇಶ ಪ್ರಸಾರ ಮಾಡುವುದು. ಆ ಮೂಲಕ ಸ್ವರ್ಗವನ್ನು ಖಾತ್ರಿಪಡಿಸಿಕೊಳ್ಳುವುದು. ಆದ್ದರಿಂದ ರಿಲಿಜನ್ ಸ್ವಾತಂತ್ರ್ಯವೆಂದರೆ ಮತಾಂತರ ಮಾಡಲು ಇರುವ ಸ್ವಾತಂತ್ರ್ಯ ಎಂದೇ ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಆದ್ದರಿಂದ ಸಂವಿಧಾನ ತಿದ್ದುಪಡಿ ಆಗದೇ ಮತಾಂತರ ನಿಷೇಧ ಮಾಡುವುದು ಸಾಧ್ಯವಿಲ್ಲ ಎಂಬುದೇ ನನ್ನ ಅನಿಸಿಕೆ

ಇತ್ತೀಚೆಗೆ ಮತಾಂತರದ ಬಗ್ಗೆ ಚರ್ಚೆ ಮತ್ತೆ ಮುನ್ನೆಲೆಗೆ ಬಂದಿದೆ. ಈ ಸಮಸ್ಯೆ ಇಂದು ನಿನ್ನೆಯದಲ್ಲ. ಶತಮಾನಗಳಷ್ಟು ಹಳೆಯದಾದರೂ ಆಗಾಗ ಸದ್ದು ಮಾಡಿ ಮತ್ತು ಸ್ವಲ್ಪ ಸಮಯದ ನಂತರ ತಣ್ಣಗಾಗುತ್ತದೆ. ಆದರೆ, ಇನ್ನೊಂದೆಡೆ ಮತಾಂತರ ಪ್ರಕ್ರಿಯೆ ಮಾತ್ರ ಅವ್ಯಾಹತವಾಗಿ ಹಂತ ಹಂತವಾಗಿ ನಿರಂತರವಾಗಿ ನಡೆಯುತ್ತಾ ಬಂದಿದೆ. ಕಾಲಾಂತರದಲ್ಲಿ ಅದರ ಸ್ವರೂಪ ಬದಲಾಗಿರಬಹುದು. ಆದರೆ ಪ್ರಕ್ರಿಯೆ ಎಂದೂ ನಿಂತಿಲ್ಲ. ಕಾಲಕ್ಕೆ ತಕ್ಕಂತೆ ಅದರ ನೀತಿಗಳು ಬದಲಾಗಿವೆ. ಒಂದು ಕಾಲದಲ್ಲಿ ಹಿಂಸೆಯ ಮೂಲಕ ಬಲವಂತವಾಗಿ ಮತಾಂತರಿಸಿದ್ದರೆ ಕಾಲಕ್ರಮೇಣ ರಾಜಕೀಯ ಸನ್ನಿವೇಶಗಳು ಬದಲಾದಂತೆ ವಿಧಾನಗಳು ಬದಲಾದವು. ಬಲಪ್ರಯೋಗ, ಹಿಂಸೆಯ ಬದಲು ಸೇವೆಯ ಸೋಗಿನಲ್ಲಿ ಆಮಿಷ–ಲಾಲಸೆ ಒಡ್ಡಿ ಮತಾಂತರಗೊಳಿಸುವ ವಿಧಾನ ಜಾರಿಗೆ ಬಂತು ಮತ್ತು ಈ ವಿಧಾನ ಸಫಲವೂ ಆಯಿತು. ಆದರೆ ಆಗೀಗ ಸಂಘರ್ಷಗಳು ಏರ್ಪಟ್ಟಾಗ ಮಾತ್ರ ಮಾಧ್ಯಮಗಳಲ್ಲಿ ಈ ಬಗ್ಗೆ ಪರ ವಿರೋಧ ಚರ್ಚೆಗಳು ಬರುತ್ತವೆಯೇ ಹೊರತು ಈ ಸಮಸ್ಯೆಯ ಮೂಲಕ್ಕೆ ಹೋಗಿ ಪರಿಹಾರ ಕಂಡುಕೊಳ್ಳುವ ಪ್ರಾಮಾಣಿಕ ಕೆಲಸ ಆಗಲೇ ಇಲ್ಲ. ಇದೊಂದು ರಾಜಕೀಯ ಕೆಸರೆರಚಾಟಕ್ಕೆ ಸೀಮಿತವಾಗಿರುವ ವಿಷಯವಾಗಿಯೇ ಉಳಿಯಿತು. ರಾಜಕೀಯ ಸಮಸ್ಯೆಗಿಂತ ಇದೊಂದು ಸಾಮಾಜಿಕ, ನೈತಿಕ, ಮೌಲಿಕ ಮಾತ್ರವಲ್ಲದೆ ಅತ್ಯಂತ ಪುರಾತನ ನಾಗರಿಕತೆಯಾಗಿರುವ ಭಾರತದ ಅಡಿಪಾಯವನ್ನೇ ಅಲುಗಾಡಿಸುವಂತಹ ಗಂಭೀರ ಸಮಸ್ಯೆಯಾಗಿದೆ. ಅದಕ್ಕೆ ಪರಿಹಾರವನ್ನು ಅಷ್ಟೇ ಗಂಭೀರವಾಗಿ ಯೋಚಿಸಿ ಕ್ರಮಬದ್ಧವಾಗಿ ಕೈಗೊಳ್ಳುವ ಅಗತ್ಯವಿದೆ.

ಈಗ ರಾಜಕೀಯ ವಲಯದಲ್ಲಿ ಚರ್ಚೆಯಾಗುತ್ತಿರುವ ಸೀಮಿತ ವಿಷಯವೆಂದರೆ, ಮತಾಂತರ ನಿಷೇಧ ಕಾಯ್ದೆ ಬೇಕೆ, ಬೇಡವೇ? ಎಂಬುದಾಗಿದೆ. ಆದರೆ ಈ ಸಮಸ್ಯೆಯ ಗಂಭೀರತೆ ಆಳ ಅಗಲಗಳ ಬಗ್ಗೆ ಚರ್ಚೆಯಾಗುವುದು ಕಂಡುಬರುತ್ತಿಲ್ಲ. ಮತಾಂತರ ಯಾಕಾಗಿ ನಡೆಯುತ್ತಿದೆ? ಇದರ ಉದ್ದೇಶವೇನು? ಎಂಬುದರ ಬಗ್ಗೆ ಚರ್ಚೆಗಳು ಕೇಳಿ ಬರುತ್ತಿಲ್ಲ. ಸಮಸ್ಯೆಯ ಮೂಲವನ್ನೇ ಅರಿಯದೇ ಅದಕ್ಕೆ ಪರಿಹಾರ ಹುಡುಕಲು ಹೊರಟರೆ ಲಾಭಕ್ಕಿಂತ ನಷ್ಟವಾಗುವುದೇ ಹೆಚ್ಚು ಎಂಬುದು ನನ್ನ ಖಚಿತ ಅಭಿಪ್ರಾಯ.

ಒಂದೆಡೆ ಹಿಂದೂ ಪರ ಸಂಘಟನೆಗಳು ಮತಾಂತರದ ಪಿಡುಗು ತಡೆಗಟ್ಟಲು ಕಾನೂನು ತರಬೇಕೆಂದು ಒತ್ತಾಯಿಸುತ್ತಿವೆ. ಇನ್ನೊಂದೆಡೆ ಚರ್ಚ್ ಪರ ವ್ಯಕ್ತಿಗಳು ಸಂವಿಧಾನವನ್ನು ಉಲ್ಲೇಖಿಸಿ ವಾದ ಮಂಡಿಸುತ್ತಾರೆ. ಸಂವಿಧಾನ ನೀಡಿರುವ ಹಕ್ಕು ಸ್ವಾತಂತ್ರ್ಯ ಉಲ್ಲೇಖಿಸಿ, ಮತಾಂತರ ನಿಷೇಧ ಮೂಲಭೂತ ಹಕ್ಕುಗಳ ವಿರುದ್ಧ ಎಂದು ವಾದಿಸುತ್ತಾರೆ.

ಇಲ್ಲಿ ಮೂಲಭೂತ ಸಮಸ್ಯೆ ಇರುವುದೇ ‘ಧರ್ಮ’ ಮತ್ತು ‘ರಿಲಿಜನ್’ಗಳ ಸಾಮ್ಯತೆ ಅಥವಾ ವ್ಯತ್ಯಾಸ ತಿಳಿಯದೆ ಆಂಗ್ಲ ಪದ ‘ರಿಲಿಜನ್’ಗೆ ಕನ್ನಡದಲ್ಲಿ ಧರ್ಮ ಎಂಬ ಪದ ಬಳಕೆ ಮಾಡುವುದು. ಹಾಗೂ ‘ಧರ್ಮ’ಕ್ಕೆ ಆಂಗ್ಲದಲ್ಲಿ ರಿಲಿಜನ್ ಎಂದು ಕರೆಯುವುದು. ‘ಧರ್ಮ’ ಎಂದರೆ, ಶತಮಾನ – ಸಹಸ್ರಮಾನಗಳ ಅವಧಿಯಲ್ಲಿ ನಿರಂತರ ಅಭಿವೃದ್ಧಿ ಹೊಂದಿ ಜಾರಿಗೆ ಬಂದಿರುವ ಒಂದು ಮೌಲ್ಯಾಧಾರಿತ ವ್ಯವಸ್ಥೆ. ಇದು ಮನುಷ್ಯ ಜೀವನದ ಎಲ್ಲಾ ಆಯಾಮಗಳಿಗೆ ಸಂಬಂಧಿಸಿದ್ದು. ಸುಸೂತ್ರ ಕುಟುಂಬ, ಸಮಾಜ, ಮತ್ತು ರಾಷ್ಟ್ರ ನಿರ್ಮಾಣ ಆಗುವಲ್ಲಿ ಧರ್ಮ ಪ್ರಮುಖ ಪಾತ್ರ ವಹಿಸುತ್ತದೆ. ಆದರೆ ‘ರಿಲಿಜನ್’ ಎಂಬುದು ಒಂದು ವ್ಯಕ್ತಿಯಿಂದ ಸ್ಥಾಪಿಸಲ್ಪಟ್ಟಿದ್ದು, ನೇರ ದೇವರ ಮಾತುಗಳನ್ನು ಪುಸ್ತಕ ರೂಪದಲ್ಲಿ ಬರೆದಿದ್ದು. ಅದನ್ನು ‘ದೇವರ ವಾಕ್ಯ’ ಎಂದು ಕರೆದಿರುವುದು. ‘ರಿಲಿಜನ್’ನ ಮೂಲ ತತ್ವವೇ ಈ ದೇವರ ವಾಕ್ಯವನ್ನು ಶುಭ ಸಂದೇಶದ ರೂಪದಲ್ಲಿ ಸಮಸ್ತ ಜಗತ್ತಿಗೆ ಪಸರಿಸಿ, ಎಲ್ಲಾ ಜನರನ್ನು ಅನುಯಾಯಿಗಳಾಗಿ ಮಾಡುವುದು ಮತ್ತು ಈ ಮೂಲಕ ಅವರಿಗೆ ಸ್ವರ್ಗ ಪ್ರವೇಶವನ್ನು ಖಾತ್ರಿಗೊಳಿಸುವುದು. ಈ ದೇವರ ವಾಕ್ಯ ಅಥವಾ ಶುಭ ಸಂದೇಶದಲ್ಲಿ ದೇವರು ಕಟ್ಟಪ್ಪಣೆ ಮಾಡಿ ತಾನೊಬ್ಬನೇ ಇರುವುದು. ನನ್ನನ್ನು ಬಿಟ್ಟು ಬೇರೆ ದೇವರು ಇಲ್ಲ. ನನ್ನನ್ನು ಒಪ್ಪಿಕೊಳ್ಳಲು ನಿರಾಕರಿಸಿದವನು ನಕಲಿ ದೇವರ ಆರಾಧಕನಾಗಿರುತ್ತಾನೆ ಎಂದು ಆದೇಶ ಮಾಡಿರುತ್ತಾರೆ. ಆದ್ದರಿಂದ ಅನುಯಾಯಿಗಳು ಇದನ್ನು ಕಡ್ಡಾಯವಾಗಿ ಪಾಲಿಸುವುದು ಮತ್ತು ನಿಜವಾದ ದೇವರಿಂದ ದೂರವಿದ್ದು, ಮೂರ್ತಿಪೂಜೆಯಲ್ಲಿ ತೊಡಗಿರುವವರನ್ನು ಖಂಡಿಸುವುದು, ಅವಹೇಳನ ಮಾಡುವುದು ರಿಲಿಜನ್ ಪ್ರಕಾರ ಕರ್ತವ್ಯ ಆಗಿರುತ್ತದೆ. ಆದರೆ ಭಾರತದಂತಹ ಒಂದು ನಾಗರಿಕ ಸಮಾಜದಲ್ಲಿ ಇಂತಹ ನಂಬಿಕೆ ಸಂಘರ್ಷಕ್ಕೆ ಕಾರಣವಾಗುತ್ತದೆ.

ಮತಾಂತರವನ್ನು ವಿರೋಧಿಸುವ ಹಿಂದೂ ಪರ ಸಂಘಟನೆಗಳು ಮತಾಂತರ ನಿಷೇಧ ಕಾಯ್ದೆ ಜಾರಿಗೆ ತರಲು ಒತ್ತಾಯಿಸುತ್ತಿವೆ. ಒಂದು ರೀತಿಯಲ್ಲಿ ಇದು ಕಿವಿಗೆ ಇಂಪಾಗಿ ಕೇಳಿಸಬಹುದು. ಆದರೆ, ಇನ್ನೊಂದೆಡೆ ಎದುರಾಗುವ ಪ್ರಶ್ನೆಯೆಂದರೆ ಇಂತಹ ಕಾನೂನಿನಿಂದಾಗಿ ಮತಾಂತರ ತಡೆಯುವುದು ಸಾಧ್ಯವೇ?

ಇದು ಬಹಳ ಗಂಭೀರವಾಗಿ ಯೋಚಿಸಬೇಕಾದ ಪ್ರಶ್ನೆ. ಬಲವಂತದ ಮತಾಂತರವನ್ನು ತಡೆಗಟ್ಟಲಾಗುವುದು ಎಂಬುದಾಗಿ ಗೃಹಮಂತ್ರಿಗಳು ಹೇಳಿಕೆಯನ್ನು ನೀಡಿದ್ದಾರೆ. ಬಲವಂತ ಆಗದೆ ಇರುವಾಗ ಆಮಿಷಗಳ ಮೂಲಕ ಮತಾಂತರ ಆಗುತ್ತಿರುವಾಗ ಇಂತಹ ಕಾನೂನುಗಳು ಅಪ್ರಸ್ತುತ, ಅಸಂಬದ್ಧ ಎನಿಸುತ್ತವೆ. ಮತಾಂತರ ಆಗುವವನೂ, ಮಾಡುವವನೂ ಒಂದೇ ಪಕ್ಷದಲ್ಲಿದ್ದು ಹೊರಗಿನಿಂದ ವಿರೋಧಿಸುವವನು ಎದುರಾಳಿ ಆದಾಗ ಕಾನೂನಿನಿಂದ ಏನು ಮಾಡಲು ಸಾಧ್ಯ? ಯಾರೊಬ್ಬನೂ ತಾನು ನೊಂದಿದ್ದೇನೆ, ಬಾಧಿತನಾಗಿದ್ದೇನೆ, ಬಲಿಪಶು ಆಗಿದ್ದೇನೆ ಎಂದು ದೂರು ಕೊಡದ ಹೊರತು ಕಾನೂನು ಏನೂ ಮಾಡಲು ಸಾಧ್ಯವಿಲ್ಲ. ಆಮಿಷದಿಂದ ಮತಾಂತರಗೊಂಡವನು ಮತಾಂತರಗೊಳಿಸಿದವನ ವಿರುದ್ಧ ದೂರು ಸಲ್ಲಿಸುವುದು ಸಾಧ್ಯವಿಲ್ಲದ ಮಾತು. ಆದ್ದರಿಂದ ಕಾನೂನಿನಿಂದ ಸಾಧಿಸಹೊರಟಿರುವುದು ಏನು? ಇದೊಂದು ತಾತ್ಕಾಲಿಕ ಆಕ್ರೋಶ ಶಮನ ಮಾಡಲು ಕಣ್ಣು ಒರೆಸುವ ತಂತ್ರ ಎಂದೇ ಹೇಳಬೇಕಾಗುತ್ತದೆ ವಿನಹ ಸಮಸ್ಯೆಗೆ ಪರಿಹಾರ ಅಲ್ಲ.

ಸಂವಿಧಾನದಲ್ಲೇ ಎಡವಟ್ಟು?: ಭಾರತದ ಸಂವಿಧಾನ ‘ರಿಲಿಜನ್’ ಸ್ವಾತಂತ್ರ್ಯ ನೀಡಿದೆ. ರಿಲಿಜನ್ ಮೂಲ ಉದ್ದೇಶವೇ ಶುಭ ಸಂದೇಶ ಪ್ರಸಾರ ಮಾಡುವುದು. ಆ ಮೂಲಕ ಸ್ವರ್ಗವನ್ನು ಖಾತ್ರಿ ಪಡಿಸಿಕೊಳ್ಳುವುದು. ಆದ್ದರಿಂದ ರಿಲಿಜನ್ ಸ್ವಾತಂತ್ರ್ಯವೆಂದರೆ ಮತಾಂತರ ಮಾಡಲು ಇರುವ ಸ್ವಾತಂತ್ರ್ಯ ಎಂದೇ ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಆದ್ದರಿಂದ ಸಂವಿಧಾನ ತಿದ್ದುಪಡಿ ಆಗದೇ ಮತಾಂತರ ನಿಷೇಧ ಮಾಡುವುದು ಸಾಧ್ಯವಿಲ್ಲ ಎಂಬುದೇ ನನ್ನ ಅನಿಸಿಕೆ.

ಲೇಖಕ: ಮಂಗಳೂರಿನಲ್ಲಿ ಸಾಮಾಜಿಕ ಕಾರ್ಯಕರ್ತ

ಪದಬಂಧ 4736

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಜೇನನ್ನು ನೀಡುವ ತಿಂಗಳು (4)
3.ಉಲ್ಟಾ ಪಲ್ಟಾ ಕಾಣುತ್ತಿರುವ ಗುಳಿಗೆ (2)
5.ಸಿರಿತನವಲ್ಲ,ದುಡ್ಡಿಲ್ಲದಿರುವಿಕೆ (4)
7.ಮಸ್ತಕದ ಹತ್ತಿರವಿರುವ ಹೊತ್ತಿಗೆ (3)
8.ಕಾಡನ್ನು ಪಾಲನೆ ಮಾಡುವವನು (5)
11.ಉದಯ ಕಾಲದಲ್ಲಿ ಹಿಡಿದಿಟ್ಟ ನೀರು (3)
12. ದೇವಸ್ಥಾನದ ಸಭಾಮಂಟಪ (4)
14.ತಪ್ಪು ಪದದ ವಿರುದ್ಧ ಪದ (2)
15.ಈತ ಗುರುತುಳ್ಳ ವ್ಯಕ್ತಿ (4)

ಮೇಲಿಂದ ಕೆಳಕ್ಕೆ
1.ಮನಸ್ಸಿನ ಶಕ್ತಿ (4)
2. ಆನೆ ನಡೆಸುವವನು (3)
4.ಮತ್ತು ಬರಿಸುವಂತದ್ದು (3)
6.ತಿರುಗಿಸಿದರೂ ಇದು ಹೊಸತು! (3)
7.ರೋಮಾಂಚನಕ್ಕೊಂದು ಪರ್ಯಾಯ ಪದ (3)
8.ವರ್ತಮಾನ ತಿಳಿಸಿದ ವ್ಯಾಪಾರಿ (3)
9.ಶುನಕದ ಹತ್ತಿರವಿರುವ ಬೆಳ್ಳುಳ್ಳಿ (3)
10.ಅಜಗಜಾಂತರದಲ್ಲೇ ಮನ್ಮಥನನ್ನು ಹುಡುಕಿ! (4)
11.ಉತ್ಸಾಹದೊಂದಿಗೆ ಸಂತೋಷವೂ ಬಂದಿದೆ (3)
13.ಯಾರೀಕೆ? ಬಲು ಬಿಂಕ ತೋರುತ್ತಿಹಳಲ್ಲಾ? (3)



ಗುಂಡಣ್ಣ



ದಿನ ಭವಿಷ್ಯ

ಶನಿವಾರ ಅಕ್ಟೋಬರ್ 2, 2021

ಶ್ರೀಪ್ಲವ ನಾಮ ಸಂವತ್ಸರ ದಕ್ಷಿಣಾಯಣ ವರ್ಷ ಋತು ಭಾದ್ರಪದ ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ಹಸ್ತೆ ಏಕಾದಶೀ ಗಂ. 32-52 (ರಾ. 7-23) ಶನಿವಾರ ನಿತ್ಯ ನಕ್ಷತ್ರ ಆಶ್ಲೇಷಾ ಗಂ. 47-40 (ರಾ. 1-19) ಸಿದ್ಧ ನಾಮ ಯೋಗ ಗಂ. 25-41 ಬವ ಕರಣ ಗಂ. 2-7 ವಿಷ ಗಂ. 18-4 ಅಮೃತ ಗಂ 42-57 : ರಾಹುಕಾಲ ಬೆ. ಗಂ. 9-00 ರಿಂದ 10-30 ಗುಳಿಕ ಕಾಲ ಬೆ. ಗಂ 6-00 ರಿಂದ 7-30 ಯಮಗಂಡ ಮ. ಕಾಲ ಗಂ 1-30 ರಿಂದ 3-00 : ಸೂರ್ಯೋದಯ: 6-12 ಸೂರ್ಯಾಸ್ತ: 6-06 ಅದೃಷ್ಟ ಸಂಖ್ಯೆ 2 3

ಮೇಷ: ಸಂಬಂಧಿಕರೊಂದಿಗೆ ವಿಚಾರ ವಿನಿಮಯ ನಡೆಸಿ, ಆರ್ಥಿಕ ಸಂಕಷ್ಟ ಪರಿಹರಿಸಿಕೊಳ್ಳುವಿರಿ. ಓದಿನಲ್ಲಿ ಹೆಚ್ಚಿನ ಆಸಕ್ತಿ ತೋರುವಿರಿ. ಹೊಸ ಉದ್ಯಮದ ಸಂಭ್ರಮದ ತಯಾರಿ ನಡೆಸಲಿದ್ದೀರಿ.

ವೃಷಭ: ನಿತ್ಯದ ಕೆಲಸಗಳಲ್ಲದೇ ಹೊಸ ಕಾಮಗಾರಿಗಳನ್ನು ಪೂರ್ಣಗೊಳಿಸುವ ಧಾವಂತದಲ್ಲಿರುವಿರಿ. ನೆಮ್ಮದಿಯ ವಾತಾವರಣಕ್ಕೆ ಕಾರಣರಾಗಲಿದ್ದೀರಿ. ಮನೆಯವರೊಂದಿಗೆ ಆತುರದ ವ್ಯವಹಾರ ತರವಲ್ಲ.

ಮಿಥುನ: ಆಸ್ತಿಯನ್ನು ಪಡೆದುಕೊಳ್ಳುವ ಸಾಧ್ಯತೆ ಕಂಡುಬರುತ್ತಿದೆ. ವಾಹನ ರಿಪೇರಿ, ಮಾರಾಟಗಾರರಿಗೆ ಉತ್ತಮ ವ್ಯವಹಾರ ನಡೆದು ಹೆಚ್ಚಿನ ಆದಾಯ ತಂದುಕೊಡಲಿದೆ.

ಕರ್ಕಾಟಕ: ಶೈಕ್ಷಣಿಕ ಕ್ಷೇತ್ರದಲ್ಲಿ ಸೇವೆ ಸಲ್ಲಿಸುವ ಭಾಗ್ಯ ನಿಮ್ಮದಾಗಲಿದೆ. ವಿವಾದಗಳು ಇತ್ಯರ್ಥಗೊಂಡು ಮಾನಸಿಕ ನೆಮ್ಮದಿ ಮೂಡಲಿದೆ. ಶುಭಕಾರ್ಯಗಳಲ್ಲಿ ಮನೆಯವರೊಂದಿಗೆ ಸಕ್ರಿಯವಾಗಿ ಭಾಗಿ.

ಸಿಂಹ: ಕ್ರೀಡಾಪಟುಗಳಿಗೆ ಉತ್ತೇಜನ ದೊರಕುವ ಸಂಭವವಿದ್ದು ಉತ್ತಮ ಸಾಧನೆ ತೋರಲಿದ್ದೀರಿ. ಸಾಧನೆಯ ಪುಟಗಳನ್ನು ಅವಲೋಕನ ಮಾಡಿಕೊಳ್ಳಲಿದ್ದೀರಿ. ವಾಹನ ವ್ಯವಹಾರಗಳಿಂದ ವಿಶೇಷ ಲಾಭ.

ಕನ್ಯಾ: ಹೊಸಬರಿಗೆ ಸಾಹಿತ್ಯ ಅಥವಾ ಅನುವಾದಗಳಲ್ಲಿ ಕೆಲಸಗಳಿಗೆ ಉತ್ತೇಜನ ನೀಡಲಿದ್ದೀರಿ. ಮನೆಯ ಕೆಲಸ ಕಾರ್ಯಗಳ ಜವಾಬ್ದಾರಿಯಿಂದ ಮುಕ್ತರಾಗಿ ಸಂಗಾತಿಯೊಂದಿಗೆ ಪ್ರವಾಸಕ್ಕೆ ತೆರಳುವಿರಿ.

ತುಲಾ: ವರಮಾನದಲ್ಲಿ ಗಣನೀಯ ಸುಧಾರಣೆ. ವಿದೇಶದಿಂದ ಮಕ್ಕಳ ಅಥವಾ ಸಮೀಪ ಬಂಧುಗಳ ಆಗಮನಕ್ಕಾಗಿ ಎದುರು ನೋಡುವಿರಿ. ಗೃಹಾಲಂಕಾರ ವಸ್ತುಗಳ ಖರೀದಿ ಸಾಧ್ಯತೆ.

ವೃಶ್ಚಿಕ: ಸಾಹಿತ್ಯ, ಸಂಗೀತ ಕಲಾ ನೈಪುಣ್ಯತೆ ಹೊಂದಿರುವ ವ್ಯಕ್ತಿಗಳ ಒಡನಾಟ ದಿನವಿಡೀ ದೊರಕುವ ಸಾಧ್ಯತೆ. ರಿಯಲ್ ಎಸ್ಟೇಟ್ ಅಂಥ ಭೂ ಸಂಬಂಧಿ ವ್ಯವಹಾರಗಳಲ್ಲಿ ಅಧಿಕ ಲಾಭ. ಕೆಲಸಗಾರರ ಬಗ್ಗೆ ವಿಶ್ವಾಸವಿರಲಿ.

ಧನು: ಮಕ್ಕಳಿಗಾಗಿ ದುಬಾರಿ ವಸ್ತುಗಳನ್ನು ಖರೀದಿ ಮಾಡುವ ಸಾಧ್ಯತೆ ಕಂಡುಬರುವುದು. ಶ್ರೀಮಂತ ಜೀವನ ಶೈಲಿಗಾಗಿ ವೆಚ್ಚ ಭರಿಸಲಿದ್ದೀರಿ. ಸಂಪನ್ಮೂಲಗಳ ವೃದ್ಧಿಗಾಗಿ ಹೊಸ ಯೋಜನೆಯೊಂದನ್ನು ರೂಪಿಸುವ ಸಾಧ್ಯತೆ.

ಮಕರ: ಮನೆಯಲ್ಲಿ ಮೃದುಭಾಷಿಯಾಗಿ ವ್ಯವಹರಿಸಿ ಕೆಲಸಗಳ ನಿಧಾನಗತಿಯಲ್ಲಿದ್ದರೂ ಮನಸ್ಸಿನಲ್ಲಿನ ದುಗುಡವನ್ನು ಮುಚ್ಚಿಡಲು ಪ್ರಯತ್ನಿಸುವಿರಿ. ಮನೆಯಲ್ಲಿ ಸಡಗರ ಮನೆಮಾಡಲಿದೆ.

ಕುಂಭ: ಆದಾಯದಲ್ಲಿ ಹೆಚ್ಚಳ. ಮನೆಯಲ್ಲಿ ಸಂತೋಷದ ವಾತಾವರಣ. ದಾಂಪತ್ಯ ಜೀವನ ಸುಖಕರವಾಗಿರುವುದು. ಸರ್ಕಾರಿ ನೌಕರರಿಗೆ ಬಿಡುವಿನ ದಿನವಾಗಿದ್ದರೂ, ಉನ್ನತ ಹುದ್ದೆಯಲ್ಲಿರುವವರಿಗೆ ಜವಾಬ್ದಾರಿ ಹೆಚ್ಚಾಗಲಿದೆ.

ಮೀನ: ಕಳೆದುಹೋದ ವಸ್ತು ಯಾ ಬೇರೆಯವರ ವಶದಲ್ಲಿದ್ದ ನಿಮ್ಮ ವಸ್ತುಗಳನ್ನು ಪುನಃ ಪಡೆದುಕೊಳ್ಳುವ ಸಾಧ್ಯತೆ. ವಾಹನ, ಯಂತ್ರೋಕಪರಣಾದಿ ಚರ ಆಸ್ತಿಗಳ ಖರೀದಿಮಾಡಲಿದ್ದೀರಿ.

ನಿಮ್ಮ ಜನ್ಮದಿನ 2-ಅಕ್ಟೋಬರ್ ಇಂದು ಅತ್ಯಂತ ಶುಭದಾಯಕವಾಗಿದ್ದು, ಈ ವರ್ಷ ನೀವು ಹೆಚ್ಚಾಗಿ ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುದರಿಂದ ಉದ್ಯೋಗದ ಸ್ಥಳದಲ್ಲಿ ಉತ್ತಮ ಸಂಪರ್ಕಗಳು ಸಿಗುತ್ತವೆ. ಆರ್ಥಿಕ ಪರಿಸ್ಥಿತಿ ಉತ್ತಮವಾಗಿ ಇರುವುದರಿಂದ ದೀರ್ಘಕಾಲಿಕ ಹೂಡಿಕೆಗಳಲ್ಲಿ ಹಣ ತೊಡಗಿಸಿಕೊಳ್ಳುವಿರಿ.

4735ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
2.ಒಸಗೆ 4.ಮಸಣ
5.ತಹನಾಮೆ
6.ಹಳವಂಡ 8.ಟೆಸ
10.ಲುಪಾ 13.ರಸಮಯ
14.ಪರಿಹಾಸ 15.ಗಾಬಾರ
16.ಕುಠಾರ

ಮೇಲಿಂದ ಕೆಳಕ್ಕೆ:
1.ಗ್ರಾಮಕೈಗಾರಿಕೆ
2.ಒಣಹರಟೆ
3.ಇನಾಮು 5.ತಡಸಲು
7.ಉದರಂಭರಣ
9.ಸಮರಸ
11.ಪಾಳೆಯಗಾರ
12.ಅರಿವು

ಸುಡೊಕು 5122

4			3		8			2
	7						8	
9					2			6
							6	
	2	6	9		7			
	4		6		1		7	5
			1					7
8		7					9	
1	9		8		6	4		3

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5121 ಸುಡೊಕು

1	5	8	4	3	2	9	7	6
3	7	6	9	8	1	2	4	5
9	2	4	6	5	7	1	8	3
8	9	5	2	7	4	6	3	1
4	6	1	5	9	3	7	2	8
7	3	2	1	6	8	5	9	4
5	4	9	3	2	6	8	1	7
2	1	7	8	4	5	3	6	9
6	8	3	7	1	9	4	5	2

ಬಹು ಮಾಧ್ಯಮ ಪ್ರಜಾವಾಣಿ LIVE www.prajavani.net

Prajavani.net Prajavani Prajavani

ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ

ಇಂದು

ಸಂವಾದ ಬೆಳಿಗ್ಗೆ 11ರಿಂದ 12

ಕನ್ಹಯ್ಯ ಕುಮಾರ್ ಪಕ್ಷಾಂತರ: ಸಿದ್ಧಾಂತಕ್ಕೆ ಸಂದ ಸೋಲೇ??

ಭಾಗವಹಿಸುವವರು:ಸಂದೀಪ್ ಶಾಸ್ತ್ರಿ, ರಾಜಕೀಯ ವಿಶ್ಲೇಷಕ.
ಮುನೀರ್ ಕಾಟಿಪಳ್ಳ, ಡಿವೈಎಫ್ಐ ರಾಜ್ಯ ಅಧ್ಯಕ್ಷ.
ಮಂಜುಳಾ ನಾಯ್ಡು, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ.
ಬಿ.ಆರ್.ಮಂಜುನಾಥ್, ಸಾಮಾಜಿಕ ಕಾರ್ಯಕರ್ತ

facebook Live — ಸಂಜೆ: 4.30ರ ನಂತರ

ವಿಜಯನಗರ ಜಿಲ್ಲೆ ಉದ್ಘಾಟನಾ ಸಮಾರಂಭದ ಅಂಗವಾಗಿ ನಡೆಯಲಿರುವ ಕಲಾ ತಂಡಗಳ ಮೆರವಣಿಗೆ.
ಸ್ಥಳ: ವಡಕರಾಯ ದೇವಸ್ಥಾನ, ಹೊಸಪೇಟೆ (ವಿಜಯನಗರ ಜಿಲ್ಲೆ).

ಜಸ್ಟ್ ಮ್ಯೂಸಿಕ್
ಗಾಯನ ಸುಚೇತನ
https://bit.ly/3D1uEjt

ಪಾಡ್‌ಕಾಸ್ಟ್: ಪ್ರತೀ ದಿನ: ಬೆಳಿಗ್ಗೆ 7 **ವಚನವಾಣಿ**, ಬೆ. 7.30 **ದಿನದ ಸೂಕ್ತಿ**, ಬೆಳಿಗ್ಗೆ 8, ಮಧ್ಯಾಹ್ನ 2, ರಾತ್ರಿ 8 **ಪ್ರಜಾವಾಣಿ ವಾರ್ತೆ ಬುಲೆಟಿನ್**, ಬೆಳಿಗ್ಗೆ 9.30 **ಸಂಪಾದಕೀಯ**, ಬೆಳಿಗ್ಗೆ 9 **ಪ್ರಚಲಿತ**

ಪ್ರಜಾವಾಣಿ ಕನ್ನಡ ಧ್ವನಿ

ನಾಳೆ

ಕ್ಲಬ್ ಹೌಸ್ — ಚರ್ಚೆ...

ಕನ್ನಡ ಸಾಹಿತ್ಯ ಪರಿಷತ್: ಮುಂದಿರುವ ದಾರಿ

ಬಸವರಾಜ ಕಲ್ಗುಡಿ, ಸಾಹಿತಿ, ವಿಮರ್ಶಕ.
ಆರ್.ಜಿ.ಹಳ್ಳಿ ನಾಗರಾಜ್, ಕವಿ, ಸಂಘಟಕ.
ಪ್ರಜ್ಞಾ ಮತ್ತಿಹಳ್ಳಿ, ಉಪನ್ಯಾಸಕಿ, ಲೇಖಕಿ.
ಭುವನಾ ಹಿರೇಮಠ, ಕವಯಿತ್ರಿ

ಪ್ರಜಾವಾಣಿ ಆಲದಮರ 10.30 ರಿಂದ 12.30

ಜೆಡಿಎಸ್ ತೊರೆದು ಬಿಜೆಪಿ ಅಂಗಳದಲ್ಲಿ ನಿಂತ ಸಂದೇಶ್ ನಾಗರಾಜ್

ಟಿಕೆಟ್ ತಪ್ಪುವ ಭೀತಿ?

ಪ್ರಜಾವಾಣಿ ವಾರ್ತೆ

ಮೈಸೂರು: ‘ವಿಧಾನಸಭೆ ಚುನಾವಣೆಯ ಬಳಿಕ ಎಚ್.ಡಿ. ಕುಮಾರಸ್ವಾಮಿ ಹಾಗೂ ಜೆಡಿಎಸ್ ಸಭೆಗಳಿಂದ ದೂರ ಉಳಿದಿದ್ದರಿಂದಲೇ, ಈ ಬಾರಿ ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್‌ಗೆ ನಡೆಯುವ ಚುನಾವಣೆಯಲ್ಲಿ ಟಿಕೆಟ್ ದೊರೆಯುವುದು ಅನುಮಾನ ಎಂಬ ಕಾರಣಕ್ಕೆ ವಿಧಾನ ಪರಿಷತ್ ಸದಸ್ಯ ಸಂದೇಶ್ ನಾಗರಾಜ್ ಪಕ್ಷ ತೊರೆದು ಬಿಜೆಪಿ ಸೇರಲು ಮುಂದಾಗಿದ್ದಾರೆ’ ಎಂದು ಜಿಲ್ಲೆಯಲ್ಲಿ ವಿಶ್ಲೇಷಿಸಲಾಗುತ್ತಿದೆ.

ಅದರೊಂದಿಗೆ, ‘2018ರ ವಿಧಾನ ಸಭೆ ಚುನಾವಣೆಯಲ್ಲಿ ಸೋದರ ಸಂದೇಶ್ ಸ್ವಾಮಿಗೆ ನರಸಿಂಹರಾಜ ಕ್ಷೇತ್ರದಲ್ಲಿ ಪಕ್ಷದ ಟಿಕೆಟ್ ನೀಡದೇ ಗೆಲ್ಲುವ ಅವಕಾಶವನ್ನು ತಪ್ಪಿಸಲಾಯಿತು’ ಎಂಬ ಒಳಬೇಗುದಿಯೂ ಅವರ ನಿರ್ಧಾರಕ್ಕೆ ನೀರೆರೆದಿದೆ.

ಟಿಕೆಟ್ ತಪ್ಪಿದಾಗಲೇ ಬಿಜೆಪಿ ಸೇರಿದ್ದ ಸಂದೇಶ್‌ಸ್ವಾಮಿ ಅಲ್ಲಿಯೇ ಮುಂದುವರಿದಿದ್ದಾರೆ. ಅವರ ಪುತ್ರ ಸಾತ್ವಿಕ್ ಅದೇ ಪಕ್ಷದಿಂದಲೇ ಪಾಲಿಕೆ ಸದಸ್ಯರಾಗಿ ಆಯ್ಕೆಯಾಗಿದ್ದಾರೆ. ಕುಟುಂಬದ ಹಿರಿಯರಾದ ನಾಗರಾಜ್ ಈಗ ಬಿಜೆಪಿಗೇ ಹೊರಟಿರುವುದು ಹೊಸ ಬೆಳವಣಿಗೆ.

ಸೋದರನಿಗೆ ಟಿಕೆಟ್ ಕೊಡಿಸಲು ನಾಗರಾಜ್ ಇನ್ನಿಲ್ಲದ ಕಸರತ್ತು ನಡೆಸಿದ್ದರು. ಆದರೂ ಟಿಕೆಟ್ ಕೈತಪ್ಪಿದ್ದು ದೊಡ್ಡ ಆಘಾತವನ್ನೇ ತಂದಿತ್ತು. ‘ಸ್ವಂತ ತಮ್ಮನಿಗೆ ಟಿಕೆಟ್ ಕೊಡಿಸಲು ಆಗಲಿಲ್ಲವಲ್ಲ’ ಎಂದು ಕೆರಳಿದ್ದರು. ಚುನಾವಣೆ ಬಳಿಕ ಪಕ್ಷದಿಂದ ಸಂಪೂರ್ಣವಾಗಿ ಅಂತರ ಕಾಯ್ದುಕೊಂಡಿದ್ದರು. ಈಚೆಗೆ ನಡೆದ ಪಾಲಿಕೆಯ ಮೇಯರ್ ಚುನಾವಣೆಯಲ್ಲೂ ಗೈರಾಗುವ ಮೂಲಕ ಪಕ್ಷದ ಸ್ಥಳೀಯ ಮುಖಂಡರ ಕೆಂಗಣ್ಣಿಗೂ ಗುರಿಯಾಗಿದ್ದರು.

‘ನರಸಿಂಹರಾಜ ಕ್ಷೇತ್ರದಲ್ಲಿ ಬೆಂಬಲವಿಲ್ಲದಿದ್ದರೂ ಬಿಜೆಪಿ ಅಭ್ಯರ್ಥಿಯಾಗಿ ಸೋದರ ಸಂದೇಶ್‌ಸ್ವಾಮಿ ಉತ್ತಮ ಮತಗಳನ್ನು ಪಡೆದರು. ಜೆಡಿಎಸ್‌ನಿಂದಲೇ ಟಿಕೆಟ್ ಸಿಕ್ಕಿದ್ದರೆ ಶಾಸಕರಾಗಿ ಆಯ್ಕೆಯಾಗುತ್ತಿದ್ದುದು ಖಚಿತ. ಪಕ್ಷದಲ್ಲಿ ತಮ್ಮ ಪ್ರಾಬಲ್ಯ ಕಡಿಮೆಯಾಗುತ್ತದೆ ಎಂಬ ಕಾರಣಕ್ಕೆ ಶಾಸಕ ಸಾ.ರಾ.ಮಹೇಶ್ ಅವರೇ ಟಿಕೆಟ್ ತಪ್ಪಿಸಿದರು’ ಎಂದು ನಾಗರಾಜ್ ಆತ್ಮೀಯರ ಬಳಿ ಹಲವು ಬಾರಿ ಅಸಮಾಧಾನವನ್ನು ತೋಡಿಕೊಂಡಿದ್ದರು.

‘ಆದರೆ, ಆ ಕ್ಷೇತ್ರದಲ್ಲಿ ಮುಸ್ಲಿಂ ಮತದಾರರು ಹೆಚ್ಚಿದ್ದರಿಂದ ಅಬ್ದುಲ್ ಅಜೀಜ್ ಅವರಿಗೆ ಪಕ್ಷ ಟಿಕೆಟ್ ನೀಡಿತ್ತು. ಅದನ್ನು ನಾಗರಾಜ್ ತಪ್ಪಾಗಿ ಅರ್ಥೈಸಿಕೊಂಡರು’ ಎಂದು ಜೆಡಿಎಸ್ ಮೂಲಗಳು ಹೇಳಿವೆ.

‘ಎಚ್.ಡಿ.ಕುಮಾರಸ್ವಾಮಿ ಮೈಸೂರಿಗೆ ಬಂದರೆ ಸಂದೇಶ್ ನಾಗರಾಜ್ ಅವರ ‘ಸಂದೇಶ್ ದ ಪ್ರಿನ್ಸ್’ ಹೋಟೆಲ್ ಬಿಟ್ಟು ಬೇರೆ ಕಡೆಗೆ ಹೋಗುವುದಿಲ್ಲ ಎಂಬ ಮಾತಿತ್ತು. ಆದರೆ ಈಗ ಆ ಆತ್ಮೀಯತೆ ಕಾಣೆಯಾಗಿದೆ. ‘ಎಚ್.ಡಿ.ಕುಮಾರಸ್ವಾಮಿ ಮುಖ್ಯಮಂತ್ರಿಯಾದಾಗಲೂ ಸೂಕ್ತ ಸ್ಥಾನಮಾನ ನೀಡಲಿಲ್ಲ’ ಎಂಬ ಅಸಮಾಧಾನವೂ ಶಮನಗೊಂಡಿಲ್ಲ.

> **ಸಂದೇಶ್ ನಾಗರಾಜ್ ಅವರೊಂದಿಗೆ ಪ್ರಭಾವಿ ಆರು ಮುಖಂಡರು ಬಿಜೆಪಿ ಸೇರಲಿದ್ದು, ಪಟ್ಟಿಯನ್ನು ವರಿಷ್ಠರಿಗೆ ಕಳಿಸಲಾಗಿದೆ.**
> **ಆರ್.ಅಶೋಕ್,** ಕಂದಾಯ ಸಚಿವ

> **ಸಂದೇಶ್ ನಾಗರಾಜ್ ಬಹಳ ದೊಡ್ಡವರು, ಅವರ ನಿರ್ಧಾರದ ಬಗ್ಗೆ ಮಾತನಾಡಲು ನಾನು ಅತಿ ಕಿರಿಯ**
> **ಸಾ.ರಾ.ಮಹೇಶ್,** ಶಾಸಕ

> **ಸಂದೇಶ್ ನಾಗರಾಜ್ ಅವರು ಪಕ್ಷಕ್ಕೆ ಬಂದರೆ ಹೃದಯ ತುಂಬಿ ಸ್ವಾಗತಿಸುವೆ**
> **ಎಸ್.ಟಿ.ಸೋಮಶೇಖರ್,** ಸಹಕಾರ ಸಚಿವ

ಸೇರ್ಪಡೆ: ನಾಗರಾಜ್ ಅವರಿಗಿಂತ ಮುಂಚೆಯೇ, ಚಾಮರಾಜ ವಿಧಾನಸಭಾ ಕ್ಷೇತ್ರದ ಪ್ರಭಾವಿ ಮುಖಂಡರಾಗಿದ್ದ ಕೆ.ಹರೀಶ್‌ಗೌಡ, ಮಾಜಿ ಶಾಸಕ ಸಿ.ಚಿಕ್ಕಮಾದು ಪುತ್ರ ಅನಿಲ್ ಕುಮಾರ್ ಪಕ್ಷ ತ್ಯಜಿಸಿದ್ದಾರೆ. ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ. ದೇವೇಗೌಡರೂ ಹೊರಹೋಗಲು ಸಜ್ಜಾಗಿದ್ದಾರೆ. ಈ ಬೆಳವಣಿಗೆಗಳು ಪಕ್ಷದ ತಳಮಟ್ಟದ ಕಾರ್ಯಕರ್ತರಲ್ಲಿ ತಳಮಳವನ್ನು ಹುಟ್ಟಿಸಿವೆ.

‘ನಾಯಕರು ದೂರ ಸರಿದರೆ ಪಕ್ಷ ಉಳಿಯುವುದಾದರೂ ಹೇಗೆ? ಮುಖಂಡರ ಅಸಮಾಧಾನವನ್ನು ಹೋಗಲಾಡಿಸುವ ಪ್ರಯತ್ನವನ್ನಾದರೂ ವರಿಷ್ಠರು ಮಾಡಬೇಕಿತ್ತು’ ಎಂಬುದು ಅವರ ಆಗ್ರಹ. ನಾಗರಾಜ್ ಅವರ ಸಹೋದರ ಸಂದೇಶ್ ಸ್ವಾಮಿ ಪ್ರತಿಕ್ರಿಯೆಗೆ ಸಿಗಲಿಲ್ಲ.

1,242 ಸಹಾಯಕ ಪ್ರಾಧ್ಯಾಪಕರ ನೇಮಕ ಅಧಿಸೂಚನೆ

ಬೆಂಗಳೂರು: ಸರ್ಕಾರಿ ಪದವಿ ಕಾಲೇಜುಗಳ 1,242 ಸಹಾಯಕ ಪ್ರಾಧ್ಯಾಪಕರ ನೇಮಕಾತಿಗೆ ಅಧಿಸೂಚನೆ ಹೊರಡಿಸಲಾಗಿದೆ. ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಕೆಇಎ) ಮೂಲಕ ನೇಮಕಾತಿ ನಡೆಯಲಿದ್ದು, ಅಕ್ಟೋಬರ್ 7ರಿಂದ ಅರ್ಜಿ ಸಲ್ಲಿಕೆ ಆರಂಭವಾಗಲಿದೆ.

‘ನೇಮಕಾತಿ ಪರೀಕ್ಷೆ ಸಂಪೂರ್ಣ ಪಾರದರ್ಶಕವಾಗಿ ನಡೆಯಲಿದೆ. ಕೆಇಎ ಮೂಲಕ ಲಿಖಿತ ಪರೀಕ್ಷೆ ನಡೆಸಲಾಗುವುದು. ಅದರಲ್ಲಿ ಪಡೆದ ಅಂಕಗಳ ಆಧಾರದಲ್ಲಿ ಆಯ್ಕೆ ಮಾಡಲಾಗುವುದು. ಸಂದರ್ಶನ ಇರುವುದಿಲ್ಲ’ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ತಿಳಿಸಿದ್ದಾರೆ.

ಡಿಸೆಂಬರ್‌ನಲ್ಲಿ ಪರೀಕ್ಷೆ ನಡೆಸಲಾಗುವುದು. ಅಭ್ಯರ್ಥಿಗಳು ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ ತೇರ್ಗಡೆಯಾಗುವುದು ಕಡ್ಡಾಯವಾಗಿರುತ್ತದೆ. ಈ ವಿಷಯಗಳಲ್ಲಿ ಮಾತ್ರ ವಿವರಣಾತ್ಮಕ ಉತ್ತರ ಬರೆಯಬೇಕು. ಉಳಿದ ವಿಷಯಗಳಲ್ಲಿ ಬಹು ಆಯ್ಕೆಯ ಪ್ರಶ್ನೆಗಳು ಮಾತ್ರ ಇರುತ್ತವೆ ಎಂದು ಮಾಹಿತಿ ನೀಡಿದ್ದಾರೆ.

ಕೆಇಎ ವೆಬ್‌ಸೈಟ್ ಮೂಲಕ ಅ.7ರಂದು ಅರ್ಜಿ ಸಲ್ಲಿಕೆ ಆರಂಭವಾಗಲಿದ್ದು, ನ.6 ಕೊನೆ ದಿನ. ಒಟ್ಟು 1,242 ಸಹಾಯಕ ಪ್ರಾಧ್ಯಾಪಕ ಹುದ್ದೆಗಳಲ್ಲಿ ಶೇಕಡ 5ರಷ್ಟು ಹುದ್ದೆಗಳನ್ನು ಇಲಾಖೆಯ ‘ಸಿ’ ವೃಂದದಿಂದ ನೇರ ನೇಮಕಾತಿ ಮಾಡಿಕೊಳ್ಳಲಾಗುತ್ತದೆ. ಅರ್ಜಿ ಶುಲ್ಕ ಪಾವತಿಗೆ ನ. 10 ಕೊನೆ ದಿನ. ಮಾಹಿತಿಗೆ ಕೆಇಎ ವೆಬ್‌ಸೈಟ್ https://kea.kar.nic.inನಲ್ಲಿ ಪಡೆಯಬಹುದು.

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರಕಾರದ ಅಧೀನಕ್ಕೆ ಒಳಪಟ್ಟಿದೆ)
ಕಾರ್ಯಾಲಯ : ಕಾರ್ಯನಿರ್ವಾಹಕ ಅಭಿಯಂತರರವರ ಕಚೇರಿ,
ಕೃಭಾಜನಿನಿ, ಐಬಿಸಿ ವಿಭಾಗ–1, ಕೆಂಭಾವಿ–585216, ತಾ: ಸುರಪುರ, ಜಿ: ಯಾದಗಿರಿ
E-Mail: ee_ibcdiv1kembhavi@yahoo.com, Phone: 08443-278674

ಸಂಖ್ಯೆ:ಕೃಭಾಜನಿನಿ/ಐಬಿಸಿ/ವಿಭಾಗ –1/ಟಿಬಿ/2021–22/609 ದಿನಾಂಕ: 29–09–2021

ತಿದ್ದುಪಡಿ ಸಂ. – 1 (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ವಿಷಯ: ಹೆಡವರ್ಕ ಕಾಮಗಾರಿಗಳ ಅಡಿಯಲ್ಲಿ ಅನುಮೋದನೆಗೊಂಡಿರುವ ಒಟ್ಟು 01 ಕಾಮಗಾರಿಗೆ ಮರು ಟೆಂಡರ್ ಪ್ರಕಟಣೆ ನೀಡುವ ಕುರಿತು.
ಉಲ್ಲೇಖ:– 1) ಈ ಕಚೇರಿ ಟೆಂಡರ್ ಪ್ರಕಟಣೆ ಪತ್ರ ಸಂ: 2021–22/ 579 ದಿನಾಂಕ 17–09–2021

ಮೇಲಿನ ವಿಷಯ ಹಾಗೂ ಉಲ್ಲೇಖಗಳಿಗೆ ಸಂಬಂಧಪಟ್ಟಂತೆ ಈ ಮೂಲಕ ಮೇಲ್ಕಾಣಿಸಿದ ಟೆಂಡರಿನಲ್ಲಿ ಪ್ರಕಟಿಸಲಾದ ದಿನಾಂಕಗಳಲ್ಲಿ ಬದಲಾವಣೆ ಮಾಡಲಾಗಿದೆ ಹಾಗು ಒಟ್ಟು 01 ಕಾಮಗಾರಿಗೆ ಅಂದಾಜು ಮೊತ್ತ 125.57 ಲಕ್ಷ ರೂ.ಗಳಿಗೆ ಟೆಂಡರ ಆಹ್ವಾನಿಸಲಾಗಿದೆ. ಈ ಕೆಳಕಾಣಿಸಿದ ದಿನಾಂಕಗಳನ್ನು ಬದಲಾವಣೆ ಮಾಡಲಾಗಿದೆ.
1) ತಾಂತ್ರಿಕ ಬಿಡ್ ಭರ್ತಿ ಮಾಡಿದ ಟೆಂಡರಗಳನ್ನು ಕಾರ್ಯನಿರ್ವಾಹಕ ಅಭಿಯಂತರರು. ಕೃಭಾಜನಿನಿ ವಿಭಾಗ ಸಂಖ್ಯೆ 1 ಕೆಂಭಾವಿ ಕಛೇರಿಯಲ್ಲಿ ದಿನಾಂಕ 12.10.2021 ರಂದು ಬೆಳಿಗ್ಗೆ 11.00 ಘಂಟೆಗೆ ತೆರೆಯಲಾಗುವದು. 2) ಆರ್ಥಿಕ ಬಿಡ್ ಭರ್ತಿ ಮಾಡಿದ ಟೆಂಡರಗಳನ್ನು ಕಾರ್ಯನಿರ್ವಾಹಕ ಅಭಿಯಂತರರು. ಕೃಭಾಜನಿನಿ ವಿಭಾಗ ಸಂಖ್ಯೆ 1 ಕೆಂಭಾವಿ ಕಛೇರಿಯಲ್ಲಿ ದಿನಾಂಕ 18.10.2021 ರಂದು ಬೆಳಿಗ್ಗೆ 11.00 ಘಂಟೆಗೆ ತೆರೆಯಲಾಗುವದು.

ಇನ್ನುಳಿದ ನಿಯಮ ಷರತ್ತುಗಳು ಉಲ್ಲೇಖದಲ್ಲಿರುವಂತೆ ಟೆಂಡರ ಪ್ರಕಟಣೆ ಸಂಖ್ಯೆ (1) ರಲ್ಲಿರುವಂತೆ ಯಥಾಸ್ಥಿತಿಯಲ್ಲಿ ಇರುತ್ತವೆ. ಯಾವುದೆ ಬದಲಾವಣೆ ಇರುವುದ್ದಿಲ್ಲ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಈ ಕೆಳಗೆ ಸಹಿ ಮಾಡಲಾದ ಅಧಿಕಾರಿಗಳ ಕಚೇರಿಯಲ್ಲಿ ಸಮಯದಲ್ಲಿ ಅಥವಾ http://eproc.karnataka.gov.in/eportal/Index.seam ರಲ್ಲಿ .ಮಾಹಿತಿ ಪಡೆಯಬಹುದಾಗಿದೆ.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಕೃಭಾಜನಿನಿ. ಐಬಿಸಿ ವಿಭಾಗ ಸಂ 1 ಕೆಂಭಾವಿ–585216

ವಾ.ಸಾ.ಸಂ.ಇ/ಯಾದಗಿರಿ/219/ಎಂಸಿ&ಎ/2021–22

ಸಿಂದಗಿ: ನಾಜಿಯಾ ಜೆಡಿಎಸ್ ಅಭ್ಯರ್ಥಿ

ಪ್ರಜಾವಾಣಿ ವಾರ್ತೆ

ರಾಮನಗರ: ಸಿಂದಗಿ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ನಾಜಿಯಾ ಶಕೀಲಾ ಅಂಗಡಿ ಅವರಿಗೆ ಜೆಡಿಎಸ್ ಟಿಕೆಟ್ ನೀಡಿದೆ.

ನಾಜಿಯಾ ಸ್ನಾತಕೋತ್ತರ ಪದವೀಧರೆ. ಪಕ್ಷ ಸಂಘಟನೆ ಹಾಗೂ ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಎಲ್ಲ ವರ್ಗದ ಸಮುದಾಯಕ್ಕೆ ಸಲ್ಲುವ ಮಹಿಳೆಯಾಗಿದ್ದಾರೆ ಎಂದು ಪಕ್ಷದ ಶಾಸಕಾಂಗ ನಾಯಕ ಎಚ್.ಡಿ. ಕುಮಾರಸ್ವಾಮಿ ತಿಳಿಸಿದ್ದಾರೆ.

ಹಾನಗಲ್ ಕ್ಷೇತ್ರದಲ್ಲಿ ಸ್ಪರ್ಧಿಸಲು ನಿಯಾಜ್ ಶೇಖ್ ಅವರಿಗೆ ಜೆಡಿಎಸ್ ಬಿ ಫಾರಂ ವಿತರಿಸಿದೆ.

‘ಗ್ರಾ.ಪಂ.ಗೆ ಒಂದು ನಾಗರಿಕ ಸೇವಾ ಕೇಂದ್ರ ಸ್ಥಾಪನೆ’

ಬೆಂಗಳೂರು: ಜನರಿಗೆ ಅತ್ಯಂತ ಅಗತ್ಯವಿರುವ ಸರ್ಕಾರಿ ಸೇವೆಗಳನ್ನು ಸಮೀಪದಲ್ಲಿಯೇ ಒದಗಿಸುವುದಕ್ಕಾಗಿ ರಾಜ್ಯದ ಪ್ರತಿ ಗ್ರಾಮ ಪಂಚಾಯಿತಿಯಲ್ಲೂ ತಲಾ ಒಂದು ನಾಗರಿಕ ಸೇವಾ ಕೇಂದ್ರ ಸ್ಥಾಪಿಸಲು ಕ್ರಮ ಕೈಗೊಳ್ಳುವಂತೆ ಇ–ಆಡಳಿತ ಇಲಾಖೆಯ ಅಧಿಕಾರಿಗಳಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೂಚನೆ ನೀಡಿದರು.

ಶುಕ್ರವಾರ ಇ– ಆಡಳಿತ ಇಲಾಖೆಯ ಪ್ರಗತಿ ಪರಿಶೀಲನಾ ಸಭೆ ನಡೆಸಿದ ಮುಖ್ಯಮಂತ್ರಿ, ‘ಎಲ್ಲ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲೂ ಒಂದು ಸೇವಾ ಕೇಂದ್ರ ಇರಲೇಬೇಕು. ಜನಸಂಖ್ಯೆ ಆಧಾರದಲ್ಲಿ ಸೇವಾ ಕೇಂದ್ರಗಳ ಸಂಖ್ಯೆಯನ್ನು ನಿರ್ಧರಿಸಲಾಗುವುದು. 2022ರ ಜನವರಿ 26ರಂದು ಈ ಕೇಂದ್ರಗಳಿಗೆ ಚಾಲನೆ ನೀಡಲಾಗುವುದು. ಆರಂಭಿಕ ಹಂತದಲ್ಲಿ ಎಷ್ಟು ಕೇಂದ್ರಗಳನ್ನು ಸ್ಥಾಪಿಸಬೇಕು ಎಂಬುದನ್ನು ಶೀಘ್ರದಲ್ಲಿ ನಿರ್ಧರಿಸಲಾಗುವುದು’ ಎಂದರು.

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನಸೌಧ, ಬೆಂಗಳೂರು – 560 001.

ಸಂಖ್ಯೆ : ಸಿಆಸುಇ 19 ಸೇಆನ್ಯಾ 2021 ದಿನಾಂಕ : 01.10.2021

ಜಾಹೀರಾತು

ವಿಷಯ : ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿಯ ಆಡಳಿತ ಸದಸ್ಯರ ನೇಮಕಾತಿ ಬಗ್ಗೆ,

ರಾಜ್ಯ ಸರ್ಕಾರವು ದಿನಾಂಕ : 18.08.2021ರ ಜಾಹೀರಾತಿನಲ್ಲಿ ನ್ಯಾಯಮಂಡಳಿಯ ಬೆಳಗಾವಿ ಮತ್ತು ಕಲಬುರಗಿ ಪೀಠಗಳಲ್ಲಿ ಖಾಲಿ ಇರುವ ಎರಡು ಆಡಳಿತ ಸದಸ್ಯರ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಿತ್ತು. ಆದರೆ, THE TRIBUNALS REFORMS ACT, 2021 (ಕೇಂದ್ರ ಅಧಿನಿಯಮ ಸಂಖ್ಯೆ : 33/2021) ದಿನಾಂಕ : 04.04.2021 ರಂದು ಜಾರಿಗೆ ಬಂದಿದ್ದು, ಈ ಅಧಿನಿಯಮದಡಿ ಕೇಂದ್ರ ಸರ್ಕಾರದಿಂದ ರಚಿಸಲಾದ The Tribunals (Conditions of Service) Rules, 2021 ನಿಯಮಗಳು ದಿನಾಂಕ : 16.09.2021 ರಂದು ಜಾರಿಗೆ ಬಂದಿದ್ದು, ಈ ನಿಯಮಗಳಲ್ಲಿ ನ್ಯಾಯಮಂಡಳಿಗಳ ಅಧ್ಯಕ್ಷರು ಹಾಗೂ ಸದಸ್ಯರ ನೇಮಕಾತಿಗೆ ಅರ್ಹತೆ, ನೇಮಕಾತಿ, ವೇತನ ಹಾಗೂ ಭತ್ಯೆಗಳು ಹಾಗೂ ಇನ್ನಿತರೆ ಸೇವಾ ಷರತ್ತುಗಳನ್ನು ನಿಗದಿಪಡಿಸಲಾಗಿರುವ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರವು ದಿನಾಂಕ : 18.08.2021 ರ ಜಾಹೀರಾತನ್ನು ರದ್ದುಪಡಿಸಿ ಈ ಕೆಳಕಂಡಂತೆ ಹೊಸ ಜಾಹೀರಾತನ್ನು ಪ್ರಕಟಿಸಿದೆ. 2. ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿಯ ಆಡಳಿತ ಸದಸ್ಯರಾಗಿ, ನೇಮಕಗೊಳ್ಳಲು ಅರ್ಹತೆಯನ್ನು the Tribunal (Conditions of Service) Rules, 2021 ರ ನಿಯಮ 3 ರಲ್ಲಿ ಈ ಕೆಳಕಂಡಂತೆ ನಿಗದಿಪಡಿಸಲಾಗಿದೆ:

ಉಪನಿಯಮ: 5 (c) A person shall not be qualified for appointment as Administrative Member, unless he has held the post of Additional Secretary to the Government of India or any other post under the Central Government or a State Government and carrying the scale of pay which is not less than that of an Additional Secretary to the Government of India : Provided that the officers belonging to the All India services who were or are on Central deputation to a lower post shall be deemed to have held the post of Additional Secretary from the date such officers were granted proforma promotion or actual promotion whichever is earlier to the level of Additional Secretary and the period spent on Central deputation after such date shall count for qualifying service for the purpose of this clause"

3. the Tribunals Reforms Act , 2021 ಸೆಕ್ಷನ್ 3(1) ರಂತೆ ಐವತ್ತು ವರ್ಷ ಪೂರೈಸದ ವ್ಯಕ್ತಿಯು ಯಾವುದೇ ನ್ಯಾಯಮಂಡಳಿಯ ಸದಸ್ಯನಾಗಿ ನೇಮಕ ಹೊಂದಲು ಅರ್ಹನಾಗಿರತಕ್ಕದ್ದಲ್ಲ. 4. The Tribunals (Conditions of Service) Rules, 2021 ನಿಯಮ 10 ರಂತೆ ಸದಸ್ಯನಿಗೆ ಮಾಸಿಕ ರೂ.ಎರಡು ಲಕ್ಷದ ಇಪ್ಪತ್ತೈದು ಸಾವಿರಗಳ ವೇತನವನ್ನು ಸಂದಾಯ ಮಾಡತಕ್ಕದ್ದು ಹಾಗೂ ಈ ನಿಯಮಗಳ ನಿಯಮ 11 ರಂತೆ ಸದಸ್ಯನು ಭಾರತ ಸರ್ಕಾರದ ಗ್ರೂಪ್-ಎ ಹುದ್ದೆಯನ್ನು ಹೊಂದಿರುವ ಹಾಗೂ ಅದೇ ವೇತನವನ್ನು ಹೊಂದಿರುವ ಅಧಿಕಾರಿಗಳಿಗೆ ಲಭ್ಯವಾಗುವ ಭತ್ಯೆಗಳು ಹಾಗೂ ಸೌಲಭ್ಯಗಳನ್ನು ಪಡೆಯಲು ಅರ್ಹನಿರುತ್ತಾನೆ. 5. ಸದಸ್ಯನು ಈ ನಿಯಮಗಳನುಸಾರ ಅರ್ಹವಿರುವ ಮನೆ ಬಾಡಿಗೆ ಭತ್ಯೆ, ಪ್ರಯಾಣ ಭತ್ಯೆ, ರಜೆ, ನಿವೃತ್ತಿ ವೇತನಗಳನ್ನು ಪಡೆಯಲು ಅರ್ಹನಿರುತ್ತಾನೆ. ಅಲ್ಲದೇ, ಇತರೆ ಸೇವಾ ಷರತ್ತು ಹಾಗೂ ನಿಬಂಧನೆಗಳು the Tribunals Reforms Act, 2021 ಹಾಗೂ the Tribunals (Conditions of Service) Rules, 2021 ಗಳಲ್ಲಿನ ಅವಕಾಶಗಳಂತೆ ನಿರ್ಧರಿಸಲ್ಪಡುತ್ತವೆ. 6. the Tribunal Reforms Act, 2021 ರ ಸೆಕ್ಷನ್ 5(ii) ರಡಿ ಸದಸ್ಯನು ನಾಲ್ಕು ವರ್ಷಗಳು ಅಥವಾ ಅರವತ್ತೇಳು ವರ್ಷ ಪೂರೈಸುವವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಪದಾವಧಿಯನ್ನು ಹೊಂದಿರುತ್ತಾನೆ. 7. ಖಾಲಿ ಹುದ್ದೆಯ ಸುತ್ತೋಲೆ ಹಾಗೂ ಅರ್ಜಿ ನಮೂನೆ ಮತ್ತು ಅರ್ಜಿದಾರನು ಸಲ್ಲಿಸಬೇಕಾದ ಘೋಷಣಾ ಪತ್ರದ ನಮೂನೆಯನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಅಧಿಕೃತ ಜಾಲತಾಣವಾದ https://dpar.karnataka.gov.in ರಲ್ಲಿ ಪಡೆಯಬಹುದಾಗಿದೆ. ಭರ್ತಿ ಮಾಡಿದ ಅರ್ಜಿಯನ್ನು (ದ್ವಿ ಪ್ರತಿಯಲ್ಲಿ) ಅವಶ್ಯಕ ದಾಖಲೆಗಳೊಂದಿಗೆ (ಐದು ಪ್ರತಿಗಳಲ್ಲಿ) ಸರ್ಕಾರದ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ಕೊಠಡಿ ಸಂಖ್ಯೆ : 246, 2ನೇ ಮಹಡಿ, ವಿಧಾನಸೌಧ, ಬೆಂಗಳೂರು–560001 ಇವರಿಗೆ ಸಲ್ಲಿಸತಕ್ಕದ್ದು. 8. ಅರ್ಜಿಯನ್ನು ಸಮುಚಿತ ಮಾರ್ಗದಲ್ಲಿ (ಅವಶ್ಯಪಡಿಸಿರುವಲ್ಲಿ) ಸಲ್ಲಿಸತಕ್ಕದ್ದು. 9. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : 22.10.2021. The Administrative Tribunals Act, 1985, The Tribunals Reforms Act, 2021 and the Tribunal (Conditions of Service) Rules, 2021ರ ಕಾಯ್ದೆ / ನಿಯಮಗಳ ಪ್ರತಿಯನ್ನು ಇಲಾಖೆಯ ಜಾಲತಾಣದಲ್ಲಿ ವೀಕ್ಷಿಸಬಹುದು.

ವಿ.ಸೂ: ಅರ್ಜಿ ಸಲ್ಲಿಸುವ ಪೂರ್ವದಲ್ಲಿ ಮೇಲೆ ಉಲ್ಲೇಖಿಸಿರುವ ಕಾಯ್ದೆ ಹಾಗೂ ನಿಯಮಗಳು ಹಾಗೂ ಅರ್ಜಿದಾರರಿಗೆ ನೀಡಲಾಗಿರುವ ನಿರ್ದಿಷ್ಟ ಸೂಚನೆಗಳನ್ನು ಸಂಪೂರ್ಣವಾಗಿ ಓದಿಕೊಳ್ಳುವಂತೆ ಕೋರಿದೆ.

DIPR/DDU/1748/2021-22

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಸತ್ಯದೊಂದಿಗೆ ‘ಮೋಹನದಾಸ’ನ ಮುಖಾಮುಖಿ

● ಶರತ್ ಹೆಗ್ಡೆ

ಬಾಲ್ಯದಿಂದಲೇ ಮಹಾತ್ಮಾ ಗಾಂಧೀಜಿಯವರ ಸತ್ಯದೊಂದಿಗಿನ ಅಪ್ಪಟ ಹೋರಾಟವನ್ನು ಕಟ್ಟಿಕೊಡಲು ಯತ್ನಿಸಿದೆ ಪಿ. ಶೇಷಾದ್ರಿ ನಿರ್ದೇಶನದ ‘ಮೋಹನದಾಸ’.

ಬಾಲಕ ಮೋಹನದಾಸ ತಪ್ಪು ಮಾಡುತ್ತಾನೆ. ಗೊತ್ತಿದ್ದೂ ಆ ತಪ್ಪುಗಳನ್ನು ಮತ್ತೆ ಮಾಡುತ್ತಾನೆ. ಮನಸ್ಸಿನಲ್ಲಿ ತೊಳಲಾಡುತ್ತಾನೆ. ಅದೆಲ್ಲವನ್ನೂ ಹೇಳಲೇಬೇಕೆಂದಾಗ ಕೇಳುವ ಕಿವಿಗಳಿಗೆ ತಡಕಾಡುತ್ತಾನೆ. ಪಶ್ಚಾತ್ತಾಪದ ಘಟನೆಗಳನ್ನೆಲ್ಲಾ ಅಕ್ಷರ ರೂಪಕ್ಕಿಳಿಸಿ ಅಪ್ಪನಿಗೆ ಒಪ್ಪಿಸುತ್ತಾನೆ. ಪತ್ರ ಓದಿದ ಕರಮಚಂದ್, ‘ಈಗ ನೀನು ಶುದ್ಧ ಅಪರಂಜಿಯಾದೆ’ ಎಂದು ಘೋಷಿಸುವಲ್ಲಿಗೆ ಮೋಹನದಾಸನ ಬಾಲ್ಯದ ಶೋಧ ತೆರೆಯ ಮೇಲೆ ಮುಗಿಯುತ್ತದೆ.

ಪೋರಬಂದರ್‌ನಲ್ಲಿ ಗಾಂಧೀಜಿಯ ಬಾಲ್ಯಸಹಜ ಜೀವನದ ಕೆಲವೇ ಘಟನೆಗಳನ್ನು ಆಯ್ದುಕೊಂಡು ಪ್ರತ್ಯೇಕ ಘಟಕಗಳನ್ನಾಗಿಸಿ (ಬ್ಲಾಕ್‌ಗಳನ್ನಾಗಿಸಿ) ನಿರ್ದೇಶಕರು ವಿಸ್ತರಿಸುತ್ತಾ ಹೋಗಿದ್ದಾರೆ. ಹಾಗಾಗಿ ಇಡೀ ಚಿತ್ರದಲ್ಲಿ ಯಾವುದಾದರೂ ಒಂದು ಬ್ಲಾಕ್ ನೋಡಿದರೂ ‘ಮೋಹನದಾಸ’ ಪ್ರೇಕ್ಷಕನಿಗೆ ತಲುಪಿಬಿಡುತ್ತಾನೆ.

ಹಣ ಕಳ್ಳತನ ಮಾಡಿದ್ದು, ಸಿಗರೇಟ್ ಸೇದಿದ್ದು, ಮಾಂಸ ತಿಂದದ್ದು... ಇದೇ ನಾನು ಮಾಡಿದ ತಪ್ಪು ಎಂದು ಗಾಂಧೀಜಿಯ ತೊಳಲಾಟವನ್ನು ತೋರಿಸುವಲ್ಲಿ ಈ ಎರಡೇ ಸನ್ನಿವೇಶಗಳನ್ನು ಚಿತ್ರದುದ್ದಕ್ಕೂ ಹೆಚ್ಚು ತೋರಿಸಿದ್ದಾರೆ. ಹಾಗಾಗಿ ಸಣ್ಣ ಸಣ್ಣ ಸಂದರ್ಭಗಳ ಸಾಕ್ಷ್ಯಚಿತ್ರದಂತೆಯೂ ‘ಮೋಹನದಾಸ’ ಗೋಚರಿಸುತ್ತದೆ.

ತಾಂತ್ರಿಕವಾಗಿ ಗಾಂಧಿ ಕಾಲದ ಸನ್ನಿವೇಶ, ಹಿನ್ನೆಲೆಗಳ ಮರುಸೃಷ್ಟಿಗೆ ನಿರ್ದೇಶಕರು ಸಾಕಷ್ಟು ಪ್ರಯತ್ನಪಟ್ಟಿದ್ದಾರೆ. ಸ್ವವಿಮರ್ಶೆಯ ಸನ್ನಿವೇಶವನ್ನು ನೆರಳು ಮತ್ತು ಮಂದ ಬೆಳಕಿನಲ್ಲೇ ಕಥೆ ಹೇಳಲು ಛಾಯಾಗ್ರಹಣ ಪ್ರಯತ್ನಿಸಿದೆ. ಕೆಲವೆಡೆ ಸಾಕಷ್ಟು ಪ್ರಯಾಸಪಟ್ಟಿದೆ. ಯಾವುದೇ ಕಸರತ್ತು ಇಲ್ಲದ ಪ್ರಸ್ತುತಿ ಇದೆ. ಹಲವೆಡೆ ಮೌನವೇ ಸಾಕಷ್ಟು ಮಾತನಾಡುತ್ತದೆ. ಅಲ್ಲಲ್ಲಿ ಸರಳ ಸಾಹಿತ್ಯದ ಹಾಡುಗಳು, ವೈಷ್ಣವ ಜನತೋ ಕನ್ನಡ ಅವತರಣಿಕೆಯೇನೋ ಇದೆ. ಆದರೆ ಅದೇ ಹಾಡಿನ ಹಿನ್ನೆಲೆ ಸಂಗೀತ ಮಾತ್ರ ಮನಸ್ಸಿನಲ್ಲಿ ಉಳಿಯುತ್ತದೆ.

ಕಸ್ತೂರ್‌ಬಾ ಪಾತ್ರ ಗೃಹಿಣಿಯ ನಡವಳಿಕೆಗಷ್ಟೇ ಸೀಮಿತವಾಗಿಬಿಟ್ಟಿದೆ. ಪುತಲಿಬಾಯಿ (ಶ್ರುತಿ) ಮೋಹನದಾಸನ ಶಕ್ತಿ. ಆದರೆ, ಕರಮ್‌ಚಂದ್ (ಅನಂತ್ ಮಹದೇವನ್) ಕೊನೆವರೆಗೂ ಅಸೌಖ್ಯದಿಂದ ಶಯ್ಯಾವಸ್ಥೆಯಲ್ಲೇ ಇರುವ ಪಾತ್ರವಾಗಿ ಮಲಗಿಯೇಬಿಟ್ಟಿದೆ. ಪಶ್ಚಾತ್ತಾಪ ಅರ್ಪಣೆ ವೇಳೆಗಷ್ಟೇ ತಂದೆತನದ ಉತ್ಕಟ ಭಾವ ಪ್ರಕಟಿಸಲು ಅವಕಾಶ ಸಿಕ್ಕಿದೆ.

ದತ್ತಣ್ಣ ಗರ್ದಿಗಮ್ಮತ್ತಿನ ವಿವರಣೆಕಾರನ ವೇಷದಲ್ಲಿ ಕಾಣಿಸಿ ಶ್ರವಣಕುಮಾರನ ಕಥೆ ಹೇಳುವ ಪರಿ, ಮಕ್ಕಳಿಗೆ ತಾತನನ್ನು ನೆನಪಿಸುತ್ತದೆ. ‘ಶ್ರವಣ ಕುಮಾರ ಸತ್ತಿಲ್ಲ, ನಮ್ಮ ಹೃದಯದಲ್ಲೇ ಇದ್ದಾನೆ’ ಎಂದಾಗ, ಅದು ಮೋನ್ಯಾನ (ಮೋಹನದಾಸ) ಪಾಲಿಗೆ ಒಗಟಾಗಿ ಕೇಳುತ್ತದೆ. ಕೊನೆಯಲ್ಲಿ ಗೆಲ್ಲುವ ಸತ್ಯಕ್ಕಾಗಿ ನಾವೇಕೆ ಜೀವನಪೂರ್ತಿ ಕಷ್ಟಪಡಬೇಕು? ಎಂಬ ಮೋಹನದಾಸನ ಪ್ರಶ್ನೆಗೆ ಪುತಲಿಬಾಯಿ, ‘ಅದೆಲ್ಲಾ ದೇವರ ಪರೀಕ್ಷೆ’ ಎಂದು ಉತ್ತರಿಸುವುದು ಆ ಸಂದರ್ಭವನ್ನು ನಿವಾರಿಸುವ ಪ್ರಯತ್ನವಾಗಿ ಕಾಣಿಸುತ್ತದೆಯೇ ವಿನಾ ಮೋಹನದಾಸನಿಗೆ ಸರಿಯಾದ ಉತ್ತರ ಆಗುವುದಿಲ್ಲ. ಕರ್ಸನ್‌ದಾಸ್ ಗಾಂಧಿಗೆ ಸಾಲಕೊಟ್ಟ ಸ್ನೇಹಿತರು ಮೋಹನದಾಸನನ್ನು ಅಡ್ಡಗಟ್ಟಿ ಚೂರಿ ಹಿಡಿದು ಬೆದರಿಸುವುದು, ಬಾಲಿಶ ಸನ್ನಿವೇಶ ಎನಿಸುತ್ತದೆ.

ಒಟ್ಟಿನಲ್ಲಿ ಗಾಂಧಿಯನ್ನು ಎರಡು ಗಂಟೆಗಳ ಚೌಕಟ್ಟಿನಲ್ಲಿ ಹಿಡಿದಿಡುವುದು ಕಷ್ಟ. ಆದರೆ, ಅಷ್ಟರೊಳಗೆ ಸಾಧ್ಯವಾದಷ್ಟು ಅರ್ಥ ಮಾಡಿಸಲು ಪ್ರಯತ್ನ ಆಗಿದೆ.

ನಾವು ನೋಡಿದ ಸಿನಿಮಾ

ಮೋಹನದಾಸ

- **ನಿರ್ಮಾಣ:** ಮಿತ್ರಚಿತ್ರ
- **ನಿರ್ದೇಶನ:** ಪಿ.ಶೇಷಾದ್ರಿ
- **ಸಂಗೀತ:** ಪ್ರವೀಣ್ ಗೋಡ್ಖಿಂಡಿ
- **ಛಾಯಾಗ್ರಹಣ:** ಜಿ.ಎಸ್. ಭಾಸ್ಕರ್
- **ಸಂಕಲನ:** ಬಿ.ಎಸ್. ಕೆಂಪರಾಜು
- **ತಾರಾಗಣ:** ಸಮರ್ಥ್ ಹೊಂಬಾಳ್, ಪರಂ ಸ್ವಾಮಿ, ಶ್ರುತಿ, ಅನಂತ್ ಮಹದೇವನ್, ದತ್ತಣ್ಣ

28	ನಿಯೋಜಿತ ಅಧಿಕಾರಿ	ಬಿ.ಸಿ.ಶಿವಾನಂದ ಮೂರ್ತಿ,	ಉಪವಿಭಾಗಾಧಿಕಾರಿ, ಪಾಂಡವಪುರ ಉಪವಿಭಾಗ	ಉಪವಿಭಾಗಾಧಿಕಾರಿಗಳ ಕಛೇರಿ, ಪಾಂಡವಪುರ	08236–255129	ಮಂಡ್ಯ ಜಿಲ್ಲೆ
29	ನಿಯೋಜಿತ ಅಧಿಕಾರಿ	ಚಂದ್ರಶೇಖರ್ ಶಂ. ಗಾಳಿ,	ತಹಶೀಲ್ದಾರ್, ಮಂಡ್ಯ	ತಾಲ್ಲೂಕು ಕಛೇರಿ, ಮಂಡ್ಯ	08232–297131	ಮಂಡ್ಯ
30	ನಿಯೋಜಿತ ಅಧಿಕಾರಿ	ನರಸಿಂಹಮೂರ್ತಿ ಟಿ.ಎನ್	ತಹಶೀಲ್ದಾರ್, ಮದ್ದೂರು	ತಾಲ್ಲೂಕು ಕಛೇರಿ, ಮದ್ದೂರು	08232–298074	ಮದ್ದೂರು
31	ನಿಯೋಜಿತ ಅಧಿಕಾರಿ	ವಿಜಿಯಣ್ಣ ಎಂ	ತಹಶೀಲ್ದಾರ್, ಮಳವಳ್ಳಿ	ತಾಲ್ಲೂಕು ಕಛೇರಿ, ಮಳವಳ್ಳಿ	08231–242277	ಮಳವಳ್ಳಿ
32	ನಿಯೋಜಿತ ಅಧಿಕಾರಿ	ಪ್ರಮೋದ್ ಎಲ್. ಪಾಟೀಲ್	ತಹಶೀಲ್ದಾರ್, ಪಾಂಡವಪುರ	ತಾಲ್ಲೂಕು ಕಛೇರಿ, ಪಾಂಡವಪುರ	08236–255128	ಪಾಂಡವಪುರ
33	ನಿಯೋಜಿತ ಅಧಿಕಾರಿ	ಶ್ವೇತಾ ಎನ್ ರವೀಂದ್ರ,	ತಹಶೀಲ್ದಾರ್, ಶ್ರೀರಂಗಪಟ್ಟಣ	ತಾಲ್ಲೂಕು ಕಛೇರಿ, ಶ್ರೀರಂಗಪಟ್ಟಣ	08236–252029	ಶ್ರೀರಂಗಪಟ್ಟಣ
34	ನಿಯೋಜಿತ ಅಧಿಕಾರಿ	ಶಿವಮೂರ್ತಿ ಎಂ.	ತಹಶೀಲ್ದಾರ್, ಕೆ.ಆರ್.ಪೇಟೆ	ತಾಲ್ಲೂಕು ಕಛೇರಿ, ಕೆ.ಆರ್.ಪೇಟೆ	08230–262227	ಕೆ.ಆರ್.ಪೇಟೆ
35	ನಿಯೋಜಿತ ಅಧಿಕಾರಿ	ಎನ್.ಎ. ಕುಂಞ ಅಹಮದ್,	ತಹಶೀಲ್ದಾರ್, ನಾಗಮಂಗಲ	ತಾಲ್ಲೂಕು ಕಛೇರಿ, ನಾಗಮಂಗಲ	08234–285045	ನಾಗಮಂಗಲ
			ಹಾಸನ ಜಿಲ್ಲೆ			
36	ಸಹಾಯಕ ಮತದಾರರ ನೋಂದಣಾಧಿಕಾರಿ	ಆರ್ ಗಿರೀಶ್, ಭಾ.ಆ.ಸೇ.,	ಜಿಲ್ಲಾಧಿಕಾರಿ ಹಾಸನ ಜಿಲ್ಲೆ	ಜಿಲ್ಲಾಧಿಕಾರಿಗಳ ಕಛೇರಿ ಹಾಸನ	08172–267345	ಹಾಸನ ಜಿಲ್ಲೆ
37	ನಿಯೋಜಿತ ಅಧಿಕಾರಿ	ಕವಿತ ರಾಜಾರಾಂ,.	ಅಪರ ಜಿಲ್ಲಾಧಿಕಾರಿ ಹಾಸನ ಜಿಲ್ಲೆ	ಜಿಲ್ಲಾಧಿಕಾರಿಗಳ ಕಛೇರಿ, ಹಾಸನ	08172–250554	ಹಾಸನ ಜಿಲ್ಲೆ
38	ನಿಯೋಜಿತ ಅಧಿಕಾರಿ	ಬಿ.ಎ. ಜಗದೀಶ.	ಉಪವಿಭಾಗಾಧಿಕಾರಿ ಹಾಸನ ಉಪವಿಭಾಗ	ಉಪವಿಭಾಗಾಧಿಕಾರಿಗಳ ಕಚೇರಿ ಹಾಸನ	08172–268403	ಹಾಸನ ಜಿಲ್ಲೆ
39	ನಿಯೋಜಿತ ಅಧಿಕಾರಿ	ಪ್ರತೀಕ್ ಬಯಾಲ್,	ಉಪವಿಭಾಗಾಧಿಕಾರಿ ಸಕಲೇಶಪುರ ಉಪವಿಭಾಗ	ಉಪವಿಭಾಗಾಧಿಕಾರಿಗಳ ಕಛೇರಿ ಸಕಲೇಶಪುರ	08173–244003	ಹಾಸನ ಜಿಲ್ಲೆ
40	ನಿಯೋಜಿತ ಅಧಿಕಾರಿ	ರೇಖಾ,	ತಹಶೀಲ್ದಾರ್, ಹಾಸನ ಜಿಲ್ಲಾಧಿಕಾರಿ ಕಛೇರಿ	ಜಿಲ್ಲಾಧಿಕಾರಿಗಳ ಕಛೇರಿ ಹಾಸನ	08172–265028	ಹಾಸನ ಜಿಲ್ಲೆ
41	ನಿಯೋಜಿತ ಅಧಿಕಾರಿ	ಜೆ.ಬಿ ಮಾರುತಿ,	ತಹಶೀಲ್ದಾರ್, ಚನ್ನರಾಯಪಟ್ಟಣ	ಚನ್ನರಾಯಪಟ್ಟಣ, ತಾಲ್ಲೂಕು ಕಚೇರಿ	08176–252235	ಚನ್ನರಾಯಪಟ್ಟಣ
42	ನಿಯೋಜಿತ ಅಧಿಕಾರಿ	ಸಂತೋಷ ಕುಮಾರ್,	ತಹಶೀಲ್ದಾರ್, ಅರಸೀಕೆರೆ	ಅರಸೀಕೆರೆ, ತಾಲ್ಲೂಕು ಕಚೇರಿ	08174–234879	ಅರಸೀಕೆರೆ
43	ನಿಯೋಜಿತ ಅಧಿಕಾರಿ	ಮೋಹನ್ ಕುಮಾರ್.	ತಹಶೀಲ್ದಾರ್, ಬೇಲೂರು	ಬೇಲೂರು, ತಾಲ್ಲೂಕು ಕಚೇರಿ	08177–230800	ಬೇಲೂರು
44	ನಿಯೋಜಿತ ಅಧಿಕಾರಿ	ಎನ್ ವಿ. ನಟೇಶ್,	ತಹಶೀಲ್ದಾರ್, ಹಾಸನ	ಹಾಸನ, ತಾಲ್ಲೂಕು ಕಚೇರಿ	08172–260395	ಹಾಸನ
45	ನಿಯೋಜಿತ ಅಧಿಕಾರಿ	ಕೃಷ್ಣಮೂರ್ತಿ,	ತಹಶೀಲ್ದಾರ್, ಹೊಳೆನರಸೀಪುರ	ಹೊಳೆನರಸೀಪುರ, ತಾಲ್ಲೂಕು ಕಚೇರಿ	08175–272111	ಹೊಳೆನರಸೀಪುರ
46	ನಿಯೋಜಿತ ಅಧಿಕಾರಿ	ರೇಣುಕುಮಾರ್,	ತಹಶೀಲ್ದಾರ್, ಅರಕಲಗೂಡು	ಅರಕಲಗೂಡು, ತಾಲ್ಲೂಕು ಕಚೇರಿ	08175–221736	ಅರಕಲಗೂಡು
47	ನಿಯೋಜಿತ ಅಧಿಕಾರಿ	ಜಯಾಕುಮಾರ್.	ತಹಶೀಲ್ದಾರ್, ಸಕಲೇಶಪುರ	ಸಕಲೇಶಪುರ, ತಾಲ್ಲೂಕು ಕಚೇರಿ	08173–244004	ಸಕಲೇಶಪುರ
48	ನಿಯೋಜಿತ ಅಧಿಕಾರಿ	ಶೀರಿನ್ ತಾಜ್,	ತಹಶೀಲ್ದಾರ್, ಆಲೂರು	ಆಲೂರು, ತಾಲ್ಲೂಕು ಕಚೇರಿ	08170–218222	ಆಲೂರು

ಎರಡನೆಯ ಅನುಸೂಚಿ
ನಮೂನೆ–18
(ನಿಯಮ 31 ನೋಡಿ)
ಪದವೀಧರರ ಕ್ಷೇತ್ರದ ಮತದಾರರರ ಪಟ್ಟಿಯಲ್ಲಿ ಹೆಸರನ್ನು ಸೇರಿಸುವ ಬಗ್ಗೆ ಕೋರಿಕೆ

ಅರ್ಜಿದಾರರ ಭಾವಚಿತ್ರ

ಇವರಿಗೆ,
ಮತದಾರರರ ನೋಂದಣಾಧಿಕಾರಿ,
________ (ಪದವೀಧರ) ಚುನಾವಣಾ ಕ್ಷೇತ್ರ
ಮಾನ್ಯರೆ,
ನನ್ನ ಹೆಸರನ್ನು ________ (ಪದವೀಧರರ) ಚುನಾವಣಾ ಕ್ಷೇತ್ರದ ಮತದಾರರ ಪಟ್ಟಿಯಲ್ಲಿ ನೋಂದಾಯಿಸಬೇಕೆಂದು ನಾನು ಕೋರುತ್ತೇನೆ.
ವಿವರಗಳು ಈ ಕೆಳಕಂಡಂತಿವೆ :–
ಹೆಸರು (ಪೂರ್ಣವಾಗಿ) ________ ಲಿಂಗ: ________
ತಂದೆಯ/ ತಾಯಿಯ / ಗಂಡನ ಹೆಸರು (ಪೂರ್ಣವಾಗಿ) ________
ವಿದ್ಯಾರ್ಹತೆ ________
ಉದ್ಯೋಗ ________
ಮನೆ ವಿಳಾಸ (ಸಾಮಾನ್ಯವಾಗಿ ವಾಸವಾಗಿರುವ ಸ್ಥಳ) ________
ಮನೆ ಸಂಖ್ಯೆ ________ ಬೀದಿ / ಮೊಹಲ್ಲಾ ________ ಪಟ್ಟಣ/ಗ್ರಾಮ ________
ಅಂಚೆ ಕಚೇರಿ ________ ಪೊಲೀಸ್ ಠಾಣೆ/ ತಹಸೀಲ್/ ತಾಲ್ಲೂಕು/ ಮೌಜಾ ________
ಜಿಲ್ಲೆ ________
ವಯಸ್ಸು ________

ಯಾವುದೇ ವಿಧಾನಸಭಾ ಕ್ಷೇತ್ರದ ಮತದಾರರರಾಗಿ ಹೆಸರನ್ನು ನೋಂದಾಯಿಸಲಾಗಿದೆಯೇ? ________ ಹೌದಾದಲ್ಲಿ, ಈ ಮುಂದಿನ ವಿವರಗಳನ್ನು ತಿಳಿಸಿ.
(ಎ) ವಿಧಾನಸಭಾ ಕ್ಷೇತ್ರದ ಸಂಖ್ಯೆ ಮತ್ತು ಹೆಸರು ________
(ಬಿ) ಭಾಗ/ಮತದಾನ ಕೇಂದ್ರದ ಸಂಖ್ಯೆ (ಗೊತ್ತಿದ್ದರೆ) ________
(ಸಿ) ಜನ್ಮ ದಿನಾಂಕ ________
(ಡಿ) ಮತದಾರರರ ಭಾವಚಿತ್ರವಿರುವ ಗುರುತಿನ ಚೀಟಿಯ ಸಂಖ್ಯೆ (ಯಾವುದಾದರೂ ಇದ್ದರೆ) ________
ಸಂಪರ್ಕಿಸಬೇಕಾದ ಸಂಖ್ಯೆ (1) ಮೊಬೈಲ್ ________ (2) ಸ್ಥಿರ ದೂರವಾಣಿ ________
ಇ–ಮೇಲ್ ವಿಳಾಸ (ಯಾವುದಾದರೂ ಇದ್ದರೆ) ________

2. *ನಾನು ________ ವಿಶ್ವವಿದ್ಯಾಲಯದ ಪದವೀಧರನಾಗಿದ್ದು ಪದವಿ/ ಡಿಪ್ಲೋಮ ಪರೀಕ್ಷೆಯಲ್ಲಿ ________ ವರ್ಷದಲ್ಲಿ ತೇರ್ಗಡೆಯಾಗಿರುತ್ತೇನೆ.
ಅಥವಾ
*ನಾನು ಭಾರತದ ವಿಶ್ವವಿದ್ಯಾಲಯದ ಒಬ್ಬ ಪದವೀಧರನಿಗೆ ಸಮಾನವಾದ ವಿದ್ಯಾರ್ಹತೆಯಾಗಿರುವ ________ ರಲ್ಲಿ ಡಿಪ್ಲೋಮ/ ಪ್ರಮಾಣಪತ್ರವನ್ನು ಹೊಂದಿರುತ್ತೇನೆ. ಆ ಡಿಪ್ಲೋಮ/ ಪ್ರಮಾಣಪತ್ರ ಪರೀಕ್ಷೆಯಲ್ಲಿ ________ ನೇ ವರ್ಷದಲ್ಲಿ ತೇರ್ಗಡೆಯಾಗಿರುತ್ತೇನೆ.
3. ಪದವೀಧರನಾಗಿರುವುದಕ್ಕೆ/ ಡಿಪ್ಲೋಮ/ ಪ್ರಮಾಣಪತ್ರವನ್ನು ಹೊಂದಿರುವುದರ ಸಮರ್ಥನೆಯಾಗಿ ನಾನು ಇದರೊಂದಿಗೆ ಈ ಮುಂದಿನವುಗಳನ್ನು ________ ಒಪ್ಪಿಸುತ್ತಿದ್ದೇನೆ.
4. *ನನ್ನ ಹೆಸರು ಈ ಪದವೀಧರ ಕ್ಷೇತ್ರದ ಅಥವಾ ಇತರ ಯಾವುದೇ ಪದವೀಧರರ ಕ್ಷೇತ್ರದ ಮತದಾರರ ಪಟ್ಟಿಯಲ್ಲಿ ಸೇರ್ಪಡೆಯಾಗಿಲ್ಲ.
ಅಥವಾ
**ನನ್ನ ಹೆಸರು ________ ಪದವೀಧರರ ಕ್ಷೇತ್ರ ಮತದಾರರ ಪಟ್ಟಿಯಲ್ಲಿ ಕೆಳಗೆ ಕೊಡಲಾದ ವಿಳಾಸದಲ್ಲಿ ಸೇರ್ಪಡೆಯಾಗಿರುತ್ತದೆ ಅದನ್ನು ತೆಗೆದುಹಾಕಬೇಕಾಗಿ ಕೋರುತ್ತೇನೆ.
ವಿಳಾಸ ________
5. ನಾನು ಭಾರತದ ಪ್ರಜೆಯಾಗಿರುವುದಾಗಿ ಮತ್ತು ಮೇಲೆ ಕೊಡಲಾದ ಎಲ್ಲಾ ವಿವರಗಳು ನನಗೆ ತಿಳಿದಿರುವಷ್ಟರಮಟ್ಟಿಗೆ ಸತ್ಯವೆಂದು ಘೋಷಿಸುತ್ತೇನೆ.

ಸ್ಥಳ________
ದಿನಾಂಕ ________ ಕೋರಿಕೆದಾರರ ಸಹಿ.

ಸೂಚನೆ: ಯಾವುದೇ ವ್ಯಕ್ತಿಯು, ಒಂದು ಸುಳ್ಳು ವಿವರಣೆಯನ್ನು ಅಥವಾ ಘೋಷಣೆಯನ್ನು ನೀಡಿದರೆ ಮತ್ತು ಅದು ಸುಳ್ಳೆಂದು ಆತನಿಗೆ ತಿಳಿದಿದ್ದರೆ ಅಥವಾ ಸುಳ್ಳೆಂದು ಆತನು ನಂಬಿದ್ದರೆ ಅಥವಾ ನಿಜವೆಂದು ನಂಬಿಲ್ಲವಾದರೆ ಪ್ರಜಾ ಪ್ರಾತಿನಿಧ್ಯ ಅಧಿನಿಯಮ, 1950ರ 31ನೇ ಪ್ರಕರಣದ ಮೇರೆಗೆ ಶಿಕ್ಷಾರ್ಹನಾಗುತ್ತಾನೆ.
*ಅನ್ವಯಿಸದ ವಾಕ್ಯವೃಂದವನ್ನು ಹೊಡೆದು ಹಾಕಿ. ________ (ಪ್ರತ್ಯೇಕಿಸಲು ಚುಚ್ಚುರಂಧ್ರ ಮಾಡುವುದು) ________
ತೆಗೆದುಕೊಂಡ ಕ್ರಮದ ಬಗ್ಗೆ ಮಾಹಿತಿ.
________ ವಿಳಾಸದಲ್ಲಿ ವಾಸವಾಗಿರುವ ಶ್ರೀ/ ಶ್ರೀಮತಿ/ ಕುಮಾರಿ ________ ಇವರು ನಮೂನೆ 18ರಲ್ಲಿ ಸಲ್ಲಿಸಿದ ಅರ್ಜಿಯನ್ನು:–
(ಎ) ಅಂಗೀಕರಿಸಲಾಗಿದೆ ಮತ್ತು ಶ್ರೀ/ ಶ್ರೀಮತಿ/ ಕುಮಾರಿ ________ ಇವರ ಹೆಸರನ್ನು ಭಾಗ ಸಂಖ್ಯೆ ________ ರ ಕ್ರಮ ಸಂಖ್ಯೆ ________ ರಲ್ಲಿ ನೋಂದಾಯಿಸಲಾಗಿದೆ.
(ಬಿ) ________ ಕಾರಣಕ್ಕಾಗಿ ತಿರಸ್ಕರಿಸಲಾಗಿದೆ.
ದಿನಾಂಕ:
ಮತದಾರರರ ನೋಂದಣಾಧಿಕಾರಿ.
ವಿಳಾಸ: ________

________ (ಪ್ರತ್ಯೇಕಿಸಲು ಚುಚ್ಚುರಂಧ್ರ ಮಾಡುವುದು) ________

ಅರ್ಜಿಯ ಸ್ವೀಕೃತಿ
________ ವಿಳಾಸದಲ್ಲಿ ವಾಸವಾಗಿರುವ ಶ್ರೀ/ ಶ್ರೀಮತಿ/ ಕುಮಾರಿ ________ ಇವರು ನಮೂನೆ 18 ರಲ್ಲಿ ಸಲ್ಲಿಸಿದ ಅರ್ಜಿಯನ್ನು ಸ್ವೀಕರಿಸಲಾಗಿದೆ.
ದಿನಾಂಕ:
ಮತದಾರರರ ನೋಂದಣಾಧಿಕಾರಿ.
ವಿಳಾಸ: ________

ಅರ್ಜಿದಾರನು ಭರ್ತಿ ಮಾಡಬೇಕು.
________ (ಪ್ರತ್ಯೇಕಿಸಲು ಚುಚ್ಚುರಂಧ್ರ ಮಾಡುವುದು) ________
ಮೂರನೆಯ ಅನುಸೂಚಿ
ನಮೂನೆ
ಪದವೀಧರ ನೌಕರರ ಶೈಕ್ಷಣಿಕ ವಿದ್ಯಾರ್ಹತೆಗೆ ಸಂಬಂಧಿಸಿದಂತೆ ಕಛೇರಿಯ ಗೆಜೆಟೆಡ್ ಮುಖ್ಯಸ್ಥರು ಆತನಿಗೆ ನೀಡಿದ ಪ್ರಮಾಣ ಪತ್ರ.
ಶ್ರೀ .... ಇವರ ಮಗ/ಮಗಳು/ ಹೆಂಡತಿಯಾದ ಶ್ರೀ/ಶ್ರೀಮತಿ/ಕುಮಾರಿ .... (ಇಲ್ಲಿ ಪೂರ್ಣ ಹೆಸರು ಬರೆಯಿರಿ) ಇವರು ಈ ಕಚೇರಿಯಲ್ಲಿ .... ಆಗಿ ಸೇವೆ ಸಲ್ಲಿಸುತ್ತಿದ್ದು, *ಇವರು .... ವರ್ಷದಲ್ಲಿ .... ದಿಂದ (ವಿಶ್ವವಿದ್ಯಾಲಯ / ಮಂಡಳಿ / ಸಂಸ್ಥೆಯ ಹೆಸರನ್ನು ಇಲ್ಲಿ ನಮೂದಿಸಿ) .... (ಪದವಿ / ಡಿಪ್ಲೋಮಾ ಪರೀಕ್ಷೆಯ ವಿವರಗಳನ್ನು ಇಲ್ಲಿ ನಮೂದಿಸಿ) ಉತ್ತೀರ್ಣರಾಗಿದ್ದಾರೆ ಎಂದು ನನ್ನ ಅಭಿರಕ್ಷೆಯಲ್ಲಿ ಸರ್ಕಾರಿ ದಾಖಲೆಗಳಲ್ಲಿನ ನಮೂದುಗಳ ಆಧಾರದ ಮೇಲೆ ಪ್ರಮಾಣೀಕರಿಸಲಾಗಿದೆ.
ದಿನಾಂಕ: ....
ಸ್ಥಳ : ....
(ಕಛೇರಿ ಮುಖ್ಯಸ್ಥರ ಸಹಿ)
(ಗೆಜೆಟೆಡ್ ಅಧಿಕಾರಿ ಸಹಿ ಮಾಡಬೇಕು)

ಬಸವರಾಜ ಬೊಮ್ಮಾಯಿ ಅವರ ಭೇಟಿಯ ಬಳಿಕ ಜಯಮೃತ್ಯುಂಜಯ ಸ್ವಾಮೀಜಿ ನಿರ್ಧಾರ

ಹೋರಾಟ: ತಾತ್ಕಾಲಿಕ ಸ್ಥಗಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಂಚಮಸಾಲಿ ಸಮುದಾಯಕ್ಕೆ 2 ಎ ಮೀಸಲಾತಿ ನೀಡಬೇಕು ಎಂದು ಪುನಃ ಹೋರಾಟ ಆರಂಭಿಸಿ, ಉಪವಾಸ ಸತ್ಯಾಗ್ರಹಕ್ಕೆ ಮುಂದಾಗಿದ್ದ ಕೂಡಲಸಂಗಮದ ಪಂಚಮಸಾಲಿ ಪೀಠದ ಬಸವ ಜಯಮೃತ್ಯುಂಜಯ ಸ್ವಾಮೀಜಿಯವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಭೇಟಿಯ ಬಳಿಕ ಹೋರಾಟವನ್ನು ತಾತ್ಕಾಲಿಕವಾಗಿ ಕೈಬಿಟ್ಟಿದ್ದಾರೆ.

ಶುಕ್ರವಾರ ಬೆಳಿಗ್ಗೆ ಸ್ವಾಮೀಜಿ ಜತೆ ಬೊಮ್ಮಾಯಿ ಸುದೀರ್ಘ ಮಾತುಕತೆ ನಡೆಸಿದರು. ಆ ಬಳಿಕ ಅವರು ಹೋರಾಟವನ್ನು ಕೈಬಿಡಲು ಒಪ್ಪಿಕೊಂಡರು ಎಂದು ಮೂಲಗಳು ತಿಳಿಸಿವೆ.

ಕಾನೂನಿನ ತೊಡಕುಗಳು, ಹಿಂದುಳಿದ ವರ್ಗಗಳ ಆಯೋಗದಿಂದ ಸರ್ಕಾರ ವರದಿ ಕೇಳಿರುವ ವಿಚಾರದ ಬಗ್ಗೆ ಸ್ವಾಮೀಜಿಯವರಿಗೆ ವಿವರಿಸಿದ ಬೊಮ್ಮಾಯಿ, 'ಪಂಚಮಸಾಲಿ ಸಮುದಾಯಕ್ಕೆ ಮೀಸಲಾತಿ ನೀಡುವ ವಿಚಾರದಲ್ಲಿ ಸರ್ಕಾರ ಸಕಾರಾತ್ಮಕವಾಗಿದೆ. ಆದ್ದರಿಂದ ಮತ್ತೆ ಹೋರಾಟ ನಡೆಸುವುದು ಬೇಡ' ಎಂದು ಹೇಳಿದರು.

ಬೊಮ್ಮಾಯಿಯವರ ಮನವಿಗೆ ಸ್ಪಂದಿಸಿದ ಸ್ವಾಮೀಜಿ ಸಮುದಾಯದ ಮುಖಂಡರ ಜತೆ ಮಾತುಕತೆ ನಡೆಸಿ ನಿರ್ಧಾರ ಪ್ರಕಟಿಸುವುದಾಗಿ ಹೇಳಿದರು.

ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಸ್ವಾಮೀಜಿ, 'ಮುಖ್ಯಮಂತ್ರಿ ಅವರ ಮೇಲೆ ವಿಶ್ವಾಸ ಇಟ್ಟಿದ್ದೇವೆ. ಕಾದು ನೋಡುವ ತೀರ್ಮಾನಕ್ಕೆ ಬಂದಿದ್ದು, ಹೋರಾಟವನ್ನು ತಾತ್ಕಾಲಿಕವಾಗಿ ಮುಂದೂಡಲಾಗಿದೆ' ಎಂದು ಪ್ರಕಟಿಸಿದರು.

'ಈ ಹಿಂದೆ ಆರು ತಿಂಗಳಲ್ಲಿ ಮೀಸಲಾತಿ ನೀಡದಿದ್ದರೆ ಅಕ್ಟೋಬರ್ 1 ರಿಂದ ಸತ್ಯಾಗ್ರಹ ಮುಂದುವರಿಸಲು ತೀರ್ಮಾನಿಸಲಾಗಿತ್ತು. ಅಲ್ಲದೆ, ದಾವಣಗೆರೆಯಲ್ಲಿ ಗುರುವಾರ ನಡೆದ ಪಂಚಮಸಾಲಿ ಸಮಾವೇಶ ನೋಡಿ ಸರ್ಕಾರ ಬೆಚ್ಚಿ ಬಿದ್ದಿದೆ. ಆದ್ದರಿಂದ ಮುಖ್ಯಮಂತ್ರಿಯವರು ಮಾತುಕತೆಗೆ ಆಹ್ವಾನಿಸಿದರು. ಒಂದೂವರೆ ಗಂಟೆ ಚರ್ಚೆ ಮಾಡಿದೆವು. ಮೀಸಲಾತಿಗೆ ಸಂಬಂಧಿಸಿದಂತೆ ಹಿಂದುಳಿದ ವರ್ಗಗಳ ಆಯೋಗ ವರದಿ ಕೊಟ್ಟ ಬಳಿಕ ಮೀಸಲಾತಿ ಬಗ್ಗೆ ತೀರ್ಮಾನಿಸುವುದಾಗಿ ಮುಖ್ಯಮಂತ್ರಿಯವರು ಭರವಸೆ ನೀಡಿದ್ದಾರೆ' ಎಂದು ಸ್ವಾಮೀಜಿ ಹೇಳಿದರು.

'ಹಿಂದುಳಿದ ವರ್ಗಗಳ ಆಯೋಗದ ವರದಿ ಬಂದ ಮೂರು ತಿಂಗಳಲ್ಲಿ ಮೀಸಲಾತಿ ನೀಡಬೇಕು ಎಂದು ಸರ್ಕಾರಕ್ಕೆ ತಿಳಿಸಿದ್ದೇವೆ. ಒಂದು ವೇಳೆ ಆ ಅವಧಿಯಲ್ಲಿ ಮೀಸಲಾತಿ ನೀಡದಿದ್ದರೆ ಬೆಂಗಳೂರಿನಲ್ಲಿ ಸತ್ಯಾಗ್ರಹ ಮುಂದುವರಿಸುತ್ತೇವೆ. ಆದರೆ, ಗ್ರಾಮ ಮತ್ತು ತಾಲ್ಲೂಕು ಮಟ್ಟದಲ್ಲಿ ಮೀಸಲಾತಿ ಅಭಿಯಾನ ಮುಂದುವರಿಯಲಿದೆ. ಸದ್ಯವೇ ಎರಡು ವಿಧಾನಸಭಾ ಕ್ಷೇತ್ರಗಳಲ್ಲಿ ಉಪಚುನಾವಣೆ ನಡೆಯಲಿದ್ದು, ಪಂಚಮಸಾಲಿಗಳನ್ನು ಎದುರು ಹಾಕಿಕೊಳ್ಳುವುದು ಬೇಡ' ಎಂಬ ಅಭಿಪ್ರಾಯವೂ ವ್ಯಕ್ತವಾಯಿತು ಎಂದು ಸ್ವಾಮೀಜಿ ಹೇಳಿದರು.

ಬಸವ ಜಯಮೃತ್ಯುಂಜಯ ಸ್ವಾಮೀಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಗೌರವಿಸಿದರು.

> ಈ ಹಿಂದೆ ಯಡಿಯೂರಪ್ಪನವರು ಹೋರಾಟವನ್ನು ಗಂಭೀರವಾಗಿ ಪರಿಗಣಿಸಲಿಲ್ಲ. ಆದರೆ, ಬೊಮ್ಮಾಯಿಯವರು ಮಾತುಕತೆ ನಡೆಸುವ ಮೂಲಕ ಬದ್ಧತೆ ತೋರಿಸಿದ್ದಾರೆ.
>
> **ಬಸವ ಜಯಮೃತ್ಯುಂಜಯ ಸ್ವಾಮೀಜಿ,** ಪಂಚಮಸಾಲಿ ಪೀಠ, ಕೂಡಲಸಂಗಮ

ಬ್ರಹ್ಮಶ್ರೀ ನಾರಾಯಣ ಗುರು ನಿಗಮ ಘೋಷಿಸಿ: ಪ್ರಣವಾನಂದ ಸ್ವಾಮೀಜಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬ್ರಹ್ಮಶ್ರೀ ನಾರಾಯಣ ಗುರುಗಳ ಹೆಸರಿನಲ್ಲಿ ಶೀಘ್ರವೇ ಅಭಿವೃದ್ಧಿ ನಿಗಮ ಘೋಷಿಸಬೇಕು. ಶಿವಮೊಗ್ಗದಲ್ಲಿ ನಿರ್ಮಾಣವಾಗುತ್ತಿರುವ ವಿಮಾನ ನಿಲ್ದಾಣಕ್ಕೆ ದಿವಂಗತ ಎಸ್.ಬಂಗಾರಪ್ಪನವರ ಹೆಸರಿಡಬೇಕು. ಇಲ್ಲದೇ ಹೋದರೆ ಮುಂಬರುವ ಚುನಾವಣೆಯಲ್ಲಿ ನಮ್ಮ ಸಮುದಾಯವು ಬಿಜೆಪಿಗೆ ತಕ್ಕ ಪಾಠ ಕಲಿಸಲಿದೆ' ಎಂದು ರಾಣೆಬೆನ್ನೂರು ತಾಲ್ಲೂಕು ಅರೆಮಲ್ಲಾಪುರದ ಶ್ರೀ ಶರಣ ಬಸವೇಶ್ವರ ಮಠದ ಪ್ರಣವಾನಂದ ಸ್ವಾಮೀಜಿ ಎಚ್ಚರಿಸಿದರು.

ಆರ್ಯ ಈಡಿಗ ರಾಷ್ಟ್ರೀಯ ಮಹಾ ಮಂಡಳಿಯ ಅಧ್ಯಕ್ಷರೂ ಆಗಿರುವ ಸ್ವಾಮೀಜಿ, ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿದರು. 'ಶ್ರೀ ಸಿಗಂದೂರು ಚೌಡೇಶ್ವರಿ ದೇವಸ್ಥಾನವನ್ನು ಮುಜರಾಯಿ ಇಲಾಖೆಯ ಸುಪರ್ದಿಗೆ ನೀಡಲು ಸರ್ಕಾರ ಮುಂದಾಗಿದೆ. ಈ ನಿರ್ಧಾರದಿಂದ ಕೂಡಲೇ ಹಿಂದೆ ಸರಿಯಬೇಕು. ಸರ್ಕಾರದ ಈ ನಿರ್ಧಾರವನ್ನು ಈಡಿಗ ಸಮುದಾಯ ಬಲವಾಗಿ ಖಂಡಿಸುತ್ತದೆ' ಎಂದರು.

ಪ್ರಣವಾನಂದ ಸ್ವಾಮೀಜಿ

'ರಾಜ್ಯದಲ್ಲಿರುವ ಎಲ್ಲಾ ಸಮುದಾಯಗಳಿಗೂ ನಿಗಮ ಮಂಡಳಿ ಘೋಷಿಸಲಾಗಿದೆ. ಆದರೆ, ನಮ್ಮ ಸಮುದಾಯವನ್ನು ಕಡೆಗಣಿಸಲಾಗಿದೆ. ಒಟ್ಟು 26 ಒಳಪಂಗಡ ಸೇರಿ ಸುಮಾರು 80 ಲಕ್ಷ ಜನರುಳ್ಳ ನಮ್ಮ ಸಮಾಜ ಅಧಿಕಾರದಿಂದ ಹಿಂದುಳಿದಿದೆ. ಆಡಳಿತಾರೂಢ ಬಿಜೆಪಿಯಲ್ಲಿ ಸಮುದಾಯದ ಐದು ಮಂದಿ ಶಾಸಕರಿದ್ದಾರೆ. ಇಬ್ಬರು ಸಚಿವರಿದ್ದಾರೆ. ಅಭಿವೃದ್ಧಿ ನಿಗಮದ ವಿಚಾರದಲ್ಲಿ ಅವರು ಕೂಡ ಗಟ್ಟಿ ಧ್ವನಿ ಎತ್ತುತ್ತಿಲ್ಲ' ಎಂದರು.

'ಮಸ್ಕಿ ವಿಧಾನಸಭೆಯ ಉಪ ಚುನಾವಣೆಯ ಫಲಿತಾಂಶ ಬಂದ ಬಳಿಕ ಅಭಿವೃದ್ಧಿ ನಿಗಮ ಪ್ರಕಟಿಸುವುದಾಗಿ ಆಗಿನ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಭರವಸೆ ನೀಡಿದ್ದರು. ಅವರು ಕೊಟ್ಟ ಮಾತನ್ನು ಉಳಿಸಿಕೊಳ್ಳಲಿಲ್ಲ. ಈಗಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೂ ಹಲವು ಸಲ ಮನವಿ ಮಾಡಿದ್ದೇವೆ. ಅವರು ಈ ಬಗ್ಗೆ ಕ್ರಮ ಕೈಗೊಳ್ಳುತ್ತಿಲ್ಲ. ಅವರಿಗೆ ಚುನಾವಣೆಯಲ್ಲಿ ತಕ್ಕ ಪಾಠ ಕಲಿಸಬೇಕಾಗುತ್ತದೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ನಮ್ಮ ಕುಲ ಕಸುಬಾದ ಸೇಂದಿ ಇಳಿಸುವ ಮತ್ತು ಮಾರುವ ಕಸುಬು ನಂಬಿಕೊಂಡೇ ಬದುಕು ಸಾಗಿಸುತ್ತಿದ್ದರು. ಅದನ್ನು ನಿಲ್ಲಿಸಿದ ಮೇಲೆ ಅವರಿಗೆ ಪರ್ಯಾಯ ವ್ಯವಸ್ಥೆ ಮಾಡಿಕೊಟ್ಟಿಲ್ಲ' ಎಂದು ದೂರಿದ ಅವರು, 'ಈಚಲು ಮರ, ತಾಳೆ ಗಿಡ, ತೆಂಗಿನ ಮರ ಇರುವ ಪ್ರದೇಶಗಳಾದ ರಾಯಚೂರು, ಸಿಂಧನೂರು, ಕೊಪ್ಪಳ, ಯಾದಗಿರಿ, ಮಸ್ಕಿ ಭಾಗಗಳಲ್ಲಿ ಸೇಂದಿ ಇಳಿಸುವುದಕ್ಕೆ ಅನುಮತಿ ನೀಡಬೇಕು. ಎಂಎಸ್ಐಎಲ್‌ನಲ್ಲಿ ಸಮುದಾಯದ ಯುವಕರಿಗೆ ಶೇ 50ರಷ್ಟು ಮೀಸಲಾತಿ ನೀಡಬೇಕು. ಪಹಣಿಯಲ್ಲಿ ಸೇಂದಿ ವನ ಮತ್ತು ಈಚಲು ಮರದ ಉಲ್ಲೇಖವಿರುವ ಜಮೀನನ್ನು ಸಮುದಾಯದವರಿಗೆ ಮರಳಿ ಅದರಲ್ಲಿ ಕೃಷಿ ಮಾಡಲು ಅವಕಾಶ ಮಾಡಿಕೊಡಬೇಕು' ಎಂದು ಆಗ್ರಹಿಸಿದರು.

'ಚಾಮರಾಜನಗರಕ್ಕೆ ಸಿ.ಎಂ ಭೇಟಿ ಖಚಿತ'

ಮೈಸೂರು: 'ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಚಾಮರಾಜನಗರಕ್ಕೆ ಹೋಗುವುದು ಖಚಿತ. ಅ. 6ರಂದೇ ಮೈಸೂರಿಗೆ ಬರುವ ಅವರು ರಾಷ್ಟ್ರಪತಿಗಳನ್ನು ವಿಮಾನನಿಲ್ದಾಣದಲ್ಲಿ ಸ್ವಾಗತಿಸಿ ಚಾಮರಾಜನಗರಕ್ಕೆ ತೆರಳುತ್ತಾರೆ' ಎಂದು ಸಚಿವ ಎಸ್.ಟಿ.ಸೋಮಶೇಖರ್ ತಿಳಿಸಿದರು.

'ದಸರಾ ಉದ್ಘಾಟನೆಗೆ 500 ಹಾಗೂ ಜಂಬೂಸವಾರಿಗೆ 1 ಸಾವಿರ ಮಂದಿ ಭಾಗವಹಿಸಬಹುದು ಎಂದು ತಜ್ಞರ ಸಮಿತಿ ಹೇಳಿದೆ. ಸಂಖ್ಯೆಯನ್ನು ಇನ್ನಷ್ಟು ಹೆಚ್ಚಿಸಬೇಕು ಎಂದು ಕೇಳಿದ್ದೇವೆ' ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ಬಳಿಕ ಅವರು ಇಲ್ಲಿನ ಅರಮನೆ ಆವರಣದಲ್ಲಿ ದಸರಾ ಗಜಪಡೆಯ ಮಾವುತರು ಹಾಗೂ ಕಾವಾಡಿಗರಿಗೆ ಉಪಹಾರ ಬಡಿಸಿದರು. ತಾವೂ ಅವರೊಂದಿಗೆ ಕುಳಿತು ಉಪಹಾರ ಸವಿದರು. ಅರಮನೆ ಮಂಡಳಿ ಕಚೇರಿಯಲ್ಲಿ ದಸರಾ ವೆಬ್‌ಸೈಟ್‌ಗೆ ಚಾಲನೆ ನೀಡಿದರು. 'ವೆಬ್‌ಸೈಟ್, ಯುಟ್ಯೂಬ್, ಫೇಸ್‌ಬುಕ್‌ನಲ್ಲಿ ದಸರಾ ಕಾರ್ಯಕ್ರಮಗಳು ನೇರ ಪ್ರಸಾರವಾಗಲಿವೆ' ಎಂದು ಸೋಮಶೇಖರ್ ಅವರು ಮಾಹಿತಿ ನೀಡಿದರು.

ಈ ತಿಂಗಳೇ ಮಕ್ಕಳಿಗೆ ಕೋವಿಡ್ ಲಸಿಕೆ: ಸುಧಾಕರ್

ಬೆಂಗಳೂರು: ಇದೇ ತಿಂಗಳಲ್ಲೇ ಮಕ್ಕಳಿಗೆ ಕೋವಿಡ್ ಲಸಿಕೆ ಸಿಗಲಿದೆ ಎಂದು ಆರೋಗ್ಯ ಸಚಿವ ಡಾ.ಕೆ ಸುಧಾಕರ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಬಿಜೆಪಿ ರಾಜ್ಯ ಕಾರ್ಯಾಲಯಕ್ಕೆ ಭೇಟಿ ನೀಡಿ ಮಾತನಾಡಿದ ಅವರು, ಝೈಡಸ್ ಡಿ ಮೂರನೇ ಹಂತದ ಪ್ರಯೋಗ ಕೊನೆಯ ಹಂತ ತಲುಪಿದೆ. ಒಂದೆರಡು ದಿನಗಳಲ್ಲಿ ದರ ನಿಗದಿ ಆಗುವ ಸಾಧ್ಯತೆ ಇದೆ. ಕೇಂದ್ರ ಸರ್ಕಾರವೇ ಈ ವಿಷಯವನ್ನು ಪ್ರಕಟಿಸಲಿದೆ ಎಂದರು.

ಮಕ್ಕಳಲ್ಲಿ ಕೋವಿಡ್ ಪ್ರಮಾಣ ಆತಂಕಕಾರಿ ಮಟ್ಟದಲ್ಲಿಲ್ಲ. ಶಾಲೆಗಳಲ್ಲಿ ಮಕ್ಕಳ ಚಟುವಟಿಕೆ ಕುರಿತು ಈಗಾಗಲೇ ಮಾರ್ಗ ಸೂಚಿಗಳನ್ನು ಬಿಡುಗಡೆಗೊಳಿಸಲಾಗಿದೆ ಎಂದು ಹೇಳಿದರು. ಕೇರಳ, ಮಹಾರಾಷ್ಟ್ರ ಕೆಲವೆಡೆ ಕೋವಿಡ್ ಪ್ರಮಾಣ ಕಡಿಮೆ ಆಗಿಲ್ಲ. ಅಲ್ಲಿಂದ ಬಂದವರಿಗೆ ಕೋವಿಡ್ ನೆಗೆಟಿವ್ ಪ್ರಮಾಣ ಪತ್ರ ಪಡೆಯುವುದು ಅನಿವಾರ್ಯವಾಗಿದೆ. ಮೂರನೇ ಅಲೆ ತಡೆಯುವ ಉದ್ದೇಶ ಇದರ ಹಿಂದಿದೆ'ಅವರು ತಿಳಿಸಿದರು.

ನವರಾತ್ರಿಗೂ ಸಾರಿಗೆ ನೌಕರರಿಗೆ ವೇತನ ಅನುಮಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಪ್ರಕರಣಗಳ ಸಂಖ್ಯೆ ಕಡಿಮೆಯಾಗುತ್ತಿದ್ದರೂ, ಸಾರಿಗೆ ಸಂಸ್ಥೆಗಳಲ್ಲಿ ನೌಕರರಿಗೆ ಸಂಬಳ ಕೊಡುವಷ್ಟು ವರಮಾನ ಇನ್ನೂ ಸಂಗ್ರಹವಾಗುತ್ತಿಲ್ಲ. ವೇತನಕ್ಕೆ ಅನುದಾನ ಕೋರಿರುವ ಪ್ರಸ್ತಾವನೆ ಹಣಕಾಸು ಇಲಾಖೆಯಲ್ಲೇ ಬಾಕಿ ಇದ್ದು, ನವರಾತ್ರಿ ಹಬ್ಬವನ್ನು ನೌಕರರು ಬರಿಗೈನಲ್ಲೇ ಬರಮಾಡಿಕೊಳ್ಳಬೇಕಾದ ಸ್ಥಿತಿ ಇದೆ.

ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ಪ್ರತಿನಿತ್ಯ ಪ್ರಯಾಣಿಕರ ಸಂಖ್ಯೆ ಕೋವಿಡ್ ಪೂರ್ವದಲ್ಲಿ 30 ಲಕ್ಷ ಇತ್ತು. ದಿನದ ವರಮಾನ ₹ 9.50 ಕೋಟಿ ಇತ್ತು. ಸದ್ಯ ಪ್ರಯಾಣಿಕರ ಸಂಖ್ಯೆ ಸರಾಸರಿ 19 ಲಕ್ಷ ಇದ್ದರೆ, ವರಮಾನ ₹6.50 ಕೋಟಿ ಇದೆ.

ಬಿಎಂಟಿಸಿ ಸ್ಥಿತಿಯೂ ಇದಕ್ಕೆ ಹೊರತಾಗಿಲ್ಲ. ಕೋವಿಡ್ ಪೂರ್ವದಲ್ಲಿ ಪ್ರತಿದಿನ ಸರಾಸರಿ 40 ಲಕ್ಷ ಪ್ರಯಾಣಿಕರು ಸಂಚರಿಸುತ್ತಿದ್ದರು. ₹3.5 ಕೋಟಿ ವರಮಾನ ಸಂಗ್ರಹ ಆಗುತ್ತಿತ್ತು. ಈಗ ಪ್ರಯಾಣಿಕರ ಸಂಖ್ಯೆ 17 ಲಕ್ಷದಿಂದ 20 ಲಕ್ಷದ ತನಕ ಇದೆ. ವರಮಾನ ಸಂಗ್ರಹ ₹2.2 ಕೋಟಿಯಷ್ಟಿದೆ.

ದುಬಾರಿಯಾಗಿರುವ ಡೀಸೆಲ್ ವೆಚ್ಚ ಮತ್ತು ನಿರ್ವಹಣೆ ವೆಚ್ಚ ಸರಿದೂಗಿಸಿಕೊಳ್ಳಲು ಈ ವರಮಾನ ಸಾಕಾಗುತ್ತಿದೆ. ಎಲ್ಲ ನೌಕರರಿಗೂ ಸ್ವಂತ ಶಕ್ತಿಯಿಂದ ಸಂಬಳ ನೀಡುಷ್ಟು ವರಮಾನ ಬರುತ್ತಿಲ್ಲ ಎನ್ನುತ್ತಾರೆ ನಿಗಮಗಳ ಅಧಿಕಾರಿಗಳು.

ನೌಕರರ ವೇತನ ಪಾವತಿಸಲು ಸರ್ಕಾರದ ಮುಂದೆ ಅನುದಾನಕ್ಕೆ ಸಾರಿಗೆ ಸಂಸ್ಥೆಗಳು ಕೋರಿಕೆ ಸಲ್ಲಿಸಿವೆ. ಹಣಕಾಸು ಇಲಾಖೆಯ ಮುಂದೆ ಪ್ರಸ್ತಾವನೆ ಇದ್ದು, ಮುಖ್ಯಮಂತ್ರಿ ಅವರಿಂದ ಇನ್ನೂ ಅನುಮೋದನೆ ದೊರೆತಿಲ್ಲ.

'ಹಣಕಾಸು ಇಲಾಖೆ ಜೊತೆ ಮಾತು

ಕತೆ ನಡೆಸಲಾಗಿದ್ದು, ಮುಖ್ಯಮಂತ್ರಿ ಅವರ ಗಮನಕ್ಕೂ ತರಲಾಗಿದೆ. ಸರ್ಕಾರದಿಂದ ಅನುದಾನ ದೊರೆಯುವ ನಿರೀಕ್ಷೆಯಲ್ಲಿದ್ದೇವೆ. ನವರಾತ್ರಿ ಹಬ್ಬಕ್ಕೂ ಮುನ್ನ ನೌಕರರಿಗೆ ಸಂಬಳ ನೀಡಲು ಪ್ರಯತ್ನಿಸಲಾಗುತ್ತಿದೆ' ಎಂದು ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಶಿವಯೋಗಿ ಸಿ. ಕಳಸದ ತಿಳಿಸಿದರು.

ಶ್ರೀನಿಧಿ ಸೌಹಾರ್ದ ಸಹಕಾರಿ ಬ್ಯಾಂಕ್ ನಿಯಮಿತ
(RBI License No: UBD.KAN 0027P, Dated 6/1/2003)
ಆಡಳಿತ ಕಛೇರಿ: ನಂ.113, ಆರ್.ವಿ ರಸ್ತೆ, ವಿ.ವಿ.ಪುರಂ, ಬೆಂಗಳೂರು–560004.
ದೂರವಾಣಿ: 080 26601152/22410151

23ನೇ ವಾರ್ಷಿಕ ಸರ್ವ ಸದಸ್ಯರ ಮಹಾಸಭೆಯ ನೋಟೀಸು

ಆತ್ಮೀಯ ಸದಸ್ಯರೇ,
ನಮ್ಮ ಬ್ಯಾಂಕಿನ 2020–2021ನೇ ಸಾಲಿನ ಸರ್ವ ಸದಸ್ಯರ ಮಹಾಸಭೆಯನ್ನು ದಿನಾಂಕ 17–10–2021 ರಂದು ಭಾನುವಾರ ಬೆಳಿಗ್ಗೆ 10:30 ಗಂಟೆಗೆ ಬ್ಯಾಂಕಿನ ಅಧ್ಯಕ್ಷರಾದ ಶ್ರೀ. ಸದಾಶಿವರೆಡ್ಡಿಯವರ ಅಧ್ಯಕ್ಷತೆಯಲ್ಲಿ ಕರ್ನಾಟಕ ಸರ್ಕಾರದ ಆದೇಶದಂತೆ Video Conference (Virtual Meeting) ಮೂಲಕ 'ಶ್ರೀನಿಧಿ ಸಭಾಂಗಣ' ಶ್ರೀನಿಧಿ ಸೌಹಾರ್ದ ಸಹಕಾರಿ ಬ್ಯಾಂಕ್ ನಿಯಮಿತ, ಆಡಳಿತ ಕಛೇರಿ, 3ನೇ ಮಹಡಿ, ನಂ.113, ಆರ್.ವಿ. ರಸ್ತೆ, ವಿ.ವಿ. ಪುರಂ, ಬೆಂಗಳೂರು–560004 ಇಲ್ಲಿ ನಡೆಸಲು ತೀರ್ಮಾನಿಸಲಾಗಿದೆ. ಸದಸ್ಯರಿಗೆ ಸಭೆಯ ಆಹ್ವಾನ ಪತ್ರಿಕೆ ಮತ್ತು ವಾರ್ಷಿಕ ವರದಿಯನ್ನು ಈಗಾಗಲೇ ಅಂಚೆ ಮೂಲಕ ಕಳುಹಿಸಲಾಗಿದ್ದು, ಅಂಚೆ ತಲುಪದಿದ್ದಲ್ಲಿ ಈ ಪ್ರಕಟಣೆಯನ್ನೇ ಅಧಿಕೃತ ನೋಟಿಸ್ ಎಂದು ತಿಳಿದು ತಾವೆಲ್ಲರೂ ಈ ಸಭೆಯಲ್ಲಿ Video Conference/Virtual Meeting ಮುಖಾಂತರ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ನೆರವೇರಿಸಿಕೊಡಬೇಕಾಗಿ ವಿನಂತಿ.
ಸೂಚನೆ: Video Conference/Virtual Meeting ಮುಖಾಂತರ ಭಾಗವಹಿಸಲು Meeting Link, ID & Password ವಿವರಗಳನ್ನು ಬ್ಯಾಂಕಿನ ಅಧಿಕೃತ ವೆಬ್‌ಸೈಟ್ www.sreenidhibank.com ನಲ್ಲಿ ದಿನಾಂಕ 15/10/2021ರೊಳಗೆ ಪ್ರಕಟಿಸಲಾಗುವುದು.
ದಿನಾಂಕ: 02/10/2021 — ಆಡಳಿತ ಮಂಡಳಿಯ ಅಪ್ಪಣೆ ಮೇರೆಗೆ
ಸ್ಥಳ: ಬೆಂಗಳೂರು — ಸಹಿ/– ಎಲ್.ಬಾಬು ರೆಡ್ಡಿ, ಪ್ರಧಾನ ವ್ಯವಸ್ಥಾಪಕರು

ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮ ನಿಯಮಿತ
ಪಬ್ಲಿಕ್ ಹೆಲ್ತ್ ಇನ್‌ಸ್ಟಿಟ್ಯೂಟ್, ಶೇಷಾದ್ರಿ ರೋಡ್, ಎಸ್.ಜೆ.ಪಿ. ಕಾಲೇಜ್ ಎದುರು, ಕೆ.ಆರ್. ಸರ್ಕಲ್, ಬೆಂಗಳೂರು – 560001.
ಮಿಂಚ್ ಅಂಚೆ: latha.mdksmscl@gmail.com md.ksmscl@gmail.com
No:HFW/KSMSCL/EQPT/Covid-19/VTM Kits/66/2021-22 Date: 29-09-2021

ಟೆಂಡರ್ ಪ್ರಕಟಣೆ
ಉಲ್ಲೇಖ: ಈ ಕಛೇರಿಯ ಟೆಂಡರ್ ಅಧಿಸೂಚನೆ ಸಂಖ್ಯೆ: HFW/KSMSCL/EQPT/Covid-19/VTM Kits/66/2021-22, Dated: 29-09-2021.
ಜೆಮ್ ಪೋರ್ಟಲ್ ವ್ಯವಸ್ಥೆಯಡಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮ 2000ರಂತೆ ಕೆ.ಟಿ.ಪಿ.ಪಿ ನಿಯಮಾನುಸಾರ ಈ ಕೆಳಕಂಡ ಟೆಂಡರ್ ಅನ್ನು ರಾಷ್ಟ್ರವ್ಯಾಪ್ತಿಯಲ್ಲಿ ಕರೆಯಲಾಗಿದೆ.
1) ಕೋವಿಡ್ ಪರೀಕ್ಷೆಗಾಗಿ ಅಗತ್ಯವಿರುವ VTM Kits ಖರೀದಿಸಿ ಪೂರೈಸಲು (GEM) ಮುಖಾಂತರ ಆಹ್ವಾನಿಸಲಾಗಿದೆ.
ತಾಂತ್ರಿಕ ವಿವರಣೆ, ಟೆಂಡರ್ ನಿಯಮಾವಳಿ ಹಾಗೂ ಇತರೆ ಮಾಹಿತಿಯನ್ನು ಟೆಂಡರ್ ವ್ಯವಸ್ಥೆಯಡಿಯಲ್ಲಿ ಜೆಮ್ ಪೋರ್ಟಲ್‌ನಲ್ಲಿ ದಿನಾಂಕ: 29–09–2021 ರಿಂದ ಟೆಂಡರ್‌ಗಳ ದಾಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಬಹುದಾಗಿದ್ದು, ಹೆಚ್ಚಿನ ವಿವರಣೆಯನ್ನು ಈ ಕಛೇರಿಯಿಂದ ಕೆಲಸದ ಅವಧಿಯಲ್ಲಿ ಪಡೆಯಬಹುದಾಗಿದೆ.
ಸಹಿ/– ವ್ಯವಸ್ಥಾಪಕ ನಿರ್ದೇಶಕರು
ವಾಸಾಸಂಇ/ಬೆಂ.ನ/ಅಡ್ವಟೋರ್/1751/2021–22 — ಕೆ.ಎಸ್.ಎಮ್.ಎಸ್.ಸಿ.ಎಲ್., ಬೆಂಗಳೂರು.
ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಶುಶ್ರೂಷಾ ಮತ್ತು ಅರೆವೈದ್ಯಕೀಯ ವಿಜ್ಞಾನಗಳ ಶಿಕ್ಷಣ (ನಿಯಂತ್ರಣ) ಪ್ರಾಧಿಕಾರ
ಕರ್ನಾಟಕ ರಾಜ್ಯ ಶುಶ್ರೂಷಾ ಪರೀಕ್ಷಾ ಮಂಡಳಿ
1ನೇ ಮಹಡಿ, ಲೈಬ್ರರಿ ಬ್ಲಾಕ್, ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆಯ ಆವರಣ, ಬೆಂಗಳೂರು–560002. ದೂರವಾಣಿ: 080–26700074/75, ಇ–ಮೇಲ್: ksdneb@gmail.com ವೆಬ್‌ಸೈಟ್: www.ksdneb.org
ಸಂಖ್ಯೆ: ಕ.ರಾ.ಶು.ಪ.ಮಂ./ಸಿಬ್ಬಂದಿ/14/2021–22 ದಿನಾಂಕ: 01–10–2021
2021–22ನೇ ಸಾಲಿನ ಶೈಕ್ಷಣಿಕ ಶುಶ್ರೂಷಾ ವಿದ್ಯಾರ್ಥಿಗಳ ಪ್ರವೇಶಾತಿ ಪ್ರಕಟಣೆ
ಕರ್ನಾಟಕ ರಾಜ್ಯ ಶುಶ್ರೂಷಾ ಪರೀಕ್ಷಾ ಮಂಡಳಿಯು ಸರ್ಕಾರಿ ಕೋಟಾದ ಡಿಪ್ಲೋಮಾ ಇನ್ ನರ್ಸಿಂಗ್ ಕೋರ್ಸ್‌ನ (ಜಿ.ಎನ್.ಎಮ್) ಸೀಟುಗಳಿಗೆ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳ ಮೂಲ ದಾಖಲಾತಿಗಳ ಪರಿಶೀಲನೆ ಹಾಗೂ ಆನ್‌ಲೈನ್ ಮೂಲಕ ಮೊದಲನೇ ಸುತ್ತಿನ ಆಯ್ಕೆಗಳನ್ನು ನಮೂದಿಸುವ ಪ್ರಕ್ರಿಯೆಯನ್ನು ದಿನಾಂಕ: 05–10–2021 ರಿಂದ 09–10–2021 ರವರೆಗೆ ನಡೆಸಲಾಗುವುದು. ಆನ್‌ಲೈನ್ ಕೌನ್ಸಿಲಿಂಗ್‌ನಲ್ಲಿ ಭಾಗವಹಿಸುವಂತಹ ಅರ್ಹ ಅಭ್ಯರ್ಥಿಗಳಿಗೆ ಮಂಡಳಿಯ www.ksdneb.org ಜಾಲತಾಣದಲ್ಲಿ ಅಭ್ಯರ್ಥಿಗಳು user name ಮತ್ತು password ಬಳಸಿ ಇಂಟಿಮೇಷನ್ ಪತ್ರ, ಚೆಕ್‌ಲಿಸ್ಟ್ ಮತ್ತು ಆಯ್ಕೆಗಳನ್ನು ನಮೂದಿಸುವ ಮಾದರಿ ನಮೂನೆಯನ್ನು ಡೌನ್‌ಲೋಡ್ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಆನ್‌ಲೈನ್ ಕೌನ್ಸಿಲಿಂಗ್ ನಡೆಯುವ ಸ್ಥಳಗಳು, ರ್‍ಯಾಂಕ್ ಪ್ರಕಾರ ನಿಗದಿಪಡಿಸಿರುವ ದಿನಾಂಕ ಹಾಗೂ ಇತರೆ ಹೆಚ್ಚಿನ ಮಾಹಿತಿಗಾಗಿ ಮಂಡಳಿಯ ಜಾಲತಾಣ http://www.ksdneb.org ಸಂಪರ್ಕಿಸಿ.
ಸಹಿ/– ಕಾರ್ಯದರ್ಶಿಗಳು, ಕ.ರಾ.ಶು.ಪ.ಮಂ. ಬೆಂಗಳೂರು.

ಸಹಾಯಕ ಆಯುಕ್ತರ ಕಾರ್ಯಾಲಯ, ಹಾಸನ ಉಪವಿಭಾಗ, ಹಾಸನ. ಸರ್ಕಾರಿ ಮಡಿಕಲ್ ಕಾಲೇಜು ಎದುರು, ಶ್ರೀ ಚಾಮರಾಜೇಂದ್ರ ಸರ್ಕಾರಿ ಆಸ್ಪತ್ರೆ ರಸ್ತೆ, ಹಾಸನ–573201
ದೂ.ಸಂಖ್ಯೆ: 08172–268403 E-mail hsn.sub@gmail.com
ಸಂಖ್ಯೆ: ಡಿವಿಎಸ್.39/21–22 ದಿನಾಂಕ.30.09.2021
ಅಲ್ಪಾವಧಿ ಟೆಂಡರ್ ಪ್ರಕಟಣೆ: (ಇಂಡೆಂಟ್ ನಂ.HRICE/ 2021-22/IND.2567)
ಹಾಸನಾಂಬ ದೇವಿ ದರ್ಶನ ಮತ್ತು ಶ್ರೀ ಸಿದ್ದೇಶ್ವರ ದೇವಾಲಯದ ಜಾತ್ರಾ ಮಹೋತ್ಸವ–2021 ರ ಅಂಗವಾಗಿ ದಿನಾಂಕ:28.10.2021 ರಿಂದ 06.11.2021 ರವರೆಗೆ ಭಕ್ತಾಧಿಗಳಿಗೆ ಲಾಡು ಪ್ರಸಾದ, ದೊನ್ನೆ ಪ್ರಸಾದ, ಸಿಬ್ಬಂದಿಗಳಿಗೆ ಬೆಳಿಗ್ಗೆ ತಿಂಡಿ, ಮದ್ಯಾಹ್ನ ಮತ್ತು ರಾತ್ರಿ ಊಟ ತಯಾರಿಸಿ ಸರಬರಾಜು ಮಾಡುವ ಸಂಬಂಧ ಅರ್ಹ ಸರಬರಾಜು ಸಂಸ್ಥೆಯವರಿಂದ ದರಗಳನ್ನು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಆಹ್ವಾನಿಸಲಾಗಿದೆ. ಇಂಡೆಂಟ್ ನಂ. ಹೆಚ್.ಆರ್.ಐ.ಸಿ/2021–22 ಐಎನ್.ಡಿ.2567 **ಕೆಲಸದ ವಿವರ:** ಹಾಸನಾಂಭ ದೇವಿ ದರ್ಶನ ಮತ್ತು ಶ್ರೀ ಸಿದ್ದೇಶ್ವರ ದೇವಾಲಯದ ಜಾತ್ರಾ ಮಹೋತ್ಸವ–2021 ರ ಅಂಗವಾಗಿ ದಿನಾಂಕ 28–10–2021 ರಿಂದ 6–11–2021 ರವರೆಗೆ ಭಕ್ತಾಧಿಗಳಿಗೆ ಲಾಡು ಪ್ರಸಾದ, ದೊನ್ನೆ ಪ್ರಸಾದ ಸಬ್ಬಂದಿಗಳಿಗೆ ಬೆಳಿಗ್ಗೆ ತಿಂಡಿ, ಮದ್ಯಾಹ್ನ ಮತ್ತು ರಾತ್ರಿ ಊಟ ತಯಾರಿಸಿ ಸರಬರಾಜು ಮಾಡುವ ಬಗ್ಗೆ. ಕ್ರ.ಸಂ.1)ವಿವರ: ಲಾಡು ಪ್ರಸಾದ ವಿತರಣೆ (ಟೆಂಡರ್ ನಲ್ಲಿ ತಿಳಿಸಿರುವಂತೆ ಒಂದು ಸೆಟ್‌ಗೆ) ಬೆಂಚ್ ಮಾರ್ಕ್ ದರ ರೂಗಳಲ್ಲಿ: 30.00 ಇ.ಎಂ.ಡಿ ಮೊತ್ತ ರೂಗಳಲ್ಲಿ: 1,00000/– 2)ಭಕ್ತಾಧಿಗಳಿಗೆ ಪ್ರಸಾದ ವಿತರಣೆ (ಒಂದು ಪ್ರಸಾದಕ್ಕೆ) ಬೆಂಚ್ ಮಾರ್ಕ್ ದರ ರೂಗಳಲ್ಲಿ:8.00 ಇ.ಎಂ.ಡಿ ಮೊತ್ತ ರೂಗಳಲ್ಲಿ: 1,00000/– 3)ಸಿಬ್ಬಂದಿಗಳಿಗೆ ಉಪಹಾರ ಮತ್ತು ಊಟ (ವಿವರ ಟೆಂಡರ್‌ನಂತೆ) ಬೆಂಚ್ ಮಾರ್ಕ್ ದರ ರೂಗಳಲ್ಲಿ:28.00X3=84.00 ಇ.ಎಂ.ಡಿ ಮೊತ್ತ ರೂ. 1,00000/– ಟೆಂಡರ್‌ನ ವೇಳಾಪಟ್ಟಿ ವಿವರ ಕೆಳಗಿನಂತಿದೆ ಕ್ರ.ಸಂ 1)ವಿವರ: ಏರ್ಪಾಡುಗಳ ನಿರ್ವಹಣೆಯ ಅವಧಿ. ದಿನಾಂಕ: 28–10–2021 ರಿಂದ 6–11–2021 ರ ರವರೆಗೆ 2)ಇ.ಎಂ.ಡಿ. ಮೊತ್ತ: ರೂ.1,00000/– (ಒಂದು ಲಕ್ಷಗಳು ಮಾತ್ರ) 3)ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಖಾಲಿ ಟೆಂಡರ್ ಫಾರಂಗಳನ್ನು ಡೌನ್‌ಲೋಡ್ ಮಾಡಿಕೊಳ್ಳಲು ನಿಗಧಿಪಡಿಸಿದ ದಿನಾಂಕ:30–9–2021 ರಿಂದ 8–10–2021 ರವರೆಗೆ ಸಮಯ.5–30 ರವರೆಗೆ 4)ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಭರ್ತಿ ಮಾಡಿದ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ.8–10–2021 ಸಮಯ, 5–30 ಟೆಂಡರ್ ತೆರೆಯುವ ದಿನಾಂಕ ತಾಂತ್ರಿಕ/ಆರ್ಥಿಕ ಅರ್ಹತೆಯ ಬಿಡ್: ದಿನಾಂಕ.11.10.2021 ಸಮಯ.11–00 ಗಂಟೆಗೆ.
ಸಹಿ/– ಬಿ.ಎ ಜಗದೀಶ, ಕೆ.ಎ.ಎಸ್. ಸಹಾಯಕ ಆಯುಕ್ತ ಹಾಸನ ಉಪ ವಿಭಾಗ, ಹಾಸನ,
ವಾಸಾಸಂಇ/ಹಿಸನಿ/ಹಾಸನ/ಎಂಸಿಎ/431/2021–22

INSTITUTE FOR SOCIAL AND ECONOMIC CHANGE
Dr. V.K.R.V. Rao Road, Nagarabhavi P.O. Bengaluru-560 072. www.isec.ac.in
TENDER NOTIFICATION
Applications are invited from interested reputabale Car Hiring Agencies / Companies for Empanelment to render vehicles on rate contract for a period of one year from 1.11.2021. The Technical and Commercial Bid Formats may be downloaded from ISEC website: **www.isec.ac.in.**
The Technical Bid and the Financial Bid needs to be submitted in SEPARATE COVERS. The Tender Document, duly filled and signed on all pages alongwith a DD for Rs.100/- drawn in favour of The Registrar, ISEC, Bengaluru, may be submitted in sealed cover on or before 18th October 2021 to **The Registrar, Institute for Social and Economic Change, Dr. V.K.R.V. Rao Road, Nagarabhavi P.O. Bengaluru-560 072**, OR dropped in Tender Box in the Office of the Registrar. Any tenders received after this date shall not be entertained. Selection / Cancellation will be at the sole discretion of ISEC authority. The Tenders shall be opened on 21st October 2021 at 11.00 a.m. in the Institute Premises. Interested Tenderers may be present while opening the tenders.
ISEC-21206 — **Registrar I/c**

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು
ಆಸ್ತಿ ಅಧಿಕಾರಿಗಳ ಕಛೇರಿ, ಗಾಕೃವಿಕೆ ಕ್ಯಾಂಪಸ್, ಬೆಂಗಳೂರು – 560 065.
ಸಂಖ್ಯೆ: ಆಅ/ಟಿ.ಎನ್/452/2021–22 ದಿನಾಂಕ: 23.09.2020
ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯಕ್ಕೆ ಕಾಮಗಾರಿ ಕೆಲಸಗಳನ್ನು ಮಾಡಲು ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆಡಬ್ಲ್ಯೂ–3 ರಂತೆ ನೋಂದಣಿ ಪಡೆದ ಕೆಪಿಡಬ್ಲ್ಯೂಡಿ/ಪಿಡಬ್ಲ್ಯೂಡಿ/ ಗುತ್ತಿಗೆದಾರರುಗಳಿಂದ **ಕ್ರಮ ಸಂಖ್ಯೆ. 1** ಮತ್ತು **2ರ** ಕೆಲಸಗಳಿಗೆ ಟೆಂಡರನ್ನು ಕರೆಯಲಾಗಿದೆ. ಟೆಂಡರ್ ಪ್ರಕಟಣೆಯ ವಿವರ, ಟೆಂಡರ್ ದಾಖಲಾತಿ, ಕಾಮಗಾರಿಯ ವಿವರಗಳು ವೆಬ್‌ಸೈಟ್: www.eproc.karnataka.gov.in ರಲ್ಲಿ ದೊರೆಯುತ್ತದೆ. ಟೆಂಡರ್ ಡಾಕ್ಯುಮೆಂಟ್‌ನ ಶುಲ್ಕ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನಮೂದಿಸಿರುವಂತೆ ಮತ್ತು ಇ.ಎಂ.ಡಿಯನ್ನು ಇ–ಪ್ರೊಕ್ಯೂರ್‌ಮೆಂಟ್ ಮಾದರಿಯಂತೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸಲ್ಲಿಸುವುದು.
ಕ್ರಮ ಸಂಖ್ಯೆ.1 ಮತ್ತು **2ರ** ಕಾಮಗಾರಿಯು ದ್ವಿ ಲಕೋಟೆ ಪದ್ಧತಿಯಲ್ಲಿರುತ್ತದೆ. ದ್ವಿ ಲಕೋಟೆ ಪದ್ಧತಿಯ ಷರತ್ತುಗಳ ವಿವರಗಳನ್ನು ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್‌ರಂತೆ ಅಪ್‌ಲೋಡ್ ಮಾಡಲಾಗಿದೆ.
ಕ್ರಮ ಸಂಖ್ಯೆ.1 ಮತ್ತು **2ರ** ಕಾಮಗಾರಿಯ ಪ್ರೀ–ಬಿಡ್ ಮೀಟಿಂಗ್ ದಿನಾಂಕ: **13.10.2021ರಂದು ಬೆಳಿಗ್ಗೆ 10:30ಕ್ಕೆ** ಆಗಿರುತ್ತದೆ. ಖಾಲಿ ಟೆಂಡರ್ ಡಾಕ್ಯುಮೆಂಟ್‌ಗಳನ್ನು www.eproc.karnataka.gov.in ಇಂದ ಪಡೆಯಬಹುದು ಮತ್ತು ಟೆಂಡರ್ ಸಲ್ಲಿಸುವ ಕೊನೆ ದಿನಾಂಕ: **18.10.2021ರಂದು ಅಪರಾಹ್ನ 4 ಗಂಟೆಯವರೆಗೆ** ಆಗಿರುತ್ತದೆ. **ತಾಂತ್ರಿಕ ಬಿಡ್ಡನ್ನು ದಿನಾಂಕ: 21.10.2021ರಂದು ಬೆಳಿಗ್ಗೆ 10:30ಕ್ಕೆ ತೆರೆಯಲಾಗುವುದು. ಹಣಕಾಸಿನ ಬಿಡ್ಡನ್ನು ದಿನಾಂಕ: 25.10.2021ರಂದು ಬೆಳಿಗ್ಗೆ 10:30ಕ್ಕೆ ತೆರೆಯಲಾಗುವುದು.** ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯನ್ನು ಕಛೇರಿಯ ವೇಳೆಯಲ್ಲಿ ದೂರವಾಣಿ ಸಂಖ್ಯೆ: 080–23332765ರಲ್ಲಿ ಸಂಪರ್ಕಿಸುವುದು. ಇ–ಪ್ರೊಕ್ಯೂರ್‌ಮೆಂಟ್‌ನ ಸಹಾಯವಾಣಿ: support@eprochelpdesk.com ಅಥವಾ 8046010000 ಮತ್ತು 8068948777
ಸಹಿ/– ಆಸ್ತಿ ಅಧಿಕಾರಿಗಳು
ವಾಸಾಸಂಇ/ಬೆಂನ/1743/MAA Comm/2021–22
ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಲೋ,ಇ ವಿಶೇಷ ವಿಭಾಗ, ಶಿವಮೊಗ್ಗ
ಫೋನ್ ನಂ : 08182–222942, ಇ–ಮೇಲ್: spdivision@gmail.com
ಅಲ್ಪಾವಧಿ ಟೆಂಡರ್ ಪ್ರಕಟಣೆ (ದ್ವಿ–ಲಕೋಟೆ ಪದ್ಧತಿ) (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)
ಐ.ಎಫ್.ಟಿ ಸಂಖ್ಯೆ: 34/2021–22 ದಿನಾಂಕ : 28.09.2021
ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಕೆಳಕಂಡ ಕಾಮಗಾರಿಗೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆ.ಡಬ್ಲ್ಯೂ–1 & 2 ರನ್ವಯ ಶಿವಮೊಗ್ಗ ತಾಲ್ಲೂಕಿನಲ್ಲಿ **2059–80–053–4–00–200 ಇಲಾಖಾ ಕಟ್ಟಡ ನಿರ್ವಹಣೆ ಲೆಕ್ಕ ಶೀರ್ಷಿಕೆಯಡಿ ಅನುಮೋದನೆಯಾದ ಒಟ್ಟು 06 ಸಂಖ್ಯೆ ಕಾಮಗಾರಿಗಳಿಗೆ ಕಾರ್ಮಿಕ ಇಲಾಖೆಯಿಂದ ನೋಂದಣಿ ಪಡೆದ ಹಾಗೂ ಇ.ಪಿ.ಎಫ್. ನೋಂದಣಿ ಹೊಂದಿರುವ ಅರ್ಹ ಏಜೆನ್ಸಿಯವರುಗಳಿಂದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್‌ನ್ನು ಏಕ–ಲಕೋಟೆ ಪದ್ದತಿಯಲ್ಲಿ ಟೆಂಡರ್‌ಗಿಟ್ಟ ಮೊತ್ತ ರೂ. 38.87 ಲಕ್ಷ ಹಾಗೂ ಇ.ಎಂ.ಡಿ ಮೊತ್ತ ರೂ. 0.78 ಲಕ್ಷ. ಟೆಂಡರ್ ಅವಧಿ 2021–22 ನೇ ಸಾಲು.**
ಸದರಿ ಕಾಮಗಾರಿಗೆ ಈ ಕೆಳಸಹಿ ಮಾಡಿರುವವರು ಟೆಂಡರ್ ಆಹ್ವಾನಿಸಿರುತ್ತಾರೆ. ಅರ್ಹ ಗುತ್ತಿಗೆದಾರರು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ http://eproc.karnataka.gov.in ಮುಖಾಂತರ ಟೆಂಡರ್ ದಸ್ತಾವೇಜಿನ ಸೆಕ್ಷನ್ –2 ರ (ಟೆಂಡರ್‌ದಾರರಿಗೆ ತಿಳುವಳಿಕೆ) ಕ್ಲಾಸ್–3 ರನ್ವಯ ಅರ್ಹತೆ ವಿವರಗಳನ್ನು ಗಮನಿಸತಕ್ಕದ್ದು. ವಿದ್ಯುನ್ಮಾನ ಜಾಲದಲ್ಲಿ **ದಿನಾಂಕ: 28–09–2021 ರಿಂದ 18–10–2021 ರ ವರೆಗೆ** ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಟೆಂಡರ್‌ನ್ನು **ದಿನಾಂಕ: 18–10–2021 ರ ಸಂಜೆ 5:00 ಗಂಟೆಯೊಳಗೆ** ಇ–ಪ್ರೊಕ್ಯೂರ್‌ಮೆಂಟ್ ನಲ್ಲಿ ಭರಿಸತಕ್ಕದ್ದು, ಕಾಮಗಾರಿಯ ತಾಂತ್ರಿಕ ಬಿಡ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ನಲ್ಲಿ **ದಿನಾಂಕ: 21–10–2021 ರಂದು ಬೆಳಿಗ್ಗೆ 11.00 ಗಂಟೆಗೆ** ತೆರೆಯಲಾಗುವುದು ಹಾಗೂ ಆರ್ಥಿಕ ಬಿಡ್‌ನ್ನು **ದಿನಾಂಕ: 22–10–2021ರ ನಂತರ** ತೆರೆಯಲಾಗುವುದು. ಹೆಚ್ಚಿನ ವಿವರಗಳು ಬೇಕಾದಲ್ಲಿ ಈ ಕಛೇರಿಯನ್ನು ಕಛೇರಿ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ. ವೆಬ್‌ಸೈಟ್‌ನಲ್ಲಿರುವ ಟೆಂಡರ್ ವಿವರಗಳೇ ಅಂತಿಮವಾಗಿರುತ್ತವೆ. ಹೆಚ್ಚಿನ ವಿವರಗಳು ಬೇಕಾದಲ್ಲಿ ಈ ಕಛೇರಿಯನ್ನು ಕಛೇರಿ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ. ವೆಬ್‌ಸೈಟ್‌ನಲ್ಲಿರುವ ಟೆಂಡರ್ ವಿವರಗಳೇ ಅಂತಿಮವಾಗಿರುತ್ತವೆ.
ಸಹಿ/– ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ, ಶಿವಮೊಗ್ಗ
ವಾಸಾಸಂಇ/ಶಿ/ನಂ.108–10/ಝೇಂಕಾರ್/2021–22

ಸಾರಿಗೆ ಇಲಾಖೆ
ಸಾರಿಗೆ ಮತ್ತು ರಸ್ತೆ ಸುರಕ್ಷತಾ ಆಯುಕ್ತರ ಕಛೇರಿ, 1ನೇ ಮಹಡಿ, ಟಿ.ಟಿ.ಎಂ.ಸಿ. ಕಟ್ಟಡ, ಕೆ.ಹೆಚ್. ರಸ್ತೆ, ಶಾಂತಿನಗರ, ಬೆಂಗಳೂರು–560 027
ಸಂಖ್ಯೆ: ಸಾಆ/ನೋಂದಣಿ–1/ಪಿಆರ್–64/2018–19 ದಿನಾಂಕ:30.09.2021
ಟೆಂಡರ್ ಆಹ್ವಾನದ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)
ಕರ್ನಾಟಕ ರಾಜ್ಯದಲ್ಲಿ ದಿನಾಂಕ 31.03.2019 ಮತ್ತು ಅದಕ್ಕಿಂತ ಪೂರ್ವದಲ್ಲಿ ನೋಂದಾಯಿಸಲ್ಪಟ್ಟ ವಾಹನಗಳಿಗೆ **ಅತಿ ಸುರಕ್ಷಿತ ನೋಂದಣಿ ಫಲಕಗಳನ್ನು (HSRP) ಅಳವಡಿಸುವ ಸಲುವಾಗಿ** ಖಾಸಗಿ ಏಜೆನ್ಸಿಗಳನ್ನು ಆಯ್ಕೆ ಮಾಡಲು ಕರ್ನಾಟಕ ಸರ್ಕಾರದ ಸಾರಿಗೆ ಇಲಾಖೆಯು ಉದ್ದೇಶಿಸಿದೆ. ಈ ಹಿನ್ನೆಲೆಯಲ್ಲಿ, ಕರ್ನಾಟಕ ಸರ್ಕಾರದ ಸಾರಿಗೆ ಇಲಾಖೆಯು, ಅರ್ಹ ಬಂಡವಾಳದಾರರು / ಬಿಡ್ಡರ್‌ಗಳಿಂದ ಟೆಂಡರ್ ಬಿಡ್‌ಗಳನ್ನು (ಆಸಕ್ತಿಯ ಅಭಿವ್ಯಕ್ತಿ) ಆಹ್ವಾನಿಸಿದೆ.
ಬಿಡ್ ದಾಖಲೆ ಮತ್ತು ಒಪ್ಪಂದವನ್ನು ಕರ್ನಾಟಕ ಸಾರ್ವಜನಿಕ ಗಳಿಕೆಯ ಪೋರ್ಟಲ್ **(www.eproc.karnataka.gov.in)** ಮೂಲಕ ಪಡೆದುಕೊಳ್ಳಬಹುದಾಗಿದೆ. ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : **21.10.2021ರ ಸಂಜೆ 3.00 ಗಂಟೆವರೆಗೆ.**
ಸಹಿ/– ಆಯುಕ್ತರು, ಸಾರಿಗೆ ಮತ್ತು ರಸ್ತೆ ಸುರಕ್ಷತೆ, ಬೆಂಗಳೂರು
ವಾಸಾಸಂಇ/ಬೆಂನ/ಜಿಎ/1756/2021–22
ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಹರಪನಹಳ್ಳಿ
ಸಂಖ್ಯೆ: ಕಾಪಾಇಂ/ಗ್ರಾಕುನೀ&ನೈವಿ/ಹ.ಹಳ್ಳಿ/4215 C&Q/ಇ–ಪ್ರೊಕ್ ಅಲ್ಪಾವಧಿ ಟೆಂಡರ್ ಪ್ರಕಟಣೆ/ತಾಂತ್ರಿಕ/2021–22/648 ದಿನಾಂಕ:30–09–2021.
ಇ–ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ–23/ 2021–22.
ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಹರಪನಹಳ್ಳಿರವರಿಂದ 2021–22ನೇ ಸಾಲಿನ ರಾಜ್ಯ ವಲಯದ ಲೆಕ್ಕಶೀರ್ಷಿಕೆ: 4215ರ C&Q ಯೋಜನೆಯಡಿ ಮಂಜೂರಾದ ಕೂಡ್ಲಿಗಿ ತಾಲ್ಲೂಕಿನ ತಾಲ್ಲೂಕು ಪ್ರಯೋಗಾಲಯದ ಕಟ್ಟಡ ಕಾಮಗಾರಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರಿಂದ Standard Bid Document KW-III ರ ನಿಯಮಗಳ ನಿಬಂದನೆಗೊಳಪಟ್ಟು (ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಿರುವಂತೆ) ಇ–ಪ್ರೋಕ್ಯೂರಮೆಂಟ್ ಮೂಲಕ ಇ–ಟೆಂಡರ್ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಹಾಗೂ ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ನಿಗದಿತ ಅವಧಿ ದಿನಾಂಕ:30–09–2021 ರಿಂದ 11–10–2021ರ ಸಾಯಂಕಾಲ 5.00 ಗಂಟೆಯವರೆಗೆ ಮತ್ತು ಇ–ಪ್ರಕ್ಯೂರ್‌ಮೆಂಟ್ ಟೆಂಡರ್ ತೆರೆಯುವ ದಿನಾಂಕ:12–10–2021 ರಂದು ಸಾಯಂಕಾಲ 5.05 ಗಂಟೆ ನಂತರ ಹೆಚ್ಚಿನ ವಿವರಗಳಿಗೆ ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ (e-procurement portal) ವೆಬ್‌ಸೈಟ್‌ನಲ್ಲಿ ಪಡೆಯಬಹುದು. (www.eproc.karnataka.gov.in) ಈ ಬಗ್ಗೆ ಇನ್ನು ಹೆಚ್ಚಿನ ವಿವರಗಳಿಗಾಗಿ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಹರಪನಹಳ್ಳಿರವರ ಕಛೇರಿಯ ವೇಳೆಯಲ್ಲಿ ಪಡೆಯಬಹುದು.
ಸಹಿ/– ಕಾರ್ಯಪಾಲಕ ಇಂಜಿನೀಯರ್, ಗ್ರಾಕುನೀ&ನೈ. ವಿಭಾಗ, ಹರಪನಹಳ್ಳಿ
ಡಿಐಪಿಆರ್/ಬಳ್ಳಾರಿ/404/ಎಂಸಿಎ/2021–22

ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ
ಕಾರ್ಯಪಾಲಕ ಅಭಿಯಂತರರವರ ಕಛೇರಿ ಬೆಳಗಾವಿ ವಿಭಾಗ, ಬೆಳಗಾವಿ. ಪ್ಲಾಟ ನಂ. ಸಿ–1, ಹೌಸಿಂಗ್ ಬೋರ್ಡ್ ಕಾಲನಿ, ಟೀಚರ್ ಕಾಲನಿ ಎದುರಿಗೆ, (ಓಂಕಾರ ನಗರ) ಹಿಂಡಲಗಾ, ಬೆಳಗಾವಿ. ದೂರವಾಣಿ ಫ್ಯಾಕ್ಸ್ ನಂ: (0831)2442294 ಇ–ಮೇಲ್:ksdb.bgmdiv@gmail.com
ಸಂ.ಕಕೊಅಮ/ಕಾಪಾಅ/ಬೆವಿ/ತಾಂ.ಶಾ/ಕ್ರಿಯೋ/ಟೆಂ.ಪ್ರ/2021–22/685 ದಿನಾಂಕ:30–09–2021
ಇ–ಪ್ರೋಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ KW - 2
ಆಯುಕ್ತರು, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಬೆಳಗಾವಿ ವಿಭಾಗ ಕಛೇರಿ ವ್ಯಾಪ್ತಿಯಲ್ಲಿ ಬರುವ 2021–22ನೇ ಸಾಲಿನ ಸೆಸ್ ಲೆಕ್ಕಶೀರ್ಷಿಕೆಯಡಿ ಮಂಜೂರಾದ ಬೆಳಗಾವಿ ಜಿಲ್ಲೆಯ ಬೈಲಹೊಂಗಲ ಪಟ್ಟಣದ ಬಸವೇಶ್ವರನಗರ ಆಶ್ರಯ ಕಾಲೋನಿ ಕೊಳಗೇರಿ ಪ್ರದೇಶದಲ್ಲಿ ಸಿ.ಸಿ.ರಸ್ತೆ ಒದಗಿಸುವ ಕಾಮಗಾರಿ ಸಲುವಾಗಿ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಕರೆದಿರುವ ಕಾಮಗಾರಿಗೆ ಲೋಕೋಪಯೋಗಿ ಇಲಾಖೆಯಿಂದ ಸಿವ್ಹಿಲ್ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಐಟಂವಾರು ಟೆಂಡರ್‌ನ್ನು ಕರೆಯಲಾಗಿದೆ. ಹೆಚ್ಚಿನ ವಿವರ/ ವಿಚಾರಣೆ ಇ–ಪ್ರೋಕ್ಯೂರ್‌ಮೆಂಟ್‌ನ www.eproc.karnataka.gov.in ನಿಂದ ದಿನಾಂಕ: 01.10.2021 ರಿಂದ ಡೌನಲೋಡ್ ಮಾಡಿಕೊಂಡು ಟೆಂಡರನ್ನು ಸಲ್ಲಿಸಲು ಕೊನೆಯ ದಿನಾಂಕ: 16.10.2021 ಸಾಯಂಕಾಲ 5.30 ಗಂಟೆಯವರೆಗೆ ಸ್ವೀಕೃತ ಟೆಂಡರ್ ತೆರೆಯುವ ದಿನಾಂಕ: 18.10.2021 ರಂದು ಸಾಯಂಕಾಲ 4.00 ಗಂಟೆಯ ನಂತರ ತೆರೆಯಲಾಗುವುದು.
ಕಾಮಗಾರಿಯ ಟೆಂಡರ ಮೊತ್ತ ರೂ. 26.40 ಲಕ್ಷಗಳು ಹಾಗೂ ಇ.ಎಮ್.ಡಿ. ಮೊತ್ತ ರೂ. 53,000 ಗುತ್ತಿಗೆದಾರರ ಅರ್ಹತೆ/ ಟೆಂಡರಿನ ನಿಯಮ/ ಟೆಂಡರ್ ಪ್ರೋಸೆಸಿಂಗ್ ಶುಲ್ಕ ತುಂಬುವ ವಿಧಾನ ಇತ್ಯಾದಿ ವಿವರಗಳಿಗೆ https://eproc.karnataka.gov.in ಮೂಲಕ ಮಾಹಿತಿ ಪಡೆಯಬಹುದು ಅಥವಾ ಹೆಚ್ಚಿನ ಮಾಹಿತಿಗಾಗಿ ಕಛೇರಿಯ ದಿನದಂದು ಕಛೇರಿಯ ವೇಳೆಯಲ್ಲಿ ಪಡೆಯಬಹುದು.
ಸಹಿ/–ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಬೆಳಗಾವಿ ವಿಭಾಗ, ಬೆಳಗಾವಿ.
DIPR/BGM/RO-NO-842/MCA/2021-22

ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಲೋಕೋಪಯೋಗಿ ಇಲಾಖೆ, ಚಿಕ್ಕಮಗಳೂರು ವಿಭಾಗ, ಚಿಕ್ಕಮಗಳೂರು.
ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 22/2021–22/ /ದಿನಾಂಕ:24.09.2021
ಮೇಲ್ಕಂಡ ಟೆಂಡರ್ ಪ್ರಕಟಣೆಯಲ್ಲಿ ಚಿಕ್ಕಮಗಳೂರು ಜಿಲ್ಲೆಯ ಚಿಕ್ಕಮಗಳೂರು, ಹಾಗೂ ಮೂಡಿಗೆರೆ ಉಪವಿಭಾಗಕ್ಕೆ ಒಳಪಡುವ ಕಾಮಗಾರಿಗಳಿಗೆ (Standard Tender Document, KW 4 ನಿಬಂಧನೆಗನುಸಾರ) ಅರ್ಹ ಗುತ್ತಿಗೆದಾರರಿಂದ ಇ–ಪ್ರೋಕ್ ಮೂಲಕ ಟೆಂಡರ್ ಕರೆಯಲಾಗಿರುತ್ತದೆ. ಕನಿಷ್ಠ ಅಂದಾಜು ಮೊತ್ತ ರೂ.300.00ಲಕ್ಷಗಳು ಗರಿಷ್ಠ ಅಂದಾಜು ಮೊತ್ತ ರೂ.3300.00 ಲಕ್ಷಗಳು ಆಗಿರುತ್ತವೆ.
1) ಕ್ರಮ ಸಂಖ್ಯೆ 1 ರಿಂದ 3 ರ ವರೆಗಿನ ಕಾಮಗಾರಿಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಕರೆಯಲಾಗಿದ್ದು, ದಿನಾಂಕ: 12.11.2021 ರಂದು ಸಂಜೆ 4.00 ಗಂಟೆಯೊಳಗೆ ಟೆಂಡರ್ ಸಲ್ಲಿಸಬೇಕು. ಸದರಿ ಟೆಂಡರನ್ನು ದಿನಾಂಕ;–15.11.2021 ರಂದು ಬೆಳಿಗ್ಗೆ 11.00 ಗಂಟೆಯ ನಂತರ ಸಾಧ್ಯವಾದಲ್ಲಿ ತೆರೆಯಲಾಗುವುದು.
ಈ ದಿನಾಂಕಗಳಂದು ಆಕಸ್ಮಿಕ ರಜಾ ದಿನಗಳು ಬಂದಲ್ಲಿ ಮರುದಿನವನ್ನು ಪರಿಗಣಿಸಲಾಗುವುದು. ಹೆಚ್ಚಿನ ವಿವರಗಳಿಗೆ ಕಛೇರಿ ವೇಳೆಯಲ್ಲಿ ವಿಷಯ ನಿರ್ವಾಹಕರನ್ನು ಸಂಪರ್ಕಿಸಿ ತಿಳಿಯಬಹುದಾಗಿದೆ.
ಸಹಿ/– ಕಾರ್ಯಪಾಲಕ ಇಂಜಿನಿಯರ್,ಲೋಕೋಪಯೋಗಿ ಇಲಾಖೆ, ಚಿಕ್ಕಮಗಳೂರು ವಿಭಾಗ, ಚಿಕ್ಕಮಗಳೂರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, ವಿಜಯನಗರ ವಿಭಾಗ, 3ನೇ ಮುಖ್ಯರಸ್ತೆ, 1ನೇ ಮಹಡಿ, ಶಾಸಕರ ಭವನ, ವಿಜಯನಗರ, ಬೆಂಗಳೂರು – 560 040.
ಸಂಖ್ಯೆ: ಕಾಪಾಅ(ವಿನ)/ಎಇ/ಟೆಂಡರ್/08/2021–22 ದಿನಾಂಕ: 01.10.2021
ಅಲ್ಪಾವಧಿ ಟೆಂಡರ್ ಪ್ರಕಟಣೆ (ದ್ವಿಲಕೋಟೆ)
(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)
ಕಾರ್ಯಪಾಲಕ ಅಭಿಯಂತರರು, (ವಿಜಯನಗರ) ಬೃ.ಬೆಂ.ಮ.ಪಾಲಿಕೆ, ಬೆಂಗಳೂರು, ಇವರು ಬೃ.ಬೆಂ.ಮ.ಪಾಲಿಕೆಯಲ್ಲಿ ಅಥವಾ ತತ್ಸಮಾನವಾಗಿ ಸಿ.ಪಿ.ಡಬ್ಲ್ಯೂ.ಡಿ/ ಕೆ.ಪಿ.ಡಬ್ಲ್ಯೂ.ಡಿ/ರೈಲ್ವೇಸ್/ಎಂ.ಇ.ಎಸ್/ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. (ಎಸ್.ಟಿ.ಡಿ. ಕೆಡಬ್ಲ್ಯೂ–3)

ಕ್ರ. ಸಂ.	ಕಾಮಗಾರಿಗಳ ಹೆಸರು/ವರ್ಗೀಕರಣ	ಕಾಮಗಾರಿಗಿಟ್ಟ ಅಂದಾಜು ಮೊತ್ತ (₹. ಲಕ್ಷಗಳಲ್ಲಿ)
	(ದ್ವಿಲಕೋಟೆ ಪದ್ಧತಿ) (ಕೆಡಬ್ಲ್ಯೂ–3) (ಸಾಮಾನ್ಯರಿಗೆ)	
1.	ವಾರ್ಡ್ ಸಂಖ್ಯೆ–124, ಹೊಸಹಳ್ಳಿ ಎ ಕೆ ಕಾಲೋನಿಯಲ್ಲಿ ಪ್ರಾರ್ಥನಾ ಮಂದಿರ ನಿರ್ಮಾಣ ಮಾಡುವುದು.	70.00
2.	ವಾರ್ಡ್ ಸಂಖ್ಯೆ–157, ಹೊಸ ಬಡಾವಣೆ ಬಿ ಅಡ್ಡರಸ್ತೆಯಲ್ಲಿ ಹಳೆ ಕಟ್ಟಡವಿರುವ ಜಾಗದಲ್ಲಿ ವಿವಿಧೋದ್ದೇಶ ಕಟ್ಟಡ ನಿರ್ಮಾಣ ಮಾಡುವುದು.	80.00
ಇಎಂಡಿ ಘೋಷಣಾ	ಸರ್ಕಾರದ ಆದೇಶ ಸಂಖ್ಯೆ ಆಇ 675 ವೆಚ್ಚ–12/2020 ಬೆಂಗಳೂರು ದಿನಾಂಕ: 22.12.2020	

ಟೆಂಡರ್ ವೇಳಾಪಟ್ಟಿ: (1) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ದಿನಾಂಕ: **01.10.2021** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ **08.10.2021**ರ ಸಂಜೆ **4:00** ಗಂಟೆಯವರೆಗೆ ಅಥವಾ ಮುಂಚಿತವಾಗಿ ಮತ್ತು ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮಾರ್ಗಸೂಚಿಗಳಂತೆ ತೆರೆಯಲಾಗುವುದು. (3) ಬಿಡ್ ಪೂರ್ವಭಾವಿ ಸಭೆಯನ್ನು ಕಾರ್ಯಪಾಲಕ ಅಭಿಯಂತರರ ಕಚೇರಿ (ವಿಜಯನಗರ), 3ನೇ ಮುಖ್ಯರಸ್ತೆ, 1ನೇ ಮಹಡಿ, ಶಾಸಕರ ಭವನ, ವಿಜಯನಗರ, ಬೆಂಗಳೂರು – 40. ಇಲ್ಲಿ ದಿನಾಂಕ **05.10.2021**ರ ಮಧ್ಯಾಹ್ನ **3:00** ಗಂಟೆಗೆ ನಡೆಸಲಾಗುವುದು. (4) ದ್ವಿಲಕೋಟೆ ಪದ್ಧತಿಗೆ ತಾಂತ್ರಿಕ ಬಿಡ್‌ಗಳನ್ನು & ಏಕಲಕೋಟೆ ಪದ್ಧತಿಗೆ ಆರ್ಥಿಕ ಬಿಡ್‌ಗಳನ್ನು ಕಾರ್ಯಪಾಲಕ ಅಭಿಯಂತರರ ಕಚೇರಿಯಲ್ಲಿ (ವಿಜಯನಗರ) ದಿನಾಂಕ **11.10.2021**ರ ಬೆಳಿಗ್ಗೆ **11:30** ಗಂಟೆಗೆ ತೆರೆಯಲಾಗುವುದು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ **https://eproc.karnataka.gov.in** ನಲ್ಲಿ ಪಡೆದುಕೊಳ್ಳಬಹುದು.
ಸಹಿ/– ಕಾರ್ಯಪಾಲಕ ಅಭಿಯಂತರರು, ವಿಜಯನಗರ ವಿಭಾಗ
ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಸ್ವಚ್ಛ ಭಾರತ ಮಿಷನ್–ನಗರ, ಅಮೃತ್: ಎರಡನೇ ಹಂತಕ್ಕೆ ಚಾಲನೆ ನೀಡಿದ ಪ್ರಧಾನಿ ಮೋದಿ

ಕಸಮುಕ್ತ ನಗರ, ಸುರಕ್ಷಿತ ನೀರಿನ ಭರವಸೆ

ನವದೆಹಲಿ (ಪಿಟಿಐ): ಸ್ವಚ್ಛ ಭಾರತ ಮಿಷನ್-ನಗರ ಮತ್ತು ಅಮೃತ್ (ಅಟಲ್ ಮಿಷನ್ ಫಾರ್ ರಿಜುವೆನೇಷನ್ ಎಂಡ್ ಅರ್ಬನ್ ಟ್ರಾನ್ಸ್‌ಫಾರ್ಮೇಷನ್) ಎರಡನೇ ಹಂತದ ಯೋಜನೆಗಳಿಗೆ ಪ್ರಧಾನಿ ನರೇಂದ್ರ ಮೋದಿ ಅವರು ಶುಕ್ರವಾರ ಚಾಲನೆ ನೀಡಿದ್ದಾರೆ. ನಗರಗಳನ್ನು ಕಸಮುಕ್ತಗೊಳಿಸುವುದು ಮತ್ತು ನೀರಿನ ಭದ್ರತೆ ಒದಗಿಸುವುದು ಈ ಯೋಜನೆಗಳ ಉದ್ದೇಶ.

ಚರಂಡಿ ನೀರನ್ನು ಸಂಸ್ಕರಿಸಿಯೇ ನದಿಗೆ ಬಿಡುವುದನ್ನು ಖಾತರಿಪಡಿಸುವುದು ಈ ಯೋಜನೆಗಳ ಮತ್ತೊಂದು ಗುರಿ. ದೆಹಲಿಯಲ್ಲಿರುವ ಅಂಬೇಡ್ಕರ್ ಅಂತರರಾಷ್ಟ್ರೀಯ ಕೇಂದ್ರದಲ್ಲಿ ಕಾರ್ಯಕ್ರಮ ನಡೆಯಿತು. ಯೋಜನೆಗಳ ಹೊಸ ಹಂತಗಳು ಅಂಬೇಡ್ಕರ್ ಅವರ ಕನಸುಗಳನ್ನು ಸಾಕಾರಗೊಳಿಸುವಲ್ಲಿ ಮಹತ್ವದ ಹೆಜ್ಜೆಗಳು ಎಂದೂ ಮೋದಿ ಹೇಳಿದರು.

'ಅಸಮಾನತೆ ನಿರ್ಮೂಲನೆ ಮಾಡಲು ನಗರಗಳ ಅಭಿವೃದ್ಧಿ ಅತ್ಯಗತ್ಯ ಎಂದು ಬಾಬಾಸಾಹೇಬ್ ಅವರು ನಂಬಿದ್ದರು. ಅಂಬೇಡ್ಕರ್ ಕೇಂದ್ರದಲ್ಲಿಯೇ ಈ ಕಾರ್ಯಕ್ರಮ ನಡೆಸಲು ನಮಗೆ ಸಾಧ್ಯವಾಗಿದ್ದು ಸುದೈವ' ಎಂದು ಮೋದಿ ಹೇಳಿದರು.

ದೇಶದಲ್ಲಿ ಪ್ರತಿ ದಿನ ಒಂದು ಲಕ್ಷ ಟನ್ ತ್ಯಾಜ್ಯವನ್ನು ಸಂಸ್ಕರಿಸಲಾಗುತ್ತಿದೆ. ನಗರಗಳಲ್ಲಿ ಇರುವ ಕಸದ ಗುಡ್ಡೆಗಳನ್ನು ಸಂಸ್ಕರಿಸಲಾಗುವುದು. ಎರಡು ಯೋಜನೆಗಳ ಹೊಸ ಎರಡು ಹಂತಗಳಲ್ಲಿ ಕಸದ ಗುಡ್ಡೆಗಳನ್ನು ಸಂಪೂರ್ಣವಾಗಿ ನಿವಾರಿಸಲಾಗುವುದು ಎಂದು ಮೋದಿ ಅವರು ಭರವಸೆ ಕೊಟ್ಟರು.

ದೇಶವನ್ನು ಬಯಲು ಶೌಚಮುಕ್ತ ಮಾಡುವುದಾಗಿ ಜನರು 2014ರಲ್ಲಿ ಪ್ರತಿಜ್ಞೆ ಮಾಡಿದ್ದರು. 10 ಕೋಟಿಗೂ ಹೆಚ್ಚು ಶೌಚಾಲಯಗಳ ನಿರ್ಮಾಣದ ಮೂಲಕ ಆ ಪ್ರತಿಜ್ಞೆಯನ್ನು ಈಡೇರಿಸಲಾಗಿದೆ ಎಂದು ಹೇಳಿದರು.

ಅಮೃತ್ ಯೋಜನೆಯ ಎರಡನೇ ಹಂತದಲ್ಲಿ ತ್ಯಾಜ್ಯ ಮತ್ತು ಘನತ್ಯಾಜ್ಯ ನಿರ್ವಹಣಾ ವ್ಯವಸ್ಥೆಯನ್ನು ಉತ್ತಮಪಡಿಸಲಾಗುವುದು. ನಗರಗಳನ್ನು ಸುರಕ್ಷಿತ ನೀರು ಲಭ್ಯವಿರುವ ನಗರಗಳಾಗಿ ಮಾಡಲಾಗುವುದು ಎಂದು ಪ್ರಧಾನಿ ವಿವರಿಸಿದರು.

ಸ್ವಚ್ಛತಾ ಅಭಿಯಾನವನ್ನು ಯುವ ಜನರು ತಮ್ಮ ಕೈಗೆತ್ತಿಕೊಂಡಿದ್ದಾರೆ. ಮಿಠಾಯಿ ಸುತ್ತಿದ ಕಾಗದಗಳನ್ನು ಈಗ ನೆಲಕ್ಕೆ ಎಸೆಯುವುದಿಲ್ಲ. ಅವುಗಳನ್ನು ತಮ್ಮ ಜೇಬಲ್ಲಿ ಇರಿಸುತ್ತಾರೆ. ಎಲ್ಲೆಂದರಲ್ಲಿ ಕಸ ಬಿಸಾಕಬೇಡಿ ಎಂದು ದೊಡ್ಡವರಿಗೆ ಸಣ್ಣ ಮಕ್ಕಳು ಹೇಳುತ್ತಿದ್ದಾರೆ ಎಂದು ಮೋದಿ ಹೇಳಿದರು.

ಸ್ವಚ್ಛತೆ ಕಾಪಾಡುವುದು ಒಂದು ದಿನ, ಒಂದು ಪಾಕ್ಷಿಕ, ಒಂದು ವರ್ಷಕ್ಕೆ ಅಥವಾ ಕೆಲವೇ ಜನರಿಗೆ ಸೀಮಿತವಾದ ವಿಚಾರ ಅಲ್ಲ. ಇದು ಪ್ರತಿದಿನದ, ಪ್ರತಿ ಪಾಕ್ಷಿಕದ, ಪ್ರತಿ ವರ್ಷದ, ಎಲ್ಲರ ನಿರಂತರವಾದ ಕಾರ್ಯಕ್ರಮವಾಗಿದೆ. ತಲೆಮಾರುಗಳಿಂದ ತಲೆಮಾರುಗಳಿಗೆ ಇದು ಮುಂದುವರಿಯಬೇಕಿದೆ ಎಂದು ಅವರು ವಿವರಿಸಿದರು.

ಸ್ವಚ್ಛ ಭಾರತ ಮಿಷನ್-ನಗರ ಹಂತ 2ಕ್ಕೆ ₹1.41 ಲಕ್ಷ ಕೋಟಿ ಅನುದಾನ ನೀಡಲಾಗುವುದು ಎಂದು ಸರ್ಕಾರ ಹೇಳಿದೆ.

ಯೋಜನೆಯ ಮುಖ್ಯ ಗುರಿ

ಎಲ್ಲ ನಗರಗಳನ್ನು ಕಸ ಮುಕ್ತಗೊಳಿಸುವುದು ಯೋಜನೆಯ ಮುಖ್ಯ ಗುರಿ. ಜತೆಗೆ, ಅಮೃತ್ ಯೋಜನೆಯ ಭಾಗವಾಗಿಲ್ಲದ ನಗರಗಳಲ್ಲಿಯೂ ಕಂದು ಮತ್ತು ಕಪ್ಪು ನೀರು ನಿರ್ವಹಣೆ ವ್ಯವಸ್ಥೆ ಅಳವಡಿಸುವುದು. ಎಲ್ಲ ನಗರ ಸ್ಥಳೀಯ ಸಂಸ್ಥೆಗಳನ್ನು ಬಯಲು ಶೌಚಮುಕ್ತ + ವರ್ಗಕ್ಕೆ ತರುವುದು. ಒಂದು ಲಕ್ಷಕ್ಕಿಂತ ಕಡಿಮೆ ಜನಸಂಖ್ಯೆಯ ಪಟ್ಟಣಗಳನ್ನು ಬಯಲು ಶೌಚಮುಕ್ತ + + ವರ್ಗಕ್ಕೆ ತರುವುದು. ಈ ಮೂಲಕ ನಗರ ಪ್ರದೇಶಗಳನ್ನು ಸುರಕ್ಷಿತ ಮತ್ತು ಸ್ವಚ್ಛವಾಗಿಸುವುದು.

ಯಾವುದಕ್ಕೆ ಹೆಚ್ಚು ಒತ್ತು?

- ಘನ ತ್ಯಾಜ್ಯವನ್ನು ಮೂಲದಲ್ಲಿಯೇ ವಿಂಗಡಿಸುವುದು
- ಕಡಿಮೆ ಬಳಕೆ, ಮತ್ತೆ ಮತ್ತೆ ಬಳಕೆ ಹಾಗೂ ಪುನರ್ ಬಳಕೆಗಾಗಿ ಸಂಸ್ಕರಣೆ ತತ್ವ ಅಳವಡಿಕೆ
- ನಗರಗಳ ಎಲ್ಲ ರೀತಿಯ ಘನ ತ್ಯಾಜ್ಯವನ್ನು ವೈಜ್ಞಾನಿಕವಾಗಿ ಸಂಸ್ಕರಿಸುವುದು
- ಕಸ ಸುರಿವ ಹಳೆಯ ಪ್ರದೇಶಗಳಿಗೆ ಪರಿಣಾಮಕಾರಿ ಘನ ತ್ಯಾಜ್ಯ ನಿರ್ವಹಣೆ ತಂತ್ರ ಅಳವಡಿಸುವುದು

ಪ್ರತಿಕ್ರಿಯೆ ಸಲ್ಲಿಸಲು ಕೇಂದ್ರಕ್ಕೆ ನೋಟಿಸ್

ಕಾಯ್ದೆಯ ಸೆಕ್ಷನ್ 5(4) ತಾರತಮ್ಯದಿಂದ ಕೂಡಿದೆ. ಹೆರಿಗೆ ರಜೆ ಸೌಲಭ್ಯ ಕಾಯ್ದೆಯ ಉದ್ದೇಶಕ್ಕೆ ಈ ಸೆಕ್ಷನ್ ವಿರುದ್ಧವಾಗಿದೆ ಎಂದು ಪಿಐಎಲ್‌ನಲ್ಲಿ ವಿವರಿಸಲಾಗಿದೆ.

ಹೆರಿಗೆ ರಜೆ ಕಾಯ್ದೆಯ ನಿಬಂಧನೆ ಪ್ರಶ್ನಿಸಿ ಪಿಐಎಲ್

ನವದೆಹಲಿ (ಪಿಟಿಐ): ಮೂರು ತಿಂಗಳಿಗೂ ಕಡಿಮೆ ವಯೋಮಾನದ ಮಗುವನ್ನು ದತ್ತು ತೆಗೆದುಕೊಳ್ಳುವ ಮಹಿಳೆ ಮಾತ್ರ ತಾಯ್ತನದ ರಜೆ ತೆಗೆದುಕೊಳ್ಳಲು ಅರ್ಹ ಎಂಬ ನಿಬಂಧನೆಯ ಸಾಂವಿಧಾನಿಕ ಸಿಂಧುತ್ವವನ್ನು ಪ್ರಶ್ನಿಸಿ ಸಲ್ಲಿಸಲಾಗಿರುವ ಅರ್ಜಿ ಕುರಿತು ಪ್ರತಿಕ್ರಿಯಿಸುವಂತೆ ಕೇಂದ್ರ ಸರ್ಕಾರಕ್ಕೆ ಸುಪ್ರೀಂಕೋರ್ಟ್ ಶುಕ್ರವಾರ ನೋಟಿಸ್ ಜಾರಿ ಮಾಡಿದೆ.

ನ್ಯಾಯಮೂರ್ತಿಗಳಾದ ಎಸ್.ಎ.ನಜೀರ್ ಹಾಗೂ ಕೃಷ್ಣ ಮುರಾರಿ ಅವರಿರುವ ನ್ಯಾಯಪೀಠ ಅರ್ಜಿ ವಿಚಾರಣೆ ನಡೆಸಿತು. ಪ್ರತಿಕ್ರಿಯೆ ಸಲ್ಲಿಸುವಂತೆ ಕಾನೂನು ಮತ್ತು ನ್ಯಾಯ ಸಚಿವಾಲಯ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವಾಲಯಕ್ಕೆ ನ್ಯಾಯಪೀಠ ನೋಟಿಸ್ ನೀಡಿತು.

ಕಾಯ್ದೆಯ ಈ ನಿಬಂಧನೆಯ ಸಾಂವಿಧಾನಿಕ ಸಿಂಧುತ್ವವನ್ನು ಪ್ರಶ್ನಿಸಿ ಕರ್ನಾಟಕ ಮೂಲದ ಹಂಸಾನಂದಿನಿ ನಂದೂರಿ ಎಂಬುವವರು ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್) ಸಲ್ಲಿಸಿದ್ದಾರೆ.

ಏರ್ ಇಂಡಿಯಾ ಖರೀದಿ ಟಾಟಾ ಮುಂಚೂಣಿ ಬಿಡ್ಡರ್

ನವದೆಹಲಿ (ಪಿಟಿಐ): ಸಾಲದ ಸುಳಿಗೆ ಸಿಲುಕಿರುವ ಏರ್ ಇಂಡಿಯಾ ಖರೀದಿಸಲು ಆಸಕ್ತಿ ತೋರಿ ಬಿಡ್ ಸಲ್ಲಿಸಿರುವ ಕಂಪನಿಗಳ ಸಾಲಿನಲ್ಲಿ ಟಾಟಾ ಸನ್ಸ್ ಮುಂಚೂಣಿಯಲ್ಲಿ ಇದೆ ಎಂದು ಕೇಂದ್ರ ಸರ್ಕಾರದ ಮೂಲಗಳು ತಿಳಿಸಿವೆ. ಆದರೆ, ಕೇಂದ್ರ ಗೃಹ ಸಚಿವ ಅಮಿತ್ ಶಾ ನೇತೃತ್ವದ ಸಚಿವರ ಸಮಿತಿಯು ಬಿಡ್‌ಗೆ ಅನುಮೋದನೆಯನ್ನು ಇನ್ನೂ ನೀಡಿಲ್ಲ.

ಏರ್ ಇಂಡಿಯಾ ಖರೀದಿಗೆ ಟಾಟಾ ಸನ್ಸ್ ಕಂಪನಿ, ಸ್ಪೈಸ್ ಜೆಟ್ ಪ್ರವರ್ತಕ ಅಜಯ್ ಸಿಂಗ್ ಬಿಡ್ ಸಲ್ಲಿಸಿದ್ದಾರೆ. ಈ ಬಿಡ್‌ಗಳನ್ನು ಬಂಡವಾಳ ಹಿಂತೆಗೆತಕ್ಕೆ ಸಂಬಂಧಿಸಿದ ಕಾರ್ಯದರ್ಶಿಗಳ ಸಮಿತಿಯು ಪರಿಶೀಲಿಸಿದೆ ಎಂದು ಮೂಲಗಳು ತಿಳಿಸಿವೆ.

ನಿಗದಿ ಮಾಡಿದ್ದ ಬೆಲೆ ಹಾಗೂ ಬಿಡ್‌ನಲ್ಲಿ ಉಲ್ಲೇಖಿಸಿರುವ ಬೆಲೆಯನ್ನು ಪರಿಶೀಲನೆ ಮಾಡಲಾಗಿದೆ. ಟಾಟಾ ಸನ್ಸ್ ಕಂಪನಿಯು ಅತಿಹೆಚ್ಚಿನ ಮೊತ್ತವನ್ನು ಉಲ್ಲೇಖಿಸಿದೆ. ಈಗ ಬಿಡ್‌ಗಳನ್ನು ಅಮಿತ್ ಶಾ ನೇತೃತ್ವದ ಸಚಿವರ ಸಮಿತಿಯ ಎದುರು ಇರಿಸಬೇಕಿದೆ. ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ವಾಣಿಜ್ಯ ಸಚಿವ ಪೀಯೂಷ್ ಗೋಯಲ್ ಮತ್ತು ನಾಗರಿಕ ವಿಮಾನಯಾನ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಅವರು ಈ ಸಮಿತಿಯಲ್ಲಿ ಇದ್ದಾರೆ.

ಈ ವಿಚಾರವಾಗಿ ಪ್ರತಿಕ್ರಿಯೆ ನೀಡಲು ಟಾಟಾ ಸನ್ಸ್ ಮತ್ತು ಹಣಕಾಸು ಸಚಿವಾಲಯ ನಿರಾಕರಿಸಿವೆ. 'ಬಿಡ್‌ಗಳಿಗೆ ಕೇಂದ್ರ ಸರ್ಕಾರ ಒಪ್ಪಿಗೆ ನೀಡಿದೆ ಎಂದು ಮಾಧ್ಯಮಗಳಲ್ಲಿ ವರದಿಯಾಗಿರುವುದು ತಪ್ಪು. ಸರ್ಕಾರ ಈ ವಿಚಾರವಾಗಿ ತೀರ್ಮಾನ ತೆಗೆದುಕೊಂಡ ತಕ್ಷಣ ಮಾಧ್ಯಮಗಳಿಗೆ ಮಾಹಿತಿ ನೀಡಲಾಗುವುದು' ಎಂದು ಹೂಡಿಕೆ ಮತ್ತು ಸಾರ್ವಜನಿಕ ಆಸ್ತಿ ನಿರ್ವಹಣೆ ಇಲಾಖೆಯ ಕಾರ್ಯದರ್ಶಿ ತುಹಿನ್ ಕಾಂತ ಪಾಂಡೆ ಹೇಳಿದ್ದಾರೆ.

ಸುಬ್ರಮಣಿಯನ್ ಸ್ವಾಮಿ ತಕರಾರು?: ಸಾಲದ ಸುಳಿಯಲ್ಲಿ ಸಿಲುಕಿರುವ 'ಏರ್ ಇಂಡಿಯಾ' ವಿಮಾನಯಾನ ಸಂಸ್ಥೆಯ ಹರಾಜು ಪ್ರಕ್ರಿಯೆಯಲ್ಲಿ 'ಟಾಟಾ ಸನ್ಸ್' ಸಲ್ಲಿಸಿರುವ ಬಿಡ್‌ಗೆ ಅನುಮೋದನೆ ಸಿಕ್ಕಿದೆ ಎಂಬ ವರದಿಗಳು ಪ್ರಕಟಗೊಂಡ ಬೆನ್ನಲ್ಲೇ ಬಿಜೆಪಿ ರಾಜ್ಯಸಭಾ ಸದಸ್ಯ ಸುಬ್ರಮಣಿಯನ್ ಸ್ವಾಮಿ ಅದನ್ನು ಕೋರ್ಟ್‌ನಲ್ಲಿ ಪ್ರಶ್ನಿಸುವ ಸುಳಿವು ನೀಡಿದ್ದಾರೆ.

ಕಾನೂನು ಹೋರಾಟದ ಜತೆಗೆ ಸತ್ಯಾಗ್ರಹ ಏಕೆ?

ದೆಹಲಿಯಲ್ಲಿ ಪ್ರತಿಭಟನೆಗೆ ಅನುಮತಿ ಕೊಡಿಸಲು ಕೋರಿ ಅರ್ಜಿ: ರೈತ ಸಂಘಟನೆಗಳಿಗೆ 'ಸುಪ್ರೀಂ' ಪ್ರಶ್ನೆ

ನವದೆಹಲಿ (ಪಿಟಿಐ): 'ನೀವು (ರೈತರು) ಈಗಾಗಲೇ ದೆಹಲಿಯನ್ನು ಉಸಿರುಗಟ್ಟಿಸಿದ್ದೀರಿ. ಈಗ ನಗರದೊಳಗೂ ಬಂದು ಪ್ರತಿಭಟನೆ ನಡೆಸಬೇಕೆ' ಎಂದು ರೈತ ಸಂಘಟನೆಗಳನ್ನು ಸುಪ್ರೀಂ ಕೋರ್ಟ್ ಪ್ರಶ್ನಿಸಿದೆ.

ದೆಹಲಿಯ ಜಂತರ್ ಮಂತರ್‌ನಲ್ಲಿ ಪ್ರತಿಭಟನೆ ನಡೆಸಲು ಕನಿಷ್ಠ 200 ರೈತರಿಗೆ ಅನುಮತಿ ನೀಡಲು ಸಂಬಂಧಿತ ಪ್ರಾಧಿಕಾರಗಳಿಗೆ ನಿರ್ದೇಶನ ನೀಡಿ ಎಂದು ಸುಪ್ರೀಂ ಕೋರ್ಟ್‌ಗೆ ರೈತ ಮಹಾಪಂಚಾಯತ್ ಅರ್ಜಿ ಸಲ್ಲಿಸಿತ್ತು. ನ್ಯಾಯಮೂರ್ತಿಗಳಾದ ಎ.ಎಂ. ಖಾನ್ವಿಲ್ಕರ್ ಮತ್ತು ಸಿ.ಟಿ.ರವಿಕುಮಾರ್ ಅವರಿದ್ದ ಪೀಠವು ಅರ್ಜಿಯ ವಿಚಾರಣೆಯನ್ನು ಕೈಗೆತ್ತಿಕೊಂಡಿತು.

'ನೀವು ಪ್ರತಿಭಟನೆ ನಡೆಸುವ ಮೂಲಕ ದೆಹಲಿಯ ಉಸಿರುಗಟ್ಟಿಸಿದ್ದೀರಿ. ದೆಹಲಿಯ ಜನತೆಗೂ ಮುಕ್ತವಾಗಿ ಸಂಚರಿಸುವ ಹಕ್ಕಿದೆ. ಈಗ ನಗರದೊಳಗೂ ಪ್ರತಿಭಟನೆ ನಡೆಸಲು ಅನುಮತಿ ನೀಡಿ ಎಂದು ಕೋರುತ್ತಿದ್ದೀರಿ. ನಿಮ್ಮ ಬೇಡಿಕೆಯಲ್ಲಿ ಸಮತೋಲನ ಇರಬೇಕು' ಎಂದು ಪೀಠವು ಅರ್ಜಿದಾರರಿಗೆ ಸೂಚಿಸಿತು.

ಅದಕ್ಕೆ ಅರ್ಜಿದಾರರ ಪರ ವಕೀಲರು, ನಮ್ಮ ಕಕ್ಷಿದಾರರು ಜಂತರ್ ಮಂತರ್‌ನಲ್ಲಿ ಅಹಿಂಸಾತ್ಮಕ ಸತ್ಯಾಗ್ರಹ ನಡೆಸಲಿದ್ದಾರೆ ಎಂದು ಹೇಳಿದರು.

ಆಗ ಪೀಠವು, 'ಸತ್ಯಾಗ್ರಹ ನಡೆಸುವುದರಲ್ಲಿ ಯಾವುದೇ ಸಮಸ್ಯೆ ಇಲ್ಲ. ಆದರೆ ನೀವು ಈಗಾಗಲೇ ಈ ಕಾಯ್ದೆಗಳ ವಿರುದ್ಧ ದೆಹಲಿ ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಸಿದ್ದೀರಿ. ಒಮ್ಮೆ ನೀವು ನ್ಯಾಯಾಲಯದ ಮೆಟ್ಟಿಲೇರಿದ ಮೇಲೆ, ನ್ಯಾಯಾಂಗ ವ್ಯವಸ್ಥೆ ಮೇಲೆ ನಂಬಿಕೆ ಇಡಬೇಕು. ನ್ಯಾಯಾಲಯವು ನಿಮ್ಮ ಅರ್ಜಿಯನ್ನು ಇತ್ಯರ್ಥಪಡಿಸಲಿದೆ' ಎಂದು ಪೀಠವು ಹೇಳಿದೆ.

'ನೀವು ನ್ಯಾಯಾಲಯದ ಮೆಟ್ಟಿಲೇರಿದ ಮೇಲೆ ಮತ್ತೆ ಸತ್ಯಾಗ್ರಹ ನಡೆಸುವ ಅವಶ್ಯಕತೆ ಏನಿದೆ' ಎಂದು ಪೀಠವು ಪ್ರಶ್ನಿಸಿತು. 'ಆ ಕಾಯ್ದೆಗಳನ್ನು ರದ್ದುಪಡಿಸಿ ಎಂದು ಅರ್ಜಿ ಸಲ್ಲಿಸಿದ್ದೀರಿ. ಹೀಗಿದ್ದಾಗ ನೀವು ಅದೇ ಬೇಡಿಕೆ ಇರಿಸಿಕೊಂಡು ಸತ್ಯಾಗ್ರಹ ಅಥವಾ ಪ್ರತಿಭಟನೆ ನಡೆಸುವುದರಲ್ಲಿ ಅರ್ಥವಿಲ್ಲ' ಎಂದು ಪೀಠವು ಹೇಳಿತು.

'ನೀವು ಪ್ರತಿಭಟನೆ ನಡೆಸುವ ಮುನ್ನ ದೆಹಲಿ ನಿವಾಸಿಗಳ ಅನುಮತಿ ಪಡೆದಿದ್ದೀರಾ? ನಿಮ್ಮ ಪ್ರತಿಭಟನೆಯಿಂದ ಅವರಿಗೆ ಆನಂದವಾಗಿದೆಯೇ? ಅವರ ಸ್ವತ್ತುಗಳಿಗೆ ಹಾನಿಯಾಗಿಲ್ಲವೇ' ಎಂದು ಪೀಠವು ಪ್ರಶ್ನಿಸಿತು.

ಅರ್ಜಿಯ ಮುಂದಿನ ವಿಚಾರಣೆ ಅಕ್ಟೋಬರ್ 4ರಂದು ನಡೆಯಲಿದೆ.

ಝಜ್ಜರ್‌ನಲ್ಲಿ ರೈತರ ಮೇಲೆ ಜಲಫಿರಂಗಿ ಪ್ರಯೋಗ

ಪ್ರಮಾಣಪತ್ರ ಸಲ್ಲಿಸಲು ಸೂಚನೆ

ಹೆದ್ದಾರಿಗಳಲ್ಲಿ ಸಂಚರಿಸುವ ನಾಗರಿಕರು ಮತ್ತು ಭದ್ರತಾ ಸಿಬ್ಬಂದಿಯನ್ನು ಪ್ರತಿಭಟನೆನಿರತ ರೈತರು ತಡೆದು, ತೊಂದರೆ ನೀಡಿದ್ದಾರೆ ಎಂದು ಮಾಧ್ಯಮಗಳು ವರದಿ ಮಾಡಿರುವುದನ್ನು ನಾವು ನೋಡಿದ್ದೇವೆ ಎಂದು ಪೀಠವು ಹೇಳಿತು.

ಅರ್ಜಿದಾರರ ಪರ ವಕೀಲರು ಇದನ್ನು ನಿರಾಕರಿಸಿದರು. ರೈತರು ಶಾಂತಿಯುತ ಪ್ರತಿಭಟನೆ ನಡೆಸುತ್ತಿದ್ದಾರೆ ಎಂದು ಹೇಳಿದರು. ಇದಕ್ಕೆ ಪೀಠವು ತೀಕ್ಷ್ಣವಾಗಿ ಪ್ರತಿಕ್ರಿಯಿಸಿತು.

'ಯಾವುದು ಶಾಂತಿಯುತ ಪ್ರತಿಭಟನೆ? ಹೆದ್ದಾರಿ ತಡೆ ನಡೆಸುವುದು, ರೈಲು ತಡೆ ನಡೆಸುವುದು ಆ ಮೂಲಕ ಸಾರ್ವಜನಿಕರ ಓಡಾಟಕ್ಕೆ ಅಡಚಣೆ ಉಂಟು ಮಾಡುವುದು ಶಾಂತಿಯುತ ಪ್ರತಿಭಟನೆಯೇ' ಎಂದು ಪೀಠವು ಪ್ರಶ್ನಿಸಿತು.

ಅರ್ಜಿದಾರರ ಪರ ವಕೀಲರು, 'ರೈತರು ಹೆದ್ದಾರಿ ತಡೆ ನಡೆಸಿಲ್ಲ. ಹೆದ್ದಾರಿಯನ್ನು ಮುಚ್ಚಿದ್ದು ಪೊಲೀಸರು' ಎಂದು ಹೇಳಿದರು. ಆಗ ಪೀಠವು, 'ಹಾಗಿದ್ದರೆ, ಅರ್ಜಿದಾರರು ಹೆದ್ದಾರಿ ತಡೆಯಲ್ಲಿ ಭಾಗಿಯಾಗಿಲ್ಲ ಎಂದು ಪ್ರಮಾಣ ಪತ್ರ ನೀಡಲಿ. ನಂತರ ವಿಚಾರಣೆ ಮುಂದುವರಿಸೋಣ' ಎಂದು ಪೀಠವು ಹೇಳಿತು. ಅರ್ಜಿಯ ವಿಚಾರಣೆಯನ್ನು ಅಕ್ಟೋಬರ್ 4ಕ್ಕೆ ಮುಂದೂಡಿತು.

ನ್ಯಾಯಾಲಯಕ್ಕೆ ಪ್ರಮಾಣಪತ್ರ ಸಲ್ಲಿಸುವುದಕ್ಕೂ ಮುನ್ನ ಅದನ್ನು ಕೇಂದ್ರೀಯ ಪ್ರಾಧಿಕಾರಗಳಿಗೆ ಮತ್ತು ಅಟಾರ್ನಿ ಜನರಲ್ ಅವರಿಗೂ ಸಲ್ಲಿಸಿ ಎಂದು ಸೂಚಿಸಿತು.

ಹರಿಯಾಣ: ರೈತರ ಮೇಲೆ ಜಲಫಿರಂಗಿ

ಚಂಡೀಗಡ (ಪಿಟಿಐ): ಝಜ್ಜರ್‌ನಲ್ಲಿ ಆಯೋಜಿಸಲಾಗಿದ್ದ ಕಾರ್ಯಕ್ರಮವೊಂದರಲ್ಲಿ ಪಾಲ್ಗೊಳ್ಳಲು ತೆರಳುತ್ತಿದ್ದ ಹರಿಯಾಣ ಉಪ ಮುಖ್ಯಮಂತ್ರಿ ದುಷ್ಯಂತ್ ಚೌಟಾಲಾ ಅವರಿಗೆ ಮುತ್ತಿಗೆ ಹಾಕಲು ಯತ್ನಿಸಿದ ರೈತರ ಮೇಲೆ, ಶುಕ್ರವಾರ ಜಲಫಿರಂಗಿ ಪ್ರಯೋಗಿಸಲಾಗಿದೆ.

ಕೇಂದ್ರದ ಮೂರು ಕೃಷಿ ಕಾಯ್ದೆ ವಿರೋಧಿಸಿ ಪ್ರತಿಭಟನೆ ನಡೆಸುತ್ತಿರುವ ರೈತರು, ಬಿಜೆಪಿ ಹಾಗೂ ಜೆಜೆಪಿ ಮೈತ್ರಿ ಸರ್ಕಾರದ ಸಾರ್ವಜನಿಕ ಕಾರ್ಯಕ್ರಮಗಳನ್ನೂ ವಿರೋಧಿಸಿ ಪ್ರತಿಭಟನೆ ನಡೆಸುತ್ತಿದ್ದಾರೆ.

ಪ್ರತಿಭಟನೆನಿರತ ಕೆಲವು ರೈತರು ಕಾರ್ಯಕ್ರಮ ನಿಗದಿಯಾದ ಸ್ಥಳದ ಸುತ್ತಲು ಹಾಕಿದ್ದ ಬ್ಯಾರಿಕೇಡ್ ಜಿಗಿದು, ಕಾರ್ಯಕ್ರಮದ ವೇದಿಕೆಯತ್ತ ನುಗ್ಗಲು ಯತ್ನಿಸಿದರು. ಈ ವೇಳೆ ಪ್ರತಿಭಟನಕಾರರನ್ನು ಚದುರಿಸಲು, ಜಲಫಿರಂಗಿ ಪ್ರಯೋಗಿಸಲಾಯಿತು ಎಂದು ಪೊಲೀಸರು ತಿಳಿಸಿದ್ದಾರೆ.

ಗುರುವಾರ ಇಂದ್ರಿಯಲ್ಲಿ ನಡೆದಿದ್ದ ಬಿಜೆಪಿ ಸಭೆಗೂ ರೈತರು ಮುತ್ತಿಗೆ ಹಾಕಲು ಯತ್ನಿಸಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಪ್ರಧಾನಿ ಮೋದಿ ಭೇಟಿಯಾದ ಚನ್ನಿ

ನವದೆಹಲಿ (ಪಿಟಿಐ): ಪಂಜಾಬ್ ಮುಖ್ಯಮಂತ್ರಿ ಚರಣ್‌ಜಿತ್ ಸಿಂಗ್ ಚನ್ನಿ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಶುಕ್ರವಾರ ಅವರ ನಿವಾಸದಲ್ಲಿ ಭೇಟಿಯಾದರು. ಕಳೆದ ವರ್ಷ ಕೇಂದ್ರ ಸರ್ಕಾರ ಜಾರಿ ಮಾಡಿದ ಮೂರು ಕೃಷಿ ಕಾಯ್ದೆಗಳನ್ನು ಹಿಂಪಡೆಯುವಂತೆ ಅವರು ಪ್ರಧಾನಿಗೆ ಮನವಿ ಮಾಡಿದ್ದಾರೆ.

ಪಂಜಾಬ್ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ಬಳಿಕ ಇದೇ ಮೊದಲ ಬಾರಿಗೆ ಅವರು ಪ್ರಧಾನಿಯನ್ನು ಭೇಟಿ ಮಾಡಿದರು.

ಪ್ರಧಾನಿ ಜೊತೆ ಚರ್ಚೆ ನಡೆಸಿದ ಬಳಿಕ ಚನ್ನಿ ಅವರು ಸುದ್ದಿಗಾರರಿಗೆ ಮಾಹಿತಿ ನೀಡಿದ್ದಾರೆ. 'ಇದೊಂದು ಔಪಚಾರಿಕ ಭೇಟಿ. ಆದ್ದರಿಂದ ನಿರ್ದಿಷ್ಟ ಕಾರ್ಯಸೂಚಿ ಇರಲಿಲ್ಲ. ಆದರೂ, ರೈತರ ಪ್ರತಿಭಟನೆ ಕುರಿತು ಶೀಘ್ರದಲ್ಲೇ ನಿರ್ಣಯ ತೆಗೆದುಕೊಳ್ಳುವಂತೆ ನಾನು ಪ್ರಧಾನಿಗೆ ಮನವಿ ಮಾಡಿದ್ದೇನೆ. ರೈತರ ಜೊತೆ ಚರ್ಚೆ ಮಾಡುವುದರಿಂದ ಮಾತ್ರ ಈ ಸಮಸ್ಯೆ ಬಗೆಹರಿಯುತ್ತದೆ ಎಂದಿದ್ದೇನೆ. ಇದಕ್ಕೆ ಪ್ರತಿಕ್ರಿಯೆ ನೀಡಿರುವ ಮೋದಿ, ತಾವು ಆ ದಿಸೆಯಲ್ಲಿ ಕೆಲಸ ಮಾಡುತ್ತಿರುವುದಾಗಿ ತಿಳಿಸಿದ್ದಾರೆ' ಎಂದು ಚನ್ನಿ ಹೇಳಿದ್ದಾರೆ.

ಪಂಜಾಬ್ ಆರ್ಥಿಕತೆ ಕೃಷಿಯನ್ನು ಆಧರಿಸಿದೆ. ರೈತರು ಮತ್ತು ಕೃಷಿ ಕಾರ್ಮಿಕರು ಸಂತೋಷವಾಗಿ ಇದ್ದರೆ ಮಾತ್ರ ಪಂಜಾಬ್ ಅಭಿವೃದ್ಧಿ ಹೊಂದುತ್ತದೆ. ರೈತರ ಪ್ರತಿಭಟನೆಯಿಂದ ಪಂಜಾಬ್ ಸಂಕಷ್ಟಕ್ಕೀಡಾಗಿದೆ ಎಂದು ಹೇಳಿರುವುದಾಗಿ ತಿಳಿಸಿದ್ದಾರೆ.

ಚನ್ನಿ ಅವರನ್ನು ಭೇಟಿಯಾದ ಕುರಿತು ಪ್ರಧಾನಿ ಮೋದಿ ಟ್ವೀಟ್ ಮಾಡಿದ್ದಾರೆ. ಫೋಟೊಗಳನ್ನು ಹಂಚಿಕೊಂಡಿದ್ದಾರೆ.

'ಕಾಂಗ್ರೆಸ್‌ನಿಂದ ಅವಮಾನ: ಹೇಳಿಕೆಯಲ್ಲಿ ಹುರುಳಿಲ್ಲ'

ಪ್ರಜಾವಾಣಿ ವಾರ್ತೆ

ನವದೆಹಲಿ: ಕಾಂಗ್ರೆಸ್‌ನಿಂದ ತಮಗೆ ಅವಮಾನವಾಗಿದ್ದು, ಹೀಗಾಗಿ ಪಕ್ಷ ತೊರೆಯುತ್ತಿರುವುದಾಗಿ ಪಂಜಾಬ್‌ನ ಮಾಜಿ ಮುಖ್ಯಮಂತ್ರಿ ಕ್ಯಾಪ್ಟನ್ ಅಮರಿಂದರ್ ಸಿಂಗ್ ನೀಡಿದ ಹೇಳಿಕೆಯಲ್ಲಿ ಹುರುಳಿಲ್ಲ ಎಂದು ಕಾಂಗ್ರೆಸ್ ಹೇಳಿದೆ.

ಅಮರಿಂದರ್ ಹೇಳಿಕೆ ಖಂಡಿಸಿರುವ ಕಾಂಗ್ರೆಸ್, ಇದರ ಹಿಂದೆ 'ಯಾವುದೋ ಒತ್ತಡ' ಇದ್ದಂತಿದೆ ಎಂದಿದೆ. ಕ್ಯಾಪ್ಟನ್ ಸೋತಾಗಲೂ ಅವರಿಗೆ ಪಕ್ಷವು ಎಷ್ಟು ದೊಡ್ಡ ಸ್ಥಾನವನ್ನು ನೀಡಿತ್ತು ಎಂಬುದನ್ನು ಅವರು ನೆನಪು ಮಾಡಿಕೊಳ್ಳಬೇಕು ಎಂದು ಹೇಳಿದೆ.

'ಅಮರಿಂದರ್ ಅವರನ್ನು ಬಿಜೆಪಿ ತನ್ನ ಮುಖವಾಡವನ್ನಾಗಿ ಬಳಸಿಕೊಳ್ಳಲು ನೋಡುತ್ತಿದೆ' ಎಂದು ಆರೋಪಿಸಿರುವ ಪಂಜಾಬ್ ಉಸ್ತುವಾರಿಯೂ ಆಗಿರುವ ಎಐಸಿಸಿ ಪ್ರಧಾನ ಕಾರ್ಯದರ್ಶಿ ಹರೀಶ್ ರಾವತ್, ಅಂಥದಕ್ಕೆ ಅಮರಿಂದರ್ ಅವಕಾಶ ಮಾಡಿಕೊಡಬಾರದು ಹಾಗೂ ಕಾಂಗ್ರೆಸ್ ಬಗ್ಗೆ ತಾವು ನೀಡಿದ ಹೇಳಿಕೆಗಳನ್ನು ಮರುಪರಿಶೀಲಿಸಬೇಕು ಎಂದಿದ್ದಾರೆ.

'ಅಮರಿಂದರ್ ಬಿಜೆಪಿ ಮುಖಂಡರನ್ನು ಭೇಟಿ ಮಾಡಿದ ಬಳಿಕ, ಜನರ ಅನುಕಂಪವನ್ನು ಪಡೆಯುವುದಕ್ಕಾಗಿ ಅವಮಾನದ ಸಿದ್ಧಾಂತವನ್ನು ಪ್ರಚುರಪಡಿಸಲಾಗುತ್ತಿದೆ. ಆದರೆ, ಇಂಥ ಅನುಕಂಪದ ರಾಜಕಾರಣದಿಂದ ವ್ಯಕ್ತಿಗೆ ಸಹಾಯವಾಗಬಲ್ಲದು ಆದರೆ, ಪಂಜಾಬ್‌ಗೆ ಅಲ್ಲ' ಎಂದು ರಾವತ್ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಈ ಹೇಳಿಕೆಯಲ್ಲಿ ನವಜೋತ್ ಸಿಂಗ್ ಸಿಧು ಬಗ್ಗೆ ಪ್ರಸ್ತಾಪ ಮಾಡಿಲ್ಲ. ಆದರೆ, ರಾಜ್ಯದ ಮೊದಲ ದಲಿತ ಮುಖ್ಯಮಂತ್ರಿಯಾಗಿರುವ ಚರಣಜಿತ್ ಸಿಂಗ್ ಚನ್ನಿ ಅವರ 'ಸಾಮಾನ್ಯ ಹಿನ್ನೆಲೆ'ಯನ್ನು ಒತ್ತಿಹೇಳಿದ್ದಾರೆ. 'ಚನ್ನಿ ಅವರನ್ನಾದರೂ ಅಮರಿಂದರ್ ಸಿಂಗ್ ಆಶೀರ್ವದಿಸುತ್ತಾರೆಂದು ಪಕ್ಷವು ನಿರೀಕ್ಷಿಸಿತ್ತು. ಆದರೆ, ಅದು ಆಗಲಿಲ್ಲ' ಎಂದಿದ್ದಾರೆ.

1998ರಲ್ಲಿ ಪಟಿಯಾಲಾ ವಿಧಾನಸಭಾ ಕ್ಷೇತ್ರದ ಚುನಾವಣೆಯಲ್ಲಿನ ಸೋಲಿನ ಆಘಾತದಲ್ಲಿದ್ದಾಗಲೂ, ಅವರನ್ನು ಪಂಜಾಬ್ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರನ್ನಾಗಿ ಮಾಡಲಾಗಿತ್ತು. ಅವರು ಆ ಸ್ಥಾನದಲ್ಲಿ ಮೂರು ಅವಧಿ ಇದ್ದರು. ಎರಡು ಅವಧಿ ಪಂಜಾಬ್ ಮುಖ್ಯಮಂತ್ರಿಯಾಗಿದ್ದ ಅವರಿಗೆ ಪಕ್ಷವು ಸಂಪೂರ್ಣ ಸ್ವಾತಂತ್ರ್ಯ ನೀಡಿತ್ತು ಎಂದು ರಾವತ್ ಹೇಳಿದ್ದಾರೆ.

ಹಲವು ಬಾರಿ ನೆನಪಿಸಿದ ಮೇಲೂ ಅಮರಿಂದರ್ ಅವರು, ಮಾದಕ ವಸ್ತುಗಳು ಹಾಗೂ ವಿದ್ಯುತ್‌ನಂಥ ವಿಷಯಗಳ ಬಗ್ಗೆ ನೀಡಿದ್ದ ಆಶ್ವಾಸನೆಯನ್ನು ಈಡೇರಿಸುವಲ್ಲಿ ವಿಫಲರಾದರು ಎಂದೂ ಅಭಿಪ್ರಾಯಪಟ್ಟಿದ್ದಾರೆ.

'ಪಕ್ಷದ ಶಾಸಕರು, ಸಚಿವರ, ನಾಯಕರು ಸೇರಿದಂತೆ ಯಾರ ಸಲಹೆಗೂ ಅವರಲ್ಲಿ ಬೆಲೆ ಇರಲಿಲ್ಲ. ಅವರ ಮನೆಯಲ್ಲಿ ಹಲವು ಬಾರಿ ಚರ್ಚೆ ನಡೆಸಿದ್ದೇನೆ. ಹೈಕಮಾಂಡ್‌ನ 18 ಅಂಶಗಳ ಅಜೆಂಡಾದಲ್ಲಿ ಐದನ್ನಾದರೂ ಅನುಷ್ಠಾನಕ್ಕೆ ತರುವ ಬಗ್ಗೆ ಆ ಚರ್ಚೆ ನಡೆದಿತ್ತು. ಅದಕ್ಕೆ ಒಪ್ಪಿಕೊಂಡಿದ್ದರು. ಆದರೆ, ಒಂದೂ ಆಗಲಿಲ್ಲ' ಎಂದು ರಾವತ್ ಹೇಳಿದರು.

ಅವಮಾನವಲ್ಲದೇ ಮತ್ತೇನು: ಅಮರಿಂದರ್ ತಿರುಗೇಟು

ಚಂಡೀಗಡ : ತಮ್ಮ ವಿರುದ್ಧ ಎಐಸಿಸಿ ಪ್ರಧಾನ ಕಾರ್ಯದರ್ಶಿ ಹರೀಶ್ ರಾವತ್ ಮಾಡಿರುವ ಆಪಾದನೆಗಳಿಗೆ ತಿರುಗೇಟು ನೀಡಿರುವ ಮಾಜಿ ಮುಖ್ಯಮಂತ್ರಿ ಅಮರಿಂದರ್ ಸಿಂಗ್, ತಮ್ಮನ್ನು ಅವಮಾನಿಸಿಲ್ಲ ಎನ್ನುವುದಾದರೆ, ಸಾರ್ವಜನಿಕ ವೇದಿಕೆಗಳಲ್ಲಿ ತಮ್ಮ ವಿರುದ್ಧ ವಾಗ್ದಾಳಿ ನಡೆಸಲು ನವಜೋತ್ ಸಿಂಗ್ ಸಿಧುಗೆ ಅವಕಾಶ ಕೊಟ್ಟಿದ್ದೇಕೆ ಎಂದು ಪ್ರಶ್ನಿಸಿದ್ದಾರೆ.

ತಮ್ಮ ನೇತೃತ್ವದ ಸರ್ಕಾರವನ್ನು ದುರ್ಬಲಗೊಳಿಸಲು ಸಿಧು ನೇತೃತ್ವದ ಬಂಡಾಯ ಶಾಸಕರಿಗೆ ಅವಕಾಶ ಕೊಟ್ಟಿದ್ದೇಕೆ? ಸಿಧುಗೆ ಪಕ್ಷದ ಮೇಲೆ ಏನು ಹಿಡಿತವಿದೆ? ಪಕ್ಷದ ನಾಯಕತ್ವದ ನಿಲುವುಗಳ ಬಗ್ಗೆ ತಮ್ಮನ್ನು ಕತ್ತಲಲ್ಲಿ ಇಟ್ಟಿದ್ದೇಕೆ? ಎಂದು ಅಮರಿಂದರ್ ಹರಿಹಾಯ್ದಿದ್ದಾರೆ.

'ನನ್ನ ಕಡುವಿರೋಧಿಗಳು ಕೂಡ ನನ್ನ ಜಾತ್ಯತೀತ ನಿಲುವುಗಳ ಬಗ್ಗೆ ಸಂದೇಹ ಪಡಲಾರರು. ಆದರೆ, ರಾವತ್ ಅವರಂಥ ಹಿರಿಯ ನಾಯಕರು ಸಂಶಯಿಸಿದರು. ಆದರೆ, ಇದಕ್ಕಾಗಿ ನನಗೆ ಈಗ ಆಶ್ಚರ್ಯವಾಗುತ್ತಿಲ್ಲ. ಏಕೆಂದರೆ, ಇಷ್ಟು ವರ್ಷಗಳವರೆಗೆ ನಾನು ಶ್ರದ್ಧೆ ಇಟ್ಟಿದ್ದ ಪಕ್ಷದಲ್ಲಿಯೇ ನನ್ನ ಬಗ್ಗೆ ನಂಬಿಕೆ –ಗೌರವ ಇರಲಿಲ್ಲ ಎಂಬುದು ಇದರಿಂದ ಸ್ಪಷ್ಟವಾಗಿದೆ' ಎಂದಿದ್ದಾರೆ.

'ನನ್ನನ್ನು ಯಾವ ಬಗೆಯಲ್ಲಿ ಅವಮಾನಿಸಲಾಗಿತ್ತು ಎಂಬುದನ್ನು ತಿಳಿದೂ ರಾವತ್ ಇಂಥ ಆರೋಪ ಮಾಡುತ್ತಿದ್ದಾರೆ ಎಂದರೆ, ಇದು ಅವಮಾನವಲ್ಲದೇ ಮತ್ತೇನು'ಎಂದು ಕೇಳಿದ್ದಾರೆ.

'ಯಾವುದೋ ಒತ್ತಡ' ದಿಂದ ಇಂಥ ಹೇಳಿಕೆ ನೀಡಿದ್ದಾರೆ ಎಂಬ ರಾವತ್ ಹೇಳಿಕೆಗೆ ಪ್ರತಿಕ್ರಿಯಿಸಿರುವ ಅಮರಿಂದರ್, 'ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಯುವ ಮೂರು ವಾರಗಳ ಮೊದಲೇ ನಾನು ಸೋನಿಯಾ ಗಾಂಧಿ ಅವರಿಗೆ ರಾಜೀನಾಮೆ ಪತ್ರ ಸಲ್ಲಿಸಿದ್ದೆ. ಆದರೆ, ಅವರು ಮುಂದುವರಿಯುವಂತೆ ಸೂಚಿಸಿದ್ದರು. ನನಗಿದ್ದ ಒಂದೇ ಒತ್ತಡ ಎಂದರೆ, ಮೇಲಿಂದ ಮೇಲೆ ಅಪಮಾನಗಳನ್ನು ಅನುಭವಿಸಿಯೂ ಕಾಂಗ್ರೆಸ್‌ಗೆ ನಿಷ್ಠನಾಗಿ ಇದ್ದದ್ದು' ಎಂದಿದ್ದಾರೆ.

ಹಿಮಪಾತ: ನೌಕಾಪಡೆಯ ಐವರು ಪರ್ವತಾರೋಹಿಗಳು ನಾಪತ್ತೆ

ನವದೆಹಲಿ (ಪಿಟಿಐ): ಉತ್ತರಾಖಂಡದ ಪಶ್ಚಿಮ ಕುಮಾನ್ ಪ್ರದೇಶದ ಮೌಂಟ್ ತ್ರಿಶೂಲ್‌ನಲ್ಲಿ ಹಿಮಪಾತ ಸಂಭವಿಸಿದ್ದು, ನೌಕಾಪಡೆಯ ಪರ್ವತಾರೋಹಿ ಕಾರ್ಯಾಚರಣೆ ತಂಡದ ಐವರು ಸಿಬ್ಬಂದಿ ಶುಕ್ರವಾರ ನಾಪತ್ತೆಯಾಗಿದ್ದಾರೆ.

ನಾಪತ್ತೆಯಾದ ಸಿಬ್ಬಂದಿಗಾಗಿ ಶೋಧ ಮತ್ತು ರಕ್ಷಣಾ ಕಾರ್ಯಾಚರಣೆ ನಡೆಸಲು ರಕ್ಷಣಾ ತಂಡ ನಿಯೋಜಿಸಲಾಗಿದೆ ಎಂದು ನೌಕಾಪಡೆಯ ಅಧಿಕಾರಿಗಳು ತಿಳಿಸಿದ್ದಾರೆ.

5 ತಿಂಗಳ ಗರಿಷ್ಠ ಮಟ್ಟಕ್ಕೆ ಜಿಎಸ್‌ಟಿ ಸಂಗ್ರಹ

ನವದೆಹಲಿ (ಪಿಟಿಐ): ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಸಂಗ್ರಹವು ದೇಶದಲ್ಲಿ ಸತತ ಮೂರನೆಯ ತಿಂಗಳಿನಲ್ಲಿಯೂ ₹1 ಲಕ್ಷ ಕೋಟಿಗಿಂತ ಹೆಚ್ಚಾಗಿದೆ. ಸೆಪ್ಟೆಂಬರ್‌ನಲ್ಲಿ ಒಟ್ಟು ₹ 1.17 ಲಕ್ಷ ಕೋಟಿ ಜಿಎಸ್‌ಟಿ ಸಂಗ್ರಹ ಆಗಿದೆ. ಪ್ರಸಕ್ತ ಹಣಕಾಸು ವರ್ಷದ ದ್ವಿತೀಯಾರ್ಧದಲ್ಲಿ ವರಮಾನ ಹೆಚ್ಚಿನ ಮಟ್ಟದಲ್ಲಿ ಇರಲಿದೆ ಎಂಬ ನಿರೀಕ್ಷೆಯನ್ನು ಇದು ಮೂಡಿಸಿದೆ.

2020ರ ಸೆಪ್ಟೆಂಬರ್ ತಿಂಗಳಿನಲ್ಲಿ ಆಗಿದ್ದ ಜಿಎಸ್‌ಟಿ ಸಂಗ್ರಹ ₹ 95,480 ಕೋಟಿ. 2019ರ ಸೆಪ್ಟೆಂಬರ್‌ನಲ್ಲಿ ₹ 91,916 ಕೋಟಿ ಜಿಎಸ್‌ಟಿ ಸಂಗ್ರಹವಾಗಿತ್ತು. ಈ ಬಾರಿ ಆಗಿರುವ ಸಂಗ್ರಹವು ಹಿಂದಿನ ಎರಡು ವರ್ಷಗಳಲ್ಲಿನ ಸಂಗ್ರಹಕ್ಕಿಂತ ಹೆಚ್ಚು. ಇದು, ಏಪ್ರಿಲ್ ನಂತರದಲ್ಲಿ ಆಗಿರುವ ಅತಿಹೆಚ್ಚಿನ ಸಂಗ್ರಹ ಕೂಡ ಹೌದು. ಏಪ್ರಿಲ್‌ನಲ್ಲಿ ₹ 1.41 ಲಕ್ಷ ಕೋಟಿ ಸಂಗ್ರಹವಾಗಿತ್ತು.

ಜಿಎಸ್‌ಟಿ ಸಂಗ್ರಹ ತಿಂಗಳ ವಿವರ

(ಮೊತ್ತ ₹ ಲಕ್ಷ ಕೋಟಿಗಳಲ್ಲಿ)



ಸೆಪ್ಟೆಂಬರ್ ತಿಂಗಳ ಜಿಎಸ್‌ಟಿ ವರಮಾನದಲ್ಲಿ ಕೇಂದ್ರ ಜಿಎಸ್‌ಟಿ ಪಾಲು ₹ 20,578 ಕೋಟಿ, ರಾಜ್ಯ ಜಿಎಸ್‌ಟಿ ಪಾಲು ₹ 26,767 ಕೋಟಿ, ಸಮಗ್ರ ಜಿಎಸ್‌ಟಿ ಪಾಲು ₹ 60,911 ಕೋಟಿ ಎಂದು ಕೇಂದ್ರ ಹಣಕಾಸು ಸಚಿವಾಲಯ ತಿಳಿಸಿದೆ. ಸೆಸ್ ಮೂಲಕ ಸಂಗ್ರಹವಾಗಿರುವ ಮೊತ್ತ ₹ 8,754 ಕೋಟಿ. ಹಿಂದಿನ ವರ್ಷದ ಸೆಪ್ಟೆಂಬರ್ ಮಟ್ಟಕ್ಕೆ ಹೋಲಿಸಿದರೆ ಉತ್ಪನ್ನಗಳ ಆಮದಿನಿಂದ ದೊರೆತ ವರಮಾನವು ಈ ಬಾರಿಯ ಸೆಪ್ಟೆಂಬರ್‌ನಲ್ಲಿ ಶೇ 30ರಷ್ಟು, ದೇಶಿ ವಹಿವಾಟಿನಿಂದ ಬಂದ ವರಮಾನವು ಶೇ 20ರಷ್ಟು ಹೆಚ್ಚು. 'ಅರ್ಥ ವ್ಯವಸ್ಥೆಯು ತ್ವರಿತವಾಗಿ ಚೇತರಿಕೆ ಕಾಣುತ್ತಿದೆ ಎಂಬುದನ್ನು ಜಿಎಸ್‌ಟಿ ಸಂಗ್ರಹವು ತೋರಿಸುತ್ತಿದೆ. ಆರ್ಥಿಕ ಬೆಳವಣಿಗೆಯ ಜೊತೆಯಲ್ಲೇ ತೆರಿಗೆ ವಂಚಿಸುವವರ ವಿರುದ್ಧ ತೆಗೆದುಕೊಂಡ ಕ್ರಮಗಳು ಕೂಡ ಜಿಎಸ್‌ಟಿ ಸಂಗ್ರಹ ಹೆಚ್ಚುವುದಕ್ಕೆ ಕಾರಣ' ಎಂದು ಸಚಿವಾಲಯ ಹೇಳಿದೆ.

'ಹಬ್ಬಗಳ ಋತು ಬಂದಿರುವ ಕಾರಣ ಜಿಎಸ್‌ಟಿ ಸಂಗ್ರಹವು ಇನ್ನಷ್ಟು ಹೆಚ್ಚಾಗಬಹುದು' ಎಂದು ತಜ್ಞರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಪ್ರಯಾಣ ನಿಯಮ: ಭಾರತದ ತಿರುಗೇಟಿನ ಕ್ರಮ

ಬ್ರಿಟಿಷರಿಗೆ 10 ದಿನ ಪ್ರತ್ಯೇಕವಾಸ

ನವದೆಹಲಿ (ಪಿಟಿಐ): ಭಾರತಕ್ಕೆ ಬರುವ ಬ್ರಿಟನ್ ಪ್ರಜೆಗಳು ಕೋವಿಡ್ ಲಸಿಕೆ ಹಾಕಿಸಿಕೊಂಡಿದ್ದರೂ ಇಲ್ಲದಿದ್ದರೂ 10 ದಿನಗಳ ಕಡ್ಡಾಯ ಪ್ರತ್ಯೇಕವಾಸಕ್ಕೆ ಒಳಗಾಗಬೇಕು ಎಂಬ ನಿಯಮವು ಸೋಮವಾರದಿಂದ ಜಾರಿಗೆ ಬರಲಿದೆ. ಬ್ರಿಟನ್ ಇತ್ತೀಚೆಗೆ ರೂಪಿಸಿದ ಅಂತರರಾಷ್ಟ್ರೀಯ ಪ್ರಯಾಣ ನಿಯಮಗಳ ಪ್ರಕಾರ, ಭಾರತೀಯರು ಕೋವಿಶೀಲ್ಡ್ ಲಸಿಕೆ ಹಾಕಿಸಿಕೊಂಡಿದ್ದರೂ 10 ದಿನ ಪ್ರತ್ಯೇಕವಾಸಕ್ಕೆ ಒಳಗಾಗುವುದು ಕಡ್ಡಾಯ. ಈ ನಿಯಮಕ್ಕೆ ಪ್ರತಿಯಾಗಿ ಭಾರತವು ಹೊಸ ನಿಯಮವನ್ನು ಜಾರಿಗೆ ತರಲು ನಿರ್ಧರಿಸಿದೆ.

ಭಾರತದ ಲಸಿಕೆ ಪ್ರಮಾಣಪತ್ರಕ್ಕೆ ಮಾನ್ಯತೆ ನೀಡುವುದಕ್ಕೆ ಸಂಬಂಧಿಸಿ ಹಲವು ಸುತ್ತಿನ ಮಾತುಕತೆ ನಡೆದಿದೆ. ಆದರೂ ಸಮಸ್ಯೆಗೆ ಪರಿಹಾರ ಸಿಕ್ಕಿಲ್ಲ. ಹಾಗಾಗಿ, ಬ್ರಿಟನ್ ಜಾರಿಗೆ ತಂದ ಅದೇ ರೀತಿಯ ನಿಯಮವನ್ನು ಭಾರತವೂ ಜಾರಿಗೆ ತರಲು ತೀರ್ಮಾನಿಸಿದೆ. ಈ ಬಗ್ಗೆ, ಬ್ರಿಟನ್‌ನಿಂದ ಪ್ರತಿಕ್ರಿಯೆಯೇನೂ ಬಂದಿಲ್ಲ.

ಬ್ರಿಟನ್‌ನ ಪ್ರಯಾಣ ನಿಯಮಗಳು ಬಹಿರಂಗವಾದಾಗಲೇ ಸೆ.19ರಂದು ಭಾರತವು ತೀಕ್ಷ್ಣವಾದ ಪ್ರತಿಕ್ರಿಯೆ ನೀಡಿತ್ತು. ಭಾರತೀಯರನ್ನು ತಾರತಮ್ಯದಿಂದ ನೋಡುವ ನಿಯಮಕ್ಕೆ ತಿದ್ದುಪಡಿ ಮಾಡದೇ ಇದ್ದರೆ, ತಿರುಗೇಟಿನ ಕ್ರಮ ಅನಿವಾರ್ಯ ಎಂಬ ಎಚ್ಚರಿಕೆ ಕೊಟ್ಟಿತ್ತು.

ಹೊಸ ನಿಯಮ ಪ್ರಕಾರ, ಭಾರತಕ್ಕೆ ಬರುವ ಬ್ರಿಟನ್ ಪ್ರಯಾಣಿಕರು ಕಡ್ಡಾಯ ಪ್ರತ್ಯೇಕವಾಸಕ್ಕೆ ಒಳಗಾಗಬೇಕು. ಅದಲ್ಲದೆ, ಪ್ರಯಾಣ ಆರಂಭಕ್ಕೆ 72 ತಾಸು ಒಳಗೆ ಆರ್‌ಟಿ-ಪಿಸಿಆರ್ ಪರೀಕ್ಷೆಗೆ ಒಳಗಾಗಿ ಕೊರೊನಾ ಸೋಂಕು ಇಲ್ಲ ಎಂಬುದು ದೃಢಪಟ್ಟಿರಬೇಕು. ಭಾರತಕ್ಕೆ ಬಂದ ಬಳಿಕ ವಿಮಾನ ನಿಲ್ದಾಣದಲ್ಲಿ ಒಮ್ಮೆ ಮತ್ತು ಬಂದ ಎಂಟನೇ ದಿನ ಒಮ್ಮೆ ಆರ್‌ಟಿ-ಪಿಸಿಆರ್ ಪರೀಕ್ಷೆಗೆ ಒಳಗಾಗಬೇಕು ಎಂದು ಮೂಲಗಳು ಹೇಳಿವೆ.

ಪುಣೆಯ ಸೀರಂ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾದಲ್ಲಿ ತಯಾರಾಗುವ ಕೋವಿಶೀಲ್ಡ್ ಲಸಿಕೆಗೆ ಮಾನ್ಯತೆ ನೀಡುವುದಕ್ಕೇ ಬ್ರಿಟನ್ ಹಿಂದೇಟು ಹಾಕಿತ್ತು. ಭಾರತದ ಬಲವಾದ ಟೀಕೆಯ ಬಳಿಕ ಮಾರ್ಗಸೂಚಿಯಲ್ಲಿ ತಿದ್ದುಪಡಿ ಮಾಡಿ ಸೆ.22ರಂದು ಕೋವಿಶೀಲ್ಡ್ ಲಸಿಕೆಗೆ ಮಾನ್ಯತೆ ನೀಡಿತ್ತು. ಆದರೆ, ಇದರಿಂದ ಭಾರತೀಯ ಪ್ರಯಾಣಿಕರಿಗೆ ಅನುಕೂಲ ಆಗಲಿಲ್ಲ. ಭಾರತದ ಲಸಿಕೆ ಪ್ರಮಾಣಪತ್ರ ಪ್ರಕ್ರಿಯೆಯಲ್ಲಿ ಸಮಸ್ಯೆ ಇದೆ ಎಂದು ಬ್ರಿಟನ್ ಹೇಳಿತ್ತು.

ಕೋವಿಶೀಲ್ಡ್ : ಆಸ್ಟ್ರೇಲಿಯಾದ ಔಷಧ ನಿಯಂತ್ರಕ ಅನುಮೋದನೆ

ನವದೆಹಲಿ (ಪಿಟಿಐ): ಒಳಬರುವ ಅಂತರರಾಷ್ಟ್ರೀಯ ಪ್ರಯಾಣಿಕರಿಗಾಗಿ ಭಾರತದ ಸೀರಮ್ ಇನ್‌ಸ್ಟಿಟ್ಯೂಟ್ ತಯಾರಿಸಿದ ಕೋವಿಶೀಲ್ಡ್ ಲಸಿಕೆಗೆ ಆಸ್ಟ್ರೇಲಿಯಾದ ಉನ್ನತ ವೈದ್ಯಕೀಯ ನಿಯಂತ್ರಕ ಶುಕ್ರವಾರ ಅನುಮೋದನೆ ನೀಡಿದೆ. ಇದರಿಂದಾಗಿ ಸಾವಿರಾರು ಭಾರತೀಯ ವಿದ್ಯಾರ್ಥಿಗಳು ಆ ದೇಶಕ್ಕೆ ಮರಳಲು ಅನುಕೂಲವಾಗುವ ನಿರೀಕ್ಷೆಯಿದೆ.

॥ ಪಂಡಿತಾಃ ಸಮದರ್ಶಿನಃ ॥

ದೇಶೀಯ ವಿದ್ಯಾಶಾಲಾ ಸಮಿತಿ (ರಿ.), ಶಿವಮೊಗ್ಗ

ಡಿ.ವಿ.ಎಸ್. ಆವರಣ, ಸರ್.ಎಂ.ವಿ.ರಸ್ತೆ, ಬಸವೇಶ್ವರ ವೃತ್ತ, ಶಿವಮೊಗ್ಗ. ದಿನಾಂಕ: 01.10.2021

ಡಿ.ವಿ.ಎಸ್. ಪದವಿ ಪೂರ್ವ (ಸ್ವತಂತ್ರ) ಕಾಲೇಜು ವಿಭಾಗದ ಅನುದಾನಿತ ಅರ್ಥಶಾಸ್ತ್ರ ಉಪನ್ಯಾಸಕರ ಹುದ್ದೆಗೆ ನೇರ ನೇಮಕಾತಿ

ದೇಶೀಯ ವಿದ್ಯಾಶಾಲಾ ಸಂಸ್ಥೆಯ ಆಶ್ರಯದಲ್ಲಿ ನಡೆಯುತ್ತಿರುವ ಡಿ.ವಿ.ಎಸ್ ಪದವಿ ಪೂರ್ವ (ಸ್ವತಂತ್ರ) ಕಾಲೇಜಿನಲ್ಲಿ ಖಾಲಿ ಇರುವ ಅರ್ಥಶಾಸ್ತ್ರ ವಿಭಾಗದ 01 ಅನುದಾನಿತ ಉಪನ್ಯಾಸಕರ ಹುದ್ದೆಯನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು, **(ಜ್ಞಾಪನಾ ಪತ್ರ: ಪಪೂಶಿ/ಸಿ-3/ಟಿಟಿ-011 ಟಿಟಿ-052/ ಉ.ಹು. ತು.ಅನು-01/2015-16, ದಿನಾಂಕ: 16.09.2021)** ಇವರು ಅನುಮತಿ ನೀಡಿರುತ್ತಾರೆ. ಸದರಿ ಹುದ್ದೆಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ. ಅರ್ಹ ಅಭ್ಯರ್ಥಿಗಳು ತಮ್ಮ ವಯಸ್ಸು, ವಿದ್ಯಾರ್ಹತೆ, ಬೋಧನಾನುಭವ ಮತ್ತು ಮೀಸಲಾತಿಗೆ ಸಂಬಂಧಿಸಿದ ಸ್ವ-ವಿವರಗಳೊಂದಿಗೆ ಅಗತ್ಯ ದಾಖಲೆಗಳ ದೃಢೀಕೃತ ಪ್ರತಿಗಳೊಂದಿಗೆ ಅರ್ಜಿಗಳನ್ನು **"ಕಾರ್ಯದರ್ಶಿಗಳು", ದೇಶೀಯ ವಿದ್ಯಾಶಾಲಾ ಸಮಿತಿ(ರಿ.), ಆಡಳಿತ ಮಂಡಳಿ ಕಚೇರಿ, ಡಿ.ವಿ.ಎಸ್. ಆವರಣ, ಸರ್. ಎಂ.ವಿ. ರಸ್ತೆ, ಬಸವೇಶ್ವರ ಸರ್ಕಲ್, ಶಿವಮೊಗ್ಗ,** ಈ ವಿಳಾಸಕ್ಕೆ ಕಛೇರಿಯ ಅವಧಿಯಲ್ಲಿ ಖುದ್ದಾಗಿ ಅಥವಾ ಅಂಚೆಯ ಮೂಲಕ **ದಿನಾಂಕ: 02.11.2021ರ ಮಂಗಳವಾರ ಸಂಜೆ 05:00 ಗಂಟೆ** ಒಳಗಾಗಿ ಸಲ್ಲಿಸುವುದು. ಅರ್ಜಿಯ ಒಂದು ಪ್ರತಿಯನ್ನು **"ಉಪ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಕಾನ್ವೆಂಟ್ ರಸ್ತೆ, ಶಿವಮೊಗ್ಗ"** ಇವರಿಗೆ ಕಡ್ಡಾಯವಾಗಿ ಸಲ್ಲಿಸತಕ್ಕದ್ದು. ಸಾಮಾನ್ಯ ಗ್ರಾಮೀಣ ಅಭ್ಯರ್ಥಿಗಳು ರೂ. 1000/-ರ ರಾಷ್ಟ್ರೀಕೃತ ಬ್ಯಾಂಕ್ ಡಿ.ಡಿ.ಯನ್ನು **"ಕಾರ್ಯದರ್ಶಿಗಳು, ದೇಶೀಯ ವಿದ್ಯಾಶಾಲಾ ಸಮಿತಿ (ರಿ.), ಶಿವಮೊಗ್ಗ"** ಇವರ ಹೆಸರಿಗೆ ಪಡೆದು ಅರ್ಜಿಯೊಂದಿಗೆ ಲಗತ್ತಿಸತಕ್ಕದ್ದು. ಉದ್ಯೋಗ ವಿನಿಮಯ ಕಚೇರಿಯಲ್ಲಿ ನೋಂದಣಿ ಮಾಡಿದವರು ಸಹ ಅಗತ್ಯ ವಿವರ ಮತ್ತು ಸೂಕ್ತ ದಾಖಲೆಗಳೊಂದಿಗೆ ಹಾಗೂ ಡಿಮ್ಯಾಂಡ್ ಡ್ರಾಫ್ಟ್ ಅನ್ನು ಲಗತ್ತಿಸಿ ಅರ್ಜಿ ಸಲ್ಲಿಸಬೇಕು. ನಿಗದಿತ ದಿನಾಂಕದ ನಂತರದಲ್ಲಿ ಬಂದ/ಅಪೂರ್ಣ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

ಕ್ರ.ಸಂ.	ಉಪನ್ಯಾಸಕರ ಹುದ್ದೆ ವಿವರ	ಹುದ್ದೆಗಳ ಸಂಖ್ಯೆ	ಮೀಸಲಾತಿ/ಸಮತಳ-ಮೀಸಲಾತಿ
1	ಅರ್ಥಶಾಸ್ತ್ರ	01	ಸಾಮಾನ್ಯ-ಗ್ರಾಮೀಣ ಅಭ್ಯರ್ಥಿ

ಅಭ್ಯರ್ಥಿಗಳಿಗೆ ಸೂಚನೆಗಳು:- 01) ಇಲಾಖಾ ನಿಯಮಾನುಸಾರ ಉಪನ್ಯಾಸಕರ ಹುದ್ದೆಗೆ ನಿಗದಿಪಡಿಸಿರುವ ವಯೋಮಿತಿ ಹೊಂದಿರಬೇಕು. 02) ಇಲಾಖಾ ನಿಯಮಾನುಸಾರ ಉಪನ್ಯಾಸಕರ ಹುದ್ದೆಗೆ ಸಂಬಂಧಪಟ್ಟ ವಿಷಯದಲ್ಲಿ ಸ್ನಾತಕೋತ್ತರ ಪದವಿ/ ತತ್ಸಮಾನ ಪದವಿಯನ್ನು ಹೊಂದಿರಬೇಕು. 03) ಬಿ.ಎಡ್/ತತ್ಸಮಾನ ಪದವಿಯನ್ನು ಹೊಂದಿರಬೇಕು. 04) ಈ ಹುದ್ದೆಯು ಪದವಿ ಪೂರ್ವ ಶಿಕ್ಷಣ ಇಲಾಖೆಯಿಂದ ಅನುಮೋದನೆಗೆ ಒಳಪಟ್ಟ ಮೇಲೆ ಅನುದಾನ ಸಹಿತ ಮತ್ತು ಪಿಂಚಣಿ ರಹಿತ ಹುದ್ದೆಯಾಗಿರುತ್ತದೆ. 05) ಅನುದಾನಿತ/ಸರ್ಕಾರಿ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವವರು ಅರ್ಜಿಗಳನ್ನು ಇಲಾಖಾ ಮುಖಾಂತರ ಸಲ್ಲಿಸತಕ್ಕದ್ದು. 06) ಸಂದರ್ಶನಕ್ಕೆ ಹಾಜರಾಗುವ ಅಭ್ಯರ್ಥಿಗಳಿಗೆ ಯಾವುದೇ ಭತ್ಯೆಗಳನ್ನು ನೀಡಲಾಗುವುದಿಲ್ಲ. 07) ಅರ್ಜಿ ಸಲ್ಲಿಸಿದಾಕ್ಷಣ ಕೆಲಸದ ಹಕ್ಕು ದೊರೆಯುವುದಿಲ್ಲ. 08) ಆಯ್ಕೆಯಾದ ಅಭ್ಯರ್ಥಿಯು ಶಿವಮೊಗ್ಗ ನಗರದಲ್ಲೇ ವಾಸ ಮಾಡಬೇಕು. 09) ಅರ್ಜಿಯ ಶುಲ್ಕವನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸಲಾಗುವುದಿಲ್ಲ. 10) ಇಲಾಖಾ ನಿಯಮಾನುಸಾರ ವರ್ಗಾವಣೆ ಮಾಡುವ ಅಧಿಕಾರವನ್ನು ದೇಶೀಯ ವಿದ್ಯಾಶಾಲಾ ಸಂಸ್ಥೆ ಹೊಂದಿರುತ್ತದೆ. 11) ಗ್ರಾಮೀಣ ಅಭ್ಯರ್ಥಿಗಳು ಸಕ್ಷಮ ಪ್ರಾಧಿಕಾರಗಳಿಂದ ಇತ್ತೀಚೆಗೆ ಪಡೆದಿರುವ ಜಾತಿ/ಆದಾಯ ಪ್ರಮಾಣ ಪತ್ರದ ಜೆರಾಕ್ಸ್ ಪ್ರತಿಗಳನ್ನು ಸಲ್ಲಿಸಬೇಕು. 12) ಜನರಲ್ ಮೆರಿಟ್ ಅಭ್ಯರ್ಥಿಗಳು ಗ್ರಾಮೀಣ ಮೀಸಲಾತಿಯನ್ನು ಕೋರಲು ಕ್ರೀಮಿಲೇಯರ್ ವ್ಯಾಪ್ತಿಗೆ ಸೇರಿಲ್ಲವೆಂದು ಸಕ್ಷಮ ಪ್ರಾಧಿಕಾರದಿಂದ ಪಡೆದಿರುವ ಪ್ರಮಾಣ ಪತ್ರದ ಪ್ರತಿಗಳನ್ನು ಸಲ್ಲಿಸಬೇಕು. 13) ಉಪನ್ಯಾಸಕರ ಹುದ್ದೆಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಕನ್ನಡ ಮತ್ತು ಆಂಗ್ಲ ಮಾಧ್ಯಮಗಳಲ್ಲಿ ಬೋಧಿಸುವ ಸಾಮರ್ಥ್ಯ ಹೊಂದಿರಬೇಕು. 14) ಹೆಚ್ಚಿನ ಮಾಹಿತಿಗಳನ್ನು ದೇಶೀಯ ವಿದ್ಯಾಶಾಲಾ ಆಡಳಿತ ಮಂಡಳಿ ಕಚೇರಿಯ ಸೂಚನಾ ಫಲಕವನ್ನು ಗಮನಿಸುವುದು. 15) ಅನುದಾನಿತ ಉಪನ್ಯಾಸಕರು ಹುದ್ದೆಗೆ ಪ್ರಭಾವ ಬೀರಿದರೆ, ವಾಮಮಾರ್ಗ ಬಳಸಿದರೆ ಅಂತಹ ಅಭ್ಯರ್ಥಿಗಳ ಅರ್ಜಿಗಳನ್ನು ರದ್ದುಗೊಳಿಸಲಾಗುವುದು. ಹಾಗೆಯೇ ಸಲ್ಲಿಸಿದ ದಾಖಲೆಗಳು ಮತ್ತು ಮಾಹಿತಿಗಳಲ್ಲಿ ಕಂಡುಬಂದಲ್ಲಿ ಸಂಬಂಧಿಸಿದವರನ್ನು ನಿಯಮಾನುಸಾರ ಕಠಿಣ ಕ್ರಮಕ್ಕೆ ಗುರಿಪಡಿಸಲಾಗುವುದು ಹಾಗೂ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಪ್ರಸ್ತುತ ಸೇವೆಯಲ್ಲಿರುವ ವ್ಯಕ್ತಿಗಳು ಅರ್ಜಿ ಸಲ್ಲಿಸಿದ ವೇಳೆ, ಅವರ ವಿರುದ್ಧ ಇಲಾಖಾ/ಕ್ರಿಮಿನಲ್ ವಿಚಾರಣೆಗಳು ಬಾಕಿಯಿರುವ / ಹೂಡಲು ಉದ್ದೇಶಿಸಿದರುವ ಮತ್ತು ಈ ಹಿಂದೆ ವಿಚಾರಣೆಗಳನ್ನು ನಡೆಸಿ ದಂಡನೆ ವಿಧಿಸಲಾಗಿರುವ ಬಗ್ಗೆ ಅವರು ಸೇವೆ ಸಲ್ಲಿಸುತ್ತಿರುವ ಸಂಸ್ಥೆಯ ಮುಖ್ಯಸ್ಥರಿಂದ ದೃಢೀಕರಿಸಿದ ಪ್ರಮಾಣ ಪತ್ರಗಳನ್ನು ಸಲ್ಲಿಸಬೇಕು.

ಸಹಿ/- ಕಾರ್ಯದರ್ಶಿಗಳು,
ದೇಶೀಯ ವಿದ್ಯಾಶಾಲಾ ಸಮಿತಿ (ರಿ)., ಶಿವಮೊಗ್ಗ.

ರಾಹುಲ್ ಬಳಗದ ಜಯಭೇರಿ

ಕೆಕೆಆರ್‌ಗೆ ಸೋಲಿನ ಕಹಿ; ವೆಂಕಟೇಶ್ ಅಯ್ಯರ್ ಅರ್ಧಶತಕ ವ್ಯರ್ಥ

ಪ್ರಜಾವಾಣಿ ವಾರ್ತೆ

ದುಬೈ (ಪಿಟಿಐ): ಕೊನೆಯ ಓವರ್‌ನವರೆಗೂ ಕುತೂಹಲ ಕೆರಳಿಸಿದ್ದ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ ಜಯಗಳಿಸಿತು.

ಶುಕ್ರವಾರ ಕೋಲ್ಕತ್ತ ನೈಟ್ ರೈಡರ್ಸ್ ವಿರುದ್ಧ ನಡೆದ ಹಣಾಹಣಿಯಲ್ಲಿ ಕೆ.ಎಲ್. ರಾಹುಲ್‌ಗೆ ಅದೃಷ್ಟ ಜೊತೆಗೂಡಿತು. ಆದರೆ ಕೆಟ್ಟ ಫೀಲ್ಡಿಂಗ್ ಮತ್ತು ಬಿಟ್ಟ ಕ್ಯಾಚ್‌ಗಳಿಂದಾಗಿ ಕೋಲ್ಕತ್ತ ನೈಟ್ ರೈಡರ್ಸ್ ಜಯದ ಅವಕಾಶ ಕಳೆದುಕೊಂಡಿತು.

ರಾಹುಲ್ ಅರ್ಧಶತಕ (67; 55ಎ) ಬಲದಿಂದ ಪಂಜಾಬ್ ತಂಡವು 5 ವಿಕೆಟ್‌ಗಳಿಂದ ಜಯಿಸಿತು. ಟಾಸ್ ಗೆದ್ದ ಪಂಜಾಬ್ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಚೊಚ್ಚಲ ಐಪಿಎಲ್ ಆಡುತ್ತಿರುವ ವೆಂಕಟೇಶ್ (67; 49ಎಸೆತ, 9ಬೌಂಡರಿ, 1ಸಿಕ್ಸರ್) ಬ್ಯಾಟಿಂಗ್‌ನಿಂದಾಗಿ ಕೋಲ್ಕತ್ತ ತಂಡವು 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 165 ರನ್ ಗಳಿಸಿತು. ಕಿಂಗ್ಸ್ ತಂಡದ ಆರ್ಷದೀಪ್ ಸಿಂಗ್ ಮೂರು ಮತ್ತು ರವಿ ಬಿಷ್ಣೋಯಿ ಎರಡು ವಿಕೆಟ್ ಗಳಿಸಿದರು.

ಗುರಿ ಬೆನ್ನಟ್ಟಿದ ಪಂಜಾಬ್ ತಂಡಕ್ಕೆ ಕನ್ನಡಿಗ ಜೋಡಿ ರಾಹುಲ್ ಮತ್ತು ಮಯಂಕ್ ಅಗರವಾಲ್ (40ರನ್) ಉತ್ತಮ ಆರಂಭ ನೀಡಿತು. ಕೊನೆಯಲ್ಲಿ ಶಾರೂಖ್ ಖಾನ್ ತೋರಿದ ಅಬ್ಬರದ ಆಟದಿಂದಾಗಿ ಪಂಜಾಬ್ 19.3 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 168 ರನ್ ಗಳಿಸಿ ಗೆದ್ದಿತು.

ಇನಿಂಗ್ಸ್‌ನಲ್ಲಿ ಒಟ್ಟು ನಾಲ್ಕು ಕ್ಯಾಚ್‌ಗಳನ್ನು ಕೈಚೆಲ್ಲಿದ ಕೋಲ್ಕತ್ತ ಫೀಲ್ಡರ್‌ಗಳು ದಂಡ ತೆತ್ತರು. ಕೊನೆಯ ಓವರ್ ಎರಡನೇ ಎಸೆತದಲ್ಲಿ ವೆಂಕಟೇಶ್ ಅಯ್ಯರ್ ಅವರು, ರಾಹುಲ್ ವಿಕೆಟ್ ಪಡೆಯುವಲ್ಲಿ ಸಫಲರಾದರು. ಆದರೆ, ಮೂರನೇ ಎಸೆತದಲ್ಲಿ ಕಿಂಗ್ಸ್ ಶಾರೂಖ್ ಖಾನ್ ಪುಲ್ ಮಾಡಿದರು. ಆಗ ಬೌಂಡರಿ ಲೈನ್ ಅಂಚಿನಲ್ಲಿ ಫೀಲ್ಡರ್ ರಾಹುಲ್ ತ್ರಿಪಾಠಿ ಕ್ಯಾಚ್ ಪಡೆಯುವ ಅವಕಾಶದಲ್ಲಿ ಎಡವಿದರು. ಸಿಕ್ಸರ್ ದಾಖಲಾಯಿತು. ಕಿಂಗ್ಸ್ ಕೋಚ್ ಅನಿಲ್ ಕುಂಬ್ಳೆ ಮತ್ತು ತಂಡದ ಆಟಗಾರರಲ್ಲಿ ಸಂಭ್ರಮ ಪುಟಿದೆದ್ದಿತು. ಈ ಜಯದೊಂದಿಗೆ ಪಂಜಾಬ್ ತಂಡದ ಪ್ಲೇ ಆಫ್ ಆಸೆ ಇನ್ನೂ ಜೀವಂತವಾಗುಳಿದಿದೆ. ಲೀಗ್‌ನಲ್ಲಿ ಇನ್ನೂ ಎರಡು ಪಂದ್ಯಗಳನ್ನು ತಂಡವು ಆಡಬೇಕಿದೆ.

ಕೆ.ಎಲ್. ರಾಹುಲ್

ಸ್ಕೋರ್ ಕಾರ್ಡ್

ಕೋಲ್ಕತ್ತ ನೈಟ್‌ರೈಡರ್ಸ್ 7ಕ್ಕೆ 165 (20 ಓವರ್)

ವೆಂಕಟೇಶ್ ಸಿ ಹೂಡಾ ಬಿ ಬಿಷ್ಣೋಯಿ 67 (49ಎ, 4X9, 6X1), ಗಿಲ್ ಬಿ ಅರ್ಷದೀಪ್ 7 (7ಎ, 4X1), ತ್ರಿಪಾಠಿ ಸಿ ಹೂಡಾ ಬಿ ಬಿಷ್ಣೋಯಿ 34 (26ಎ, 4X3, 6X1), ರಾಣಾ ಸಿ ಅಗರವಾಲ್ ಬಿ ಅರ್ಷದೀಪ್ 31 (18ಎ, 4X2, 6X2), ಮಾರ್ಗನ್ ಎಲ್‌ಬಿಡಬ್ಲ್ಯು ಶಮಿ 2 (2ಎ), ಕಾರ್ತಿಕ್ ಬಿ ಅರ್ಷದೀಪ್ 11 (11ಎ), ಸೀಫರ್ಟ್ ರನ್‌ಔಟ್ (ಶಮಿ) 2 (4ಎ), ಸುನಿಲ್ ಔಟಾಗದೆ 3 (3ಎ)

ಇತರೆ (ಬೈ 3, ಲೆಗ್‌ಬೈ 1, ವೈಡ್ 4) 8

ವಿಕೆಟ್ ಪತನ: 1-18 (ಶುಭಮನ್ ಗಿಲ್, 2.2), 2-90 (ರಾಹುಲ್ ತ್ರಿಪಾಠಿ, 11.3), 3-120 (ವೆಂಕಟೇಶ್ ಅಯ್ಯರ್, 14.4), 4-124 (ಇಯಾನ್ ಮಾರ್ಗನ್, 15.5), 5-149 (ನಿತೀಶ್ ರಾಣಾ 17.4), 6-156 (ಟಿಮ್ ಸೀಫರ್ಟ್, 18.4), 7-165 (ದಿನೇಶ್ ಕಾರ್ತಿಕ್, 19.6)

ಬೌಲಿಂಗ್: ಫ್ಯಾಬಿಯನ್ ಅಲೆನ್ 4-0-38-0, ಮೊಹಮ್ಮದ್ ಶಮಿ 4-0-23-1, ಆರ್ಷದೀಪ್ ಸಿಂಗ್ 4-0-32-3, ನೇಥನ್ ಎಲ್ಲಿಸ್ 4-0-46-0, ರವಿ ಬಿಷ್ಣೋಯಿ 4-0-22-2

ಪಂಜಾಬ್ ಕಿಂಗ್ಸ್ 5ಕ್ಕೆ 168 (19.3 ಓವರ್)

ರಾಹುಲ್ ಸಿ ಮಾವಿ ಬಿ ಅಯ್ಯರ್ 67 (55 ಎ, 4X4, 6X2), ಮಯಂಕ್ ಸಿ ಮಾರ್ಗನ್ ಬಿ ವರುಣ್ 40 (27ಎ, 4X3, 6X3), ಪೂರನ್ ಸಿ ಶಿವಂ ಬಿ ವರುಣ್ 12 (7 ಎ, 6X1), ಮರ್ಕರಮ್ ಸಿ ಗಿಲ್ ಬಿ ನಾರಾಯಣ್ 18 (16 ಎ, 6X1), ಹೂಡಾ ಸಿ ತ್ರಿಪಾಠಿ ಬಿ ಮಾವಿ 3 (4 ಎ), ಶಾರೂಖ್ ಔಟಾಗದೆ 22 (9 ಎ, 4X1, 6X2), ಅಲೆನ್ ಔಟಾಗದೆ 0 (0 ಎ)

ಇತರೆ (ಲೆಗ್ ಬೈ 2, ನೋಬಾಲ್ 1, ವೈಡ್ 3) 6

ವಿಕೆಟ್ ಪತನ: 1-70 (ಮಯಂಕ್ ಅಗರವಾಲ್, 8.5), 2-84 (ನಿಕೊಲಸ್ ಪೂರನ್, 10.4), 3-129 (ಏಡನ್ ಮರ್ಕರಮ್, 15.3), 4-134 (ದೀಪಕ್ ಹೂಡಾ, 16.3), 5-162 (ಕೆ.ಎಲ್. ರಾಹುಲ್, 19.2)

ಬೌಲಿಂಗ್: ಟಿಮ್ ಸೌಥಿ 4-0-40-0, ಶಿವಂ ಮಾವಿ 4-0-31-1, ವರುಣ್ ಚಕ್ರವರ್ತಿ 4-0-24-2, ಸುನಿಲ್ ನಾರಾಯಣ್ 4-0-34-1, ವೆಂಕಟೇಶ್ ಅಯ್ಯರ್ 2.3-0-30-1, ನಿತೀಶ್ ರಾಣಾ 1-0-7-0

ಫಲಿತಾಂಶ: ಪಂಜಾಬ್ ಕಿಂಗ್ಸ್‌ಗೆ 5 ವಿಕೆಟ್‌ಗಳ ಜಯ

ಪಾಯಿಂಟ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಟೈ	ಅಂಕ
ಚೆನ್ನೈ ಸೂಪರ್ ಕಿಂಗ್ಸ್	11	9	2	00	00	18
ಡೆಲ್ಲಿ ಕ್ಯಾಪಿಟಲ್ಸ್	11	8	3	00	00	16
ಬೆಂಗಳೂರು	11	7	4	00	00	14
ಕೋಲ್ಕತ್ತ ನೈಟ್ ರೈಡರ್ಸ್	12	5	7	00	00	10
ಪಂಜಾಬ್	12	5	7	00	00	10
ಮುಂಬೈ ಇಂಡಿಯನ್ಸ್	11	5	6	00	00	10
ರಾಜಸ್ಥಾನ	11	4	7	00	00	8
ಹೈದರಾಬಾದ್	11	2	9	00	00	4

* ಶುಕ್ರವಾರದ ಪಂದ್ಯದ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ
https://www.prajavani.net/cricket

ರೋಹಿತ್ ಶರ್ಮಾ–ರಿಷಭ್ ಪಂತ್ ಪಡೆಗಳ ಹಣಾಹಣಿ ಇಂದು

ಮುಂಬೈಗೆ ಡೆಲ್ಲಿಯ ಕಠಿಣ ಸವಾಲು

ಶಾರ್ಜಾ (ಪಿಟಿಐ): ಪ್ಲೇ ಆಫ್ ಪ್ರವೇಶದ್ವಾರದ ಹೊಸ್ತಿಲಲ್ಲಿರುವ ಡೆಲ್ಲಿ ಕ್ಯಾಪಿಟಲ್ಸ್ ತಂಡದ ಎದುರು ಶನಿವಾರ ಹಾಲಿ ಚಾಂಪಿಯನ್ ಮುಂಬೈ ಇಂಡಿಯನ್ಸ್ ಕಣಕ್ಕಿಳಿಯಲಿದೆ.

ಪಾಯಿಂಟ್ಸ್ ಪಟ್ಟಿಯ ಎರಡನೇ ಸ್ಥಾನದಲ್ಲಿರುವ ಡೆಲ್ಲಿ ತಂಡವು ಇನ್ನೂ ಮೂರು ಪಂದ್ಯಗಳನ್ನು ಆಡಬೇಕು. ಅದರಲ್ಲಿ ಒಂದು ಗೆದ್ದರೂ ಸಾಕು. ಪ್ಲೇ ಆಫ್ ಖಚಿತ. ಪಟ್ಟಿಯಲ್ಲಿ ಅಗ್ರಸ್ಥಾನಕ್ಕಾಗಿ ಪೈಪೋಟಿ ನಡೆಸಬೇಕಷ್ಟೇ. ಆದರೆ, ರೋಹಿತ್ ಶರ್ಮಾ ನಾಯಕತ್ವದ ಮುಂಬೈ ತಂಡದ ಪರಿಸ್ಥಿತಿ ಇದಕ್ಕೆ ತದ್ವಿರುದ್ಧವಾಗಿದೆ. ಕೇವಲ ಹತ್ತು ಅಂಕಗಳೊಂದಿಗೆ ಐದನೇ ಸ್ಥಾನದಲ್ಲಿರುವ ಮುಂಬೈ ತಂಡವು ಉಳಿದ ಎಲ್ಲ ಪಂದ್ಯಗಳನ್ನೂ ಗೆಲ್ಲಬೇಕು. ಒಂದರಲ್ಲಿ ಸೋತರೂ ಹಾದಿ ಕಡುಕಠಿಣವಾಗಲಿದೆ.

ಮುಂಬೈ ತಂಡದ ಪ್ರಮುಖ ಬ್ಯಾಟ್ಸ್‌ಮನ್‌ಗಳು ಎರಡನೇ ಹಂತದಲ್ಲಿ ನಿರೀಕ್ಷೆಗೆ ತಕ್ಕಂತೆ ಆಡದ ಕಾರಣ ಈ ಪರಿಸ್ಥಿತಿ ಬಂದೊದಗಿದೆ. ಇಶಾನ್ ಕಿಶನ್, ಸೂರ್ಯಕುಮಾರ್ ಯಾದವ್, ಕೀರನ್ ಪೊಲಾರ್ಡ್ ಮತ್ತು ಕೃಣಾಲ್ ಪಾಂಡ್ಯ ಅವರ ಬ್ಯಾಟಿಂಗ್ ವೈಫಲ್ಯವು ತಂಡದ ಬಲ ಕುಗ್ಗಿಸಿದೆ. ಬೌಲಿಂಗ್ ವಿಭಾಗವು ಎಷ್ಟೇ ಚೆನ್ನಾಗಿ ಆಡಿದರೂ ದೊಡ್ಡ ಮೊತ್ತದ ಬೆಂಬಲ ಇಲ್ಲದೇ ನಿರಾಶರಾಗುವಂತಾಗಿದೆ. ಅದರಲ್ಲೂ ಎರಡನೇ ಹಂತದ ಟೂರ್ನಿಯಲ್ಲಿ ಮುಂಬೈ ಸತತ ಮೂರು ಪಂದ್ಯಗಳನ್ನು ಸೋತಿದೆ. ಒಂದರಲ್ಲಿ ಗೆದ್ದಿದ್ದು ತುಸು ಆತ್ಮವಿಶ್ವಾಸದಲ್ಲಿದೆ.

ಆದರೆ ರಿಷಭ್ ಪಂತ್ ನಾಯಕತ್ವದ ಡೆಲ್ಲಿ ತಂಡವನ್ನು ಮಣಿಸುವುದು ಸುಲಭದ ಮಾತಲ್ಲ. ಮೊದಲ ಸುತ್ತಿನ ಪಂದ್ಯದಲ್ಲಿಯೂ ಡೆಲ್ಲಿ ಮೇಲುಗೈ ಸಾಧಿಸಿತ್ತು. ಶಿಖರ್, ರಿಷಭ್, ಸ್ಮಿತ್ ಬ್ಯಾಟಿಂಗ್ ಲಯದಲ್ಲಿದ್ದಾರೆ. ಶ್ರೇಯಸ್ ಅಯ್ಯರ್ ಫಾರ್ಮ್‌ಗೆ ಮರಳಿದರೆ ತಂಡದ ಬಲ ದುಪ್ಪಟ್ಟಾಗಲಿದೆ. ಆವೇಶ್ ಖಾನ್, ಕಗಿಸೊ ರಬಾಡ ಮತ್ತು ಆರ್. ಅಶ್ವಿನ್ ಅವರ ಬೌಲಿಂಗ್ ದಾಳಿಯನ್ನು ಎದುರಿಸಲು ಮುಂಬೈ ಬ್ಯಾಟಿಂಗ್ ಪಡೆಯು ಸಮರ್ಥವಾಗಿ ಯೋಜನೆ ಹೆಣೆಯಬೇಕಿದೆ. ತಮ್ಮ ಸ್ಲೋ ಎಸೆತಗಳ ಮೂಲಕ ಕಾಡುತ್ತಿರುವ ಖಾನ್ ಮತ್ತು ಎನ್ರಿಚ್ ನಾರ್ಕಿಯಾ ಅವರನ್ನು ಎದುರಿಸುವುದು ಪ್ರಮುಖ ಸವಾಲಾಗಲಿದೆ.

ರಿಷಭ್ ಪಂತ್

ರೋಹಿತ್ ಶರ್ಮಾ

ಬಲಾಬಲ

ಪಂದ್ಯಗಳು	29
ಮುಂಬೈ ಜಯ	16
ಡೆಲ್ಲಿ ಜಯ	10
ಫಲಿತಾಂಶವಿಲ್ಲ	3
ಪಂದ್ಯ ಆರಂಭ	ಮಧ್ಯಾಹ್ನ 3.30
ನೇರಪ್ರಸಾರ	ಸ್ಟಾರ್ ಸ್ಪೋರ್ಟ್ಸ್

ಕಿಂಗ್ಸ್–ರಾಯಲ್ಸ್ ಮುಖಾಮುಖಿ

ಅಬುಧಾಬಿ (ಪಿಟಿಐ): ಈಗಾಗಲೇ ಪ್ಲೇ ಆಫ್ ಪ್ರವೇಶಿಸಿರುವ ಚೆನ್ನೈ ಸೂಪರ್ ಕಿಂಗ್ಸ್ ತಂಡಕ್ಕೆ ಏಳನೇ ಸ್ಥಾನದಲ್ಲಿರುವ ರಾಜಸ್ಥಾನ್ ರಾಯಲ್ಸ್ ತಂಡವು ಶನಿವಾರ ಸವಾಲೊಡ್ಡಲಿದೆ.

ಸತತ ಸೋಲುಗಳಿಂದ ಕಂಗೆಟ್ಟಿರುವ ಸಂಜು ಸ್ಯಾಮ್ಸನ್ ಬಳಗವು 'ಅನುಭವಿ'ಗಳ ಪಡೆ ಚೆನ್ನೈಗೆ ಸುಲಭದ ತುತ್ತಾದರೂ ಅಚ್ಚರಿಯಿಲ್ಲ.

ಮಹೇಂದ್ರಸಿಂಗ್ ಧೋನಿಯ ಸಮರ್ಥ ನಾಯಕತ್ವದಲ್ಲಿ ರವೀಂದ್ರ ಜಡೇಜ ಮತ್ತು ಡ್ವೇನ್ ಬ್ರಾವೊ ಆಲ್‌ರೌಂಡ್ ಆಟವಾಡುತ್ತಿದ್ದಾರೆ. ಋತುರಾಜ್ ಗಾಯಕವಾಡ್ ಮತ್ತು ಫಫ್ ಡುಪ್ಲೆಸಿ ಒಳ್ಳೆಯ ಆರಂಭ ನೀಡುತ್ತಿದ್ದಾರೆ. ಅಂಬಟಿ ರಾಯುಡು, ಮೋಯಿನ್ ಅಲಿ, ಸುರೇಶ್ ರೈನಾ ಮಧ್ಯಮಕ್ರಮಾಂಕದಲ್ಲಿದ್ದಾರೆ. ಆದರೆ, ಅವರಿಗೆ ಈ ಪಂದ್ಯದಲ್ಲಿ ವಿಶ್ರಾಂತಿ ನೀಡಿ, ಯುವ ಆಟಗಾರರಿಗೆ ಅವಕಾಶ ನೀಡುವ ಸಾಧ್ಯತೆ ಇದೆ. ಅದರಿಂದಾಗಿ ಕನ್ನಡಿಗ ಕೃಷ್ಣಪ್ಪ ಗೌತಮ್, ಚೇತೇಶ್ವರ್ ಪೂಜಾರ ಅವರಿಗೆ ಅವಕಾಶ ಸಿಗಬಹುದು.

ಹೋದ ವರ್ಷ ಪ್ಲೇ ಆಫ್ ಪ್ರವೇಶಿಸುವಲ್ಲಿ ಚೆನ್ನೈ ತಂಡವು ವಿಫಲವಾಗಿತ್ತು. ಆದರೆ, ಈ ಬಾರಿ ಅಮೋಘ ಆಟವಾಡಿದೆ. ಆರಂಭದ ಹಂತದಿಂದಲೂ ತಂಡದ ಯುವ ಮತ್ತು ಅನುಭವಿ ಆಟಗಾರರು ಮಿಂಚುತ್ತಿದ್ದಾರೆ. ಅದರಲ್ಲೂ ಜಡೇಜ ಅವರ ಕಾಣಿಕೆ ದೊಡ್ಡದು.

ಪಂದ್ಯ ಆರಂಭ: ರಾತ್ರಿ 7.30

ಆರೆಂಜ್ ಕ್ಯಾಪ್ (ಹೆಚ್ಚು ರನ್ ಗಳಿಸಿದವರು)

ಆಟಗಾರ	ತಂಡ	ರನ್
ಕೆ.ಎಲ್.ರಾಹುಲ್	ಪಂಜಾಬ್	489
ಶಿಖರ್ ಧವನ್	ಡೆಲ್ಲಿ	454
ಸಂಜು ಸ್ಯಾಮ್ಸನ್	ರಾಜಸ್ತಾನ	452

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್ ಗಳಿಸಿದವರು)

ಆಟಗಾರ	ತಂಡ	ವಿಕೆಟ್
ಹರ್ಷಲ್	ಆರ್‌ಸಿಬಿ	26
ಆವೇಶ್ ಖಾನ್	ಡೆಲ್ಲಿ	18
ಬೂಮ್ರಾ	ಮುಂಬೈ	16

ರಾಷ್ಟ್ರಮಟ್ಟದ ವಾಲಿಬಾಲ್ 8ರಿಂದ

ಚಿತ್ರದುರ್ಗ: ಶರಣ ಸಂಸ್ಕೃತಿ ಉತ್ಸವ ಹಾಗೂ ಶಿವಮೂರ್ತಿ ಮುರುಘಾ ಶರಣರ ಪೀಠಾರೋಹಣ ತೃತೀಯ ದಶಮಾನೋತ್ಸವದ ಪ್ರಯುಕ್ತ ಅಕ್ಟೋಬರ್ 8ರಿಂದ 12ರವರೆಗೂ ರಾಷ್ಟ್ರಮಟ್ಟದ ಆಹ್ವಾನಿತ ಪುರುಷರ ಮತ್ತು ಮಹಿಳೆಯರ ಹೊನಲು–ಬೆಳಕಿನ ವಾಲಿಬಾಲ್ ಟೂರ್ನಿ ಹಮ್ಮಿಕೊಳ್ಳಲಾಗಿದೆ ಎಂದು ಉತ್ಸವ ಸಮಿತಿ ಗೌರವಾಧ್ಯಕ್ಷ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ ತಿಳಿಸಿದರು.

'ಪುರುಷರ ವಿಭಾಗದಲ್ಲಿ ಇಂಡಿಯನ್ ಬ್ಯಾಂಕ್ ಚೆನ್ನೈ, ಇಂಡಿಯನ್ ರೈಲ್ವೆ ದೆಹಲಿ, ಇಂಡಿಯನ್ ಓವರ್‌ಸೀಸ್ ಬ್ಯಾಂಕ್ ತಮಿಳುನಾಡು, ಒಎನ್‌ಜಿಸಿ ಗುವಾಹಟಿ, ಹರಿಯಾಣ ರಾಜ್ಯ ತಂಡ, ಬಿಪಿಸಿಎಲ್ ಕೊಚ್ಚಿನ್, ಕೆಎಸ್‌ಇಬಿ ತಂಡ ಕೇರಳ ಮತ್ತು ಕರ್ನಾಟಕ ತಂಡ ಬೆಂಗಳೂರು ಭಾಗವಹಿಸಲಿವೆ.

ಮಹಿಳೆಯರ ವಿಭಾಗದಿಂದ ಇಂಡಿಯನ್ ರೈಲ್ವೆ ದೆಹಲಿ, ತಮಿಳುನಾಡು ತಂಡ, ಕೆಎಸ್‌ಇಬಿ ಕೇರಳ, ಕರ್ನಾಟಕ ತಂಡ ಬೆಂಗಳೂರು, ಕೇರಳ ಪೊಲೀಸ್ ತಂಡ, ಎಸ್‌ಆರ್‌ಎಂ, ಯೂನಿವರ್ಸಿಟಿ ತಂಡ ತಮಿಳುನಾಡು ಭಾಗವಹಿಸಲಿವೆ' ಎಂದು ಮಾಹಿತಿ ನೀಡಿದರು.

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1470 (1490)
ಸೋಯಾ (ರಿಫೈನ್ಡ್)	₹1335 (1335)
ಸೂರ್ಯಕಾಂತಿ (ರಿಫೈನ್ಡ್)	₹1380 (1385)
ಪಾಮೋಲಿನ್	₹1216 (1220)

ಕೊಬ್ಬರಿ ಧಾರಣೆ

ಅರಸೀಕೆರೆ	₹14000-16970
ತುರುವೇಕೆರೆ	₹16900-16900

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,618
ಇಂದಿನ ಅಂತ್ಯ	17,532
▼	86
ದಿನದ ಗರಿಷ್ಠ	17,557

ವಿನಿಮಯ ದರ

$ ಡಾಲರ್	74.12
£ ಪೌಂಡ್	100.05
€ ಯುರೊ	85.88
¥ ಯೆನ್ (100ಕ್ಕೆ)	66.84

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹460
12 ಮೊಟ್ಟೆಗೆ	₹60

ಮೈಸೂರು

100 ಮೊಟ್ಟೆಗೆ	₹460

ಸಂಕ್ಷಿಪ್ತ ಸುದ್ದಿ

ವಿಶ್ರಾಂತಿಗಾಗಿ ಐಪಿಎಲ್ ತೊರೆದ ಗೇಲ್

ದುಬೈ (ಪಿಟಿಐ): ಬಯೋಬಬಲ್ ವ್ಯವಸ್ಥೆಯಲ್ಲಿ ಇರುವ ಒತ್ತಡದಿಂದ ದಣಿವಾಗಿದ್ದು ಐಪಿಎಲ್‌ನಿಂದ ಹೊರನಡೆಯುವುದಾಗಿ ಪಂಜಾಬ್ ಕಿಂಗ್ಸ್ ತಂಡದ ಕ್ರಿಸ್ ಗೇಲ್ ಗುರುವಾರ ಪ್ರಕಟಿಸಿದ್ದಾರೆ.

ಯುಎಇಯಲ್ಲಿ ನಡೆಯುತ್ತಿರುವ ಎರಡನೇ ಸುತ್ತಿನಲ್ಲಿ ಎರಡು ಪಂದ್ಯಗಳಲ್ಲಿ ಮಾತ್ರ ಗೇಲ್ ಆಡಿದ್ದಾರೆ. ಐಪಿಎಲ್‌ಗೆ ಬರುವ ಮುನ್ನ ಅವರು ಕೆರಿಬಿಯನ್ ಪ್ರೀಮಿಯರ್ ಲೀಗ್ (ಸಿಪಿಎಲ್) ಟೂರ್ನಿಯಲ್ಲಿ ಆಡಿದ್ದರು. ಅದರಿಂದಾಗಿ ಸತತವಾಗಿ ಬಯೋಬಬಲ್‌ನಲ್ಲಿದ್ದರು.

ಐಪಿಎಲ್ ಮುಗಿದ ಮೇಲೆ ಶುರುವಾಗಲಿರುವ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಅವರು ವಿಂಡೀಸ್ ತಂಡವನ್ನು ಪ್ರತಿನಿಧಿಸಲಿದ್ದಾರೆ.

ಫುಟ್‌ಬಾಲ್: ವೈದ್ಯಾಧಿಕಾರಿಯಾಗಿ ಕಿರಣ್ ನೇಮಕ



ಕಿರಣ ಕುಲಕರ್ಣಿ

ಬೆಂಗಳೂರು: ಕತಾರ್‌ನಲ್ಲಿ ಮುಂದಿನ ವರ್ಷ ನಡೆಯಲಿರುವ ವಿಶ್ವಕಪ್ ಫುಟ್‌ಬಾಲ್ ಟೂರ್ನಿಯ ಏಷ್ಯಾ ವಲಯದ ಪ್ರಾಥಮಿಕ ಹಂತದ ಪಂದ್ಯಗಳಿಗೆ ವೈದ್ಯಾಧಿಕಾರಿಯಾಗಿ ಧಾರವಾಡದ ಕಿರಣ ಕುಲಕರ್ಣಿ ಅವರನ್ನು ನೇಮಕ ಮಾಡಲಾಗಿದೆ. ಗುಂಪು ಹಂತದ ಪಂದ್ಯಗಳಲ್ಲಿ ಅವರು ಕಾರ್ಯನಿರ್ವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ. ಭಾರತದ ಸಂಜಯ್ ಕುಮಾರ್ ಭದ್ರತಾ ಅಧಿಕಾರಿಯಾಗಿ, ಸುರೇಶ್ ಸುವ್ರತ್ ಮತ್ತು ಗೌತಮ್ ಅವರು ಪಂದ್ಯದ ಕಮಿಷನರ್ ಆಗಿರುವರು.

ಕರ್ನಾಟಕಕ್ಕೆ ಜಯ

ಬೆಂಗಳೂರು: ಕರ್ನಾಟಕ ತಂಡದವರು ಬಿಸಿಸಿಐ 19 ವರ್ಷದೊಳಗಿನವರ ಏಕದಿನ ಟ್ರೋಫಿ ಟೂರ್ನಿಯಲ್ಲಿ ಹಿಮಾಚಲ ಪ್ರದೇಶದ ಎದುರು 8 ವಿಕೆಟ್‌ಗಳಿಂದ ಜಯಿಸಿತು ಜೈಪುರದ ಕೆ.ಎಲ್.ಸೈನಿ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಪಂದ್ಯದಲ್ಲಿ. ಹಿಮಾಚಲ ಪ್ರದೇಶ 38.2 ಓವರ್‌ಗಳಲ್ಲಿ 96 ರನ್ ಗಳಿಸಿ ಎಲ್ಲ ವಿಕೆಟ್ ಒಪ್ಪಿಸಿತು. ಕರ್ನಾಟಕ 26ನೇ ಓವರ್‌ನಲ್ಲಿ 2 ವಿಕೆಟ್ ಕಳೆದುಕೊಂಡು ಜಯಿಸಿತು.

ಪಿಂಕ್‌ಬಾಲ್ ಟೆಸ್ಟ್: ಎರಡನೇ ದಿನವೂ ಕಾಡಿದ ಮಳೆ

ಮಂದಾನ ಶತಕದ ಮಂದಹಾಸ

ಗೋಲ್ಡ್ ಕೋಸ್ಟ್, ಆಸ್ಟ್ರೇಲಿಯಾ (ಪಿಟಿಐ): ಭಾರತ ಮತ್ತು ಆಸ್ಟ್ರೇಲಿಯಾ ಮಹಿಳೆಯರ ಹೊನಲು ಬೆಳಕಿನ ಟೆಸ್ಟ್ ಕ್ರಿಕೆಟ್ ಪಂದ್ಯಕ್ಕೆ ಸತತ ಎರಡನೇ ದಿನವೂ ಮಳೆ ಕಾಡಿತು. ಗುಡುಗು–ಸಿಡಿಲಿನೊಂದಿಗೆ ಮುಸಲಧಾರೆಯಾಗುವ ಮೊದಲು ಮಿಂಚು ಹರಿಸಿದ ಆರಂಭಿಕ ಬ್ಯಾಟರ್ ಸ್ಮೃತಿ ಮಂದಾನ ಶತಕದ ಸಂಭ್ರಮದಲ್ಲಿ ಮಿಂದರು.

ಎಡಗೈ ಬ್ಯಾಟರ್ ಸ್ಮೃತಿ ಅವರ ಅಮೋಘ ಬ್ಯಾಟಿಂಗ್ ನೆರವಿನಿಂದ ಭಾರತ ತಂಡ ಪಂದ್ಯದ ಮೇಲಿನ ಹಿಡಿತವನ್ನು ಮತ್ತಷ್ಟು ಬಿಗಿ ಮಾಡಿತು. ಮಳೆಯಿಂದಾಗಿ ದಿನದಾಟವನ್ನು ಬೇಗನೇ ಮುಕ್ತಾಯಗೊಳಿಸಿದಾಗ ತಂಡ ಐದು ವಿಕೆಟ್‌ಗಳಿಗೆ 276 ರನ್ ಗಳಿಸಿದೆ.

ಮೊದಲ ದಿನವಾದ ಗುರುವಾರ 80 ರನ್ ಗಳಿಸಿದ್ದ ಮಂದಾನ ಶುಕ್ರವಾರವೂ ಮೋಹಕ ಬ್ಯಾಟಿಂಗ್ ಮುಂದುವರಿಸಿದರು. ಇನಿಂಗ್ಸ್‌ನ 52ನೇ ಓವರ್‌ನಲ್ಲಿ ಎಲಿಸ್ ಪೆರಿ ಎಸೆತವನ್ನು ಪುಲ್ ಮಾಡಿ ಬೌಂಡರಿ ಸಿಡಿಸುವ ಮೂಲಕ ಅವರು ಮೂರಂಕಿ ಮೊತ್ತ ದಾಟಿದರು. ಇದು ಅವರ ಚೊಚ್ಚಲ ಶತಕವಾಗಿದೆ. ಅವರು ಪಿಂಕ್ ಬಾಲ್ ಟೆಸ್ಟ್‌ನಲ್ಲಿ ಶತಕ ಗಳಿಸಿದ ಭಾರತದ ಮೊದಲ ಬ್ಯಾಟರ್ ಎನಿಸಿಕೊಂಡರು.

ಆಸ್ಟ್ರೇಲಿಯಾ ವಿರುದ್ಧ ಅದರದೇ ನೆಲದಲ್ಲಿ ಶತಕ ಸಿಡಿಸಿದ ಭಾರತದ ಮೊದಲ ಬ್ಯಾಟರ್ ಕೂಡ ಆಗಿದ್ದಾರೆ ಅವರು. ಅವರು 216 ಎಸೆತಗಳಲ್ಲಿ 127 ರನ್ ಗಳಿಸಿ ಔಟಾದರು. ಶತಕದ ಹಾದಿಯಲ್ಲಿ ಅವರು 22 ಬೌಂಡರಿ ಮತ್ತು ಒಂದು ಸಿಕ್ಸರ್ ಗಳಿಸಿದ್ದರು. ಮೊದಲ ದಿನ ಶಫಾಲಿ ವರ್ಮಾ ಜೊತೆ ಮೊದಲ ವಿಕೆಟ್‌ಗೆ 93 ರನ್ ಸೇರಿಸಿದ್ದ ಮಂದಾನ ಶುಕ್ರವಾರ ಪೂನಂ ರಾವತ್ ಅವರೊಂದಿಗೆ ಎರಡನೇ ವಿಕೆಟ್‌ಗೆ 102 ರನ್‌ಗಳ ಜೊತೆಯಾಟ ಆಡಿದರು. ಆಸ್ಟ್ರೇಲಿಯಾ ನೆಲದಲ್ಲಿ ಇದು ಭಾರತದ ದಾಖಲೆ. ನಾಯಕಿ ಮಿಥಾಲಿ ರಾಜ್ ಮತ್ತು ಯಷ್ಟಿಕಾ ನಾಲ್ಕನೇ ವಿಕೆಟ್‌ಗೆ 44 ರನ್ ಸೇರಿಸಿ ತಂಡದ ಮೊತ್ತವನ್ನು 250ರ ಗಡಿ ದಾಟಿಸಿದರು.

ಸ್ಮೃತಿ ಬ್ಯಾಟಿಂಗ್ –ಟ್ವಿಟರ್ ಚಿತ್ರ

ಹಾಕಿ: ಫೈವ್ ಎ ಸೈಡ್‌ನತ್ತ ಸುನಿಲ್ ಒಲವು

ಬೆಂಗಳೂರು: ಲಂಡನ್ ಮತ್ತು ರಿಯೊ ಒಲಿಂಪಿಕ್ಸ್‌ಗಳಲ್ಲಿ ಆಡಿದ್ದ, ಏಷ್ಯನ್ ಗೇಮ್ಸ್‌ನಲ್ಲಿ ಚಿನ್ನ ಗೆದ್ದ ತಂಡದಲ್ಲಿದ್ದ ಕನ್ನಡಿಗ ಎಸ್.ವಿ.ಸುನಿಲ್ ಅವರು ಫೈವ್ ಎ ಸೈಡ್ (ಐದು ಮಂದಿಯ ತಂಡ) ಹಾಕಿಯತ್ತ ಒಲವು ತೋರಿದ್ದಾರೆ. ಇದಕ್ಕಾಗಿ ಅಂತರರಾಷ್ಟ್ರೀಯ ಹಾಕಿಯಿಂದ ವಿರಾಮ ಪಡೆಯುವುದಾಗಿ ಶುಕ್ರವಾರ ಘೋಷಿಸಿದ್ದಾರೆ.

ಭಾರತ ತಂಡ ಕಂಡ ಅತ್ಯಪೂರ್ವ ಸ್ಟ್ರೈಕರ್‌ಗಳಲ್ಲಿ ಒಬ್ಬರಾಗಿರುವ ಕೊಡಗಿನ ಸೋಮವಾರಪೇಟೆಯ ಸುನಿಲ್ ಹಾಕಿಗೆ ವಿದಾಯ ಹೇಳಿದ್ದಾರೆ ಎಂಬ ವದಂತಿ ಸಂಜೆ ಹಬ್ಬಿತ್ತು. ಭಾರತ ತಂಡದ ರೂಪಿಂದರ್ ಪಾಲ್ ಮತ್ತು ಡಿಫೆಂಡರ್ ಬೀರೇಂದ್ರ ಲಾಕ್ರ ಗುರುವಾರ ನಿವೃತ್ತಿ ಘೋಷಿಸಿದ್ದರು. ಇದರ ಬೆನ್ನಲ್ಲೇ ಸುನಿಲ್ ನಿವೃತ್ತರಾಗಿದ್ದಾರೆ ಎಂಬ ಸುದ್ದಿ ಚರ್ಚೆಗೆ ಗ್ರಾಸವಾಗಿತ್ತು.

ಎಸ್‌.ವಿ. ಸುನಿಲ್

ಆದರೆ 'ಪ್ರಜಾವಾಣಿ' ಜೊತೆ ಮಾತನಾಡಿದ ಸುನಿಲ್ 'ನಿವೃತ್ತಿ ಘೋಷಿಸುವ ನಿರ್ಧಾರ ಕೈಗೊಂಡಿಲ್ಲ. ಕೆಲ ಕಾಲ ವಿರಾಮ ಬಯಸಿದ್ದೇನೆ. ಆದ್ದರಿಂದ ರಾಷ್ಟ್ರೀಯ ತಂಡದಿಂದ ದೂರ ಉಳಿದಿದ್ದೇನೆ. ಫೈವ್ ಎ ಸೈಡ್ ಹಾಕಿಯ ಕಡೆಗೆ ಗಮನ ಕೊಡುವುದಕ್ಕಾಗಿ ಈ ನಿರ್ಧಾರ ಕೈಗೊಂಡಿದ್ದೇನೆ' ಎಂದು ತಿಳಿಸಿದರು.

ಹೈದರಾಬಾದ್ ಡರ್ಬಿ ರೇಸ್

ಮಿರಾಕಲ್ ಡರ್ಬಿ ಗೆಲ್ಲುವ ನಿರೀಕ್ಷೆ

ಗೋಲ್ಡನ್ ಜುಬಿಲಿ ಡೆಕ್ಕನ್ ಡರ್ಬಿ ಶನಿವಾರದ ಹೈದರಾಬಾದ್ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಮಿರಾಕಲ್ ಈ ಡರ್ಬಿ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 12.15ಕ್ಕೆ ಪ್ರಾರಂಭವಾಗಲಿರುವ ದಿನದ ಒಂಬತ್ತು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1. 1ನೇ ರೇಸ್: ಬಿಸ್ಟೇಟ್ 1, ಲಂಬಾರ್ಡಿ 5, ಎನ್ ಆರ್ ಐ ವ್ಯಾಲಿ 2
2ನೇ ರೇಸ್: ಅಮೈರ 2, ಕ್ಯಾಸ್‌ಲ್‌ರಾಕ್ 1, ಕೊಲಷೆಲ್ ಬ್ಯಾಟ್ಲ್ 4
3ನೇ ರೇಸ್: ಸ್ತ್ರಾಮ್‌ಜೆಟ್ 1, ಸದರ್ನ್ ಪ್ರಿನ್ಸೆಸ್ 6, ವಾಚ್ ಮೈ ಸ್ಟ್ರೈಡ್ 9
4ನೇ ರೇಸ್: ಗುಡ್ ಕನೆಕ್ಷನ್ 10, ಹೌಸ್ ಆಫ್ ಡೈಮಂಡ್ಸ್ 2, ಎಕ್ಸ್‌ಫಿನಿಟಿ 4
5ನೇ ರೇಸ್: ಅಶ್ವ ಬ್ರಾವೊ 7, ಕಾರ್ಥೆ ಕ್ಯಾಸ್ಲ್ 1, ವಿಕ್ಟರಿ ಪೆರೇಡ್ 2
6ನೇ ರೇಸ್: ಪೈಂಟೆಡ್ ಅಪಾಚೆ 2, ಜಮಜೆಂಟ 4, ಸೂಪರ್ ಏಂಜೆಲ್ 1
7ನೇ ರೇಸ್: ಸೊಲಾಯಿಸ್ಟ್ 1, ಲ್ಯಾಕ್ರೊಸ್ಸೆ 6, ಜನರಲ್ ಅಟ್ಲಾಂಟಿಕ್ 5
8ನೇ ರೇಸ್: ಮಿರಾಕಲ್ 10, ಫೈರ್ ಪವರ್ 4, ಜುಕರೆಲ್ಲಿ 9
9ನೇ ರೇಸ್: ಎನ್.ಆರ್.ಐ ಬ್ಲೂ 9, ಬ್ಲಿಸ್‌ಫುಲ್ 5, ಸ್ಟಾರ್ ಬೇಬ್ 7.

ಉತ್ತಮ ಬೆಟ್: ಪೈಂಟೆಡ್ ಅಪಾಚೆ

1ನೇ ಜಾಕ್‌ಪಾಟ್	2ನೇ ಜಾಕ್‌ಪಾಟ್	1 ನೇ ಮಿನಿ ಜಾಕ್‌ಪಾಟ್	2ನೇ ಮಿನಿ ಜಾಕ್‌ಪಾಟ್
1,2,3,4,5	5,6,7,8,9	2,3,4,5	6,7,8,9

1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
1,2,3	4,5,6	7,8,9

ಏಷ್ಯನ್ ಟಿಟಿ: ಭಾರತಕ್ಕೆ ಕಂಚು

ದೋಹಾ (ಪಿಟಿಐ): ಭಾರತದ ಪುರುಷರ ತಂಡವು ಇಲ್ಲಿ ಶುಕ್ರವಾರ ನಡೆದ ಏಷ್ಯನ್ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ ಪಡೆಯಿತು.

ಸೆಮಿಫೈನಲ್ ಸುತ್ತಿನಲ್ಲಿ ಭಾರತ ತಂಡವು 0–3ರಿಂದ ದಕ್ಷಿಣ ಕೊರಿಯಾ ವಿರುದ್ಧ ಸೋತಿತು. ಬುಧವಾರ ಕ್ವಾರ್ಟರ್‌ಫೈನಲ್‌ನಲ್ಲಿ 3–1ರಿಂದ ಗೆದ್ದಿದ್ದ ಭಾರತ ಸೆಮಿಗೆ ಪ್ರವೇಶಿಸಿತ್ತು. ಭಾರತ ತಂಡದಲ್ಲಿ ಜಿ. ಸತ್ಯನ್, ಅಚಂತ ಶರತ್ ಕಮಲ್, ಹರ್ಮೀತ್ ದೇಸಾಯಿ ಇದ್ದರು. ಕರ್ನಾಟಕದ ಅರ್ಚನಾ ಕಾಮತ್ ಮತ್ತು ಒಲಿಂಪಿಯನ್ ಸುತೀರ್ಥ ಮುಖರ್ಜಿ ಅವರಿದ್ದ ಮಹಿಳೆಯರ ತಂಡವು ಐದನೇ ಸ್ಥಾನ ಪಡೆಯಿತು.

ಆಸ್ಪತ್ರೆಯಿಂದ ಮನೆಗೆ ಪೆಲೆ



ಪೆಲೆ

ರಿಯೊ ಡಿ ಜನೈರೊ (ಎಪಿ): ಸುಮಾರು ಒಂದು ತಿಂಗಳಿನಿಂದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಬ್ರೆಜಿಲ್ ಫುಟ್‌ಬಾಲ್ ದಿಗ್ಗಜ ಪೆಲೆ ಗುರುವಾರ ಮನೆಗೆ ಮರಳಿದ್ದಾರೆ. 'ಮನೆಗೆ ಬಂದಿರುವುದು ಸಂತಸ ತಂದಿದೆ' ಎಂದು ಪೆಲೆ ಇನ್ಸ್ಟಾಗ್ರಾಮ್‌ನಲ್ಲಿ ಹಾಕಿದ್ದಾರೆ. 80 ವರ್ಷದ ಪೆಲೆ ಸೆಪ್ಟೆಂಬರ್ 4ರಂದು ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆಗೊಳಗಾಗಿದ್ದರು. 'ಪೆಲೆ ಆರೋಗ್ಯ ಸ್ಥಿರವಾಗಿದೆ. ಅವರಿಗೆ ಕೆಮೊಥೆರಪಿ ಮುಂದುವರಿಸಲಾಗುವುದು' ಎಂದು ಆಸ್ಪತ್ರೆಯು ಪ್ರಕಟಣೆಯಲ್ಲಿ ತಿಳಿಸಿದೆ.

ತಯಾರಿಕಾ ವಲಯದ ಚಟುವಟಿಕೆ ಏರಿಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೋವಿಡ್ -19 ನಿರ್ಬಂಧಗಳ ಸಡಿಲಿಕೆಯ ಕಾರಣ ಸೆಪ್ಟೆಂಬರ್‌ನಲ್ಲಿ ಭಾರತದ ತಯಾರಿಕಾ ವಲಯದ ಚಟುವಟಿಕೆಗಳು ವಿಸ್ತರಿಸಿವೆ ಎಂದು ಖಾಸಗಿ ಸಮೀಕ್ಷಾ ವರದಿಯೊಂದು ಹೇಳಿದೆ.

ಐಎಚ್‌ಎಸ್ ಮರ್ಕಿಟ್ ಇಂಡಿಯಾ ಮ್ಯಾನುಫ್ಯಾಕ್ಚರಿಂಗ್ ಪರ್ಚೇಸಿಂಗ್ ಮ್ಯಾನೇಜರ್ಸ್ ಇಂಡೆಕ್ಸ್ (ಪಿಎಂಐ) ಆಗಸ್ಟ್‌ನಲ್ಲಿ 52.3ರಷ್ಟು ಇತ್ತು. ಸೆಪ್ಟೆಂಬರ್‌ನಲ್ಲಿ ಈ ಸೂಚ್ಯಂಕವು 53.7ಕ್ಕೆ ಏರಿಕೆಯಾಗಿದೆ. ಈ ಸೂಚ್ಯಂಕವು 50ಕ್ಕಿಂತ ಹೆಚ್ಚು ಇದ್ದರೆ, ಚಟುವಟಿಕೆ ವಿಸ್ತರಣೆಯಾಗುತ್ತಿದೆ ಎಂದು ಪರಿಗಣಿಸಲಾಗುತ್ತದೆ.

ಭಾರತದ ತಯಾರಿಕಾ ವಲಯವು ಉತ್ಪಾದನೆಯನ್ನು ದೊಡ್ಡ ಮಟ್ಟದಲ್ಲಿ ಏರಿಕೆ ಮಾಡಿದೆ. ಜಾಗತಿಕ ಮಾರುಕಟ್ಟೆಯಲ್ಲಿನ ಬೇಡಿಕೆ ಕಾರಣದಿಂದಲೂ, ತಯಾರಿಕಾ ವಲಯದ ಚಟುವಟಿಕೆ ಏರಿಕೆಯಾಗಿದೆ. ಕೆಲವು ಉತ್ಪನ್ನಗಳಿಗೆ ಬೇಡಿಕೆ ಹೆಚ್ಚಿದೆ. ಆದರೆ ಇಂಧನ ಮತ್ತು ಸಾಗಣೆ ವೆಚ್ಚ ಏರಿಕೆಯಾದ ಕಾರಣ ತಯಾರಿಕಾ ವೆಚ್ಚವೂ ಏರಿಕೆಯಾಗಿದೆ ಎಂದು ಸಮೀಕ್ಷಾ ವರದಿಯಲ್ಲಿ ವಿವರಿಸಲಾಗಿದೆ.

₹ 100ರ ಗಡಿ ದಾಟಿದ ಡೀಸೆಲ್

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯನ್ನು ಶುಕ್ರವಾರ ಹೆಚ್ಚಿಸಿದ್ದು, ಈ ಎರಡು ತೈಲೋತ್ಪನ್ನಗಳ ಬೆಲೆಯು ಸಾರ್ವಕಾಲಿಕ ಗರಿಷ್ಠ ಮಟ್ಟ ತಲುಪಿವೆ. ಪೆಟ್ರೋಲ್ ಬೆಲೆಯನ್ನು ಲೀಟರ್‌ಗೆ 25 ಪೈಸೆ, ಡೀಸೆಲ್ ಬೆಲೆಯನ್ನು 30 ಪೈಸೆ ಹೆಚ್ಚು ಮಾಡಲಾಗಿದೆ.

ಇದರಿಂದಾಗಿ ಪೆಟ್ರೋಲ್ ಬೆಲೆ ದೆಹಲಿಯಲ್ಲಿ ₹ 101.89ಕ್ಕೆ, ಮುಂಬೈನಲ್ಲಿ 107.95ಕ್ಕೆ ತಲುಪಿದೆ. ಶುಕ್ರವಾರ ಆದ ಬೆಲೆ ಹೆಚ್ಚಳದ ಪರಿಣಾಮವಾಗಿ ಮಧ್ಯಪ್ರದೇಶ, ರಾಜಸ್ಥಾನ, ಒಡಿಶಾ, ಆಂಧ್ರಪ್ರದೇಶ ಮತ್ತು ತೆಲಂಗಾಣದ ಹಲವು ನಗರಗಳಲ್ಲಿ ಡೀಸೆಲ್ ಬೆಲೆಯು ಲೀಟರ್‌ಗೆ ₹ 100ರ ಗಡಿ ದಾಟಿದೆ.

ವಿಮಾನಗಳಲ್ಲಿ ಬಳಸುವ ಇಂಧನ ಬೆಲೆಯನ್ನು ಶುಕ್ರವಾರ ಶೇಕಡ 5.8ರಷ್ಟು ಹೆಚ್ಚಿಸಲಾಗಿದೆ. ದೆಹಲಿಯಲ್ಲಿ ಇದರ ಬೆಲೆಯು ಪ್ರತಿ ಕಿಲೋ ಲೀಟರ್‌ಗೆ ₹ 3,972ರಷ್ಟು ಹೆಚ್ಚಾಗಿದೆ.

ಈ ಇಂಧನದ ಬೆಲೆಯನ್ನು ಪ್ರತಿ ಹದಿನೈದು ದಿನಗಳಿಗೆ ಒಮ್ಮೆ ಪರಿಷ್ಕರಿಸಲಾಗುತ್ತದೆ.

ಪಟ್ನಾಯಕ್ ಎಲ್‌ಐಸಿ ಎಂ.ಡಿ.

ಬೆಂಗಳೂರು: ಭಾರತೀಯ ಜೀವ ವಿಮಾ ನಿಗಮದ (ಎಲ್‌ಐಸಿ) ವ್ಯವಸ್ಥಾಪಕ ನಿರ್ದೇಶಕ (ಎಂ.ಡಿ.) ಸ್ಥಾನಕ್ಕೆ ಬಿ.ಸಿ. ಪಟ್ನಾಯಕ್ ಅವರನ್ನು ಅಕ್ಟೋಬರ್ 1ರಿಂದ ಜಾರಿಗೆ ಬರುವಂತೆ ನೇಮಕ ಮಾಡಲಾಗಿದೆ.

ಪಟ್ನಾಯಕ್ ಅವರು 1986ರಲ್ಲಿ ಎಲ್‌ಐಸಿ ಸೇರಿದರು. ಎಂ.ಡಿ. ಆಗಿ ಅಧಿಕಾರ ಸ್ವೀಕರಿಸುವ ಮೊದಲು ಅವರು ವಿಮಾ ಒಂಬುಡ್ಸ್‌ಮನ್ ಪರಿಷತ್ತಿನ ಪ್ರಧಾನ ಕಾರ್ಯದರ್ಶಿ ಆಗಿದ್ದರು.

ಎಲ್‌ಐಸಿಯಲ್ಲಿ ಮೂವತ್ತು ವರ್ಷಕ್ಕೂ ಹೆಚ್ಚಿನ ಅವಧಿಯಿಂದ ಕೆಲಸ ಮಾಡುತ್ತಿರುವ ಅವರು ಹಲವು ಹುದ್ದೆಗಳಲ್ಲಿ ಜವಾಬ್ದಾರಿ ನಿಭಾಯಿಸಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಮುಂಬೈ ಧಾರಣೆ

ಶೇಂಗಾ

1-10-2021

ಜಾವಾ 70/80(ಹೊಸ)	10700-10750
ಜಾವಾ 80/90(ಹೊಸ)	10300-10350
ದಪ್ಪ ಮಧ್ಯಪ್ರದೇಶ(ಹೊಸ)	10600-10700
ದಪ್ಪ ಗುಜರಾತ್(ಹೊಸ)	9600-9700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1480 (1500)
ಒಂದು ವಾರದ ಡೆಲಿವರಿ	1475 (1495)
ಸೋಯಾ ಕಚ್ಚಾ	1290 (1295)
ಪಾಮ್ ವಾರದ ಡೆಲಿವರಿ	1220 (1218)
ಸೂರ್ಯಕಾಂತಿ ಎಣ್ಣೆ ಕಚ್ಚಾ	1315 (1315)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
46,300 (45,900)
ಬೆಳ್ಳಿ ಕೆ.ಜಿ
59,650 (58,200)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ರಿಲಯನ್ಸ್‌ನಿಂದ ಎಲೆಕ್ಟ್ರಾನಿಕ್ಸ್ ಹಬ್ಬ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಿಲಯನ್ಸ್ ಡಿಜಿಟಲ್ ಕಂಪನಿಯು 'ಎಲೆಕ್ಟ್ರಾನಿಕ್ಸ್ ಹಬ್ಬ' ಹೆಸರಿನಲ್ಲಿ ಮಾರಾಟ ಮೇಳವೊಂದನ್ನು ಆಯೋಜಿಸಿದೆ. ಇದು ಅಕ್ಟೋಬರ್ 3ರಿಂದ (ಭಾನುವಾರ) ರಿಲಯನ್ಸ್ ಡಿಜಿಟಲ್ ಮಳಿಗೆಗಳಲ್ಲಿ, ಮೈಜಿಯೊ ಸ್ಟೋರ್‌ಗಳಲ್ಲಿ ಹಾಗೂ www.reliancedigital.in ಆನ್‌ಲೈನ್ ಮಳಿಗೆಯಲ್ಲಿ ಶುರುವಾಗಲಿದೆ.

ಈ ಮಾರಾಟ ಮೇಳದಲ್ಲಿ, ಎಸ್‌ಬಿಐ ಕ್ರೆಡಿಟ್ ಕಾರ್ಡ್ ಮೂಲಕ ಹಣ ಪಾವತಿಸುವ ಗ್ರಾಹಕರಿಗೆ ತಕ್ಷಣ ಶೇಕಡ 10ರಷ್ಟು ವಿನಾಯಿತಿ (ಗರಿಷ್ಠ ₹ 2,000ವರೆಗೆ) ಸಿಗಲಿದೆ. ಈ ಕೊಡುಗೆಯು ಭೌತಿಕ ಮಳಿಗೆಗಳಲ್ಲಿ ಅಕ್ಟೋಬರ್ 3ರಿಂದ 12ರವರೆಗೆ, reliancedigital.inನಲ್ಲಿ ಅ. 3ರಿಂದ 10ರವರೆಗೆ ಲಭ್ಯವಿರಲಿದೆ ಎಂದು ಪ್ರಕಟಣೆ ತಿಳಿಸಿದೆ.

ಪೇಟಿಎಂ ಮೂಲಕ ಕನಿಷ್ಠ ₹ 4,999 ಪಾವತಿಸಿದರೆ, ಗರಿಷ್ಠ ₹ 1,000ವರೆಗೆ ಕ್ಯಾಶ್‌ಬ್ಯಾಕ್ ಸಿಗಲಿದೆ. ಟಿ.ವಿ., ರೆಫ್ರಿಜರೇಟರ್, ವಾಷಿಂಗ್ ಮೆಷಿನ್, ಲ್ಯಾಪ್‌ಟಾಪ್ ಮತ್ತು ಕೆಲವು ಗೃಹೋಪಯೋಗಿ ಉಪಕರಣಗಳ ಮೇಲೆ ವಿಶೇಷ ಕೊಡುಗೆಗಳು ಇವೆ.

ಚಿನ್ನದ ಬೆಲೆ ₹ 555 ಏರಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಚಿನ್ನದ ಬೆಲೆಯು ಶುಕ್ರವಾರ ಪ್ರತಿ 10 ಗ್ರಾಂಗೆ ₹ 555ರಷ್ಟು ಏರಿಕೆ ಕಂಡಿದೆ. 10 ಗ್ರಾಂ ಚಿನ್ನವು ₹ 45,472ರಂತೆ ಮಾರಾಟವಾಗಿದೆ.

ಕೆ.ಜಿ. ಬೆಳ್ಳಿಯ ಬೆಲೆಯು ₹ 975ರಷ್ಟು ಹೆಚ್ಚಳ ಆಗಿದ್ದು ₹ 58,400ಕ್ಕೆ ತಲುಪಿದೆ. ರೂಪಾಯಿ ಮೌಲ್ಯವು ಕುಸಿದಿರುವ ಕಾರಣ ಚಿನ್ನದ ಬೆಲೆಯಲ್ಲಿ ಈ ಏರಿಕೆ ಆಗಿದೆ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ಹೇಳಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ
ಸಕಲೇಶಪುರ
ಕೂಳೆ 600- 650
ನಡುಗೋಲು 700-750
ರಾಶಿ 800-850
ರಾಶಿ ಉತ್ತಮ 900-950
ಜರಡಿ 1000 -1050
ಹೆರಕಿದ್ದು 1200-1300
ಹಸಿರು ಸಾಧಾರಣ 800-850
ಹಸಿರು ಉತ್ತಮ 1000-1050
ಹಸಿರು ಅತಿ ಉತ್ತಮ 1300-1400
ಕಾಳು ಮೆಣಸು 400 - 405

ಅಡಿಕೆ
ಬಂಟ್ವಾಳ
ಕೋಕ 10000-22500
ಹೊಸತು 23500-40500
ಹಳತು 42500-50500
ಭದ್ರಾವತಿ
ರಾಶಿ 43599-48099
ಹೊನ್ನಾಳಿ
ರಾಶಿ 49101-49101
ಕಾರ್ಕಳ
ಹಳತು 46000-51500
ಕುಮಟಾ
ಹೊಸಚಾಲಿ 45019-47409
ಚಿಪ್ಪು 36599-42089
ಕೋಕ 23019-37189
ಫ್ಯಾಕ್ಟರಿ 15019-22519
ಕುಂದಾಪುರ
ಹೊಸಚಾಲಿ 36000-46000
ಮಂಗಳೂರು
ಕೋಕ 26000-30800
ಪುತ್ತೂರು
ಹೊಸತು 35500-50000
ಶಿವಮೊಗ್ಗ
ಬೆಟ್ಟೆ 46019-52899
ಗೊರಬಲು 17286-39049
ಹೊಸತು 45039-47039
ರಾಶಿ 43609-49989
ಸರಕು 48669-74199
ಸಿದ್ದಾಪುರ
ಬಿಳಿಗೋಟು 35108-43399
ಚಾಲಿ 46099-48299
ಕೋಕ 23399-39399
ಕೆಂಪುಗೋಟು 20099-35399
ರಾಶಿ 45099-47899
ತಟ್ಟಿಬೆಟ್ಟೆ 36899-45099
ಶಿರಸಿ
ಬೆಟ್ಟೆ 31099-47999
ಬಿಳಿಗೋಟು 25219-42811
ಚಾಲಿ 44311-48518
ರಾಶಿ 42810-50099
ತುಮಕೂರು
ರಾಶಿ 48100-50300
ರೇಷ್ಮೆಗೂಡು ಮಾರುಕಟ್ಟೆ
ರಾಮನಗರ
ಮಿಶ್ರ ತಳಿ: 233-467
ದ್ವಿತಳಿ; 278-556

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	13,850	13,000	13200	193.4ಸೆಂಟ್ಸ್
ಎಸಿ	6,325	4,800	5,250	
ಆರ್‌ಪಿ	6,150	6,100	6,250	ಲಂಡನ್
ಆರ್‌ಸಿ	3,560	3,500	3,625	2116 ಡಾಲರ್ಸ್

ಸುಖಿ ದಾಂಪತ್ಯಕ್ಕೆ ಸಿದ್ಧ ಮಾದರಿ ಇದೆಯೇ?

ಡಾ. ಬ್ರಹ್ಮಾನಂದ ನಾಯಕ

ದಂಪತಿ ಪರಸ್ಪರ ಕಚ್ಚಾಡುವುದೇಕೆ ಎಂಬುದು ಮದುವೆಯಾದವರಿಗೆ ಚೆನ್ನಾಗಿ ಅರ್ಥವಾಗುತ್ತದೆ. ಒಬ್ಬರನ್ನೊಬ್ಬರು ಎಷ್ಟು ಪ್ರೀತಿಸಿದರೂ, ಗೌರವಿಸಿದರೂ ಹೆಚ್ಚಿನ ಸಂದರ್ಭ ಪರಿಸ್ಥಿತಿ ಬಿಗಡಾಯಿಸಿಬಿಡುತ್ತದೆ. ಇದಕ್ಕೆ ಕಾರಣ ಪ್ರತಿಯೊಬ್ಬರ ಮನಸ್ಸಿನಲ್ಲೂ ವೈವಾಹಿಕ ಜೀವನದ ಬಗ್ಗೆ ವಿಭಿನ್ನವಾದ ಸಿದ್ಧ ಮಾದರಿ 'ಟೆಂಪ್ಲೇಟ್' ಕೂತಿರುವುದು.

'ಆಕೆ ನನಗಾಗಿ ಅಡುಗೆ ಮಾಡಬೇಕಿತ್ತು. ಇದು ಪ್ರೀತಿಯ ದ್ಯೋತಕ ಅಲ್ಲವೇ?' ಆತ ಪ್ರಶ್ನಿಸಿದರೆ, 'ಅವನು ಮನೆಗೆಲಸದಲ್ಲಿ ನನಗೆ ಸಹಾಯವನ್ನೇ ಮಾಡುವುದಿಲ್ಲ' ಎಂಬುದು ಆಕೆಯ ದೂರು.

***

'ಸಾರ್ವಜನಿಕವಾಗಿ ಓಡಾಡುವಾಗ ನನ್ನ ಕೈ ಹಿಡಿದುಕೊಂಡರೆ ಆತನಿಗೇನೂ ನಷ್ಟವಿಲ್ಲವಲ್ಲ' ಆಕೆ ಮೂತಿ ಉದ್ದ ಮಾಡಿದರೆ, 'ಈ ರೀತಿ ಬಹಿರಂಗವಾಗಿ ಪ್ರೀತಿಯ ಪ್ರದರ್ಶನ ನಾಚಿಕೆಗೇಡು. ಪ್ರೇಮವೆಂಬುದು ಮಲಗುವ ಮನೆಗೆ ಸೀಮಿತವಾಗಿರಬೇಕು' ಎಂಬುದು ಆತನ ಉವಾಚ.

***

'ಎಲ್ಲವನ್ನೂ ತನ್ನ ತಾಯಿಗೆ ಹೇಳುತ್ತಾನೆ. ನನ್ನ ಅತ್ತೆ ಪ್ರತಿಯೊಂದಕ್ಕೂ ಮಧ್ಯೆ ತಲೆ ಹಾಕಿದರೆ ನನಗೆ ಕಿರಿಕಿರಿ' ಎನ್ನುವುದು ಆಕೆಯ ದೂರಾದರೆ, 'ಅಮ್ಮನಿಗೆ ನನ್ನ ಮೇಲೆ ಎಷ್ಟು ಪ್ರೀತಿಯಿದೆ ಎಂದರೆ ಯಾವಾಗಲೂ ನನ್ನ ಒಳಿತನ್ನೇ ಬಯಸುತ್ತಾಳೆ' ಎಂಬುದು ಆತನ ಸಮರ್ಥನೆ.

***

ಇಂತಹ ಬಹಳಷ್ಟು ರೀತಿಯ ಬಿಕ್ಕಟ್ಟು ದಾಂಪತ್ಯದಲ್ಲಿ ಸಾಮಾನ್ಯ. ಅದರಲ್ಲೂ ಹೊಸದಾಗಿ ಮದುವೆಯಾದ ದಂಪತಿಯಲ್ಲಿ ಸಣ್ಣಪುಟ್ಟ ವಿಷಯಗಳಿಗೂ ಕಲಹ ಏಳುತ್ತದೆ. ಹೀಗಾಗಿ ಯಾವ ರೀತಿಯ 'ದಾಂಪತ್ಯದ ಮಾದರಿ' ಅಥವಾ ಸರಳವಾಗಿ 'ವೆಡ್ಡಿಂಗ್ ಟೆಂಪ್ಲೇಟ್' ನಿಮಗೆ ಬೇಕು ಎಂಬುದನ್ನು ನೀವೇ ಅರ್ಥ ಮಾಡಿಕೊಂಡು ರೂಪಿಸಿಕೊಳ್ಳಬೇಕು.

ಹೊಂದಾಣಿಕೆಗೆ ನಿಮ್ಮದೇ ಯೋಜನೆ ಇರಲಿ

ದಾಂಪತ್ಯ ಹೊಂದಾಣಿಕೆಯಿಂದ ನಡೆಯುವುದು ಹೇಗೆ ಎಂಬುದನ್ನು ನೀವೇ ಆಲೋಚಿಸಿಕೊಂಡು ಯೋಜನೆ ಹಾಕಿಕೊಳ್ಳಬೇಕು. ಉದಾಹರಣೆಗೆ ಪರಸ್ಪರ ಹೇಗೆ ನಡೆದುಕೊಳ್ಳಬೇಕು, ಪರಿಸ್ಥಿತಿಯನ್ನು ಹೇಗೆ ನಿಭಾಯಿಸಬೇಕು ಇತ್ಯಾದಿ. ಸರಳವಾಗಿ ಹೇಳುವುದಾದರೆ ಒಬ್ಬ ಒಳ್ಳೆಯ ಪತಿ ಮತ್ತು ಒಳ್ಳೆಯ ಪತ್ನಿಯ ವ್ಯಾಖ್ಯೆಯನ್ನು ನೀವು ಅರ್ಥ ಮಾಡಿಕೊಳ್ಳಬೇಕಾಗುತ್ತದೆ.

ಕೆಲವು ಮೂಲಭೂತ ನಿಯಮಗಳನ್ನು ಹಾಕಿಕೊಳ್ಳಬೇಕಾದರೆ ನಿಮ್ಮ ನಿರೀಕ್ಷೆಗಳನ್ನು ಅರ್ಥ ಮಾಡಿಕೊಂಡು ಮದುವೆಗೆ ಮುನ್ನವೇ ಒಂದಿಷ್ಟು ಚರ್ಚೆ ಮಾಡುವುದು ಸೂಕ್ತ. ವಿವಾಹಕ್ಕಿಂತ ಮೊದಲು ಇದು ಸಾಧ್ಯವಾಗದಿದ್ದರೂ ಪರವಾಗಿಲ್ಲ, ವೈವಾಹಿಕ ಜೀವನದ ಆರಂಭದಲ್ಲೇ ಇದಕ್ಕೆ ನಾಂದಿ ಹಾಕಿಕೊಳ್ಳಬಹುದು.

- ನಿಮ್ಮ ಪೋಷಕರಿಗೆ ಹೊಂದಿಕೆಯಾದದ್ದು ನಿಮಗೆ ಆಗದೇ ಇರಬಹುದು.
- ಸಂಗಾತಿ ನಿಮ್ಮ ಪೋಷಕರಂತೆ ನಡೆದುಕೊಳ್ಳಬೇಕು ಎಂದು ನಿರೀಕ್ಷೆ ಮಾಡಬೇಡಿ.
- ನಿಮಗೆ ಹೇಗೆ ಅನುಕೂಲವೋ ಹಾಗೆ ಯೋಜನೆ ರೂಪಿಸಿಕೊಳ್ಳಿ. ತಪ್ಪು– ಸರಿ ಎಂದು ಅರ್ಥೈಸುತ್ತ ಕೂರಬೇಡಿ.
- ಇನ್ನೊಬ್ಬರ ಅವಶ್ಯಕತೆಗೆ ಅನುಗುಣವಾಗಿ ಅನುಸರಿಸಿಕೊಂಡು ಹೋಗಿ.
- ಬಿಕ್ಕಟ್ಟು ಬಂದಾಗ ಸರಿಯಾದ ರೀತಿಯಲ್ಲಿ ಮನವರಿಕೆ ಮಾಡಿಕೊಡಿ.

ದಾಂಪತ್ಯದ ಮಾದರಿ ರೂಪಿಸುವುದು ಹೇಗೆ?

ಸಾಮಾನ್ಯವಾಗಿ ಚಿಕ್ಕವರಿದ್ದಾಗ ಮನೆಯಲ್ಲಿ, ಸಂಬಂಧಿಕರ ಕುಟುಂಬಗಳಲ್ಲಿ ಆಗುಹೋಗುಗಳನ್ನು ನೋಡಿ ನಮ್ಮ ಸುಪ್ತಾವಸ್ಥೆಯಲ್ಲಿ ದಾಂಪತ್ಯ ಜೀವನದ ಒಂದು ಮಾದರಿ ಮುದ್ರೆ ಒತ್ತಿರುತ್ತದೆ.ಮಆದರೆ ವಯಸ್ಕರಾದಾಗ ಪ್ರಜ್ಞಾಪೂರ್ವಕವಾಗಿ ನಮ್ಮ ಪಾಲಕರ ದಾಂಪತ್ಯವನ್ನು ಆದರ್ಶಪ್ರಾಯವೆಂದು ಒಪ್ಪಿಕೊಳ್ಳಲು ಸಿದ್ಧರಿರುವುದಿಲ್ಲ. ಆದರೆ ಸುಪ್ತಾವಸ್ಥೆಯಲ್ಲಿ ಅದು ಹಾಗೇ ಕೂತಿರುತ್ತದೆ. ಪರಿಸ್ಥಿತಿ ಎದುರಾದಾಗ ನಮ್ಮ ಪಾಲಕರ ಪ್ರತಿಕ್ರಿಯೆಗಳನ್ನೇ ನಾವು ಅನುಕರಿಸುತ್ತೇವೆ.

ನಿಮ್ಮ ತಂದೆ– ತಾಯಿ ಒಳ್ಳೆಯ ಮಾದರಿ ದಾಂಪತ್ಯ ನಡೆಸಿದ್ದಾರೆ, ಅದೇ ನಿಯಮಗಳನ್ನು ನೀವೂ ಅನುಸರಿಸಬೇಕು ಎಂದುಕೊಂಡರೆ ಕೆಲವೊಮ್ಮೆ ಅದು ಸೂಕ್ತ ಎನಿಸುವುದಿಲ್ಲ. ಏಕೆಂದರೆ ವ್ಯಕ್ತಿ, ಸಂದರ್ಭ ಎರಡೂ ವಿಭಿನ್ನವಾಗಿರಬಹುದು.

ದಾಂಪತ್ಯದ ಮಾದರಿ ಗಂಡು ಮತ್ತು ಹೆಣ್ಣು ಇಬ್ಬರದ್ದೂ ಒಂದೇ ಆಗಿದ್ದರೆ, ಆರಾಮವಾಗಿ ನಡೆದುಕೊಂಡು ಹೋಗುತ್ತದೆ. ಸಾಮಾನ್ಯವಾಗಿ ಹಿರಿಯರು ಕೂತು ಮದುವೆ ನಿಶ್ಚಯಿಸುವಾಗ ಒಂದೇ ರೀತಿಯ ಹಿನ್ನೆಲೆಯನ್ನು ಹುಡುಕುವುದು ಇದೇ ಕಾರಣಕ್ಕೆ. ಇಬ್ಬರದ್ದೂ ವಿಭಿನ್ನ ಮನೋಭಾವ ಇದ್ದರೆ ಸಣ್ಣಪುಟ್ಟ ಹೊಂದಾಣಿಕೆ ಮಾಡಿಕೊಳ್ಳಬೇಕಾಗುತ್ತದೆ. ಪರಸ್ಪರ ಮಾತುಕತೆ, ಅಭಿಪ್ರಾಯ ಹೇಳಿಕೊಂಡು ಅರ್ಥ ಮಾಡಿಕೊಳ್ಳುವುದರಿಂದ ಈ ರೀತಿಯ ಮಾದರಿ ದಾಂಪತ್ಯಕ್ಕೆ ನಾಂದಿ ಹಾಡಬಹುದು.

ಮೂಲಭೂತ ಪ್ರಶ್ನೆಗಳು

- ಪೋಷಕರ ಜೊತೆ ಇರುವುದೇ ಅಥವಾ ಬೇರೆ ಮನೆ ಮಾಡುವುದೇ?
- ಮನೆಗೆಲಸ ಯಾರು ಮಾಡುವುದು ಹಾಗೂ ಸಂಪಾದನೆ ಯಾರು ಮಾಡುವುದು?
- ಕೆಲಸವನ್ನು ಹೇಗೆ ಹಂಚಿಕೊಳ್ಳುವುದು

ಉದ್ಯೋಗಸ್ಥ ದಂಪತಿಯಾಗಿದ್ದರೆ...

- ಮಗುವಾದ ನಂತರ ಅಥವಾ ಸಂದರ್ಭ ಬಂದಾಗ ಯಾರ ಉದ್ಯೋಗಕ್ಕೆ ಹೆಚ್ಚು ಮಹತ್ವ ನೀಡಬೇಕು?
- ಭವಿಷ್ಯದಲ್ಲಿ ನಿಮ್ಮ ವೃತ್ತಿಯ ಗುರಿಯೇನು?
- ತೀರಾ ಮಹತ್ವಾಕಾಂಕ್ಷಿಯೇ?
- ಉಳಿತಾಯದ ಬಗ್ಗೆ ನಿಮ್ಮ ಯೋಜನೆಯೇನು?
- ಎಲ್ಲಿ ಮನೆ ಮಾಡುವುದು?
- ಎಂತಹ ವಾಹನ ಖರೀದಿಸುವುದು?
- ಭವಿಷ್ಯದಲ್ಲಿ ಹಣಕಾಸು ನಿರ್ವಹಣೆ ಹೇಗೆ?
- ಕುಟುಂಬದ ಇತರ ಸದಸ್ಯರ ಜೊತೆ ಹೇಗಿರುವುದು?
- ಪೋಷಕರನ್ನು ನೋಡಿಕೊಳ್ಳುವುದು ಹೇಗೆ?
- ಬಿಕ್ಕಟ್ಟು, ವೈಮನಸ್ಯ ಬಂದಾಗ ಹೇಗೆ ನಿಭಾಯಿಸುತ್ತೀರಾ? ಜಗಳವಾಡುತ್ತೀರಾ ಅಥವಾ ಮೌನವಹಿಸುತ್ತೀರಾ? ಕುಳಿತು ಮಾತನಾಡಿ ಪರಿಹರಿಸಿಕೊಳ್ಳುತ್ತೀರಾ?

ನಿಮ್ಮ ದಾಂಪತ್ಯ ಜೀವನದ ಪ್ರಾಥಮಿಕ ಮಾದರಿ ವಿಭಿನ್ನವಾಗಿರಬಹುದು. ಇದಕ್ಕೆ ನಿಮ್ಮ ವಿಭಿನ್ನ ಹಿನ್ನಲೆ ಕಾರಣ. ಹೀಗಾಗಿ ಹೊಂದಾಣಿಕೆಗೆ ಪ್ರಯತ್ನಿಸಿದರೆ ಎಲ್ಲವೂ ಸರಿ ಹೋಗುತ್ತದೆ ಎಂಬ ಆಶಾಭಾವನೆ ಮುಖ್ಯ.

ದಿನ ಕಳೆದಂತೆ ಅಂತಿಮ ಮಾದರಿಯನ್ನು ಸಿದ್ಧಪಡಿಸಬಹುದು. ಆಗೊಮ್ಮೆ, ಈಗೊಮ್ಮೆ ತಪ್ಪುಗಳಾದರೂ ಒಬ್ಬರನ್ನೊಬ್ಬರು ಆಕ್ಷೇಪಿಸದೆ, ಒಪ್ಪಿಕೊಂಡು, ಪರಸ್ಪರ ಗೌರವಿಸುವುದನ್ನು ಕಲಿತರೆ ದಾಂಪತ್ಯ ಜೀವನದ ಸವಿಯನ್ನು ಉಣ್ಣಬಹುದು.

ಹಬ್ಬದ ಸಡಗರಕ್ಕೆ ಖಾದಿ ಸಿಲ್ಕ್ ಸೀರೆ, ಬೆಳ್ಳಿಯ ಒಡವೆ

ಸುಕೃತ ಎಸ್.

ಉದ್ಯೋಗಸ್ಥರಿಗೆ, ಅವರಲ್ಲೂ ಮಿಲೇನಿಯಲ್ ಯುವತಿಯರಿಗೆ ಸಾಂಪ್ರದಾಯಿಕ ಉಡುಪುಗಳನ್ನು ಧರಿಸಲು ಹಬ್ಬ, ಮದುವೆಯಂತಹ ವಿಶೇಷ ದಿನಗಳೇ ಬರಬೇಕು. ಜರಿಯಂಚು, ಕುಚ್ಚು ನೇಯ್ದ ಸೆರಗಿನ ರೇಷ್ಮೆ ಸೀರೆಯ ಜೊತೆ ಡಿಸೈನರ್ ರವಿಕೆ ತೊಟ್ಟು, ಮ್ಯಾಚಿಂಗ್ ಆಭರಣಗಳನ್ನು ಧರಿಸಿ ಸಂಭ್ರಮಿಸಲು ಈ ಹಬ್ಬಗಳ ಸಾಲು ಸಂದರ್ಭ ಒದಗಿಸಿದೆ. ನವರಾತ್ರಿಯಲ್ಲಂತೂ ಒಂಬತ್ತು ದಿನಗಳ ಕಾಲ ಒಂಬತ್ತು ವಿಧದ ರಂಗಿನ ಸೀರೆಗಳನ್ನುಡುವ ಸಡಗರ.

ಬೇಡಿಕೆಗೆ ತಕ್ಕಂತೆ ಮಾರುಕಟ್ಟೆಯಲ್ಲಿ ಬನಾರಸ್, ಕಾಂಜೀವರಂ, ಮೈಸೂರು ಸಿಲ್ಕ್, ಪಟೋಲ, ಮಹೇಶ್ವರಿ, ಪೈಠಣಿ, ಪೋಚಂಪಲ್ಲಿ, ಜಾಮ್ದಾನಿ, ಕಥಾನ್, ಅರ್ಗಂಝಾ, ಟಸ್ಸಾರ್, ಚಂದೇರಿ, ಬಾಲುಶಾರಿ, ಧರ್ಮಾವರಂ, ಗದ್ವಾಲ್, ಭಾಗಲ್ಪುರಿ, ಉಪ್ಪಡ, ಮಟ್ಕಾ.. ಹೀಗೇ ತರಾವರಿ ರೇಷ್ಮೆ ಸೀರೆಗಳು, ಡಿಸೈನರ್ ಸೀರೆಗಳು ಲಭ್ಯ. ಇವುಗಳ ಜೊತೆಗೆ ಕೆಲವು ವರ್ಷಗಳಿಂದೀಚೆಗೆ ಖಾದಿ ಸೀರೆಗಳ ಮೇಲೆ ಮಹಿಳೆಯರ ಮೋಹ ಹೆಚ್ಚುತ್ತಿದೆ. ಖಾದಿ ಸಿಲ್ಕ್ ಸೀರೆ, ಖಾದಿ ಕಾಟನ್, ಖಾದಿ ಪ್ರಿಂಟೆಡ್ ಸಿಲ್ಕ್ ಸೀರೆ, ಖಾದಿ ಪಟ್ಟು.. ಹೀಗೆ ಗರಿಗರಿಯಾದ ಖಾದಿ ರೇಷ್ಮೆ ಸೀರೆಗಳಲ್ಲದೇ, ಸಾಫ್ಟ್ ಸೀರೆಗಳೂ ಗಮನ ಸೆಳೆಯುತ್ತಿವೆ.

ಬೆಲೆ ತುಸು ಹೆಚ್ಚಿಗೆ ಎನ್ನಿಸಿದರೂ, ಸೀರೆ ಉಟ್ಟಾಗ ಇದು ಕೊಡುವ ರಾಯಲ್ ಲುಕ್‌ಗೆ ಎಲ್ಲರೂ ಮನಸೋತಿದ್ದಾರೆ. ಸೀರೆಗಳು ಹಗುರ ಇರುವುದರಿಂದ ಉಡಲು ಇಷ್ಟವಾಗುತ್ತದೆ. ಕಸೂತಿ ಸೀರೆಗಳನ್ನು ಕಚೇರಿಗೂ, ಮುಖ್ಯವಾದ ಮೀಟಿಂಗ್‌ಗೂ ಉಡಬಹುದು.

ಖಾದಿ ಸೀರೆ ಉಡುವ ರೀತಿಯಿಂದಲೂ ನಮ್ಮ ಲುಕ್ ಅನ್ನು ಅಂದವಾಗಿಸಿಕೊಳ್ಳಬಹುದು.

- ಸೀರೆಯ ಸೆರಗನ್ನು ಕುತ್ತಿಗೆಯ ಸುತ್ತ ಸುತ್ತಿಕೊಳ್ಳಬಹುದು. ಇದು ಸೀರೆ ಜೊತೆಗೆ ಸ್ಕಾರ್ಫ್ ಹಾಕಿಕೊಂಡ ಅನುಭವ ಕೊಡುತ್ತದೆ.
- ಸೆರಗಿಗೆ ನೆರಿಗೆ ಮಾಡದೇ ಒಂದೆಳೆಯಾಗಿ ಬಿಟ್ಟುಕೊಂಡರೆ, ಚಂದದ ಲುಕ್ ಸಿಗುತ್ತದೆ.
- ಬಲ ತೋಳಿನ ಮೇಲಿಂದ ಸೆರಗು ಹಾಕಿಕೊಂಡರೂ ಖಾದಿ ಸೀರೆಗಳು ಹೆಚ್ಚು ರಿಚ್ ಆಗಿ ಕಾಣುತ್ತದೆ.
- ಬೆಂಗಾಲಿ ಶೈಲಿಯಲ್ಲೂ ಕೂಡ ಖಾದಿ ಸೀರೆಗಳನ್ನು ಉಡಬಹುದು.

ಯಾವ ರೀತಿಯ ಬ್ಲೌಸ್ ಧರಿಸಬಹುದು?

ಖಾದಿ ಸೀರೆಯ ಬಣ್ಣಕ್ಕೆ ಕಾಂಟ್ರಾಸ್ಟ್ ಇರುವಂಥ ಬಣ್ಣದ ಬ್ಲೌಸ್ ಧರಿಸಬಹುದು. ಜೊತೆಗೆ, ಖಾದಿ ಸೀರೆಗಳಿಗೆ ಹೆಚ್ಚಿನ ಬಾರಿ ಸಾದಾ, ಒಂದೇ ಬಣ್ಣ ಇರುವ ಬ್ಲೌಸ್‌ಗಳನ್ನು ಹಾಕಿದರೆ ಅಂದ ಹೆಚ್ಚುತ್ತದೆ. ಖಾದಿ ಕಾಟನ್ ಸೀರೆಗೆ ಹೈ ನೆಕ್ ಇರುವಂಥದ್ದು, ಮುಕ್ಕಾಲು ಉದ್ದದ ತೋಳಿನ ಬ್ಲೌಸ್ ಹೊಂದುತ್ತದೆ.

ಖಾದಿ ಸಿಲ್ಕ್ ಮತ್ತು ಪಟ್ಟು ಸೀರೆಗೆ ಕುಂದನ್ ವರ್ಕ್ ಇರುವ, ಬಂಗಾರದ ಜರಿ ಅಂಚಿನದು, ಹರಳುಗಳ ಕುಸುರಿ ಇರುವ ಬ್ಲೌಸ್‌ಗಳು ಹೆಚ್ಚು ಸೂಕ್ತ. ಮಣಿ ಕಟ್ಟಿಗೆ ಬರುವ ತೋಳಿನ ಉದ್ದದ ಬ್ಲೌಸ್‌ಗಳೂ ಸೂಕ್ತವಾಗುತ್ತದೆ.

ಬನಾರಸಿ ಖಾದಿ ಸೀರೆಗೆ ಬೆಳ್ಳಿ ಬಣ್ಣದ ಕಸೂತಿ ಇರುವ ಬ್ಲೌಸ್ ಹೊಂದುತ್ತದೆ.

ಬೆಳ್ಳಿ ಒಡವೆಗಳ ಮಿನುಗು

ಖಾದಿ ಸೀರೆಗಳಿಗೆ ಕಡಿಮೆ ಒಡವೆ ಧರಿಸಿದಷ್ಟೂ ಉಟ್ಟವರ ಅಂದ ಹೆಚ್ಚುತ್ತದೆ. ದೊಡ್ಡದಾದ ಝುಮ್ಕಾ, ಷಾಂಡೆಲಿಯರ್ ಕಿವಿಯೋಲೆ ಹಾಕಿಕೊಂಡರೆ ಕತ್ತಿಗೆ ಧರಿಸುವ ಅವಶ್ಯಕತೆಯಿಲ್ಲ. ಬೆಳ್ಳಿಯ ಒಡವೆಗಳು, ಬ್ಲ್ಯಾಕ್ ಮೆಟಲ್, ಟೆರ್ರಾಕೋಟಾದಿಂದ ಮಾಡಿದ ಒಡವೆಗಳು ಹೆಚ್ಚು ಹೊಂದುತ್ತವೆ. ಸೆಮಿ ಪ್ರೆಶಿಯಸ್ ಜೇಡ್, ಅಗೇಟ್, ಟೋಪಾಜ್ ಮಣಿಗಳ ಸರವನ್ನು ಕೂಡ ಹಾಕಿಕೊಳ್ಳಬಹುದು. ಕೈಗೆ ಬೆಳ್ಳಿಯ ಕಡಗ ಧರಿಸಬಹುದು.

ಹರಳಿನ ಕ್ಲಚ್

ಅಲ್ಟ್ರಾ ಫ್ಯಾಷನ್ ಮಾಡುವವರು ಉದ್ದನೆಯ ಕುಂದನ್ ಬಿಂದಿ ಧರಿಸಬಹುದು. ಈಗಂತೂ ದೊಡ್ಡ ದೊಡ್ಡ ಬಿಂದಿಗಳು ಟ್ರೆಂಡ್ ಎನಿಸಿವೆ.

ಹಬ್ಬದ ಪೂಜೆಗೆ ಹೋಗಬೇಕಾದರೆ ಕೈಯಲ್ಲೊಂದು ಹರಳಿನ ವರ್ಕ್ ಮಾಡಿದ ಕ್ಲಚ್ ಹಿಡಿದುಕೊಳ್ಳಬಹುದು.

ನವರಾತ್ರಿ ನೈವೇದ್ಯಕ್ಕೆ ಬೆಲ್ಲದ ದೋಸೆ, ಎರಿಯಪ್ಪ

ನಳಪಾಕ

ವೇದಾವತಿ ಎಚ್.ಎಸ್.

ಸಿಹಿ ಬೂಂದಿಕಾಳು ಮತ್ತು ಬೂಂದಿ ಲಡ್ಡು

ಬೇಕಾಗುವ ಸಾಮಗ್ರಿಗಳು: ಕಡಲೆಹಿಟ್ಟು – 2 ಕಪ್, ಉಪ್ಪು – ಅರ್ಧ ಟೀ ಚಮಚ, ನೀರು – ಒಂದೂವರೆ ಕಪ್, ಎಣ್ಣೆ – 1 ಟೇಬಲ್ ಚಮಚ (ಕಲೆಸಿದ ಹಿಟ್ಟಿಗೆ ಹಾಕಲು), ಗೋಡಂಬಿ – 20, ದ್ರಾಕ್ಷಿ – 30, ಲವಂಗ – 10, ಸಕ್ಕರೆ – 1 ಕಪ್, ನೀರು – ಮುಕ್ಕಾಲು ಕಪ್, ಕೇಸರಿದಳ – 10 ರಿಂದ 15, ಏಲಕ್ಕಿ ಪುಡಿ – ಅರ್ಧ ಟೀ ಚಮಚ, ಬೂಂದಿ ಕಾಳು – 2 ಕಪ್, ಪಟಿಕ ಚಿಟಿಕೆ, ಕರಿಯಲು ಎಣ್ಣೆ.

ತಯಾರಿಸುವ ವಿಧಾನ: ಕಡಲೆಹಿಟ್ಟು ಮತ್ತು ಉಪ್ಪನ್ನು ಒಟ್ಟಿಗೆ ಹಾಕಿ ಜರಡಿ ಹಿಡಿಯಿರಿ. ಹಿಟ್ಟಿಗೆ ಒಂದೂವರೆ ಕಪ್ ನೀರನ್ನು ಹಾಕಿ ಮಿಶ್ರಣ ಮಾಡಿ. ಅದಕ್ಕೆ 1 ಟೇಬಲ್ ಚಮಚ ಎಣ್ಣೆಯನ್ನು ಹಾಕಿ ಚೆನ್ನಾಗಿ ಮಿಶ್ರಣ ಮಾಡಿ. ಹಿಟ್ಟು ದೋಸೆ ಹಿಟ್ಟಿನ ಹದವಿರಲಿ. ಎಣ್ಣೆಯನ್ನು ಬಿಸಿ ಮಾಡಿ. ರಂಧ್ರವಿರುವ ಜಾಲರಿ ಸೌಟಿಗೆ ಹಿಟ್ಟನ್ನು ಹಾಕಿ ಎಣ್ಣೆಗೆ ಬಿಡಿ. ಮಧ್ಯಮ ಉರಿಯಲ್ಲಿ ಕರಿಯಿರಿ. ಕಾಳು ಗರಿಗರಿಯಾಗಿ ಬೆಂದ ನಂತರ ಎಣ್ಣೆಯಿಂದ ತೆಗೆಯಿರಿ.

ಬೂಂದಿ ಲಡ್ಡು ಮತ್ತು ಸಿಹಿ ಬೂಂದಿ ತಯಾರಿಸುವ ವಿಧಾನ: ಬಾಣಲೆಗೆ 1 ಟೇಬಲ್ ಚಮಚ ತುಪ್ಪ ಹಾಕಿ ಬಿಸಿ ಮಾಡಿ. ಗೋಡಂಬಿ, ದ್ರಾಕ್ಷಿ, ಲವಂಗವನ್ನು ಹಾಕಿ ಹುರಿದುಕೊಳ್ಳಿ. ಸಕ್ಕರೆಯನ್ನು ಬಾಣಲೆಗೆ ಹಾಕಿ ನೀರನ್ನು ಹಾಕಿ ಕುದಿಸಿ. ಚಿಟಿಕೆ ಪಟಿಕ, ಕೇಸರಿದಳ, ಏಲಕ್ಕಿಪುಡಿಯನ್ನು ಸೇರಿಸಿ ಮಿಶ್ರಣ ಮಾಡಿ. ಸಕ್ಕರೆ ಒಂದೆಳೆ ಪಾಕ ಬಂದಾಗ ಒಲೆಯನ್ನು ಆರಿಸಿ. ಹುರಿದ ಗೋಡಂಬಿ, ದ್ರಾಕ್ಷಿ, ಲವಂಗ, ಬೂಂದಿಕಾಳನ್ನು ಹಾಕಿ ಮಿಶ್ರಣ ಮಾಡಿ. ಬೂಂದಿಕಾಳು ಸಕ್ಕರೆಯನ್ನು ಹೀರಿಕೊಳ್ಳುವವರೆಗೆ ಬಿಡಿ. ಅರ್ಧ ಭಾಗದಷ್ಟು ಬೂಂದಿ ಕಾಳನ್ನು ತೆಗೆದು ತಟ್ಟೆಗೆ ಆರಲು ಹಾಕಿ. ಉಳಿದ ಅರ್ಧ ಭಾಗದ ಬೂಂದಿ ಕಾಳನ್ನು ಬಿಸಿ ಇರುವಾಗಲೇ ಉಂಡೆಯನ್ನು ಕಟ್ಟಿಕೊಳ್ಳಿ. ರುಚಿಕರವಾದ ಬೂಂದಿ ಕಾಳು ಮತ್ತು ಬೂಂದಿ ಲಡ್ಡು ಸವಿಯಲು ಸಿದ್ಧ.

ಪ್ರಜಾವಾಣಿ ನೋಡಿಯೊ

ರೆಸಿಪಿ ವಿಡಿಯೊಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಬೆಲ್ಲದ ದೋಸೆ

ಬೇಕಾಗುವ ಸಾಮಗ್ರಿಗಳು: ಗೋಧಿಹಿಟ್ಟು - 2 ಕಪ್, ಅಕ್ಕಿಹಿಟ್ಟು - 1 ಕಪ್, ಬೆಲ್ಲದ ಪುಡಿ – ಮುಕ್ಕಾಲು ಕಪ್, ತೆಂಗಿನತುರಿ – ಕಾಲು ಕಪ್, ಏಲಕ್ಕಿಪುಡಿ – 1 ಟೀ ಚಮಚ, ಶುಂಠಿ ಪುಡಿ – 1 ಟೀ ಚಮಚ, ರುಚಿಗೆ ತಕ್ಕಷ್ಟು ಉಪ್ಪು, ಅಡುಗೆ ಸೋಡ – ಕಾಲು ಟೀ ಚಮಚ, ನೀರು ಮೂರೂವರೆ ಕಪ್ (ಹಿಟ್ಟು ದೋಸೆ ಹಿಟ್ಟಿನ ಹದವಿರಲಿ), ಕಾಯಿಸಲು ತುಪ್ಪ ಅಥವಾ ಎಣ್ಣೆ

ತಯಾರಿಸುವ ವಿಧಾನ: ಬೌಲ್‌ಗೆ ಗೋಧಿಹಿಟ್ಟು, ಅಕ್ಕಿಹಿಟ್ಟು, ಬೆಲ್ಲ, ತೆಂಗಿನತುರಿ, ಏಲಕ್ಕಿಪುಡಿ, ಶುಂಠಿಪುಡಿ, ಉಪ್ಪು, ಅಡುಗೆ ಸೋಡ ಹಾಕಿ ಮಿಶ್ರಣ ಮಾಡಿ. ನಂತರ ನೀರನ್ನು ಹಾಕಿ ದೋಸೆ ಹಿಟ್ಟಿನ ಹದಕ್ಕೆ ಕಲೆಸಿಕೊಳ್ಳಿ. ತವಾವನ್ನು ಬಿಸಿ ಮಾಡಿಕೊಂಡು ಹಿಟ್ಟನ್ನು ತವಕ್ಕೆ ತೆಳುವಾಗಿ ಹರಡಿ. ದೋಸೆ ಮೇಲೆ ತುಪ್ಪ ಅಥವಾ ಎಣ್ಣೆ ಹಾಕಿ. ಮಧ್ಯಮ ಉರಿಯಲ್ಲಿ ದೋಸೆ ಕೆಂಬಣ್ಣ ಬರುವವರೆಗೆ ಬೇಯಿಸಿ. ಗರಿಗರಿಯಾದ, ರುಚಿಕರವಾದ ಬೆಲ್ಲದ ದೋಸೆ ದೇವರ ನೈವೇದ್ಯಕ್ಕೆ ರೆಡಿ. ಇದು ತುಪ್ಪ ಅಥವಾ ಚಟ್ನಿಯೊಂದಿಗೆ ಸವಿಯಲು ರುಚಿಯಾಗಿರುತ್ತದೆ.

ಎರಿಯಪ್ಪ

ಬೇಕಾಗುವ ಸಾಮಗ್ರಿಗಳು: ಅಕ್ಕಿ – 1 ಕಪ್, ಕಾಯಿತುರಿ – 1/2 ಕಪ್, ಬೆಲ್ಲದ ಪುಡಿ – 1 ಕಪ್, ಉಪ್ಪು – ರುಚಿಗೆ, ಗಸಗಸೆ – 1 ಟೀ ಚಮಚ, ಏಲಕ್ಕಿ ಪುಡಿ – 1/2 ಟೀ ಚಮಚ, ನೀರು – 1/2 ಕಪ್, ಕರಿಯಲು ಎಣ್ಣೆ

ತಯಾರಿಸುವ ವಿಧಾನ: ಅಕ್ಕಿಯನ್ನು 4-5 ಗಂಟೆಗಳ ಕಾಲ ನೆನೆ ಹಾಕಿ. ನಂತರ ಅಕ್ಕಿಯ ಜೊತೆಗೆ ತೆಂಗಿನತುರಿ, ಬೆಲ್ಲದ ಪುಡಿ, ಉಪ್ಪು ಮತ್ತು ಅರ್ಧ ಕಪ್ ನೀರನ್ನು ಸೇರಿಸಿ ನುಣ್ಣಗೆ ರುಬ್ಬಿಕೊಳ್ಳಿ. ರುಬ್ಬಿದ ಮಿಶ್ರಣ ದೋಸೆಹಿಟ್ಟಿನ ಹದಕ್ಕೆ ಇರಲಿ. ಹಿಟ್ಟಿಗೆ ಗಸಗಸೆ ಮತ್ತು ಏಲಕ್ಕಿ ಪುಡಿಯನ್ನು ಸೇರಿಸಿ ಮಿಶ್ರಣ ಮಾಡಿ. ಬಾಣಲೆಯಲ್ಲಿ ಎಣ್ಣೆಯನ್ನು ಬಿಸಿ ಮಾಡಿಕೊಳ್ಳಿ. ಕಾದ ಎಣ್ಣೆಗೆ ಚಿಕ್ಕ ಸೌಟಿನಲ್ಲಿ 1 ಸೌಟು ಹಿಟ್ಟನ್ನು ಹಾಕಿ.

ಹಿಟ್ಟು ಕಜ್ಜಾಯದ ರೀತಿಯಲ್ಲಿ ಎಣ್ಣೆಯಿಂದ ಮೇಲಕ್ಕೆ ತೇಲಿಕೊಂಡು ಬರುತ್ತದೆ. ಎರಡೂ ಬದಿಯನ್ನೂ ಕೆಂಬಣ್ಣ ಬರುವಂತೆ ಬೇಯಿಸಿ. ರುಚಿಕರವಾದ ಎರಿಯಪ್ಪ ಸವಿಯಲು ಸಿದ್ದ.

(ಲೇಖಕಿ: 'ಮನೆ ಅಡುಗೆ ವಿಥ್ ವೇದಾ' ಯೂಟ್ಯೂಬ್ ಚಾನೆಲ್ ನಿರ್ವಾಹಕಿ)

ಋತುಬಂಧದ ನಂತರವೂ ಸ್ರಾವ: ಕ್ಯಾನ್ಸರ್ ಇರಬಹುದೇ?

ಸ್ಪಂದನ

ಡಾ. ವೀಣಾ ಎಸ್. ಭಟ್

- **56 ವರ್ಷ. ಮುಟ್ಟು ನಿಂತು 4 ವರ್ಷವಾಗಿತ್ತು. ಈಗ ಮತ್ತೆ ಮುಟ್ಟು ಕಾಣಿಸಿಕೊಂಡಿದೆ. ನಾನು ಮಂಡಿನೋವೆಂದು ಕೆಲವು ನೋವಿನ ಮಾತ್ರೆ ತೆಗೆದುಕೊಂಡಿದ್ದೆ. ಅದರಿಂದ ಈ ರೀತಿ ಆಗಿರಬಹುದೇ? 10 ವರ್ಷದಿಂದ ಡಯಾಬಿಟಿಸ್‌ಗೆ ಮಾತ್ರೆ ತೆಗೆದುಕೊಳ್ಳುತ್ತಿರುವೆ. ಎಲ್ಲರೂ ಕ್ಯಾನ್ಸರ್ ಎಂದು ಹೆದರಿಸುತ್ತಿದ್ದಾರೆ. ಭಯವಾಗುತ್ತದೆ.**

ರೂಪ, ಮೈಸೂರು

ರೂಪಾರವರೇ, ಮುಟ್ಟುನಿಂತು ಒಂದು ವರ್ಷಕ್ಕೂ ಹೆಚ್ಚಿನ ಸಮಯದ ನಂತರ ಮತ್ತೆ ಮುಟ್ಟಿನ ಸ್ರಾವ ಆರಂಭವಾದರೆ ಅದನ್ನು ಋತುಬಂಧದ ನಂತರದ ರಕ್ತಸ್ರಾವ (ಪೋಸ್ಟ್ ಮೇನೋಪಾಸಲ್ ಬ್ಲೀಡಿಂಗ್) ಎನ್ನುತ್ತೇವೆ. ಇಂತಹ ಸ್ರಾವ ನಿರ್ಲಕ್ಷಿಸುವುದು ಬೇಡ. ತಜ್ಞವೈದ್ಯರ ಹತ್ತಿರ ತಪಾಸಣೆ ಮಾಡಿಸಿಕೊಳ್ಳಲೇ ಬೇಕು. ಯಾಕೆಂದರೆ 60 ವರ್ಷದ ನಂತರ ಪೋಸ್ಟ್ ಮೇನೋಪಾಸಲ್ ಬ್ಲೀಡಿಂಗ್ ಆದವರಲ್ಲಿ ಶೇ 13-15ರಷ್ಟು ಮಹಿಳೆಯರಿಗೆ ಗರ್ಭಾಶಯದ ಒಳಾವರಣದ ಕ್ಯಾನ್ಸರ್ ಸಂಭವ ಉಂಟಾಗಬಹುದು. ಹಾರ್ಮೋನು ಪುನರ್ಭರಿಸುವ ಚಿಕಿತ್ಸೆಯನ್ನು ಋತುಬಂಧದ ನಂತರ ತೊಂದರೆಗಳಿಗಾಗಿ ತೆಗೆದುಕೊಂಡವರಲ್ಲಿ, ಅನುವಂಶಿಯವಾಗಿ ಪಾಲಿಪೋಸಿಸ್ ಇರುವವರಲ್ಲಿ, ಹೀಗೆ ಕ್ಯಾನ್ಸರ್ ಬರುವ ಸಂಭವ ಹೆಚ್ಚು. ಇದಲ್ಲದೇ ಇನ್ನಿತರ ಕಾರಣಗಳಿಂದಲೂ ಮುಟ್ಟಿನ ನಂತರ ರಕ್ತಸ್ರಾವ ಆಗಬಹುದು. ಉದಾಹರಣೆಗೆ ಯೋನಿಮಾರ್ಗದಲ್ಲಿ ಗಾಯ, ಉರಿಯೂತ, ಗರ್ಭಕಂಠದಲ್ಲಿ ಹುಣ್ಣು, ಗರ್ಭಕೋಶ ಜಾರುವಿಕೆಯಿಂದ ಹುಣ್ಣಾಗುವಿಕೆ, ಗರ್ಭಕೋಶದ ಒಳಪದರ ಬೆಳೆಯುವುದು ಹಾಗೂ ಒಳಪದರಕ್ಕೆ ಸೋಂಕು ಉಂಟಾಗುವುದು, ಏನೂ ನಿರ್ದಿಷ್ಟ ಕಾರಣಗಳಿಲ್ಲದ ಕೇವಲ ಹಾರ್ಮೋನು ಅಸಮತೋಲನದಿಂದಲೂ ಮುಟ್ಟಿನ ನಂತರ ರಕ್ತಸ್ರಾವವಾಗಬಹುದು.

ಗರ್ಭನಾಳ ಹಾಗೂ ಅಂಡಾಶಯದ ಹಾರ್ಮೋನು ಉತ್ಪಾದಿಸುವ ಗಡ್ಡೆಗಳಿಂದಲೂ, ಏರು ರಕ್ತದೊತ್ತಡ ಹಾಗೂ ರಕ್ತಹೆಪ್ಪುಗಟ್ಟುವ ತೊಂದರೆಗಳಿಂದಲೂ ಮುಟ್ಟುನಿಂತ ನಂತರ ರಕ್ತಸ್ರಾವವಾಗಬಹುದು. ಒಟ್ಟಾರೆ ಶೇ 30ಕ್ಕೂ ಹೆಚ್ಚಿನ ಸಂದರ್ಭದಲ್ಲಿ ಜನನಾಂಗವ್ಯೂಹದ ಕ್ಯಾನ್ಸರ್ ಇರುವ ಸಂದರ್ಭದಲ್ಲಿ ಪೋಸ್ಟ್ ಮೇನೋಪಾಸಲ್ ಬ್ಲೀಡಿಂಗ್ ಇರುತ್ತದೆ. ತಜ್ಞವೈದ್ಯರಿಂದ ಸೂಕ್ತ ತಪಾಸಣೆ ಹಾಗೂ ರಕ್ತ ಪರೀಕ್ಷೆಗಳು, ಅಗತ್ಯವಿದ್ದಲ್ಲಿ ಸಿ.ಟಿ ಸ್ಕ್ಯಾನಿಂಗ್ ಮಾಡಿಸಬೇಕಾಗಬಹುದು. ಸಂಕೋಚ ಹಾಗೂ ಮುಚ್ಚುಮರೆ ಮಾಡುತ್ತಾ ಈ ವಿಷಯದಲ್ಲಿ ಹಿಂಜರಿಯದೆ ಆದಷ್ಟು ಬೇಗ ತಜ್ಞರಿಂದ ಸೂಕ್ತಚಿಕಿತ್ಸೆ ತೆಗೆದುಕೊಳ್ಳಲೇಬೇಕು. ನಿಮಗೆ ಮಧುಮೇಹವೂ ಇರುವುದರಿಂದ ಜೊತೆಗೆ ಬೊಜ್ಜು, ಏರು ರಕ್ತದೊತ್ತಡ ಇವೆಲ್ಲವೂ ಎಂಡೋಮೆಟ್ರಿಯಲ್ ಕ್ಯಾನ್ಸರ್ (ಗರ್ಭಾಶಯ ಲೋಳೆಪದರದ ಕ್ಯಾನ್ಸರ್)ನ ಅಪಾಯಕಾರಿ ಅಂಶಗಳಾಗಿರುತ್ತವೆ. ಅದ್ದರಿಂದ ನಿರ್ಲಕ್ಷಿಬೇಡಿ.

- **ವಯಸ್ಸು 20, ಮದುವೆ ಆಗಿಲ್ಲ. ತಿಂಗಳು ತಿಂಗಳು ಸರಿಯಾಗಿ ನನಗೆ ಮುಟ್ಟು ಆಗುವುದಿಲ್ಲ. ಪ್ರತಿಸಲವೂ ವೈದ್ಯರಿಗೆ ತೋರಿಸಿ ಮಾತ್ರೆ ತೆಗೆದುಕೊಂಡಾಗ ಮಾತ್ರ ಮುಟ್ಟಾಗುತ್ತದೆ. ಈಗ ಮುಟ್ಟಾಗದೆ 2 ತಿಂಗಳ ಮೇಲಾಗಿದೆ. ಏನು ಮಾಡಲಿ?**

ತೃಪ್ತಿ, ಊರಿನ ಹೆಸರಿಲ್ಲ

ನೀವು ನಿಮ್ಮ ತೂಕ ಎತ್ತರ ಎಷ್ಟಿದೆ ಎನ್ನುವುದನ್ನ ತಿಳಿಸಿಲ್ಲ. ನೀವು ದಪ್ಪನಾಗಿದ್ದರೆ ನಿಮಗೆ ಪಿ.ಸಿ.ಒ.ಡಿ. ಸಮಸ್ಯೆ ಇರಬಹುದು. ನಾನು ಎರಡು ವಾರಗಳ ಹಿಂದಿನ ಸಂಚಿಕೆಯಲ್ಲಿ ಹೇಗೆ ಜೀವನಶೈಲಿ ಬದಲಿಸಿಕೊಂಡರೆ ಪಿ.ಸಿ.ಒ.ಡಿಯನ್ನು ಹತೋಟಿಯಲ್ಲಿಟ್ಟುಕೊಳ್ಳಬೇಕೆಂದು ತಿಳಿಸಿದ್ದೇನೆ. ಅದನ್ನು ಓದಿ ಅನುಸರಿಸಿ. ಜೊತೆಗೆ ವೈದ್ಯರಿಂದ ತಪಾಸಣೆ ಮಾಡಿಸಿಕೊಂಡು ಗರ್ಭಕೋಶದ ಗಾತ್ರ ಹಾಗೂ ಅಂಡಾಶಯದ ಸ್ಥಿತಿಗತಿ ಹೇಗಿದೆ ಎನ್ನುವುದನ್ನು ಅಲ್ಟ್ರಾ ಸೌಂಡ್ ಸ್ಕ್ಯಾನಿಂಗ್ ಪರೀಕ್ಷೆ ಮಾಡಿಸಿಕೊಂಡು ತಿಳಿದುಕೊಳ್ಳಿ. ತಜ್ಞರ ಸಲಹೆ ಮೇರೆಗೆ ಸೂಕ್ತ ಚಿಕಿತ್ಸೆ ಪಡೆದುಕೊಳ್ಳಿ.

- **ಮುಟ್ಟಿಗೆ ಮೊದಲು ಜನನಾಂಗ ಒಣಗಿದ ಹಾಗಾಗುತ್ತದೆ ಮತ್ತು ಪೀರಿಯಡ್ ಮುಗಿದ ಮೇಲೂ ಒಣಗಿದ ಹಾಗಿರುತ್ತದೆ. ಏನು ಮಾಡಲಿ?**

ಅರ್ಚನಾ, ಊರು ತಿಳಿಸಿಲ್ಲ

ಅರ್ಚನಾರವರೇ, ನಿಮ್ಮ ವಯಸ್ಸು ಎಷ್ಟೆಂದು ತಿಳಿಸಿಲ್ಲ. ನಿಮಗೆ 45 ವರ್ಷ ಅಗಿದ್ದು ಮುಟ್ಟು ನಿಲ್ಲುವ ಹಂತಕ್ಕೆ ಬಂದಿದ್ದರೆ ಹೆಣ್ತನದ ಹಾರ್ಮೋನ್ ಈಸ್ಟ್ರೋಜನ್ ಮಟ್ಟ ಕಡಿಮೆ ಆಗುವುದರಿಂದಲೂ ಈ ರೀತಿಯ ಅನುಭವವಾಗಬಹುದು. ನೀವು ವೈದ್ಯರ ಸಲಹೆಯ ಮೇರೆಗೆ ಯಾವುದಾದರೊಂದು ಲುಬ್ರಿಕೆಂಟ್ ಜೆಲ್ ಅನ್ನು ದಿನಾ ಬಳಸಿದರೆ ಈ ಸಮಸ್ಯೆ ಸರಿಹೋಗಬಹುದು. ಕೆಲವೊಮ್ಮೆ ಮಾತ್ರೆಗಳನ್ನು ತೆಗೆದುಕೊಳ್ಳ ಬೇಕಾಗಬಹುದು. ಯಾವುದಕ್ಕೂ ತಜ್ಞ ವೈದ್ಯರನ್ನು ಸಂಪರ್ಕಿಸಿ.

ಇನ್ನಷ್ಟು ಪ್ರಶ್ನೆಗಳಿಗೆ prajavani.net ನೋಡಿ.

ಸ್ಪಂದನ... ಮುಟ್ಟು, ಗರ್ಭಧಾರಣೆ, ಋತುಬಂಧ, ಹಾರ್ಮೋನ್ ಮುಂತಾದ ಸಮಸ್ಯೆಗಳಿದ್ದರೆ ಪ್ರಶ್ನೆಗಳನ್ನು ನಮಗೆ ಕಳುಹಿಸಬಹುದು. ನಿಮ್ಮ ಪ್ರಶ್ನೆಗಳಿಗೆ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞೆ ಡಾ. ವೀಣಾ ಎಸ್. ಭಟ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.in ಗೆ ಕಳಿಸಬಹುದು.

ಹೋರಾಟ, ಇಚ್ಛಾಶಕ್ತಿಯ ಫಲ

ವಿಜಯನಗರ ಜಿಲ್ಲೆ ರಚನೆ ಹಲವು ವರ್ಷಗಳ ಬೇಡಿಕೆಯಾಗಿತ್ತು. ಅದು ಇದೀಗ ಈಡೇರಿದೆ. ಇದರಿಂದ ಜನರಿಗೆ ಅನುಕೂಲವಾಗಲಿದೆ

–ಆನಂದ್ ಸಿಂಗ್, ಪ್ರವಾಸೋದ್ಯೋಮ, ಪರಿಸರ, ಜೀವಿಶಾಸ್ತ್ರ ಸಚಿವ

• ಶಶಿಕಾಂತ ಎಸ್. ಶೆಂಬೆಳ್ಳಿ

ಹೊಸಪೇಟೆ: ವಿಶಾಲ ಬಳ್ಳಾರಿ ಜಿಲ್ಲೆ ವಿಭಜಿಸಿ ವಿಜಯನಗರ ಜಿಲ್ಲೆ ಘೋಷಣೆಯಾಗಿರುವುದು ಈ ಭಾಗದ ಜನರ ಒಂದೂವರೆ ದಶಕದ ಹೋರಾಟಕ್ಕೆ ಜಯ ಸಿಕ್ಕಿದೆ.

ಹೋರಾಟ, ರಾಜಕೀಯ ಇಚ್ಛಾಶಕ್ತಿ ಎರಡೂ ಒಗ್ಗೂಡಿದರೆ ಏನು ಬೇಕಾದರೂ ಸಾಧಿಸಬಹುದು ಎನ್ನುವುದಕ್ಕೆ ಇದು ನಿದರ್ಶನ.

ಜಿಲ್ಲೆ ರಚನೆ ಹೋರಾಟದ ಕಾವು ಆರಂಭದಲ್ಲಿ ಜೋರಿತ್ತು. ಎಲ್ಲ ವಲಯದವರು ಅದನ್ನು ಬೆಂಬಲಿಸಿದ್ದರು.

ಪ್ರವಾಸೋದ್ಯಮ, ಪರಿಸರ, ಜೀವಿಶಾಸ್ತ್ರ ಖಾತೆ ಸಚಿವ ಆನಂದ್ ಸಿಂಗ್ ಅವರ ಬಲವಾದ ರಾಜಕೀಯ ಇಚ್ಛಾಶಕ್ತಿಯಿಂದ ಜಿಲ್ಲೆ ಉದಯವಾಯಿತು ಎಂಬ ಮಾತಿಗೆ ಹೋರಾಟಗಾರರ ಅನುಮೋದನೆಯೂ ಇದೆ.

ಆನಂದ್ ಸಿಂಗ್ ಅವರ ಸತತ ಪರಿಶ್ರಮದ ಫಲವಾಗಿ ರಾಜ್ಯ ಸರ್ಕಾರ ಫೆ. 8ರಂದು ವಿಜಯನಗರ ಜಿಲ್ಲೆಗೆ ಸಂಬಂಧಿಸಿದಂತೆ ಅಂತಿಮ ಅಧಿಸೂಚನೆ ಹೊರಡಿಸಿತು. ವಿಷಯ ಗೊತ್ತಾಗುತ್ತಿದ್ದಂತೆ ಆನಂದ್ ಸಿಂಗ್ ದೊಡ್ಡ ವಿಜಯೋತ್ಸವ ಆಚರಿಸಿ, ಹಂಪಿ ವಿರೂಪಾಕ್ಷೇಶ್ವರನ ದರ್ಶನ ಪಡೆದರು. ವಿಜಯನಗರ ಜಿಲ್ಲಾ ಹೋರಾಟ ಸಮಿತಿಯವರು ನಗರದಲ್ಲಿ ವಿಜಯೋತ್ಸವ ಆಚರಿಸಿದರು.

ಹೋರಾಟದ ಹಿನ್ನೆಲೆ: ವಿಜಯನಗರ ಜಿಲ್ಲೆ ರಚಿಸಬೇಕೆಂಬ ಕೂಗು, ಆರಂಭವಾಗಿದ್ದು 2006–07ರಲ್ಲಿ. ಆ ವರ್ಷ ಸತತ ಮೂರು ತಿಂಗಳು ಹೋರಾಟ ನಡೆದಿತ್ತು. ವಿಜಯನಗರ ಜಿಲ್ಲಾ ಹೋರಾಟ ಸಮಿತಿ ರಚಿಸಿಕೊಂಡು ಜಿಲ್ಲೆಗಾಗಿ ಈ ಭಾಗದ ಜನ ಹೋರಾಟ ನಡೆಸಿದ್ದರು. ಆದರೆ, ಆ ಬೇಡಿಕೆ ಈಡೇರಿರಲಿಲ್ಲ. ಬಳಿಕ ಹೋರಾಟ ಮನವಿ ಪತ್ರ ಸಲ್ಲಿಸುವುದಕ್ಕಷ್ಟೇ ಸೀಮಿತವಾಗಿತ್ತು.

ಆದರೆ, 2019ರಲ್ಲಿ ಈ ವಿಷಯಕ್ಕೆ ಹೆಚ್ಚಿನ ಮಹತ್ವ ಬಂತು. ಈ ವಿಷಯವನ್ನು ಮುಂದಿಟ್ಟುಕೊಂಡು ಆನಂದ್ ಸಿಂಗ್ ಶಾಸಕ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದರು. ಬಳಿಕ ನಡೆದ ಉಪಚುನಾವಣೆಯಲ್ಲಿ ಬಿಜೆಪಿಯಿಂದ ಸ್ಪರ್ಧಿಸಿ ಗೆದ್ದರು. ಸತತವಾಗಿ ಮುಖ್ಯಮಂತ್ರಿ ಮೇಲೆ ಒತ್ತಡ ಹೇರಿ ಗುರಿ ಸಾಧಿಸಿದ್ದಾರೆ. ಜಿಲ್ಲೆಯ ಕನಸು ಕಂಡು, ಹೋರಾಟದ ಮುಂಚೂಣಿಯಲ್ಲಿದ್ದ ಡಾ. ಉಳ್ಳೇಶ್ವರ ಈ ಸಂದರ್ಭ ಕಣ್ತುಂಬಿಕೊಳ್ಳಲು ನಮ್ಮ ನಡುವೆ ಇಲ್ಲ. ಆದರೆ, ಹೋರಾಟದಲ್ಲಿ ಸಕ್ರಿಯರಾಗಿದ್ದ ಅನೇಕರು ಈ ಐತಿಹಾಸಿಕ ಗಳಿಗೆಗೆ ಸಾಕ್ಷಿಯಾಗಿದ್ದು, ಅವರಲ್ಲಿ ಎಲ್ಲಿಲ್ಲದ ಸಂಭ್ರಮ ಮನೆ ಮಾಡಿದೆ.

ಜಿಲ್ಲೆಯ ಅಗತ್ಯ ಏಕಿತ್ತು?: ಅಖಂಡ ಬಳ್ಳಾರಿ ಜಿಲ್ಲೆ ಹನ್ನೊಂದು ತಾಲ್ಲೂಕುಗಳನ್ನು ಒಳಗೊಂಡಿತ್ತು. ಬಳ್ಳಾರಿ ಜಿಲ್ಲಾ ಕೇಂದ್ರದಿಂದ ಹೂವಿನಹಡಗಲಿ, ಹರಪನಹಳ್ಳಿ ತಾಲ್ಲೂಕುಗಳ ಹಳ್ಳಿಗಳು ಇನ್ನೂರು ಕಿ.ಮೀಗೂ ಹೆಚ್ಚು ದೂರದಲ್ಲಿದ್ದವು. ಕಚೇರಿ ಸೇರಿದಂತೆ ಇತರೆ ಕೆಲಸಗಳಿಗೆ ಬಳ್ಳಾರಿ ಜಿಲ್ಲಾ ಕೇಂದ್ರಕ್ಕೆ ಹೋಗಿ ಬರಲು ಸಮಸ್ಯೆಯಾಗುತ್ತಿತ್ತು.

ಭೌಗೋಳಿಕವಾಗಿ ಜಿಲ್ಲೆ ವಿಶಾಲವಾಗಿರುವುದರಿಂದ ಹೊಸಪೇಟೆ ಕೇಂದ್ರವಾಗಿಟ್ಟುಕೊಂಡು ವಿಜಯನಗರ ಜಿಲ್ಲೆ ರಚಿಸಬೇಕು.ಜಿಲ್ಲೆಯ ಪಶ್ಚಿಮ ತಾಲ್ಲೂಕುಗಳನ್ನು ಅದರ ವ್ಯಾಪ್ತಿಗೆ ಸೇರಿಸಿದರೆ ಸಾರ್ವಜನಿಕರಿಗೆ ಅನುಕೂಲವಾಗುತ್ತದೆ. ಆಡಳಿತದ ಹಿತದೃಷ್ಟಿಯಿಂದಲೂ ಜಿಲ್ಲೆ ಆಗಬೇಕಿದೆ ಎಂಬ ವಾದ ಇತ್ತು. ಫೆ. 8ರಂದು ಈಡೇರುವುದರ ಮೂಲಕ ಆ ದಿನ ಚರಿತ್ರೆಯ ಪುಟದಲ್ಲಿ ಸೇರಿದೆ. ❖

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

'**ವಿಜಯನಗರ ಇತಿಹಾಸ ಭವಿಷ್ಯಗಳ ಚಿತ್ರಣ**'ಕ್ಕೆ ಈ ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

ಪಶ್ಚಿಮ ತಾಲ್ಲೂಕುಗಳ ಜನರ ಎರಡು ದಶಕಗಳ ಕನಸು ಸಾಕಾರಗೊಂಡಿದೆ. ಅಭಿವೃದ್ಧಿಯ ಹೊಸ ಶಕೆ ಆರಂಭವಾಗುತ್ತದೆ. ಪಕ್ಷಾತೀತ ಹೋರಾಟಕ್ಕೆ ಸಂದ ಜಯ

–ವೈ. ಯಮುನೇಶ, ಸಂಚಾಲಕ, ವಿಜಯನಗರ ಜಿಲ್ಲಾ ಹೋರಾಟ ಸಮಿತಿ

ನನಗೀಗ 70 ವರ್ಷ. ಜಿಲ್ಲೆಗಾಗಿ ಹೋರಾಟ ಆರಂಭಿಸಿ ಒಂದೂವರೆ ದಶಕವಾಗಿದೆ. ನನ್ನ ಜೀವಿತದ ಅವಧಿಯಲ್ಲೇ ಜಿಲ್ಲೆ ರಚನೆಯಾಗಿರುವುದು ಖುಷಿ ತಂದಿದೆ

–ಮಲ್ಲಾರಿ ದೀಕ್ಷಿತ್, ಹಿರಿಯ ಸಂಚಾಲಕ ವಿಜಯನಗರ ಜಿಲ್ಲಾ ಹೋರಾಟ ಸಮಿತಿ

ಬಳ್ಳಾರಿ ಜಿಲ್ಲೆಯ ತಾಲ್ಲೂಕು

- ಬಳ್ಳಾರಿ (ಕೇಂದ್ರಸ್ಥಾನ)
- ಸಂಡೂರು
- ಸಿರುಗುಪ್ಪ
- ಕಂಪ್ಲಿ
- ಕುರುಗೋಡು

ನೂತನ ವಿಜಯನಗರ ಜಿಲ್ಲೆ ನಕ್ಷೆ



ಪ್ರಜಾವಾಣಿ ಗ್ರಾಫಿಕ್ಸ್

ಫೆಬ್ರುವರಿ 8 ಐತಿಹಾಸಿಕ ದಿನ

ಅಖಂಡ ಬಳ್ಳಾರಿ ಜಿಲ್ಲೆ ವಿಭಜಿಸಿ ಫೆಬ್ರುವರಿ 8, 2021ರಂದು ರಾಜ್ಯ ಸರ್ಕಾರ ಅಂತಿಮ ಅಧಿಸೂಚನೆ ಹೊರಡಿಸಿತು. ವಿಜಯನಗರಕ್ಕೆ ಆರು ತಾಲ್ಲೂಕು, ಬಳ್ಳಾರಿ ಜಿಲ್ಲಾ ವ್ಯಾಪ್ತಿಗೆ ಐದು ತಾಲ್ಲೂಕುಗಳನ್ನು ಸೇರಿಸಿದೆ. ಇದೇ ವೇಳೆ ಎರಡೂ ಜಿಲ್ಲೆಗಳ ಗಡಿ ಸರಹದ್ದು ಸಹ ಗುರುತಿಸಿದೆ.
ಹೊಸಪೇಟೆ (ಜಿಲ್ಲಾ ಕೇಂದ್ರ), ಕೂಡ್ಲಿಗಿ, ಕೊಟ್ಟೂರು, ಹಗರಿಬೊಮ್ಮನಹಳ್ಳಿ, ಹೂವಿನಹಡಗಲಿ ಹಾಗೂ ಹರಪನಹಳ್ಳಿ ವಿಜಯನಗರ ಜಿಲ್ಲಾ ವ್ಯಾಪ್ತಿಗೆ ಸೇರಿಸಿದರೆ, ಸಂಡೂರು, ಸಿರುಗುಪ್ಪ, ಕುರುಗೋಡು, ಕಂಪ್ಲಿ ತಾಲ್ಲೂಕುಗಳನ್ನು ಬಳ್ಳಾರಿ ಜಿಲ್ಲಾ ವ್ಯಾಪ್ತಿಗೆ ಸೇರಿಸಲಾಗಿದೆ.

ಹೊಸಪೇಟೆಯ ವೃತ್ತಾಂತ...

• ಮೃತ್ಯುಂಜಯ ರುಮಾಲೆ

ಆಡಳಿತದಲ್ಲಿ ಸುಧಾರಣೆ ಮತ್ತು ನಿಯಂತ್ರಣ ತರುವ ಉದ್ದೇಶದಿಂದ ಬಳ್ಳಾರಿ ಜಿಲ್ಲೆಯನ್ನು ಉಪವಿಭಾಗಗಳಾಗಿ ವಿಭಜಿಸಲಾಯಿತು. ಆಗ ಬಳ್ಳಾರಿ ಜಿಲ್ಲೆಯ ಪಶ್ಚಿಮ ತಾಲ್ಲೂಕುಗಳಾದ ಹರಪನಹಳ್ಳಿ, ಹೂವಿನಹಡಗಲಿ, ಕೂಡ್ಲಿಗಿ, ಮಲ್ಲಾಪುರ (ಉಪತಾಲ್ಲೂಕು) ತಾಲ್ಲೂಕುಗಳ ಕೇಂದ್ರವಾಗಿ ಹೊಸಪೇಟೆಯನ್ನು ಉಪವಿಭಾಗ ವ್ಯಾಪ್ತಿಗೆ ಸೇರಿಸಲಾಯಿತು. ಬ್ರಿಟಿಷ್ ಆಡಳಿತ ವ್ಯವಸ್ಥೆಯಲ್ಲಿ 'ಹೊಸಪೇಟೆ' ನಗರಕ್ಕೆ ತಾಲ್ಲೂಕು ಕೇಂದ್ರವಾಗಿ, ಜಿಲ್ಲೆಯ ಉಪವಿಭಾಗದ ಕೇಂದ್ರವಾಗಿ ಮಹತ್ವಕ್ಕೆ ಬಂದುದು ಈ ಸಂದರ್ಭದಲ್ಲಿಯೇ.

ಒಂದು ಜಿಲ್ಲೆಯನ್ನು ವಿಭಜಿಸುವ, ಮರುವಿಂಗಡಿಸುವ, ಹಂಚುವ, ವಿಸ್ತರಿಸುವ, ಕುಗ್ಗಿಸುವ ಪ್ರಯತ್ನ ಅಥವಾ ಯೋಜನೆಗಳು ಎಲ್ಲಾ ಕಾಲದಲ್ಲಿ ಅಗತ್ಯ ಕಾರ್ಯಕಾರಣವಾಗಿ ಜಾರಿಗೆ ಬಂದಿವೆ. ಬಳ್ಳಾರಿ ಜಿಲ್ಲೆ ಮೊದಲ ಬಾರಿಗೆ ರಚನೆಯಾದುದು ಕ್ರಿ.ಶ 1800ರಲ್ಲಿ. ಟಿಪ್ಪು-ಸುಲ್ತಾನನ ಆಳ್ವಿಕೆಯ ವ್ಯಾಪ್ತಿಯಲ್ಲಿ ಬಳ್ಳಾರಿಯ ಈ ಪ್ರದೇಶವನ್ನು ಆತ ಮರಣ ಹೊಂದಿದ ನಂತರ (4-5-1799) ಬ್ರಿಟಿಷ್ ಆಡಳಿತ ವ್ಯವಸ್ಥೆಯು ಮದ್ರಾಸ್ ಪ್ರಾಂತ್ಯಕ್ಕೆ ಸೇರಿಸಲಾಯಿತು.

ಇಪ್ಪತ್ತು ತಾಲ್ಲೂಕುಗಳನ್ನು (ಗುತ್ತಿ, ಯಾದಿಕೆ, ಚೆನ್ನಂಪಳ್ಳಿ, ರಾಯದುರ್ಗ, ತಾಡಮಾರಿ, ತಾಡಪತ್ರಿ, ಅನಂತಪುರ, ಕೋಡಿಕೊಂಡ, ಧರ್ಮಾವರಂ, ಪೆನುಗೊಂಡ, ಮಡಕಶಿಲಾ, ಹರಪನಹಳ್ಳಿ, ಹಡಗಲಿ, ಬಳ್ಳಾರಿ, ಕೂಡ್ಲಿಗಿ, ನಾಗಲದಿನ್ನಿ, ಪಂಚಪಳ್ಳಿ, ಗೂಳ್ಯಂ, ಆದೋನಿ ಮತ್ತು ಕಂಪ್ಲಿ) ಒಂದು ಭೌಗೋಳಿಕ ವ್ಯಾಪ್ತಿಗೆ ಒಳಪಡಿಸಿ ಬಳ್ಳಾರಿಯನ್ನು ಕೇಂದ್ರವನ್ನಾಗಿಸಿಕೊಂಡು ವಿಶಾಲ ಜಿಲ್ಲೆಯನ್ನು ರೂಪಿಸಲಾಯಿತು. ಚರಿತ್ರೆಯಲ್ಲಿ ಮೊದಲ ಬಾರಿಗೆ ಬಳ್ಳಾರಿ ಜಿಲ್ಲೆಗೆ ಒಂದು ನಕ್ಷೆ ಲಭ್ಯವಾದುದು, 1,800ರಲ್ಲಿಯೇ.

ಬ್ರಿಟಿಷ್ ಆಡಳಿತದ ಭಾರತದಲ್ಲಿ ಬಹುದೊಡ್ಡ ಪ್ರಾಂತ್ಯವಾಗಿ ಮದ್ರಾಸ್ ಮತ್ತು ದೇಶದ ಬಹು ದೊಡ್ಡ ಜಿಲ್ಲೆಯಾಗಿ ಬಳ್ಳಾರಿ ಜನ್ಮ ತಾಳಿತು. ಈ ವಿಶಾಲ ಜಿಲ್ಲೆಯ ಮೊದಲ ಪ್ರಿನ್ಸಿಪಾಲ್ ಕಲೆಕ್ಟರ್ ಆಗಿ ಥಾಮಸ್ ಮನ್ರೋ ನೇಮಕಗೊಂಡರು. ಬಳ್ಳಾರಿ ಜಿಲ್ಲೆಯ ಒಳಗೇ ಇದ್ದ ತಾಲ್ಲೂಕುಗಳ ಗ್ರಾಮಗಳನ್ನು ಸೇರಿಸುವ, ವಿಭಜಿಸುವ, ಹಿಗ್ಗಿಸುವ, ಕುಗ್ಗಿಸುವ ಪ್ರಯತ್ನಗಳು ನಡೆದೇ ಇದ್ದವು. ದಾರಿ, ದೀಪ, ನೀರು ಮೊದಲಾದ ಯಾವುದೇ ರೀತಿಯ ಸೌಲಭ್ಯಗಳಿರದಿದ್ದ ಕಾಲದಲ್ಲಿ ಈ ವಿಭಜನೆಯು ಪ್ರಶ್ನಾರ್ಹವಾಗಿತ್ತು. ಸ್ವಾತಂತ್ರ್ಯ ಪೂರ್ವದ ಜಿಲ್ಲಾ ರಚನೆ, ತಾಲ್ಲೂಕುಗಳ ರಚನೆ, ತಾಲ್ಲೂಕು ಕೇಂದ್ರಗಳ ಅನಿಯಮಿತ ಬದಲಾವಣೆ, ಸಮಗ್ರ ಜಿಲ್ಲೆಯ ಉಪವಿಭಾಗೀಕರಣಗಳಿಂದ ಅಭಿವೃದ್ಧಿ ಕುಂಠಿತವಾಗಿತ್ತು.

'ವಿಶಾಲ ಬಳ್ಳಾರಿ ಜಿಲ್ಲೆ'ಯನ್ನು ಬ್ರಿಟಿಷ್ ವ್ಯವಸ್ಥೆಯ ಪ್ರಾಂತೀಯ ಆಡಳಿತವು ಹೈದರಾಬಾದಿನ ನಿಜಾಮನೊಂದಿಗೆ ಮಾಡಿಕೊಂಡಿದ್ದ ತಾತ್ಕಾಲಿಕ ಒಪ್ಪಂದದ ಕಾರಣದಿಂದ ಬಳ್ಳಾರಿಯನ್ನು ಒಳಗೊಂಡ ಪ್ರದೇಶವನ್ನು 'ದತ್ತು ಸ್ವೀಕಾರ ಪದ್ಧತಿ'ಗೆ ಅಳವಡಿಸಲಾಗಿತ್ತು. ಇವುಗಳನ್ನು 'ದತ್ತು ಮಂಡಲ' (ಸೀಡೆಡ್ ಡಿಸ್ಟ್ರಿಕ್ಟ್) ಎಂದು ಕರೆಯಲಾಗುತ್ತಿತ್ತು. 'ಬ್ಯಾಕ್ ಡಿಸ್ಟ್ರಿಕ್ಟ'(ಬಳ್ಳಾರಿ, ಅನಂತಪುರಂ, ಕುಡ್ಡಾಪುರ, ಕರ್ನೂಲ್) ಎಂದು ಕರೆಯಲಾಗುತ್ತಿತ್ತು.

ಆಡಳಿತದಲ್ಲಿ ಸುಧಾರಣೆ ಮತ್ತು ನಿಯಂತ್ರಣ ತರಲು ಬಳ್ಳಾರಿ ಜಿಲ್ಲೆಯನ್ನು ಉಪವಿಭಾಗಗಳಾಗಿ ವಿಭಜಿಸಲಾಯಿತು. ಆಗ ಬಳ್ಳಾರಿ ಜಿಲ್ಲೆಯ ಪಶ್ಚಿಮ ತಾಲ್ಲೂಕುಗಳಾದ ಹರಪನಹಳ್ಳಿ, ಹೂವಿನಹಡಗಲಿ, ಕೂಡ್ಲಿಗಿ, ಮಲ್ಲಾಪುರ (ಉಪತಾಲ್ಲೂಕು) ತಾಲ್ಲೂಕುಗಳ ಕೇಂದ್ರವಾಗಿ ಹೊಸಪೇಟೆಯನ್ನು ಉಪವಿಭಾಗ ವ್ಯಾಪ್ತಿಗೆ ಸೇರಿಸಲಾಯಿತು. ಬ್ರಿಟಿಷ್ ಆಡಳಿತ ವ್ಯವಸ್ಥೆಯಲ್ಲಿ 'ಹೊಸಪೇಟೆ' ನಗರಕ್ಕೆ ತಾಲ್ಲೂಕು ಕೇಂದ್ರವಾಗಿ, ಜಿಲ್ಲೆಯ ಉಪವಿಭಾಗದ ಕೇಂದ್ರವಾಗಿ ಮಹತ್ವಕ್ಕೆ ಬಂದುದು ಈ ಸಂದರ್ಭದಲ್ಲಿ.

ಏಕೆಂದರೆ, 1,800ರಲ್ಲಿ ಬಳ್ಳಾರಿ ಎಂಬ ಜಿಲ್ಲೆಯನ್ನು ರಚಿಸಿದಾಗ ಕಂಪ್ಲಿಯನ್ನು ತಾಲ್ಲೂಕು ಕೇಂದ್ರವಾಗಿ ಅದರಲ್ಲಿ ಹೊಸಪೇಟೆಯನ್ನು ಒಂದು ಹೋಬಳಿಯಂತೆ ಸೇರಿಸಲಾಗಿತ್ತು. ಕ್ರಿ.ಶ 1,859ರಲ್ಲಿ ಕೇಂದ್ರವನ್ನು ಬದಲಾಯಿಸಿ ಹೊಸಪೇಟೆಗೆ ಉನ್ನತಿ ನೀಡಲಾಯಿತು. ಅಂದರೆ 1,800 ರಿಂದ ಕ್ರಿ.ಶ. 1,859ರ ವರೆಗೆ ಕಂಪ್ಲಿ ತಾಲ್ಲೂಕು ಕೇಂದ್ರವಾಗಿ, 1859 ರಿಂದ ತಾಲ್ಲೂಕು ಕೇಂದ್ರ ನಂತರ ಉಪವಿಭಾಗ ಕೇಂದ್ರವಾಗಿ ಇದೀಗ (2021) ನೂತನ ಜಿಲ್ಲೆಯ ಕೇಂದ್ರವಾಗಿ ಹೊರಹೊಮ್ಮಿದೆ.

ಹೊಸಪೇಟೆಯ ಸುತ್ತಮುತ್ತ: ವಾಸ್ತವವಾಗಿ ಹೊಸಪೇಟೆ ಎಂಬ ಈ ಪ್ರದೇಶಕ್ಕೆ ಆಧುನಿಕ ಚಾರಿತ್ರಿಕ ಸಂದರ್ಭದಲ್ಲಿ ಗಮನಾರ್ಹ ಮಹತ್ವ ಬಂದುದು, ಕ್ರಿ.ಶ 1748ರಲ್ಲಿ. ಶಾಸನಗಳಲ್ಲಿ 'ಹೊಸನಗರ', 'ಹೊಸಪಟ್ಟಣ'ಗಳೆಂಬ ಉಲ್ಲೇಖಗಳಿವೆ. ಆದರೆ ಅವು ಯಾವ ಪ್ರದೇಶಗಳೆಂದು ಖಚಿತವಾಗಿ ಮಾಹಿತಿ ಇಲ್ಲ. ಆದರೆ ಹರಪನಹಳ್ಳಿ ಮತ್ತು ಚಿತ್ರದುರ್ಗದ ಪಾಳೆಯಗಾರರಿಗೂ ನಡೆದ ನಿರ್ಣಾಯಕ ಯುದ್ಧ ಹೊಸಪೇಟೆಯ ಈ ಪ್ರದೇಶಕ್ಕೆ ಒಂದು ಖಚಿತ ಸ್ವರೂಪವನ್ನು ನೀಡಿದ ಸಂದರ್ಭವಾಗಿದೆ.

ವಿಜಯನಗರ ಸಾಮ್ರಾಜ್ಯ ಅಧಿಕಾರದಲ್ಲಿದ್ದಾಗ ಅದರ ಆಳ್ವಿಕೆ ವ್ಯಾಪ್ತಿಯಲ್ಲಿದ್ದ 1,565ರಲ್ಲಿ ನಿರ್ಣಾಯಕ ಯುದ್ಧ ಘಟಿಸಿ ಸಾಮ್ರಾಜ್ಯ ಪತನವಾದ ನಂತರ ಹರಪನಹಳ್ಳಿ ಚಿತ್ರದುರ್ಗಗಳ ಸ್ವತಂತ್ರ ಪಾಳೆಯಪಟ್ಟಗಳಾದವು. ಚಿತ್ರದುರ್ಗದ ಕೊನೆಯ ಮದಕರಿನಾಯಕ ಹರಪನಹಳ್ಳಿಯ ಸೋಮಶೇಖರ ನಾಯಕರ ನಡುವೆ 1748ರಲ್ಲಿ ಮಾಯಕೊಂಡದಲ್ಲಿ ನಡೆದ ಯುದ್ಧದಲ್ಲಿ ಹರಪನಹಳ್ಳಿ ಪಾಳೆಯಗಾರರಿಗೆ ಯಶಸ್ಸು ದೊರೆಯಿತು. ಮಾಯಕೊಂಡದಿಂದ ಗಡಿಪ್ರದೇಶದಲ್ಲಿ ಯುದ್ಧ ಘೋಷಣೆಯಾದಾಗ ಹರಪನಹಳ್ಳಿಯ ಸೋಮಶೇಖರ ವಾಸ್ತವ್ಯ ಹೂಡಿದ್ದ ಇಂದಿನ ಹೊಸಪೇಟೆಯ ಪ್ರದೇಶದಲ್ಲಿ (ಆಗಿನ್ನು ಈ ಭಾಗ ಹೊಸಪೇಟೆ ಎಂಬ ಹೆಸರಿರಲಿಲ್ಲ).

ತುಂಗಭದ್ರಾ ಜಲಾನಯನ ಪ್ರದೇಶದಲ್ಲಿ ಮುಳುಗಡೆಯಾಗಿರುವ ನಾರಾಯಣದೇವರಕೆರೆಯು ಹರಪನ ಹಳ್ಳಿಯ ಪಾಳೆಯಪಟ್ಟಣ ಎರಡನೇ ರಾಜಧಾನಿಯಾಗಿತ್ತು. ಅಲ್ಲಿ ಒಂದು ಅರಮನೆಯೂ ಇತ್ತು. ಇಲ್ಲಿ ತಂಗಿದ್ದರಿಂದ ಸೋಮಶೇಖರ ನಾಯಕ ಹೊಸಪೇಟೆಯ ಈ ಪ್ರದೇಶದಲ್ಲಿ ಸಂಚಾರದಲ್ಲಿದ್ದ. ದಾಳಿಯ ಸುದ್ದಿ ಬಂದ ನಂತರ ಯುದ್ಧ ಸನ್ನದ್ಧನಾಗಿ ಮಾಯಾಕೊಂಡಕ್ಕೆ ಯುದ್ಧದಲ್ಲಿ ಪಾಲ್ಗೊಂಡು ಗೆಲುವು ಸಾಧಿಸಿ ಚಿತ್ರದುರ್ಗವನ್ನು ತನ್ನ ವಶಕ್ಕೆ ತಂದುಕೊಳ್ಳುತ್ತಾನೆ. ಈ ಮಣ್ಣಿನ ಕ್ಷಾತ್ರಗುಣ, ಹಂಪೆಯ ವಿರೂಪಾಕ್ಷನ ಅನುಗ್ರಹ-ಆಶೀರ್ವಾದಗಳು ಎಂಬ ನಂಬಿಕೆ.

ಇಲ್ಲಿ ಆನೆಯ ಮೇಲೆ ಕುಳಿತು ಮೆರವಣಿಗೆಯ ಮೂಲಕ ವಿಜಯೋತ್ಸವವನ್ನು ಆಚರಿಸಿಕೊಳ್ಳುತ್ತಾನೆ. ಆ ನಂತರ ಈ ಭಾಗವನ್ನು ಅಭಿವೃದ್ಧಿ ಪಡಿಸಲು ಸಂಕಲ್ಪ ಮಾಡುತ್ತಾನೆ. ಈ ಪರಿಸರದಲ್ಲಿ ಹತ್ತಾರು ಹಳ್ಳಿ (ಚಿತ್ತವಾಡ್ಗಿ, ಅಮರಾವತಿ, ಏಳುಕೇರಿ, ಕಲಮತ್ಯನಹಳ್ಳಿ, ಭಟ್ಟರಹಳ್ಳಿ, ಮೊದಲಾದವುಗಳನ್ನು) ಸೇರಿಸಿ 'ಹೊಸಪೇಟೆ' ಎಂದು ನಾಮಕರಣ ಮಾಡುತ್ತಾನೆ. ಆ ಕಾಲದಿಂದ ಒಂದು ಕಂದಾಯ ಪ್ರದೇಶದ ಸ್ವರೂಪವನ್ನು ಪಡೆಯುತ್ತದೆ.

ಹರಪನಹಳ್ಳಿಯ ಪಾಳೆಯಪಟ್ಟು ಹೈದರಾಲಿ, ಟಿಪ್ಪುವಿನ ವಶಕ್ಕೆ ಹೋದಾಗ ಅಂದರೆ 1760 ರಿಂದ 1799 ರವರೆಗೆ ಹೊಸಪೇಟೆಯ ನಗರ ವ್ಯವಸ್ಥೆಯ ಅಭಿವೃದ್ಧಿ ಕುಂಠಿತಗೊಳ್ಳುತ್ತದೆ. ಈ ಕಾಲಾವಧಿಯಲ್ಲಿ ಚಿತ್ತವಾಡ್ಗಿ ಆ ಕಾಲದ ಪ್ರಸಿದ್ಧ ವ್ಯಾಪಾರ ಕೇಂದ್ರವಾಗಿ ಬೆಳೆದು ಗಮನ ಸೆಳೆಯುತ್ತದೆ.

ವಿಜಯನಗರ ಜಿಲ್ಲೆ ಘೋಷಣೆಯಾದ ಸಂಭ್ರಮದಲ್ಲಿ ಸಚಿವ ಆನಂದ್ ಸಿಂಗ್

ವಿಜಯನಗರ ಎಲ್ಲರ ಬಯಕೆ

ಬಳ್ಳಾರಿ ಜಿಲ್ಲೆಯನ್ನು ಕನ್ನಡ ಪ್ರದೇಶವೆಂದು ಘೋಷಿಸಿ, ಮೈಸೂರು ರಾಜ್ಯಕ್ಕೆ ಸೇರಿಸಬೇಕೆಂದು ಅಧ್ಯಯನ ಪೂರ್ಣವಾದ ವರದಿಗಳು ಸ್ವಾತಂತ್ರ್ಯ ಪೂರ್ವದಿಂದಲೂ ಜಾರಿಗೆ ಬಂದಿದೆ. ಸೈಮನ್ ಕಮಿಷನ್, ಆರ್. ಕೆ.ಧರ್ ಕಮಿಷನ್, ಎನ್.ಸಿ.ಕೇಳ್ಕರ್, ಕೆ.ಎಸ್.ವಾಂಛೂ, ಎಲ್.ಎಸ್.ಮಿಶ್ರಾ, ಫಜಲ್ ಅಲಿ ಕಮಿಷನ್‌ಗಳು ಬಳ್ಳಾರಿಗೆ ಒಂದು ರೂಪ ನೀಡಿವೆ.

ಸ್ವಾತಂತ್ರ್ಯ ನಂತರದಲ್ಲಿ ಎರಡನೇ ಬಾರಿಗೆ ನೂತನ ಜಿಲ್ಲೆಯ ರಚನೆ ಅನಿವಾರ್ಯವೆಂಬುದಕ್ಕಿಂತಲೂ ಅತ್ಯವಶ್ಯವಾದುದಾಗಿದೆ. ಜಿಲ್ಲಾ ಕೇಂದ್ರವು ಜಿಲ್ಲೆಯ ಎಲ್ಲಾ ತಾಲೂಕುಗಳಿಗೆ ನಿಯಮಿತವಾದ ಅಂತರದಲ್ಲಿರಬೇಕೆಂಬುದು ಆಡಳಿತ ನೀತಿಯಾಗಿದೆ. ನೈಸರ್ಗಿಕ, ಮಾನವಸಂಪನ್ಮೂಲಗಳ ಜೊತೆಗೆ ಚಾರಿತ್ರಿಕ, ಪೌರಾಣಿಕ ಪರಂಪರೆಯನ್ನೊಳಗೊಂಡಿರುವ ಈ ನೂತನ ಜಿಲ್ಲೆಯು ಹೆಸರಿಗೇ ತಕ್ಕಂತೆ ಅದನ್ನು ಬೆಳೆಸಿಕೊಂಡು ಹೋಗಬಲ್ಲದು.

ಕಾಶಿ ವಿಶ್ವನಾಥನಷ್ಟೇ ವಿರೂಪಾಕ್ಷನೂ

ವಿಜಯನಗರ ಸಾಮ್ರಾಜ್ಯ ಸ್ಥಾಪನೆಗೆ ಪೂರ್ವದಲ್ಲಿ ಹರಿಹರ ಮತ್ತು ರಾಘವಾಂಕ ಕವಿಗಳು ಹಂಪೆಯನ್ನು ಸಾಹಿತ್ಯಕವಾಗಿ ಆಳ್ವಿಕೆ ನಡೆಸಿದ್ದರು. ಹರಿಹರನ ಕೃತಿರಚನೆಯ ಸಂದರ್ಭದಲ್ಲಿ ಹಂಪೆ ಹರಿಹರಮಯವಾಗಿತ್ತು. ಕನ್ನಡ ಸಾಹಿತ್ಯ ರಗಳೆಮಯವಾಗಿತ್ತು. ಕನ್ನಡ ಸಂಸ್ಕೃತಿಗೆ ಸೋಪಜ್ಞತೆ ಲಭ್ಯವಾಗಿತ್ತು. ಇದು ಹಂಪೆಯ ಮೂಲಕ ಕನ್ನಡ ನಾಡಿಗೇ ವ್ಯಕ್ತವಾದ ವಿಶೇಷ ಅಭೀಜ್ಞೆಯಾಗಿದೆ.

ಪುರಾಣ ಪ್ರಸಿದ್ಧ ಹಂಪಿಯ ಶ್ರೀ ವಿರೂಪಾಕ್ಷನು ಉತ್ತರದ ಕಾಶಿ ವಿಶ್ವನಾಥನಷ್ಟೇ ಪರಮ ಪವಿತ್ರನು. ಇಲ್ಲಿಯ ತುಂಗಭದ್ರೆ ಅಲ್ಲಿಯ ಗಂಗೆಯಷ್ಟೇ ಪವಿತ್ರಳು, ಪಾವನಳು. ಮೋಕ್ಷ ಪ್ರಾಪ್ತಿಯಲ್ಲಿ ಎರಡು ಕ್ಷೇತ್ರಗಳು ಪೂರ್ಣಪ್ರಮಾಣದ ತೀವ್ರಸ್ವಾಮ್ಯವನ್ನು ಹೊಂದಿದೆ. ಉತ್ತರದ ಕಾಶಿವಿಶ್ವನಾಥನ ಕೇಂದ್ರ ಪೂರ್ವದಲ್ಲಿ ಕರ್ದಮೇಶ್ವರ, ಪಶ್ಚಿಮದಲ್ಲಿ ರಾಮೇಶ್ವರ, ಉತ್ತರದಲ್ಲಿ ಕಪಿಲಮುನೇಶ್ವರ, ದಕ್ಷಿಣದಲ್ಲಿ ಭೀಮಚಂಡಿಗಳಿರುವಂತೆಯೇ ದಕ್ಷಿಣದ ವಿರೂಪಾಕ್ಷನ ಕೇಂದ್ರದಲ್ಲಿ ಎಂಟು ಗಡಿ ದೈವಗಳಿವೆ. ಪೂರ್ವದಲ್ಲಿ ಕಿನ್ನರೇಶ್ವರ, ದಕ್ಷಿಣದಲ್ಲಿ ಜಂಬುಕೇಶ್ವರ, ಪಶ್ಚಿಮದಲ್ಲಿ ಸೋಮನಾಥೇಶ್ವರ, ವಾಯುವ್ಯದಲ್ಲಿ ಮಹಾಕಾಲೇಶ್ವರ, ಈಶಾನ್ಯದಲ್ಲಿ ಸೋಮೇಶ್ವರ- ಈ ಎಂಟು ಗಡಿದೈವಗಳ ಕೇಂದ್ರದಲ್ಲಿ ವಿರೂಪಾಕ್ಷನಿದ್ದಾನೆ. ಪ್ರತಿ ದೈವಗಳ ಮುಂದೆ ತೀರ್ಥಗಳಿವೆ. ಈ ಪ್ರದೇಶವನ್ನು 'ವಿರೂಪಾಕ್ಷ ಸೀಮೆ' ಎಂದೂ ಕರೆಯಲಾಗಿದೆ.

ಪ್ರೌಢದೇವರಾಯ, ಕೃಷ್ಣದೇವರಾಯನಿಂದ ವಿಶ್ವಖ್ಯಾತಿ: ಬಳ್ಳಾರಿ ಜಿಲ್ಲೆಯ ಮತ್ತು ಹೊಸಪೇಟೆಯ ಪರಿಸರಕ್ಕೆ ಪ್ರತಿಷ್ಠೆ, ಗೌರವ, ಅಹಂಕಾರವನ್ನು ತಂದು ಕೊಟ್ಟ ವಿಜಯನಗರ ಸಾಮ್ರಾಜ್ಯದ ವೈಭವ (1336-1565) ವಾಸ್ತವವಾಗಿ ಈ ಸಾಮ್ರಾಜ್ಯದ ಹೆಸರು 'ಕರ್ನಾಟಕ ಸಾಮ್ರಾಜ್ಯ' ಪುರಾಣ ಪ್ರಸಿದ್ಧವಾದ ಹಂಪೆಯನ್ನು 'ವಿಜಯನಗರ' ಎಂದು ಹೊಸ ನಾಮಕರಣ ಮಾಡಿ ಅದನ್ನು ರಾಜಧಾನಿಯಾಗಿಸಿಕೊಂಡು ಸಂಗಮ ವಂಶ (150 ವರ್ಷ) ಸಾಳುವ ವಂಶ (8 ವರ್ಷ) ತುಳುವ ವಂಶ (63 ವರ್ಷ) ಮತ್ತು ಅರವೀಡು ವಂಶ (14 ವರ್ಷ) ವರೆಗೆ ವಿರುಪಾಕ್ಷನ ಅಂಕಿತದಲ್ಲಿ ರಾಜ್ಯಭಾರ ಮಾಡಿದರು.

26 ವರ್ಷಗಳವರೆಗೆ ರಾಜ್ಯ ವಾಳಿದ ಸಂಗಮ ವಂಶದ ಪ್ರಖ್ಯಾತ ದೊರೆ ಪ್ರೌಢದೇವರಾಯನ ಕಾಲದಲ್ಲಿ ಕನ್ನಡ ಸಾಹಿತ್ಯ, ಸಂಸ್ಕೃತಿಗಳು ದೇಶವ್ಯಾಪ್ತಿಯಾಗಿದ್ದ ಕಾಲ ಧಾರ್ಮಿಕ ಸೇವೆಯಂತು ಷಟ್‌ಸ್ಥಲ ನಿರ್ಣಯಂ, ವಚನ ಸಂಕಲನಕಾರರು, ವಚನ ವ್ಯಾಖ್ಯಾನಕಾರರು, ವೀರಶೈವ ಕವಿಗಳು ಪ್ರಬುದ್ಧವಾದ ಸೃಜನೇತರ ಕಾರ್ಯ ನಡೆಯಿತು. ರಾಜಕೀಯ ಪರಿಸ್ಥಿತಿಯಂತು ರಾಷ್ಟ್ರ-ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರೌಢದೇವರಾಯನನ್ನು ಶ್ರೇಷ್ಠ ದೊರೆಯಾಗಿ ಪರಿಗಣನೆಯಾಗಿದ್ದ.

ವಿಜಯನಗರ ನಾಮಕರಣದಲ್ಲಿ 'ಕರ್ನಾಟಕ ಸಾಮ್ರಾಜ್ಯ' ನಿರ್ಮಾಣಕ್ಕೆ ಭದ್ರಬುನಾದಿ ಹಾಕಿದ್ದು ಪ್ರೌಢದೇವರಾಯನೇ ಎಂಬುದು ಚಾರಿತ್ರಿಕ ಸತ್ಯವಾಗಿದೆ. ಈತನ ನಂತರ ಬಂದ ಕೃಷ್ಣದೇವರಾಯನು ತುಳುವ ವಂಶದವನು. ಕವಿಯೂ ಆಗಿದ್ದ ಈತನ ಕೃತಿ 'ಆಮುಕ್ತಮೌಲ್ಯ'ವು ತೆಲುಗಿನ ಪಂಚ ಮಹಾಕಾವ್ಯಗಳಲ್ಲಿ ಒಂದು.

ಹೊಸಪೇಟೆ ಎಂಬ ನಗರ ಪುರಾಣ ಕಾಲದಿಂದ ಆಧುನಿಕ ವಿದ್ಯುನ್ಮಾನ ಯುಗದವರಿಗೆ ಪ್ರಮುಖ ಕಾಲಘಟ್ಟಗಳನ್ನು ಹೀಗೆ ಕಂಡಿದೆ. ಮಾತಂಗಮುನಿ ಬೃಹದ್ದೇಶಿ ಕೃತಿ ರಚನೆ, ಹರಿಹರ ರಾಘವಾಂಕ ಕೃತಿ ರಚನೆ, ಕರ್ಣಾಟಕ ಸಾಮ್ರಾಜ್ಯ ಸ್ಥಾಪನೆ, ಪ್ರೌಢದೇವರಾಯನ ಕಾಲ, ಕೃಷ್ಣದೇವರಾಯನ ಕಾಲ, ಹರಪನಹಳ್ಳ ಪಾಳೆಯಗಾರರ ಆಳ್ವಿಕೆ (1748), ಹೈದರಾಲಿ ಟಿಪ್ಪುವಿನ ಕಾಲ (1748-1799), ಮದ್ರಾಸ್ ಪ್ರಾಂತ್ಯದಲ್ಲಿ ಹೊಸಪೇಟೆಯನ್ನು ಉಪವಿಭಾಗ ಕೇಂದ್ರವಾಗಿದ ಕಾಲ ಏಕೀಕರಣದಲ್ಲಿ ಅಧಿಕೃತವಾಗಿ ಉಪವಿಭಾಗಾಧಿಕಾರಿಗಳ ಕೇಂದ್ರವಾದ ಕಾಲ (1953) ಬಳ್ಳಾರಿ ಜಿಲ್ಲೆಯ ಪ್ರಮುಖ ತಾಲ್ಲೂಕು ಕೇಂದ್ರವಾಗಿದ್ದ ಕಾಲ (1859) ಇದೀಗ ಜಿಲ್ಲಾ ಕೇಂದ್ರವಾದ ಸಂದರ್ಭ (2021) ವಿಶೇಷವೆಂದರೆ ಪೌರಾಣಿಕವಾದ, ಚಾರಿತ್ರಿಕವಾದ ಹೆಸರು ಉಳಿದಿದ್ದು ಸಾರ್ಥಕವಾಗಿದೆ.

(ಲೇಖಕರು ವಿಜಯನಗರ ಕಾಲೇಜಿನ ಪ್ರಾಧ್ಯಾಪಕರು, ಹಿರಿಯ ಸಾಹಿತಿಗಳು) ❖

ಹೊಳೆದಿದ್ದು ವಿಜಯನಗರ, ಉಳಿದಿದ್ದು ಬಳ್ಳಾರಿ!

● ಕೆ.ನರಸಿಂಹಮೂರ್ತಿ

ಬಳ್ಳಾರಿ ಜಿಲ್ಲೆಯ ಐದು ತಾಲ್ಲೂಕುಗಳಾದ ಬಳ್ಳಾರಿ, ಕುರುಗೋಡು, ಕಂಪ್ಲಿ, ಸಿರುಗುಪ್ಪ ಮತ್ತು ಸಂಡೂರು ತಾಲ್ಲೂಕು ತಮ್ಮದೇ ರೀತಿಯಲ್ಲಿ ಅನನ್ಯವಾಗಿವೆ.

ವಿಭಜನೆ ಎಂಬುದು ಕಳೆದುಕೊಳ್ಳುವ ಮತ್ತು ಪಡೆದುಕೊಳ್ಳುವ ಹೊಸ ಪ್ರಕ್ರಿಯೆ. ಅದು ಹಳೆಯ ನೆನಪುಗಳಿಂದ ಬಿಡಿಸಿಕೊಂಡು ಹೊಸ ಬದುಕಿಗೆ ಹೊರಳಿಕೊಳ್ಳುವ ಬಗೆಯೂ ಹೌದು. ಜೀವಜಗತ್ತಿನ ಬದುಕು ಹಲವು ವಿಭಜನೆಗಳ ಮೊತ್ತ. ಜಿಲ್ಲೆಯ ವಿಭಜನೆ ಎಂಬುದು ವಿಸ್ತಾರವಾದ ಬದುಕಿನ ಒಂದು ಭಾಗವಷ್ಟೇ. ಅದರೊಂದಿಗೇ ರಾಜಕೀಯ, ಸಾಂಸ್ಕೃತಿಕ, ಸಾಮಾಜಿಕ, ಭಾಷಿಕ, ಪ್ರಾದೇಶಿಕ ಪಲ್ಲಟಗಳೂ ಸಹಜ.

ಜಿಲ್ಲೆಯನ್ನು ವಿಭಜಿಸಿದ ಬಳಿಕ ಬಳ್ಳಾರಿಗೆ ಉಳಿದಿದ್ದು ಏನು? ಮುಂದಿನ ದಿನಗಳಲ್ಲಿ ಬಳ್ಳಾರಿಯು ಏನೇನನ್ನು ಪಡೆದುಕೊಳ್ಳಬಹುದು ಅಥವಾ ಇರುವುದನ್ನೇ ಹೊಸ ಕಣ್ಣುಗಳಲ್ಲಿ ಹೇಗೆ ನೋಡಬಹುದು ಎಂಬ ಬಗ್ಗೆ ಚರ್ಚೆ ನಡೆದಿದ್ದು ಕಡಿಮೆ. ಆದರೆ ಬಳ್ಳಾರಿ ಏನನ್ನು ಕಳೆದುಕೊಳ್ಳುತ್ತದೆ ಎಂಬ ಭಾವುಕ ಅಭಿಪ್ರಾಯಗಳಿಗಂತೂ ಬರವಿಲ್ಲ.

ಕಳೆದುಕೊಳ್ಳುವುದರ ಕುರಿತ ತೀವ್ರವಾದ ಭಯ, ಆತಂಕಗಳು ವಾಸ್ತವವನ್ನು ವಸ್ತುನಿಷ್ಠ ಕಣ್ಣುಗಳಿಂದ ನೋಡಲು ಬಿಡುವುದಿಲ್ಲ. ಒಂದನ್ನು ಕಳೆದುಕೊಂಡರೆ ಮತ್ತೊಂದು ಸಿಗುತ್ತದೆ. ಅಥವಾ ಏನನ್ನಾದರೂ ಪಡೆದುಕೊಳ್ಳಬೇಕೆಂದರೆ ಮತ್ತೇನನ್ನೋ ಕಳೆದುಕೊಳ್ಳಲೇಬೇಕು.

ಇಂಥ ತತ್ವಜ್ಞಾನದ ಮಾತುಗಳಿಂದ ಪ್ರಯೋಜನವಿಲ್ಲ ಎನ್ನುವವರು ವಿಭಜನೆಯ ವಿರೋಧಿಗಳು. ಅವರ ಮಾತಿನಲ್ಲೂ ಸತ್ಯ ಉಂಟು. ಬಳ್ಳಾರಿ ಎಂದರೆ ಹಂಪಿ, ತುಂಗಭದ್ರಾ ಜಲಾಶಯ ಎಂದಷ್ಟೇ ನಮ್ಮ ಗ್ರಹಿಕೆಯನ್ನು ಸೀಮಿತಗೊಳಿಸಿಕೊಂಡರೆ ಜಿಲ್ಲೆಯ ವಿಭಜನೆಯು ಕೊನೆ ಇರದ ದುಃಖಕ್ಕೆ ದೂಡುತ್ತದೆ. ಅಂಥ ದುಃಖದಲ್ಲೇ ಅಖಂಡ ಬಳ್ಳಾರಿ ಜಿಲ್ಲೆಯ ಪ್ರತಿಪಾದಕರಿದ್ದಾರೆ.

ಆದರೆ ವಿಭಜನೆಯ ಬಳಿಕ ಉಳಿದಿರುವ ಬಳ್ಳಾರಿ ಜಿಲ್ಲೆಯ ಐದು ತಾಲ್ಲೂಕುಗಳಾದ ಬಳ್ಳಾರಿ, ಕುರುಗೋಡು, ಕಂಪ್ಲಿ, ಸಿರುಗುಪ್ಪ ಮತ್ತು ಸಂಡೂರು ತಾಲ್ಲೂಕು ತಮ್ಮದೇ ರೀತಿಯಲ್ಲಿ ಅನನ್ಯವಾಗಿವೆ. ಶ್ರೀಮಂತವಾಗಿವೆ. ಒಂದೊಂದನ್ನೇ ಅದರ ವಿವರಗಳೊಂದಿಗೆ ನೋಡುತ್ತಾ ಹೊರಟರೆ, ನಾವೇಕೆ ಹೀಗೆ ನೋಡಿರಲಿಲ್ಲ ಎಂದು ಅನ್ನಿಸದೇ ಇರದು.

ವಿಭಜನೆಯೋತ್ತರ ಬಳ್ಳಾರಿಯ ಚಿತ್ರಣವನ್ನು ಸಮಗ್ರವಾಗಿ ನೋಡಿದರೆ ಅಷ್ಟೊಂದು ದುಃಖ ಪಡುವ ಅಗತ್ಯವಿಲ್ಲ ಎನ್ನಿಸುತ್ತದೆ. ಅದಕ್ಕೆ ಮೊದಲು ಇಂಬಾಗಿ ನಿಲ್ಲುವುದು ಬಳ್ಳಾರಿಯ ಪ್ರಾಚೀನ ಮತ್ತು ಆಧುನಿಕ ಚರಿತ್ರೆ.

ಆದಿಮಾನವನ ನೆಲೆ ಇಲ್ಲೇ...: ಆದಿಮಾನವನ ನೆಲೆಗಳಲ್ಲಿ ಒಂದಾದ ಸಂಗನಕಲ್ಲು ಇರುವುದಾದರೂ ಎಲ್ಲಿ? ಬಳ್ಳಾರಿ ತಾಲ್ಲೂಕಿನಲ್ಲಿ. ಇಡೀ ವಿಶ್ವದ ಚರಿತ್ರೆಯ ಭೂಪಟದಲ್ಲಿ ಸಂಗನಕಲ್ಲು, ಹಂಪಿಗಿಂತೂ ಹಳೆಯ ಸ್ಮಾರಕವಾಗಿ ನಿಂತಿದೆ. ಅದನ್ನು ಮೊದಲು ಪತ್ತೆ ಹಚ್ಚಿದ ಬ್ರೂಸ್‌ಫೂಟ್ ಹೆಸರಿನಲ್ಲೇ ಬಳ್ಳಾರಿ ನಗರದಲ್ಲಿ ಮ್ಯೂಸಿಯಂ ತಲೆ ಎತ್ತಿದೆ.

ಇದೇ ಮ್ಯೂಸಿಯಂ ಆವರಣದಲ್ಲೇ ಇರುವ ನಗರ ಕೇಂದ್ರ ಗ್ರಂಥಾಲಯ ಈಗ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರವಾಗಿ ಮಾರ್ಪಾಟಾಗಿದೆ. ಸಾಂಸ್ಕೃತಿಕ ಸಮುಚ್ಚಯದ ಆವರಣ ಹಸಿರಿನಿಂದ, ಹೊಸ ಅಲಂಕಾರಗಳಿಂದ ಕಂಗೊಳಿಸುತ್ತಿವೆ.

ಬಳ್ಳಾರಿ ಜೀನ್ಸ್ ಗಾರ್ಮೆಂಟ್ಸ್ ಉದ್ಯಮಕ್ಕೂ ಪ್ರಖ್ಯಾತವಾಗಿರುವ ನಗರ, ಇಲ್ಲಿ ತಯಾರಾದ ಜೀನ್ಸ್ ಸಿದ್ಧ ಉಡುಪುಗಳಿಗೆ ಹೊರ ರಾಜ್ಯಗಳಲ್ಲೂ ಅಪಾರ ಬೇಡಿಕೆಯುಂಟು.

‘ಬಳ್ಳಾರಿ ಕೋಟೆ’ ಅಥವಾ ‘ಬಳ್ಳಾರಿ ಗುಡ್ಡ’: ಬಳ್ಳಾರಿ ಹೆಸರಿನೊಂದಿಗೇ ಇರುವ ಕೋಟೆಯ ಇತಿಹಾಸವು ಬಹಳ ಹಳೆಯದು. 16ನೇ ಶತಮಾನದಲ್ಲಿ ನಿರ್ಮಾಣವಾದ ಕೋಟೆಯನ್ನು ವಿಜಯನಗರ ಸಾಮ್ರಾಜ್ಯದ ಪತನದ ಬಳಿಕ ಸಾಮಂತ ರಾಜ ಹನುಮಂತ ನಾಯಕ ಎಂಬುವವನು ನವೀಕರಿಸಿದ. 1775ರಲ್ಲಿ ಹೈದರ್ ಅಲಿ ಕೋಟೆಯನ್ನು ವಶಪಡಿಸಿಕೊಂಡು ಮೇಲು ಕೋಟೆ ಮತ್ತು ಕೆಳಗಿನ ಕೋಟೆಯನ್ನು ನಿರ್ಮಿಸಿದ. 1792ರವರೆಗೆ ಕೋಟೆಯು ಟಿಪ್ಪು ಸುಲ್ತಾನನ ವಶದಲ್ಲಿತ್ತು ಎಂಬುದು ದಾಖಲೆಗಳಲ್ಲಿದೆ. ಬೃಹತ್ ಏಕಶಿಲೆಯಿಂದ ಆವೃತವಾದ ಕೋಟೆಯೂ ಬಳ್ಳಾರಿಯ ಹೆಮ್ಮೆಯೇ. ಇದು ಚಾರಣ ಪ್ರಿಯರ ಸ್ವರ್ಗ. ಒಂದು ದಿನದ ಪಿಕ್‌ನಿಕ್ ಬಯಸುವ ಕುಟುಂಬಸ್ಥರಿಗೆ ಹೇಳಿಮಾಡಿಸಿದ ತಾಣ.

ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

ಏಕೀಕರಣಕ್ಕೆ ಬಳ್ಳಾರಿಯ ಮುನ್ನುಡಿ...: ಕರ್ನಾಟಕ ಏಕೀಕರಣಕ್ಕೆ ಮುನ್ನುಡಿ ಬರೆದಿದ್ದು ಇದೇ ಬಳ್ಳಾರಿ ಜಿಲ್ಲೆ ಎಂಬುದು ಭಾರತದ ಚರಿತ್ರೆಯಲ್ಲಿ ದಾಖಲಾಗಿದೆ. ಭಾಷಾವಾರು ಪ್ರಾಂತ್ಯಗಳ ರಚನೆಯ ಸಂದರ್ಭದಲ್ಲಿ ಆಂಧ್ರಕ್ಕೆ ಬಳ್ಳಾರಿಯನ್ನು ಸೇರಿಸಬೇಕು ಎಂದು ಎದ್ದ ಕೂಗಿಗೆ ಪ್ರಬಲ ಪ್ರತಿರೋಧ ಒಡ್ಡಿ ನಡೆದ ಹೋರಾಟದಲ್ಲಿ ಹುತಾತ್ಮರಾದ ಪೈಲ್ವಾನ್ ರಂಜಾನ್ ಸಾಬ್ ಇದೇ ಬಳ್ಳಾರಿಯವರು ಎಂಬುದು ಹೆಮ್ಮೆಯ ವಿಷಯ.

ಬ್ರಿಟಿಷ್ ಆಡಳಿತದ ಚರಿತ್ರೆಗೆ ಜೀವಂತ ಸಾಕ್ಷಿಗಳಾಗಿ ಬಳ್ಳಾರಿ ನಗರದಲ್ಲಿ ಹಲವು ಪಾರಂಪರಿಕ ಕಟ್ಟಡಗಳು ಇನ್ನೂ ಹೊಳೆಯುತ್ತಿವೆ ಎಂಬುದನ್ನು ಮರೆಯುವಂತಿಲ್ಲ. ಈ ಕಟ್ಟಡಗಳೆಲ್ಲಕ್ಕೂ ಕಿರೀಟ ಪ್ರಾಯವಾಗಿ ಜಿಲ್ಲಾಧಿಕಾರಿ ಕಚೇರಿ ಇದೆ. ಅದರ ಎದುರಿಗೇ ರೈಲು ನಿಲ್ದಾಣವಿದೆ. ಪಕ್ಕದಲ್ಲಿರುವ ಮುಖ್ಯ ಅಂಚೆ ಕಚೇರಿ, ಕೋಟೆ ಪ್ರದೇಶದಲ್ಲಿರುವ ವಿಭಾಗೀಯ ಅಂಚೆ ಕಚೇರಿ, ಬಳ್ಳಾರಿ ಕೇಂದ್ರ ಕಾರಾಗೃಹ, ಜೈಲುಗಳಾಗಿದ್ದ ಇಂದಿನ ವಿಮ್ಸ್ ಆಸ್ಪತ್ರೆ, ಹಲವು ಚರ್ಚ್‌ಗಳು, ಸರ್ಕಾರಿ ಐಟಿಐ.. ಹೀಗೆ ಕಟ್ಟಡಗಳ ಪಟ್ಟಿ ಬೆಳೆಯುತ್ತದೆ.

ಭತ್ತದ ನಾಡು ಸಿರುಗುಪ್ಪ..: ಬಳ್ಳಾರಿ, ಕೊಪ್ಪಳ ಮತ್ತು ರಾಯಚೂರು ಜಿಲ್ಲೆಯ ಪೈಕಿ ‘ಭತ್ತದ ನಾಡು’ ಎಂದೇ ಸಿರುಗುಪ್ಪ ಪ್ರಖ್ಯಾತ. ತುಂಗಭದ್ರಾ ಜಲಾಶಯದ ನೀರನ್ನೇ ನೆಚ್ಚಿಕೊಂಡು ಇಲ್ಲಿ ಬಹುತೇಕ ರೈತರು ಭತ್ತ ಬೆಳೆಯುತ್ತಾರೆ. ಆ ಭತ್ತ ರಾಜ್ಯದ ಹೊರಗೂ ಜನರ ಪ್ರೀತಿಯನ್ನು ಗಳಿಸಿರುವುದು ವಿಶೇಷ. ವಿಜಯನಗರ ಸಾಮ್ರಾಜ್ಯದ ಹಳೇಕುರುಹುಗಳೂ ಇಲ್ಲಿ ಇವೆ. ಅದಕ್ಕೆ ತೆಕ್ಕಲಕೋಟೆ ಪ್ರಮುಖ ಸಾಕ್ಷಿ.

ಕೋಟೆಗಳ ನಾಡು ಕುರುಗೋಡು..: ಬಳ್ಳಾರಿ ಜಿಲ್ಲೆಯು ಕೋಟೆಗಳ ನಾಡು ಎಂದೇ ಪ್ರಸಿದ್ಧಿ. ಇಂಥ ಜಿಲ್ಲೆಯಲ್ಲಿರುವ ಕುರುಗೋಡು ಪ್ರಾಗ್ಐತಿಹಾಸಿಕ ಗುಡ್ಡಗಳು ಮತ್ತು ಕೋಟೆಗಳು ಹಾಗೂ ಪುರಾತನ ದೇವಾಲಯಗಳಿಂದ ಕೂಡಿರುವ ಊರು. ಕಂಚಿನ ಯುಗದ್ದೆಂದು ಹೇಳಲಾಗಿರುವ ಚಿತ್ರಕಲೆಗಳು ಇಲ್ಲಿನ ಕೆಲವು ಗುಹೆಗಳಲ್ಲುಂಟು. ಮಯೂರ, ಶಾತವಾಹನ, ಚಾಲುಕ್ಯರ ಆಳ್ವಿಕೆಗೆ ಒಳಪಟ್ಟಿದ್ದ ನಾಡು. ಕುರುಗೋಡನ್ನು ಪಕ್ಷಿನೋಟದ ಮೂಲಕ ನೋಡಲು ಪ್ರಯತ್ನಿಸಿದರೆ, ಸುತ್ತಲೂ ರಮಣೀಯ ಕಲ್ಲಿನ ಗುಡ್ಡಗಳೇ ಕಾಣುತ್ತವೆ.

ಸ್ವಾತಂತ್ರ್ಯ ಪೂರ್ವದ ಹಳೇ ಬಳ್ಳಾರಿಯಲ್ಲಿ 20 ತಾಲ್ಲೂಕುಗಳಿದ್ದವು. ಆಧುನಿಕೋತ್ತರ ಬಳ್ಳಾರಿಯಲ್ಲಿ ಕೇವಲ ಐದು. ಮೊದಲಿನ ಇಪ್ಪತ್ತರಲ್ಲಿ ಹಲವು ಆಂಧ್ರಕ್ಕೆ ಸೇರಿಹೋಗಿವೆ. ಆ ವಿಭಜನೆಗಳ ಕಾಲಘಟ್ಟ ಹಳೆಯದ್ದು, ಈಗಿನದ್ದು ಹೊಸದು. ವಿಭಜನೆಗಳ ಸರಣಿಯನ್ನು ಹೊತ್ತ ಬಳ್ಳಾರಿಯ ಮುಂದಿನ ದಾರಿಯೂ ದೊಡ್ಡದಿದೆ.

‘ಹೊಳೆದದ್ದು ತಾರೆ, ಉಳಿದಿದ್ದು ಆಕಾಶ’ ಎಂಬುದು ಕವಿ ಸಾಲು. ಸದ್ಯ ವಿಜಯನಗರ ನಕ್ಷತ್ರದಂತೆ ಹೊಳೆಯುತ್ತಿದೆ. ಆಕಾಶದಂತೆ ಬಳ್ಳಾರಿ ಉಳಿದಿದೆ.



ಬಳ್ಳಾರಿ ಕೋಟೆಯೊಳಗೆ ಚಾರಣಿಗರ ಸುತ್ತಾಟ



ಸಂಡೂರಿನ ನಾರಿ ಹಳ್ಳ ಜಲಾಶಯದ ರಮಣೀಯ ನೋಟ

ಅದಿರು ನಿಧಿ ಸಂಡೂರು

ಕಬ್ಬಿಣದ ಅದಿರಿನ ಗಣಿಗಾರಿಕೆಯಿಂದ ರಾಜ್ಯ ಸರ್ಕಾರಕ್ಕೆ ಅತ್ಯಧಿಕ ವರಮಾನವನ್ನು ತಂದುಕೊಡುವ ತಾಲ್ಲೂಕು ಎಂಬ ಖ್ಯಾತಿಯುಳ್ಳ ಸಂಡೂರು ವೈವಿಧ್ಯಮಯವಾದ ತಾಲ್ಲೂಕು. ‘ಸೊಂಡೂರು ಭೂ ಹೋರಾಟ’ ಕರ್ನಾಟಕದ ಚರಿತ್ರೆಯಲ್ಲಿ ಮಹತ್ವದ ಘಟ್ಟ. ಬೆಟ್ಟ, ಝರಿಗಳು, ತೀರ್ಥಗಳುಳ್ಳ ಸಂಡೂರಿನ ಅರಣ್ಯ ಪ್ರದೇಶ ಚಾರಣಿಗರಿಗೆ ಅತ್ಯಂತ ನೆಚ್ಚಿನ ತಾಣ. ಇಲ್ಲಿನ ರಮ್ಯಮನೋಹರ ತಾಣಗಳನ್ನು ನೋಡಿಯೇ ಮಹಾತ್ಮ ಗಾಂಧೀಜಿ ’ಸೀ ಸಂಡೂರ್ ಇನ್ ಸೆಪ್ಟೆಂಬರ್’ ಎಂದು ಉದ್ಗಾರ ಹೊರಡಿಸಿದ್ದರು ಎಂಬ ಮಾತೂ ಇದೆ. ಇಲ್ಲಿನ ನಾರಿಹಳ್ಳ ಜಲಾಶಯದ ನೀರಿನಲ್ಲಿ ಕೆಲವು ಸಿನಿಮಾಗಳ ಚಿತ್ರೀಕರಣವೂ ನಡೆದಿತ್ತು. ‘ಮಾನಸ ಸರೋವರ’ದ ಪ್ರಸಿದ್ಧ ಹಾಡು ಕೂಡ ಇಲ್ಲಿಯೇ ಚಿತ್ರೀಕರಣಗೊಂಡಿತ್ತು.

ಜಿಂದಾಲ್ ಕಾರ್ಖಾನೆಯ ಸ್ಥಾಪನೆಯಿಂದ ಪರಿಸರ ಹಾಗೂ ಜನಜೀವನದ ಮೇಲೆ ಆಗಿರುವ ದುಷ್ಪರಿಣಾಮಗಳ ಕುರಿತ ದೂರು, ಸಂಕಟಗಳ ಜೊತೆಗೇ, ಜಿಂದಾಲ್‌ನಿಂದಾಗಿ ದೇಶದ ಕೈಗಾರಿಕೋದ್ಯಮದ ಭೂಪಟದಲ್ಲಿ ಬಳ್ಳಾರಿಯ ಹೆಸರಿಗೊಂದು ಪ್ರಾಮುಖ್ಯತೆ ಬಂದಿರುವುದನ್ನು ಮರೆಯಲಾಗದು. ಹೊರರಾಜ್ಯಗಳ ಸಾವಿರಾರು ಕಾರ್ಮಿಕರು ಇಲ್ಲಿ ನೆಲೆಗೊಂಡಿದ್ದಾರೆ. ಕನ್ನಡಿಗರಿಗೆ ಸಮರ್ಪಕವಾದ ಉದ್ಯೋಗಗಳು ದೊರಕಿಲ್ಲ ಎಂಬ ಆಕ್ಷೇಪಕ್ಕೆ ಸಮಾಧಾನಕರ ಉತ್ತರ ಇನ್ನೂ ದೊರಕಿಲ್ಲ. ಸಾವು–ನೋವುಗಳಿಗೂ ಲೆಕ್ಕವಿಲ್ಲ.

ಕಳಚದ ಕೊಂಡಿ ಕಂಪ್ಲಿ

ಸಿರುಗುಪ್ಪದಂತೆಯೇ ತುಂಗಭದ್ರಾ ನದಿ ತೀರದಲ್ಲೇ ಇರುವ ಕಂಪ್ಲಿ ವಿಜಯನಗರ ಸಾಮ್ರಾಜ್ಯದ ಇತಿಹಾಸದಲ್ಲಿ ಪ್ರಮುಖ ಸ್ಥಾನವನ್ನು ಗಳಿಸಿದೆ.

‘ವಿಜಯನಗರದ ಹೆಬ್ಬಾಗಿಲು’ ಎಂದೇ ಕರೆಯಲಾಗುವ ಊರು ‘ಕಂಪ್ಲಿ’ಗೆ ವಿಜಯನಗರ ಸಾಮ್ರಾಜ್ಯಕ್ಕೆ ಮುನ್ನುಡಿ ಬರೆದ ಕಂಪೀಲರಾಯನಿಂದಲೇ ಹೆಸರು ಬಂತು. ಇಂಥ ಹಿನ್ನೆಲೆಯುಳ್ಳ ಕಂಪ್ಲಿಯನ್ನು ವಿಜಯನಗರ ಜಿಲ್ಲೆಗೆ ಸೇರಿಸಬೇಕು ಎಂಬ ಆಗ್ರಹ ಈಡೇರಿಲ್ಲ. ಬಳ್ಳಾರಿಯ ವಿಭಜನೆಯಾದರೂ ವಿಜಯನಗರ ಇತಿಹಾಸದ ಮೂಲಮಾತೃಕೆ ಇಲ್ಲೇ ಉಳಿದಿದೆ.

ವಿಜಯನಗರದ ಆನಂದ...

ವಿಜಯನಗರ ಜಿಲ್ಲಾ ರಚನೆಯ ಗೆಜೆಟ್ ಪ್ರತಿಯನ್ನು ಅಧಿಕಾರಿಗಳು ಸಚಿವ ಆನಂದಸಿಂಗ್ ಅವರಿಗೆ ಹಸ್ತಾಂತರಿಸಿದ ಕ್ಷಣ...

ವಿಜಯನಗರ ಜಿಲ್ಲಾ ರಚನೆಯಾದ ಬಳಿಕ ಸಚಿವ ಆನಂದಸಿಂಗ್ ಹಾಗೂ ಪತ್ನಿ ಲಕ್ಷ್ಮಿ ಸಿಂಗ್ ಅವರು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಅಭಿನಂದಿಸಿದ ಕ್ಷಣ

ವಿಜಯನಗರದ ಜಿಲ್ಲಾ ರಚನೆ ಬಳಿಕ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರನ್ನು ಸಚಿವ ಆನಂದಸಿಂಗ್ ಹಾಗೂ ಪತ್ನಿ ಲಕ್ಷ್ಮಿ ಸಿಂಗ್ ಭೇಟಿ ಮಾಡಿದ ಕ್ಷಣ

ವಿಜಯನಗರ ಜಿಲ್ಲಾ ರಚನೆಗೆ ಸಹಕರಿಸಿದ ಬಿಜೆಪಿ ನಾಯಕ ಬಿ.ಎಸ್. ಯಡಿಯೂರಪ್ಪ ಅವರನ್ನು ಸಚಿವ ಆನಂದ ಸಿಂಗ್ ಅಭಿನಂದಿಸಿದ ಕ್ಷಣ

ನೋಡ ಬನ್ನಿ ಪಾಳೇಗಾರರ ಕೂಡ್ಲಿಗಿ

● ಎ.ಎಂ.ಸೋಮಶೇಖರಯ್ಯ

ಪುರಾತನ ಕಾಲದ ಪಳೆಯುಳಿಕೆಗಳು, ಐತಿಹಾಸಿಕ ದೇವಸ್ಥಾನಗಳು, ಪಾಳೇಗಾರರು ಆಳಿದ ಸ್ಥಳಗಳು, ಗುಡೇಕೋಟೆಯ ಕರಡಿಧಾಮ, ಪಟ್ಟಣದಲ್ಲಿನ ಗಾಂಧಿ ಚಿತಾ ಭಸ್ಮವಿರುವ ಹುತಾತ್ಮರ ಸ್ಮಾರಕ ಸೇರಿದಂತೆ ಕೂಡ್ಲಿಗಿ ತಾಲ್ಲೂಕಿನಲ್ಲಿ ಅನೇಕ ಪ್ರಮುಖ ತಾಣಗಳಿವೆ.

ಗುಣಾಸಾಗರದಲ್ಲಿ ವಿಜಯನಗರ ಅರಸರ ಕಾಲದಲ್ಲಿ ನಿರ್ಮಾಣ ಮಾಡಿದ್ದರನ್ನೆಲಾದ ಶ್ರೀಕೃಷ್ಣ ದೇವಸ್ಥಾನವಿದ್ದು, ಏಕಶಿಲೆಯ ಶ್ರೀವೇಣುಗೋಪಾಲ ಕೃಷ್ಣನ ಸುಂದರ ಮೂರ್ತಿಯಿಂದ ಈ ಸ್ಥಳವು ಪ್ರಸಿದ್ಧಿ ಪಡೆದಿದೆ. ಈ ದೇವಾಲಯವು ಮಹಾನ್ ಶಿಲ್ಪಿ ಜಕಣಾಚಾರಿ ಕೆತ್ತನೆ ಮಾಡಿದ್ದಾರೆ ಎಂಬ ಪ್ರತೀತಿ ಇದೆ.

ಚಿತ್ರದುರ್ಗದ ಒನಕೆ ಓಬವ್ವನ ತವರೂರಾದ ಗುಡೇಕೋಟೆಯಲ್ಲಿ ಪಾಳೇಗಾರರು ಆಳಿದ ಅನೇಕ ಕುರುಹುಗಳಿವೆ. ಗ್ರಾಮದ ಪಕ್ಕದಲ್ಲಿರುವ ಬೆಟ್ಟದಲ್ಲಿ ಉಗ್ರಾಣ, ಸಿಹಿ ನೀರಿನ ಬಾವಿ, ಕೋಟೆಯ ಕುರುಹುಗಳಿವೆ. ಅಲ್ಲದೆ ಗ್ರಾಮದಲ್ಲಿ ಶಿವನ ತೊಡೆಯ ಮೇಲೆ ಪಾರ್ವತಿ ಕುಳಿತಿರುವ ಅಪರೂಪದ ಮೂರ್ತಿ ಇರುವ ದೇವಸ್ಥಾನ ಸೇರಿದಂತೆ ಆಂಜನೇಯ, ಚೌಡಮ್ಮ, ಮಲಿಯಮ್ಮ, ರಾಮಲಿಂಗೇಶ್ವರ, ಬಸವಣ್ಣ, ಕಾಳಮ್ಮ, ಈಶ್ವರ, ಲಕ್ಷ್ಮೀ ವೆಂಕಟೇಶ್ವರ, ಚೌಳೇಶ್ವರ, ಪಂಚಲಿಂಗೇಶ್ವರ ಸೇರಿ ವಿವಿಧ ದೇವಸ್ಥಾನಗಳು ಇವೆ.

ಜರಿಮಲಿಯಲ್ಲಿ ವಿಶಾಲವಾದ ಬಯಲು ಪ್ರದೇಶದಲ್ಲಿ ಕೋಟೆಯ ಅವಶೇಷಗಳು, ದೊಡ್ಡದಾದ ಹೆಬ್ಬಾಗಿಲು, ಆನೆಹೊಂಡ, ಶಸ್ತ್ರಾಸ್ತ್ರ ಉಗ್ರಾಣ ಮತ್ತಿತರ ಕುರುಹುಗಳಿವೆ. ಪಾಳೇಗಾರರ ಕೊನೆಯ ತಲೆಮಾರಿನ ಶ್ರೀ ಸಿದ್ದಪ್ಪ ನಾಯಕರು ಈಗಲೂ ಇದ್ದಾರೆ. ಜರಿಮಲೆಯ ಸೀತಾಫಲ ಹಣ್ಣು ಈ ಭಾಗದಲ್ಲಿ ಪ್ರಸಿದ್ಧ. ಅದರಲ್ಲೂ ಉಪ್ಪರಿಗೆ ಹಣ್ಣುಗಳು ಗಾತ್ರದಲ್ಲಿ, ಸಿಹಿಯಲ್ಲಿ ಮಧುರವಾದವುಗಳು.

ಕಾನಮಡುಗು ಗ್ರಾಮವು ದಾಸೋಹ ಹಾಗೂ ಶಿಕ್ಷಣಕ್ಕೆ ಪ್ರಸಿದ್ಧಿಯಾಗಿದ್ದು, ಶಿವಶರಣ ಶ್ರೀಶರಣಬಸವೇಶ್ವರರ ಯೋಗಸಮಾಧಿಯ ಗದ್ದುಗೆಯಿದೆ. ಇಲ್ಲಿನ ದಾಸೋಹ ಮಠದಲ್ಲಿ ನಾಡಿನ ಹಿರಿಯರು ರೂಪುಗೊಂಡಿದ್ದಾರೆ. ಮಠದಿಂದ ನಡೆಯುವ ಶಿಕ್ಷಣ ಸಂಸ್ಥೆಗಳು, ದಾಸೋಹ ಸುತ್ತಲಿನ ಜನರ ಮೆಚ್ಚುಗೆ ಗಳಿಸಿದೆ. ಕುಮತಿ ಬಳಿ ಮಾನವಾಕೃತಿ ಕಲ್ಲುಗಳಿದ್ದು, ಇವು ಶಿಲಾಯುಗಕ್ಕೆ ಸೇರಿದವು ಎಂದು ಹೇಳಲಾಗುತ್ತಿದೆ. ಆದರೆ, ಅವುಗಳಿಗೆ ರಕ್ಷಣೆ ಇಲ್ಲದೆ ಸೊರಗುತ್ತಿವೆ. ಕೈವಲ್ಯಾಪುರದಲ್ಲಿನ ಅನಂತಪದ್ಮನಾಭ ಮೂರ್ತಿ ನೋಡುಗರನ್ನು ಸೆಳೆಯುತ್ತಿದೆ.

ಮೊರಬ ಗ್ರಾಮದ ಬಳಿ ವಿಜಯನಗರ ಅರಸರ ಕಾಲದಲ್ಲಿ ಬಸಪ್ಪ ನಾಯಕ ಎನ್ನುವ ಪಾಳೇಗಾರ ವೀರನದುರ್ಗ ಕೋಟೆಯನ್ನು ನಿರ್ಮಿಸಿದ್ದ. ಪಂಚ ಗಣಾಧೀಶರಲ್ಲಿ ಒಬ್ಬರೆನಿಸಿರುವ ಕೊಟ್ಟೂರೇಶ್ವರ ಸ್ವಾಮಿ ಇಲ್ಲಿ ಕೆಲಕಾಲ ನೆಲೆಸಿದ್ದರು ಎಂಬುದಕ್ಕೆ ಸಾಕ್ಷಿ ಇದೆ.

2ನೇ ದೊಡ್ಡ ತಾಲ್ಲೂಕು: ರಾಜ್ಯದಲ್ಲಿಯೇ ಎರಡನೇ ದೊಡ್ಡ ತಾಲ್ಲೂಕು ಎಂಬ ಹೆಗ್ಗಳಿಕೆ ಪಡೆದಿರುವ ಕೂಡ್ಲಿಗಿ ತಾಲ್ಲೂಕು ಹಲವು ವಿಶೇಷಗಳನ್ನು ಒಳಗೊಂಡಿದೆ. ಮಾನವ ಸಂಸ್ಕೃತಿ ಆರಂಭ ಕಾಲದಿಂದ ಹಿಡಿದು ಆಧುನಿಕ ಕಾಲದವರೆಗೂ ಅನೇಕ ವಿಶಿಷ್ಟಗಳನ್ನು ತನ್ನ ಒಡಲಲ್ಲಿ ಇಟ್ಟುಕೊಂಡಿದೆ.

ಹುಣಸೆ ಹಣ್ಣು ಹಾಗೂ ರಂಗ ಕಲೆಯಿಂದ ರಾಜ್ಯ ಸೇರಿದಂತೆ ಇತರೆ ರಾಜ್ಯಗಳಲ್ಲಿಯೂ ಹೆಸರು ಮಾಡಿದೆ. ವಿಜಯನಗರ ಕಾಲದಲ್ಲಿ ಅನೇಕ ಪಾಳೇಗಾರರ ಆಡಳಿತಕ್ಕೆ ಒಳಪಟ್ಟು, 20ನೇ ಶತಮಾನದಲ್ಲಿ ಬ್ರಿಟಿಷ್ ಆಡಳಿತವನ್ನು ಕಂಡಿದ್ದು ಈಗ ಇತಿಹಾಸ.

ಕೂಡ್ಲಿಗಿ, ಕೊಟ್ಟೂರು ಪಟ್ಟಣ ಸೇರಿದಂತೆ ನಾಲ್ಕು ಹೋಬಳಿ ಹಾಗೂ 217 ಹಳ್ಳಿಗಳನ್ನು ಹೊಂದಿದ್ದ ತಾಲ್ಲೂಕನ್ನು ಇಬ್ಭಾಗ ಮಾಡಿ, ನೂತನ ಕೊಟ್ಟೂರು ತಾಲ್ಲೂಕು ರಚನೆ ಮಾಡಿದ ನಂತರ ಕೂಡ್ಲಿಗಿ ಪಟ್ಟಣ ಸೇರಿದಂತೆ ಮೂರು ಹೋಬಳಿಗಳೊಂದಿಗೆ 25 ಗ್ರಾಮ ಪಂಚಾಯ್ತಿಗಳನ್ನು ಹೊಂದಿದೆ.

ಮ್ಯಾಸರಹಟ್ಟಿಯಾಗಿದ್ದ ಕೂಡ್ಲಿಗಿ ಪಾಳೇಗಾರರ ಆಡಳಿತದಲ್ಲಿ ಮಹತ್ವದ ಸ್ಥಾನ ಪಡೆದಿತ್ತು. ಅನೇಕ ಪಾಳೇಗಾರರು ಸೇರುತ್ತಿದ್ದರು. ಇದರಿಂದ ಕೂಡಲಗಿ ಎಂಬ ಹೆಸರು ಕಾಲ ಕ್ರಮೇಣ ಕೂಡ್ಲಿಗಿ ಎಂದು ಪರಿವರ್ತನೆಯಾಗಿರಬಹುದು ಎಂದು ಇತಿಹಾಸಕಾರರು ಹೇಳುತ್ತಾರೆ. ಇದಕ್ಕೆ ಸಾಕ್ಷಿ ಎಂಬಂತೆ ಬ್ರಿಟನ್ ರಾಣಿ ಉಳಿದುಕೊಳ್ಳುವುದಕ್ಕೆ ಕಟ್ಟಿಸಿದ್ದ ರಾಣಿ ಛತ್ರ ಇಂದಿಗೂ ಸುಸಜ್ಜಿತವಾಗಿದೆ. ತಾಲ್ಲೂಕು ಕಚೇರಿ, ನ್ಯಾಯಾಲಯ ಹಾಗೂ ಪ್ರವಾಸಿ ಮಂದಿರಗಳು ಬ್ರಿಟಿಷರ ಕಾಲದಲ್ಲಿ ನಿರ್ಮಾಣವಾಗಿದ್ದವು. ಅವುಗಳ ಜಾಗದಲ್ಲೀಗ ಆಧುನಿಕ ಕಟ್ಟಡಗಳು ತಲೆ ಎತ್ತಿವೆ.

ತಾಲ್ಲೂಕು ಮಳೆ ಆಧಾರಿತ ಕೃಷಿ ಅವಲಂಬಿಸಿದೆ. ತಾಲ್ಲೂಕಿನಲ್ಲಿ ಹುಣಸೆ ಹಣ್ಣು ಹೇರಳವಾಗಿ ಬೆಳೆಯಲಾಗುತ್ತಿದೆ. ಉತ್ಕೃಷ್ಟ ಹಣ್ಣಿಗೆ ಹೆಸರಾಗಿದ್ದು, ದೇಶದ ವಿವಿಧ ರಾಜ್ಯಗಳಲ್ಲಿ ತನ್ನ ಬೇಡಿಕೆಯನ್ನು ಉಳಿಸಿಕೊಂಡಿದೆ. ಈ ಹಿಂದೆ ಕಸಿ ಮಾವಿನ ತೋಟಗಳೊಂದಿಗೆ ಜವಾರಿ ಹಣ್ಣಿನ ಮರಗಳು ಸಾಕಷ್ಟು ಇದ್ದವು. ಆದರೆ, ಮಳೆ ಅಭಾವದಿಂದ ತೋಟಗಳು ಹಾಳಾಗಿದ್ದು, ಜವಾರಿ ಮರಗಳು ಕಾಲನ ಮರೆಗೆ ಸೇರಿವೆ.

ರಂಗಭೂಮಿ ತವರೂರು: ರಂಗಭೂಮಿಗೆ ಮತ್ತೊಂದು ಹೆಸರೆ ಕೂಡ್ಲಿಗಿ. ತಾಲ್ಲೂಕಿನಲ್ಲಿ ಅನೇಕ ಪುರುಷರು ಹವ್ಯಾಸಿ ಕಲಾವಿದರಿದ್ದಾರೆ. ಆದರೆ, ಮಹಿಳೆಯರು ಮಾತ್ರ ವೃತ್ತಿ ರಂಗಭೂಮಿ ನಟಿಯರಾಗಿದ್ದಾರೆ. ಅವರಲ್ಲಿ ಪಿ.ಪದ್ಮಾ, ಬಿ.ಶಿವಕುಮಾರಿ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರು.

ವಿರುಪಾಪುರದ ಅಂಜಿನಮ್ಮಗೆ ನಾಟಕ ಅಕಾಡೆಮಿ ಪ್ರಶಸ್ತಿ ಬಂದಿದ್ದರೆ, ಕೂಡ್ಲಿಗಿ ಹಿರಿಯ ರಂಗ ಕಲಾವಿದೆ ಸೊಲ್ಲಮ್ಮ ಅವರಿಗೆ ಯಕ್ಷಗಾನ ಬಯಲಾಟ ಅಕಾಡೆಮಿ ಪ್ರಶಸ್ತಿ ಅರಸಿ ಬಂದಿದೆ. ಇವರಂತೆ ಬಿ.ಕೆ. ಜಯಮ್ಮ, ಸಣ್ಣ ಮುದ್ದಮ್ಮ, ದೊಡ್ಡ ಮುದ್ದಮ್ಮ, ವಿರುಪಾಪುರದ ಗಂಗಮ್ಮ, ಕಲಮಲಮ್ಮ, ಅಂಜಿನಮ್ಮ ಸೇರಿದಂತೆ ಅನೇಕ ಕಲಾವಿದೆಯರು ತಮ್ಮ ಜೀವನವನ್ನು ರಂಗಭೂಮಿಗೆ ಮೀಸಲಿರಿಸಿದ್ದಾರೆ. ಸಂಗೀತದೊಂದಿಗೆ ನಾಟಕ ನಿರ್ದೇಶನ ಮಾಡುತ್ತಿದ್ದ ಚೌಡಾಪುರದ ಸಿ.ಎಂ.ಬಸಯ್ಯ, ಸೂಲದಹಳ್ಳಿಯ ಕೆ.ಮಾರಪ್ಪ, ಸೊಕ್ಕೆ ಬಸಪ್ಪ, ಕುಂಬಾರ ಗಂಗಣ್ಣ, ಹವ್ಯಾಸಿ ಕಲಾವಿದರಾದ ಪಟ್ಟಣದ ಅಂಗಡಿ ಸಿದ್ದಣ್ಣ, ಡಾ. ಮಲ್ಲಿಕಾರ್ಜುನಯ್ಯ, ಹಾರಕಬಾವಿ ನಾಗೇಂದ್ರಪ್ಪ, ಸಿ.ಮಹಾಲಿಂಗಪ್ಪ ಸೇರಿದಂತೆ ಅನೇಕರಿಂದ ರಂಗಭೂಮಿಯ ಸೊಗಡು ರಾಜ್ಯದಲ್ಲೆಡೆ ಪಸರಿಸಿದೆ ನಾಟಕ ಪ್ರದರ್ಶನ ಮಾಡುವ ಮೂಲಕ ಸರ್ಕಾರಕ್ಕೆ ದೇಣಿಗೆ ನೀಡಿದ ಕೀರ್ತಿ ಪಟ್ಟಣದ ಹವ್ಯಾಸಿ ಕಲಾವಿದರಿಗೆ ಸಲ್ಲುತ್ತದೆ.

ತಾಲ್ಲೂಕಿನಲ್ಲಿ ಜಾನಪದ ಕಲಾವಿದರು, ಭಜನೆ, ಸೋಬಾನೆ ಹಾಡುಗಾರರು, ಕೋಲಾಟ, ಗೀಗಿಪದಗಳ ಹಾಡುಗಾರರಿಗೂ ಕೊರತೆ ಇಲ್ಲ.

ಕೂಡ್ಲಿಗಿ ತಾಲ್ಲೂಕಿನ ಸಂಕ್ಷಿಪ್ತ ಮಾಹಿತಿ

ಒಟ್ಟು ಗ್ರಾಮಗಳ ಸಂಖ್ಯೆ	176
ಕಂದಾಯ ಗ್ರಾಮಗಳು	59
ಹೋಬಳಿಗಳು	3
ಗ್ರಾಮ ಪಂಚಾಯಿತಿಗಳು	25
ಜನಸಂಖ್ಯೆ (ಪುರುಷರು)	1,13,429
ಮಹಿಳೆಯರು	109144
ಒಟ್ಟು ಜನಸಂಖ್ಯೆ	2,22,573
ಭೌಗೋಳಿಕ ವಿಸ್ತೀರ್ಣ	1,11,897 ಹೆಕ್ಟೇರ್ (1402 ಚ.ಕಿ.ಮೀ)
ಸಾಗುವಳಿ ವಿಸ್ತೀರ್ಣ	58 ಸಾವಿರ ಹೆಕ್ಟೇರ್
ಸಾಗುವಳಿ ಯೋಗ್ಯವಲ್ಲದ ವಿಸ್ತೀರ್ಣ	12,915 ಹೆಕ್ಟೇರ್
ಅರಣ್ಯ ಪ್ರದೇಶ	24,667 ಹೆಕ್ಟೇರ್
ಪ್ರಮುಖ ಬೆಳೆಗಳು	ಶೇಂಗಾ, ಜೋಳ, ಮೆಕ್ಕೆಜೋಳ, ಭತ್ತ, ರಾಗಿ, ಸಜ್ಜೆ, ಸೂರ್ಯಕಾಂತಿ, ಈರುಳ್ಳಿ, ಮೆಣಸಿನಕಾಯಿ



ಕೂಡ್ಲಿಗಿ ತಾಲ್ಲೂಕಿನ ಗುಡೇಕೋಟೆ ಗ್ರಾಮದ ಬಳಿ ಗುಡ್ಡದ ಮೇಲೆ ಪಾಳೇಗಾರರು ನಿರ್ಮಿಸಿರುವ ಉಗ್ರಾಣ

ಪಂಚಪೀಠಗಳಲ್ಲಿ ಒಂದಾದ ಉಜ್ಜಯಿನಿ ಪೀಠ

ಪಂಚಪೀಠಗಳಲ್ಲಿ ಒಂದಾದ ಇಲ್ಲಿನ ಶ್ರೀ ಮರುಳಸಿದ್ದೇಶ್ವರ ದಾರುಕಾಚಾರ್ಯ ಜಯಂತಿ ಯುಗಮಾನೋತ್ಸವದೊಂದಿಗೆ ರಥೋತ್ಸವವೂ ಕಳೆಗಟ್ಟಲಿರುವುದು ವಿಶೇಷ. ದಕ್ಷಿಣ ಭಾರತದಲ್ಲಿಯೇ ವಿಶಿಷ್ಟವಾಗಿರುವ ದೇವಸ್ಥಾನದ ಶಿಖರದ ತೈಲಾಭಿಷೇಕ ಪ್ರತಿವರ್ಷ ನಡೆಯುವುದು ಇಲ್ಲಿನ ವಿಶೇಷ. ರಥೋತ್ಸವ ಹಾಗೂ ತೈಲಾಭಿಷೇಕಕ್ಕೆ ನಾಡಿನ ಮೂಲೆ ಮೂಲೆಗಳಿಂದ ಭಕ್ತರು ಬರುತ್ತಾರೆ.

ಪಂಚಪೀಠಗಳಲ್ಲಿ ಒಂದಾದ ಉಜ್ಜಯಿನಿ ಪೀಠ ಅನೇಕ ಸಾಮಾಜಿಕ ಕಾರ್ಯಗಳಲ್ಲಿ ತೊಡಗಿಸಿಕೊಂಡಿದೆ. ಪೀಠ ಇದುವರೆಗೂ 111 ಜಗದ್ಗುರುಗಳನ್ನು ಕಂಡಿದೆ. ಈಗಿನವರು 112ನೆಯವರು. ಇಲ್ಲಿನ ಮರುಳಸಿದ್ದೇಶ್ವರ ದೇವಾಲಯ ವೀರಶೈವ ಪಂಚಪೀಠವಷ್ಟೇ ಆಗದೆ ಪೌರಾಣಿಕ, ಐತಿಹಾಸಿಕ, ಧಾರ್ಮಿಕ, ಉತ್ಕೃಷ್ಟ ಮಾದರಿ ಶಿಲ್ಪ ಕಲೆಯ ಸಂಗಮವಾಗಿದೆ.

ಶಿಖಾಪುರದಿಂದ ಕೊಟ್ಟೂರು

ಕೊಟ್ಟೂರೇಶ್ವರರ ರಥೋತ್ಸವದಲ್ಲಿ ಲಕ್ಷಾಂತರ ಭಕ್ತರು ಸೇರಿದ್ದ ಕ್ಷಣ...

• ಜಿ.ಕರಿಬಸವರಾಜ

ಕೊಟ್ಟೂರು ಶ್ರೀ ಗುರು ಕೊಟ್ಟೂರೇಶ್ವರರ ನೆಲೆವೀಡು. ಹಲವು ವೈಶಿಷ್ಟ್ಯಗಳ ತವರು. ಧಾರ್ಮಿಕ, ಶೈಕ್ಷಣಿಕ ಕ್ಷೇತ್ರಗಳ ಬೀಡೂ ಹೌದು. ಕೂಡ್ಲಿಗಿ ತಾಲ್ಲೂಕಿನ ಭಾಗವಾಗಿದ್ದ ಕೊಟ್ಟೂರು 2018ರ ಮಾರ್ಚ್‌ನಲ್ಲಿ ತಾಲ್ಲೂಕು ಆಗಿ ಉದಯವಾಯಿತು.

ಕೊಟ್ಟೂರಿಗೆ ಮೊದಲಿದ್ದ ಹೆಸರು ಶಿಖಾಪುರ. ಕೊಟ್ಟೂರೇಶ್ವರರು ಬಂದು ನೆಲೆಸಿದ ನಂತರ ಪವಾಡಗಳನ್ನು ಮಾಡುತ್ತ ಮುಂದೆ ಕೊಟ್ಟೂರು ಎಂದು ಪ್ರಸಿದ್ಧಿ ಪಡೆಯಿತು.

ಬ್ರಿಟಿಷರ ಆಳ್ವಿಕೆಯ ಕಾಲದಲ್ಲಿಯೇ ಕೊಟ್ಟೂರು–ಹೊಸಪೇಟೆ ರೈಲ್ವೆ ಮಾರ್ಗ ನಿರ್ಮಾಣವಾಗಿತ್ತು. ರಾಜ್ಯದಲ್ಲಿಯೇ ಅತಿ ಹೆಚ್ಚು ಹತ್ತಿ ಕೊಟ್ಟೂರು ಸುತ್ತಮುತ್ತ ಬೆಳೆಯುವುದರಿಂದ ಅಂದಿನ ಬ್ರಿಟಿಷ್ ಸರ್ಕಾರ ಕೊಟ್ಟೂರಿನಿಂದ ಗುಣಮಟ್ಟದ ಹತ್ತಿ, ದವಸ ಧಾನ್ಯಗಳನ್ನು ಸಾಗಿಸಲು ರೈಲ್ವೆ ಮಾರ್ಗ ನಿರ್ಮಿಸಿತ್ತು.

ರಂಗಭೂಮಿ ತವರು: 60ರ ದಶಕದಲ್ಲಿಯೇ ಕೊಟ್ಟೂರಿನಲ್ಲಿ ಎರಡು ನಾಟಕ ಕಂಪನಿಗಳಿದ್ದವು. ಇಂದಿಗೂ ಪಟ್ಟಣದಲ್ಲಿ ಹಲವು ನಾಟಕ ಕಂಪನಿಗಳಿವೆ. ರಂಗಭೂಮಿ ಭೀಷ್ಮ ಎಂದೇ ಪ್ರಸಿದ್ಧರಾದ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಪಂಪಣ್ಣ ಅವರು ತಾಲ್ಲೂಕಿನ ಕೊಗಳಿ ಗ್ರಾಮದವರು.

ಕೊಟ್ಟೂರು ಭಾಗದಲ್ಲಿ 150ಕ್ಕೂ ಹೆಚ್ಚು ಸ್ವಾತಂತ್ರ್ಯ ಹೋರಾಟಗಾರರಿದ್ದಾರೆ, 1932ರಲ್ಲಿ ಕೊಟ್ಟೂರಿಗೆ ಮಹಾತ್ಮ ಗಾಂಧೀಜಿ ಭೇಟಿ ನೀಡಿ ಸ್ವಾತಂತ್ರ್ಯ ಚಳವಳಿಗೆ ಕರೆ ಕೊಟ್ಟಾಗ ನೂರಾರು ಹೋರಾಟಗಾರರು ಪಾಲ್ಗೊಂಡು ಸಭೆ ಮಾಡಿದ್ದರು. ಅಂದು ಅವರು ಪಟ್ಟಣಕ್ಕೆ ಬಂದಾಗ ಅವರು ಹರಾಜು ಹಾಕಿದ ಊರುಗೋಲು ಈಗಲೂ ಕೊಗಳಿಯಲಿದೆ. ಅವರ ಭೇಟಿಯಿಂದ ಪಟ್ಟಣವೂ ರಾಷ್ಟ್ರದ ನಕಾಶೆಯಲ್ಲಿ ಗುರುತಿಸಿಕೊಳ್ಳಲು ಕಾರಣವಾಗಿದೆ. ಶೈಕ್ಷಣಿಕವಾಗಿಯೂ ಕೊಟ್ಟೂರು ರಾಜ್ಯದಲ್ಲಿ ಉತ್ತಮ ಸಾಧನೆ ಮಾಡಿದೆ.

ಕೊಟ್ಟೂರೇಶ್ವರ ಮಹಾವಿದ್ಯಾಲ ಯವೂ ಹಲವು ಗಣ್ಯಮಾನ್ಯರನ್ನು ಕೊಡುಗೆಯಾಗಿ ಸಮಾಜಕ್ಕೆ ಕೊಟ್ಟಿದೆ, ಕೊಟ್ಟೂರೇಶ್ವರ ಎಂ.ಕಾಂ. ಸ್ನಾತಕೋತರ ಕೇಂದ್ರವೂ ಪಟ್ಟಣದಲ್ಲಿದೆ. ಆರು ವರ್ಷಗಳಿದ ಇಲ್ಲಿನ 'ಇಂದು' ಕಾಲೇಜು ಪಿಯುಸಿ ಕಲಾ ವಿಭಾಗದಲ್ಲಿ ರಾಜ್ಯ ಮಟ್ಟದಲ್ಲಿ ಪ್ರಥಮ ಸ್ಥಾನ ಗಳಿಸುವ ಮೂಲಕ ಇಡೀ ರಾಜ್ಯವೇ ಇತ್ತ ನೋಡುವಂತಹ ಸಾಧನೆ ಮಾಡಿದೆ.

ಇಲ್ಲಿನ ಕೃಷಿ ಉತ್ಪನ್ನ ಮಾರುಕ ಟ್ಟೆಯೂ ಜಿಲ್ಲೆಯಲ್ಲಿ ಅತಿ ಹೆಚ್ಚು ವಹಿವಾಟು ನಡೆಸುತ್ತದೆ. ಸಾಹಿತಿಗಳಾದ ಕುಂ. ವೀರಭದ್ರಪ್ಪ, ಎನ್.ಎಂ.ಕೊಟ್ರೇಶ್, ವೆಂಕಟೇಶ್, ವಿಶ್ವನಾಥ ಅಡಿಗ ಪ್ರಮುಖರು. ವಿಶಿಷ್ಟ ಸ್ವಾದದಿಂದ ಕೊಟ್ಟೂರು ಮಿರ್ಚಿ, ಮಂಡಕ್ಕಿ ಹೆಸರಾಗಿದೆ.

ಧಾರ್ಮಿಕ ಕ್ಷೇತ್ರಗಳ ತವರು ಕೊಟ್ಟೂರು: 12ನೇ ಶತಮಾನದಲ್ಲಿ ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲ್ಲೂಕಿನ ಕೊಟ್ಟೂರಿನಲ್ಲಿ ನೆಲೆ ನಿಂತ ಕೊಟ್ಟೂರೇಶ್ವರ ವಿಜಯನಗರ ಸಾಮ್ರಾಜ್ಯ ಪತನದ ಸಂದರ್ಭದಲ್ಲಿ ವೀರಶೈವ ಧರ್ಮವನ್ನು ಉದ್ಧರಿಸಿ ಮನುಕುಲ ರಕ್ಷಣೆಗೆ ಭೂಮಿಗೆ ಬಂದ ಪವಾಡ ಪುರುಷ ಎನಿಸಿಕೊಂಡರು.

ಹುಚ್ಚ ಕೊಟ್ರಯ್ಯ ಎಂದೇ ಕರೆಸಿಕೊಂಡಿದ್ದ ಕೊಟ್ಟೂರೇಶ್ವರರು ನಂಬಿಯಕ್ಕನ ಮನೆಯಲ್ಲಿದ್ದುಕೊಂಡು, ದನಗಾಹಿಯಾಗಿ ತನ್ನ ಪವಾಡಗಳಿಂದ ಜನರನ್ನು ಉದ್ಧಾರ ಮಾಡುತ್ತ ದೈವಿಸ್ವರೂಪಿಯಾದರು. ಶೈವ ಪರಂಪರೆಯ ಪಂಚಗಣಾಧೀಶ್ವರರಲ್ಲಿ ಒಬ್ಬರಾದ ಗುರುಬಸವರಾಜರು ಮಹಾಶರಣರಾಗಿ ಭಕ್ತಗಣದಲ್ಲಿ ನೆಲೆನಿಂತರು. ಪ್ರತಿವರ್ಷ ಫೆಬ್ರುವರಿ-ಮಾರ್ಚ್ ತಿಂಗಳಲ್ಲಿ ನಡೆಯುವ ಕೊಟ್ಟೂರೇಶ್ವರರ ಜಾತ್ರೆಯಲ್ಲಿ ನಾಡಿನ ಲಕ್ಷಾಂತರ ಭಕ್ತರು ಸೇರುತ್ತಾರೆ.

ಸಮಾಜದಲ್ಲಿನ ಮೂಢನಂಬಿಕೆ, ಅಸಮಾನತೆಯ ವಿರುದ್ಧ ಹೋರಾಡುತ್ತ ತನ್ನ ಪವಾಡ ಸದೃಶಗಳಿಂದ ಸಾಮಾಜಿಕ ಶಿಷ್ಟಾಚಾರಗಳನ್ನು ಮೀರಿ ದೈವತ್ವಕ್ಕೇರಿದವರೇ ಪವಾಡ ಪುರುಷ ಕೊಟ್ಟೂರೇಶ್ವರರು. ಕೊಟ್ಟೂರೇಶ್ವರರನ್ನು ಇಲ್ಲಿನ ನಾಲ್ಕು ಮಠಗಳಲ್ಲಿ ಪೂಜಿಸಲಾಗುತ್ತದೆ. ಹಿರೇಮಠ, ಗಚ್ಚಿನಮಠ, ಮೂರ್ಕಲ್ಲು ಮಠ ಹಾಗೂ ತೊಟ್ಟಿಲ್ಲು ಮಠಗಳಲ್ಲಿ ಕೊಟ್ಟೂರೇಶ್ವರರನ್ನು ಪೂಜಿಸಲಾಗುತ್ತದೆ.

ದಲಿತ ಮಹಿಳೆಯಿಂದ ಆರತಿ: ರಥೋತ್ಸವಕ್ಕಾಗಿ ಉತ್ಸವಮೂರ್ತಿ ಯನ್ನು ಪಲ್ಲಕ್ಕಿಯಲ್ಲಿ ಹೊತ್ತು ತರುವ ಸಂದರ್ಭದಲ್ಲಿ ಉತ್ಸವವು ಹರಿಜನ ಕೇರಿ ತಲುಪಿದಾಗ ದಲಿತ ಮಹಿಳೆ ಹಿರೇಮನಿ ಉಡಸಲಮ್ಮ ಉತ್ಸವ ಮೂರ್ತಿಗೆ ಕಳಸ ತಂದು ಧೂಪದಾರತಿ ಬೆಳಗುತ್ತಾರೆ. ಅಲ್ಲಿ ದಲಿತರಿಂದಲೇ ಹಾಲನ್ನು ಎಡೆ ಹಿಡಿಯಲಾಗುತ್ತದೆ.

ವೈಭವದ ಬೆಳ್ಳಿ ರಥೋತ್ಸವ: ಕಾರ್ತೀಕ ಉತ್ಸವದಂದು ನಡೆಯುವ ಬೆಳ್ಳಿ ರಥದಲ್ಲಿ ಮೂಲ ಬಂಗಾರ ಖಚಿತ ವಿಗ್ರಹ ವಿರಾಜಮಾನಗೊಳ್ಳುತ್ತದೆ. ಇದೊಂದು ಅಪರೂಪದ ಸಂದರ್ಭ. ಬೇರೆ ಕಡೆಗಳಲ್ಲಿ ಉತ್ಸವ ಮೂರ್ತಿ ಬೇರೆಯೇ ಇರುತ್ತವೆ. ಮೂಲ ವಿಗ್ರಹವನ್ನು ಕಣ್ತುಂಬಿಕೊಳ್ಳಲು ಜನರು ಕಿಕ್ಕಿರಿದು ಸೇರುತ್ತಾರೆ. ಕೊಟ್ಟೂರೇಶ್ವರ ಸಮಿತಿ 290 ಕೆ.ಜಿ ಬೆಳ್ಳಿಯನ್ನು ಭಕ್ತರಿಂದ ಸಂಗ್ರಹಿಸಿ ₹40 ಲಕ್ಷ ವೆಚ್ಚದಲ್ಲಿ ಸುಂದರ ರಥ ನಿರ್ಮಿಸಿ ಸೇವೆಗೆ ಅರ್ಪಿಸಿದೆ.

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

ಒಳಗೆ ನೋಡು: ಹಂಪೆಯ ಶಿಲ್ಪಕಲಾ ವೈಭವ ಮತ್ತು ಉಜ್ಜಯಿನಿಯ ದೇವಾಲಯದ ಶಿಲ್ಪಕಲೆಯ ಸೊಬಗನ್ನು ಕಂಡ ಹಿರಿಯರು ಹಂಪಿಯನ್ನು ಹೊರಗೆ ನೋಡು, ಉಜ್ಜಯಿನಿಯನ್ನು ಒಳಗೆ ನೋಡು ಎಂದಿದ್ದಾರೆ.

ಗುಡಿಯ ಶಿಖರಕ್ಕೆ ಪ್ರತಿ ವರ್ಷವೂ ತೈಲಾಭಿಷೇಕ ನಡೆಯುವುದರಿಂದ ಎಣ್ಣೆಯ ಜಿಡ್ಡಿನಿಂದ ಕೆತ್ತನೆ ಕಾಣದಂತಾಗಿದೆ. ಶಿಖರದ ತೈಲಾಭಿಷೇಕ ದಕ್ಷಿಣ ಭಾರತದಲ್ಲಿಯೇ ವಿಶಿಷ್ಟ ಆಚರಣೆಯಾಗಿದೆ. ಇಡೀ ಶಿಖರಕ್ಕೆ ತೈಲವನ್ನು ಸುರಿಯುವುದು ಇಲ್ಲಿನ ವಿಶಿಷ್ಟ ಸಂಪ್ರದಾಯವೆನಿಸಿದೆ.

ರಥೋತ್ಸವದ ನಂತರ ಸಂಜೆ ಜಗದ್ಗುರು ದಿವ್ಯ ಸಾನಿಧ್ಯದಲ್ಲಿ ದಾರುಕಚಾರ್ಯ ಜಯಂತಿ, ಯುಗಮಾನೋತ್ಸವವು ಸಹಸ್ರಾರು ಭಕ್ತರ ಸಮ್ಮುಖದಲ್ಲಿ ನಡೆಯುವುದು.

ಗಾಣಗಟ್ಟೆ ಮಾಯಮ್ಮ ದೇವಿ: ತಾಲ್ಲೂಕಿನ ಗಾಣಗಟ್ಟೆಯಲ್ಲಿ ನೆಲೆಸಿರುವ ಮಾಯಮ್ಮ ದೇವಿ ತನ್ನ ಸನ್ನಿಧಿಗೆ ಬರುವ ಭಕ್ತರೆಲ್ಲರ ಕಷ್ಟಗಳನ್ನು ಪರಿಹರಿಸುತ್ತಾಳೆ ಎಂಬ ಪ್ರತೀತಿ ಇದೆ. ಮಾಯಮ್ಮನ ಮೂಲ ಕೊಲ್ಲಾಪುರ ಎಂದು ಹೇಳಲಾಗುತ್ತದೆ. ಪಂಚಪೀಠಗಳಲ್ಲಿ ಒಂದಾದ ಉಜ್ಜಯಿನಿಯಲ್ಲಿ ದೇವಸ್ಥಾನ ಕಟ್ಟಿಸುವಾಗ ಮರುಳಸಿದ್ದೇಶ್ವರರಿಗೆ ಪುಟ್ಟಿಯನ್ನು ಹೋರಿಸಿದ್ದಳಂತೆ. ಇದರಿಂದ ಅಲ್ಲಿನ ಶ್ರೀಗಳು ನೀನು ಮಾಯಾಕಾತಿ, ಮಾಯಮ್ಮ ಎಂದು ಕರೆದರಂತೆ. ಇದಕ್ಕಾಗಿಯೇ ಇಂದಿಗೂ ಉಜ್ಜಯಿನಿ ರಥೋತ್ಸವದಲ್ಲಿ ಗಾಣಗಟ್ಟೆ ಗ್ರಾಮಸ್ಥರು ಕೊಟ್ಟ ಪುಟ್ಟಿಯನ್ನು ಇಡುತ್ತಾರೆ. ಶ್ರೀ ಕ್ಷೇತ್ರ ಗಾಣಗಟ್ಟೆಯಲ್ಲಿ ನೆಲೆಸಿರುವ ಮಾಯಮ್ಮ ದೇವಿಯ ರಥೋತ್ಸವ ಪ್ರತಿ ವರ್ಷ ಮಾರ್ಚ್ ತಿಂಗಳಲ್ಲಿ ನಡೆಯುತ್ತದೆ.

ವಡ್ಡಾರಾಧನೆಯ ಕೃತಿಕಾರನ ಊರು ಕೊಗಳಿ: ತಾಲ್ಲೂಕಿನ ಕೊಗಳಿಯಲ್ಲಿ 9ನೇ ಶತಮಾನಕ್ಕೆ ಸೇರಿದ ಜೈನ ಬಸದಿಗಳಿವೆ. ನಿರ್ವಹಣೆ ಕೊರತೆಯಿಂದ ಕಳೆಗುಂದಿವೆ. 9ನೇ ಶತಮಾನದಿಂದ ಸಾಹಿತ್ಯ ಮತ್ತು ಸಾಂಸ್ಕೃತಿಕ ಚರಿತ್ರೆಯಲ್ಲಿ ತನ್ನದೇ ಆದ ಮಹತ್ವ ಪಡೆದಿದೆ. ಕನ್ನಡದ ಮೊದಲ ಗದ್ಯ ಪದ್ಯ ವಡ್ಡಾರಾಧನೆ ಕೃತಿಕಾರ ಶಿವಕೋಟ್ಯಾಚಾರ್ಯರು ಇದೆ ಗ್ರಾಮದವರು.

ಕೊಗಳಿಯು ಪ್ರಾಚೀನ ವಿದ್ಯಾಕೇಂದ್ರ ಹಾಗೂ ಜೈನ ಕೇಂದ್ರವಾಗಿತ್ತು ಎಂಬುದಕ್ಕೆ ಇಲ್ಲಿ ಅನೇಕ ಪುರಾವೆಗಳಿವೆ. ಅನೇಕ ಶಾಸನಗಳು, ವೀರಗಲ್ಲುಗಳು ಗ್ರಾಮದಲ್ಲಿ ಲಭ್ಯವಾಗಿವೆ. ಕೊಗಳಿಯ ಐತಿಹಾಸಿಕ ದೇವಾಲಯ ಜೈನಬಸದಿ. ಗಂಗರ ದೊರೆ ದುರ್ವಿನಿತನ ಕಾಲದಲ್ಲಿ ನಿರ್ಮಾಣವಾದ ಈ ಬಸದಿಯಲ್ಲಿ 9ನೇ ಶತಮಾನಕ್ಕೆ ಸೇರಿದ ಚನ್ನ ಪಾರ್ಶ್ವನಾಥರ ವಿಗ್ರಹವಿದೆ.

ತಾಲ್ಲೂಕಿನ ಅಂಬಳಿ ಗ್ರಾಮದಲ್ಲಿ 10ನೆಯ ಶತಮಾನದಲ್ಲಿಯೇ ನಿರ್ಮಿಸಲಾಗಿರುವ ಕಲ್ಲೇಶ್ವರ ದೇವಸ್ಥಾನದ ಶಿಲ್ಪಕಲೆಯ ಸೂಕ್ಷ್ಮ ಕುಸುರಿ ಕೆತ್ತನೆಗಳನ್ನು ಮನದಣಿಯೆ ನೋಡಬಹುದು. 6ನೇ ವಿಕ್ರಮಾದಿತ್ಯನ ಕಾಲದಲ್ಲಿ ಈ ದೇವಾಲಯವನ್ನು ನಿರ್ಮಿಸಲಾಗಿದೆ. ❖

ಕೊಟ್ಟೂರು ತಾಲ್ಲೂಕಿನ ಸಂಕ್ಷಿಪ್ತ ಮಾಹಿತಿ

ಒಟ್ಟು ಗ್ರಾಮಗಳ ಸಂಖ್ಯೆ	63
ಕಂದಾಯ ಗ್ರಾಮಗಳು	30
ಹೋಬಳಿಗಳು	02
ಗ್ರಾಮ ಪಂಚಾಯಿತಿಗಳು	14
ಜನಸಂಖ್ಯೆ(ಪುರುಷರು)	54,661
ಮಹಿಳೆಯರು	52,746
ಒಟ್ಟು ಜನಸಂಖ್ಯೆ	1,07,407
ಭೌಗೋಳಿಕ ವಿಸ್ತೀರ್ಣ	2,32,545 ಚದರ ಕಿ.ಮೀ
ಸಾಗುವಳಿ ವಿಸ್ತೀರ್ಣ	87,387.93 ಚದರ ಕಿ.ಮೀ
ಸಾಗುವಳಿ ಯೋಗ್ಯವಲ್ಲದ ವಿಸ್ತೀರ್ಣ	8,159 ಬದರ ಕಿಮಿ
ಪ್ರಮುಖ ಬೆಳೆಗಳು:ಮೆಕ್ಕೆಜೋಳ, ಸಜ್ಜೆ, ಜೋಳ, ರಾಗಿ, ಶೇಂಗಾ, ಈರುಳ್ಳಿ, ದ್ವಿದಳ ಧಾನ್ಯಗಳು	

ಮಲ್ಲಿಗೆ ನಾಡು ಹೂವಿನಹಡಗಲಿ

• ಕೆ. ಸೋಮಶೇಖರ

ಹೂವಿನಹಡಗಲಿ ತಾಲ್ಲೂಕು ತನ್ನದೇ ಆದ ಐತಿಹಾಸಿಕ, ಸಾಂಸ್ಕೃತಿಕ ಭವ್ಯತೆಯಿಂದ ನಾಡಿನಲ್ಲಿ ಗುರುತಿಸಿಕೊಂಡಿದೆ. ತುಂಗಭದ್ರೆಯ ತಟದ ಹೂ ನೆಲದಲ್ಲಿ ಅರಳಿ ನಿಂತಿರುವ ಪುರಾತನ ದೇವಾಲಯಗಳಲ್ಲಿನ ಶಿಲ್ಪಕಲಾ ವೈಭವ ಇಲ್ಲಿನ ಶ್ರೀಮಂತ ಸಂಸ್ಕೃತಿಗೆ ಸಾಕ್ಷಿಯಾಗಿವೆ.

ಐತಿಹಾಸಿಕ, ಧಾರ್ಮಿಕ ಕ್ಷೇತ್ರಗಳು ನಾಡಿನಲ್ಲೇ ಪ್ರಸಿದ್ಧವಾಗಿವೆ. ಸಾಕ್ಷತ್ ಶಿವನೇ ಧರೆಗಿಳಿದು ಬಂದು ಯುದ್ಧ ಮಾಡಿದ ಕುರುಹುಗಳು ಇಲ್ಲಿ ಸಿಗುತ್ತದೆ. ಕಲೆ, ಸಾಹಿತ್ಯ ಕ್ಷೇತ್ರಕ್ಕೆ ನಾಡಶ್ರೇಷ್ಠರನ್ನು ಈ ತಾಲ್ಲೂಕು ಕೊಡುಗೆಯಾಗಿ ನೀಡಿದೆ. ಇಲ್ಲಿನ ಪಾರಂಪರಿಕ ಕೃಷಿ ರಾಷ್ಟ್ರ ಮನ್ನಣೆ ಗಳಿಸಿದೆ. ಸಂಸ್ಕೃತಿ, ಪರಂಪರೆ ಶ್ರೀಮಂತವಾಗಿದ್ದರೂ ಬಡತನದ ಬೇಗೆಯಲ್ಲೇ ಬೇಯುವುದು ಇಲ್ಲಿನ ಜನರ ಸ್ಥಿತಿ. ವೈಶಿಷ್ಟ್ಯಪೂರ್ಣ ಹಿರಿಮೆ ಹೊಂದಿರುವ ತಾಲ್ಲೂಕಿನ ಸಂಕ್ಷಿಪ್ತ ಮಾಹಿತಿ ಇಲ್ಲಿದೆ.

ಪಾರಂಪರಿಕ ಮಲ್ಲಿಗೆ ಕೃಷಿಗೆ ರಾಷ್ಟ್ರೀಯ ಮನ್ನಣೆ: ವಿಜಯನಗರ ಸಾಮ್ರಾಜ್ಯ ಉದಯಿಸುವುದಕ್ಕಿಂತ 300 ವರ್ಷ ಮುಂಚೆಯೇ ಮಲ್ಲಿಗೆ ಬೆಳೆಯೊಂದಿಗೆ ಹಡಗಲಿ ತನ್ನ ಅಸ್ತಿತ್ವ ಗುರುತಿಸಿಕೊಂಡಿದೆ. 11ನೇ ಶತಮಾನದಲ್ಲಿ ಈ ಊರನ್ನು 'ಪೂವಿನ ಪೊಡಂಗಿಲೆ' ಎಂದು ಕರೆಯಲಾಗುತ್ತಿತ್ತು ಎಂಬುದು ಶಾಸನಗಳಲ್ಲಿ ಉಲ್ಲೇಖವಿದೆ.

ಹೂವಿನಹಡಗಲಿ ಮಲ್ಲಿಗೆ ಕೃಷಿ ಪಾರಂಪರಿಕವಾಗಿ ಬೆಳೆದು ಬಂದಿದೆ. ವಿಶೇಷ ಪರಿಮಳ ಬೀರುವ ಇಲ್ಲಿನ ಮಲ್ಲಿಗೆಗೆ ಮನ ಸೋಲದವರೇ ಇಲ್ಲ. ಮಾರುಕಟ್ಟೆಯಲ್ಲಿ ನಾನಾ ಬಗೆಯ ಮಲ್ಲಿಗೆಗಳಿದ್ದರೂ ಹಡಗಲಿ ಮಲ್ಲಿಗೆಗೆ ಬೇಡಿಕೆ ಹೆಚ್ಚು.

ಹಿಂದೆ ಎಲ್ಲ ದಿಕ್ಕುಗಳಲ್ಲಿ ಮಲ್ಲಿಗೆ ತೋಟಗಳು ಕಾಣ ಸಿಗುತ್ತಿದ್ದವು. ಸಾವಿರಾರು ಹೆಕ್ಟೇರ್ ಪ್ರದೇಶದಲ್ಲಿದ್ದ ಮಲ್ಲಿಗೆ ಕೃಷಿ ಇಂದು ಅಂತರ್ಜಲ, ಕುಸಿತ, ಕಾರ್ಮಿಕರ ಅಭಾವ, ಬೆಲೆ ಕುಸಿತದ ಪರಿಣಾಮ ನೂರಾರು ಎಕರೆಗೆ ಕ್ಷೀಣಿಸಿದೆ. ಹಡಗಲಿ ಸುತ್ತಮುತ್ತಲ ಗ್ರಾಮಗಳಲ್ಲಿ ರೈತರು ಮಲ್ಲಿಗೆ ಬೆಳೆದು ನಗರ ಪ್ರದೇಶಗಳಿಗೆ ಮಾರಾಟಕ್ಕೆ ಕಳಿಸಿಕೊಡುತ್ತಾರೆ. ಏಪ್ರಿಲ್‌ನಿಂದ ಆರಂಭವಾಗುವ ಮಲ್ಲಿಗೆ ಋತು ಸೆಪ್ಟೆಂಬರ್‌ನಲ್ಲಿ ಕೊನೆಗೊಳ್ಳುತ್ತದೆ.

ಪಾರಂಪರಿಕ ಮಲ್ಲಿಗೆ ಬೆಳೆಯನ್ನು ಕೇಂದ್ರ ಸರ್ಕಾರ ಭೌಗೋಳಿಕ ಬೆಳೆ ಎಂದು ಗುರುತಿಸಿ ರಾಷ್ಟ್ರೀಯ ಮನ್ನಣೆ ನೀಡಿದೆ. ಇದರಿಂದ ಬೆಳೆಗಾರರಿಗೆ ಯಾವುದೇ ರೀತಿಯಲ್ಲಿ ಅನುಕೂಲವಾಗಿಲ್ಲ. ಮಧ್ಯವರ್ತಿಗಳ ಹಾವಳಿ ತಪ್ಪಿಸಿ, ಮಾರುಕಟ್ಟೆಯಲ್ಲಿ ಬೆಂಬಲ ಬೆಲೆ ದೊರಕಿಸಿಕೊಡಬೇಕು. ಮಲ್ಲಿಗೆ ಮೊಗ್ಗು ದೀರ್ಘ ಕಾಲ ಹೂ ಕೆಡದಂತೆ ಸಂಸ್ಕರಣೆ ಮಾಡಿ ದೇಶದ ಬೇರೆ ಬೇರೆ ಭಾಗಗಳಿಗೆ ಕಳಿಸಿಕೊಡುವ ವ್ಯವಸ್ಥೆ ಸರ್ಕಾರದಿಂದ ಆದಾಗ ರೈತರ ಬದುಕು ಹಸನಾಗುತ್ತದೆ ಎಂಬುದು ಬೆಳೆಗಾರರ ಅನಿಸಿಕೆ.

ಪ್ರಾಚೀನ ಕಲ್ಲೇಶ್ವರ ದೇಗುಲ: ಪಟ್ಟಣದ ಕೋಟೆ ಪ್ರದೇಶದಲ್ಲಿ ಚಾಲುಕ್ಯರ ಕಾಲದಲ್ಲಿ ನಿರ್ಮಾಣಗೊಂಡಿರುವ ಕಲ್ಲೇಶ್ವರ ದೇವಾಲಯ, ಕೇಶವ ದೇವಾಲಯ, ಮೂರುದೇವರ ಗುಡಿ ಹಡಗಲಿಯ ಪ್ರಾಚೀನ ಪರಂಪರೆಯನ್ನು ಹೇಳುತ್ತವೆ. ಪೂರ್ವಾಭಿಮುಖವಾಗಿರುವ ಕಲ್ಲೇಶ್ವರ ದೇಗುಲದ ಚೌಕಾಕಾರ ಗರ್ಭಗೃಹದಲ್ಲಿರುವ ಶಿವಲಿಂಗವನ್ನು ಭಕ್ತರು ಇಂದಿಗೂ ಶ್ರದ್ಧಾ, ಭಕ್ತಿಯಿಂದ

ಸಿಂಗಟಾಲೂರು ಏತ ನೀರಾವರಿ ಯೋಜನೆ: ತಾಲ್ಲೂಕಿನ ರಾಜವಾಳ ಬಳಿ ನಿರ್ಮಾಣವಾಗಿರುವ ಸಿಂಗಟಾಲೂರು ಏತ ನೀರಾವರಿ ಯೋಜನೆಯು ಈ ಭಾಗದ ಜನರ ಜೀವನಾಡಿಯಾಗಿದೆ. ತುಂಗಭದ್ರಾ ನದಿಯ ಬಲದಂಡೆ ಹೂವಿನಹಡಗಲಿ ತಾಲ್ಲೂಕಿನ 35,791 ಎಕರೆ, ಎಡ ದಂಡೆಯ ಗದಗ, ಕೊಪ್ಪಳ ಜಿಲ್ಲೆಯ 1,34,445 ಎಕರೆ ಪ್ರದೇಶ ಈ ಯೋಜನೆಯಿಂದ ನೀರಾವರಿಯಾಗಲಿದೆ. ಎಡದಂಡೆ ಭಾಗದಲ್ಲಿ ಯೋಜನೆ ಪರಿಷ್ಕರಿಸಿ ಕಿರು ನೀರಾವರಿಗೆ ಒಳಪಡಿಸಿದ್ದರಿಂದ ನೀರಾವರಿ ಪ್ರದೇಶ ವಿಸ್ತರಣೆಯಾಗಿದೆ. ಈ ಯೋಜನೆ 2012ರಲ್ಲಿ ಲೋಕಾರ್ಪಣೆಯಾಗಿದ್ದರೂ ಕಾಲುವೆ ಕೆಲಸಗಳು ಸಮರ್ಪಕವಾಗಿ

'ಏಕೀಕರಣ ಶಾಸ್ತ್ರಿ' ಎಂದೇ ಪ್ರಸಿದ್ದಿಯಾಗಿದ್ದ ವ್ಯಾಕರಣತೀರ್ಥ ಚಂದ್ರಶೇಖರ ಶಾಸ್ತ್ರಿ ಹೂವಿನಹಡಗಲಿ ತಾಲ್ಲೂಕು ಹೊಳಲು ಗ್ರಾಮದವರು. ತಂದೆ ತೀರಿದ್ದರಿಂದ ತಾಯಿಯ ತವರು ಮಾಗಳದಲ್ಲೇ ತಾಯಿಯೊಂದಿಗೆ ಅವರು ಬಾಲ್ಯವನ್ನು ಕಳೆಯುತ್ತಾರೆ.

ಚಂದ್ರಶೇಖರ ಶಾಸ್ತ್ರಿ ಅವರು 13ಕ್ಕೂ ಹೆಚ್ಚು ಮೌಲ್ಯಾಧಾರಿತ ಕೃತಿಗಳನ್ನು ಕನ್ನಡ ಸಾಹಿತ್ಯ ಲೋಕಕ್ಕೆ ನೀಡಿದ್ದಾರೆ. ಅವರ 'ಬಸವ ತತ್ವ ರತ್ನಾಕರ' ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕಾರ ಲಭಿಸಿದೆ. ಸಾಹಿತ್ಯ ಕ್ಷೇತ್ರದಲ್ಲಿನ ಇವರ ಸಾಧನೆಯನ್ನು ಗುರುತಿಸಿ 1940ರಲ್ಲಿ ಧಾರವಾಡದಲ್ಲಿ ಜರುಗಿದ 25ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಸರ್ವಾಧ್ಯಕ್ಷತೆಯ ಗೌರವ ನೀಡಲಾಗಿತ್ತು. ❖

ರೆವರೆಂಡ್ ಉತ್ತಂಗಿ ಚನ್ನಪ್ಪ

ಉತ್ತಂಗಿ ಚನ್ನಪ್ಪ

ತಾಲ್ಲೂಕಿನ ಉತ್ತಂಗಿ ಗ್ರಾಮದ ಪಾರುಪತ್ತೆಗಾರ ಮನೆತನದ ರೆವರೆಂಡ್ ಫಾ.ಉತ್ತಂಗಿ ಚನ್ನಪ್ಪನವರು ಸರ್ವಜ್ಞನನ ತ್ರಿಪದಿಗಳನ್ನು ಸಂಗ್ರಹಿಸಿ ಕನ್ನಡ ಸಾಹಿತ್ಯ ಲೋಕಕ್ಕೆ ನೀಡಿದ ಹಿರಿಮೆಗೆ ಪಾತ್ರರಾಗಿದ್ದಾರೆ. ವಚನ ಸಾಹಿತ್ಯ, ಕನ್ನಡ ಸಾಹಿತ್ಯ ಸಂಸ್ಕೃತಿಯ ಹಲವು ಗ್ರಂಥಗಳು ಸೇರಿದಂತೆ 18ಕ್ಕೂ ಹೆಚ್ಚು ಮೌಲಿಕ 18 ಮೌಲಿಕ ಕೃತಿಗಳನ್ನು ಸಾಹಿತ್ಯ ಕ್ಷೇತ್ರಕ್ಕೆ ನೀಡಿದ್ದಾರೆ. ಅವರ ಸಾಹಿತ್ಯ ಸೇವೆಗಾಗಿ 1949ರಲ್ಲಿ ಕಲಬುರ್ಗಿಯಲ್ಲಿ ಜರುಗಿದ 32ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಅಧ್ಯಕ್ಷತೆಯ ಗೌರವ ಸಂದಿದೆ. ಕನ್ನಡ ಸಾರಸ್ವತ ಲೋಕಕ್ಕ ಇಂತಹ ನಾಡಶ್ರೇಷ್ಠರನ್ನು ನೀಡಿದ ಹಿರಿಮೆ ಮಲ್ಲಿಗೆ ನಾಡಿಗೆ ಸಲ್ಲುತ್ತದೆ.

ಹೂವಿನಹಡಗಲಿ ತಾಲ್ಲೂಕಿನ ಜೀವನಾಡಿ ಸಿಂಗಟಾಲೂರು ಏತ ನೀರಾವರಿ ಯೋಜನೆ



ಎಂ.ಪಿ. ಪ್ರಕಾಶ್

ಚಂದ್ರಶೇಖರ ಶಾಸ್ತ್ರಿ

ಹೂವಿನಹಡಗಲಿ ತಾಲ್ಲೂಕು ದೇವಗೊಂಡನಹಳ್ಳಿ ತೋಟದಲ್ಲಿ ಅರಳಿರುವ ಮಲ್ಲಿಗೆ

ಹೂವಿನಹಡಗಲಿ ತಾಲ್ಲೂಕು ಮೈಲಾರ ಸುಕ್ಷೇತ್ರದಲ್ಲಿ ಶ್ರೀ ಮೈಲಾರಲಿಂಗೇಶ್ವರ ಕಾರಣಿಕ ನುಡಿಯುತ್ತಿರುವ ಗೊರವಪ್ಪ

ಕಾರಣಿಕ ವಿಶೇಷದ ಮೈಲಾರ ಜಾತ್ರೆ

ತಾಲ್ಲೂಕಿನ ಐತಿಹಾಸಿಕ ಮೈಲಾರ ಸುಕ್ಷೇತ್ರದಲ್ಲಿ ನೆಲೆ ನಿಂತಿರುವ ಮೈಲಾರಲಿಂಗಸ್ವಾಮಿಯ ಪರಂಪರೆ ನಾಡಿನಲ್ಲೇ ವಿಶಿಷ್ಟವಾಗಿದೆ. ಇಲ್ಲಿ ಜರುಗುವ ಕಾರಣಿಕೋತ್ಸವ ನುಡಿಯನ್ನು ಭಕ್ತರು ನಾಡಿನ ಭವಿಷ್ಯವಾಣಿ ಎಂದು ನಂಬಿದ್ದಾರೆ. ಪ್ರತಿವರ್ಷ ಭಾರತ ಹುಣ್ಣಿಮೆಯ ಮೂರನೇ ದಿನದಂದು ಇಳಿಸಂಜೆ ಮೈಲಾರದ ಡೆಂಕನ ಮರಡಿಯಲ್ಲಿ ಕಾರಣಿಕ ಮಹೋತ್ಸವ ನೆರವೇರುತ್ತದೆ. ಉತ್ತರ ಕರ್ನಾಟಕದ ಎರಡನೇ ಅತಿ ದೊಡ್ಡದಾದ ಮೈಲಾರ ಜಾತ್ರೆಯಲ್ಲಿ ಲಕ್ಷಾಂತರ ಜನರ ಪರಿಷೆ ಸೇರುತ್ತದೆ.

ಭೂಲೋಕದಲ್ಲಿ ಹಿಂದೆ ರಾಕ್ಷಸರ ಉಪಟಳ ಹೆಚ್ಚಾದಾಗ ಋಷಿಮುನಿಗಳು, ದೇವತೆಗಳು ರಕ್ಷಣೆಗಾಗಿ ಶಿವನ ಮೊರೆ ಹೋಗಿದ್ದರಂತೆ. ಆಗ ಮಣಿಕಾಸರು, ಮಲ್ಲಾಸುರರೆಂಬ ಬಲಾಢ್ಯ ರಕ್ಕಸ ಸಹೋದರರನ್ನು ಸಂಹರಿಸಲು ಶಿವನು ಮೈಲಾರಲಿಂಗನ ಅವತಾರವೆತ್ತಿ ಧರೆಗೆ ಇಳಿದಿದ್ದನೆಂಬ ಪ್ರತೀತಿ ಇದೆ. ಈಗಿನ ಡೆಂಕನ ಮರಡಿಯ ಸ್ಥಳದಲ್ಲೇ ಶಿವ ತನ್ನ ಏಳುಕೋಟಿ ಶಿವಸೈನ್ಯದೊಂದಿಗೆ ಯುದ್ಧ ಮಾಡಿ ರಾಕ್ಷಸರ ಮರ್ದನ ಮಾಡಿದ ವಿಜಯೋತ್ಸವ ಸಂಕೇತವಾಗಿ ಕಾರಣಿಕೋತ್ಸವ ಸಾಗಿ ಬಂದಿದೆ ಎಂದು ಹಿರಿಯರು ಪೌರಾಣಿಕ ಮಹತ್ವವನ್ನು ತಿಳಿಸುತ್ತಾರೆ.

ಹೂವಿನಹಡಗಲಿ ತಾಲ್ಲೂಕಿನ ಮಾಹಿತಿ

ಒಟ್ಟು ಗ್ರಾಮಗಳ ಸಂಖ್ಯೆ	112
ಕಂದಾಯ ಗ್ರಾಮಗಳು	55
ಹೋಬಳಿಗಳು	03
ಗ್ರಾಮ ಪಂಚಾಯಿತಿಗಳು	26
ಜನಸಂಖ್ಯೆ (ಪುರುಷರು	98,853
ಮಹಿಳೆಯರು	96,366
ಒಟ್ಟು ಜನಸಂಖ್ಯೆ	1,95,219
ಭೌಗೋಳಿಕ ವಿಸ್ತೀರ್ಣ	94,853 ಹೆಕ್ಟೇರ್
ಸಾಗುವಳಿ ವಿಸ್ತೀರ್ಣ	72,279 ಹೆಕ್ಟೇರ್
ಸಾಗುವಳಿ ಯೋಗ್ಯವಲ್ಲದ ವಿಸ್ತೀರ್ಣ	22,573 ಹೆಕ್ಟೇರ್
ಅರಣ್ಯ ಪ್ರದೇಶ	4738 ಹೆಕ್ಟೇರ್
ಪ್ರಮುಖ ಬೆಳೆಗಳು:ಜೋಳ, ಮೆಕ್ಕೆಜೋಳ, ಭತ್ತ, ರಾಗಿ, ಸಜ್ಜೆ, ಕಬ್ಬು, ಸೂರ್ಯಕಾಂತಿ, ಶೇಂಗಾ, ಈರುಳ್ಳಿ, ಮೆಣಸಿನಕಾಯಿ, ಮಲ್ಲಿಗೆ ಹಾಗೂ ದ್ವಿದಳ ಧಾನ್ಯಗಳು	

ಮಾಲವಿ ಜಲಾಶಯದ ನೋಟ

ಹಸಿರು ಸಿರಿಯ ಹಗರಿಬೊಮ್ಮನಹಳ್ಳಿ

• ಸಿ. ಶಿವಾನಂದ

ಹಗರಿಬೊಮ್ಮನಹಳ್ಳಿ ತಾಲ್ಲೂಕು ತುಂಗಭದ್ರಾ ಹಿನ್ನೀರು ದಂಡೆಯಲ್ಲಿರುವ ತಂಬ್ರಹಳ್ಳಿ, ಬನ್ನಿಗೋಳ, ಅಂಕಸಮುದ್ರ ಸೇರಿದಂತೆ ಹತ್ತಾರು ಗ್ರಾಮಗಳು ಹಿನ್ನೀರು ಬೇಸಾಯವನ್ನು ನೆಚ್ಚಿಕೊಂಡಿವೆ. ಈ ಭಾಗವನ್ನು ತಾಲ್ಲೂಕಿನ ಮಲೆನಾಡು ಎಂದೂ ಕರೆಯಲಾಗುತ್ತಿದೆ.

ತಾಲ್ಲೂಕಿನಲ್ಲಿ ಅಂಕಸಮುದ್ರ ಸಂರಕ್ಷಿತ ಪಕ್ಷಿಧಾಮ, ಮಾಲವಿ ಜಲಾಶಯ, ತಂಬ್ರಹಳ್ಳಿ ರಂಗನಾಥಸ್ವಾಮಿ ದೇವಾಸ್ಥಾನ, ಓಬಳನಾಯಕನ ಬಾವಿ, ಬೆಣ್ಣೆಕಲ್ಲು ಮಹೇಶ್ವರ ದೇವಸ್ಥಾನ ಹೀಗೆ ಪ್ರಸಿದ್ಧ ದೇವಸ್ಥಾನಗಳು ತಾಲ್ಲೂಕಿನಲ್ಲಿವೆ. ನಂದಿಪುರ, ಹಂಪಾಸಗರ ಮತ್ತು ಪಟ್ಟಣದಲ್ಲೂ ಮಠಗಳು ಇವೆ.

ತಾಲ್ಲೂಕಿನ ಜನರ ಮುಖ್ಯಕಸುಬು ಕೃಷಿ, ಮಳೆ ಆಧಾರಿತ ಬೇಸಾಯ. 24 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಪ್ರತಿವರ್ಷ ಬಿತ್ತನೆಯಾಗುತ್ತದೆ. ತಾಲ್ಲೂಕಿನ ರೈತರ ಜೀವನಾಡಿ ಮಾಲವಿ ಜಲಾಶಯದಲ್ಲಿ ಎರಡು ಟಿ.ಎಂ.ಸಿ ನೀರು ಸಂಗ್ರಹಿಸಬಹುದು. ತುಂಗಭದ್ರೆಯಿಂದ ಶಾಶ್ವತ ನೀರೊದಗಿಸುವ ಕಾಮಗಾರಿ ಪ್ರಗತಿಯಲ್ಲಿದೆ. ಪ್ರತ್ಯಕ್ಷ ಮತ್ತು ಪರೋಕ್ಷವಾಗಿ 25 ಸಾವಿರ ಎಕರೆ ಪ್ರದೇಶ ನೀರಾವರಿಯಾಗಲಿದೆ. ಕೊಳವೆಬಾವಿಗಳ ಅಂತರ್ಜಲ ಮಟ್ಟವೂ ಹೆಚ್ಚುತ್ತದೆ. ತಾಲ್ಲೂಕಿನ ಮಾಲವಿ, ನೆಲ್ಕುದ್ರಿ, ಉಲವತ್ತಿ, ಹರೇಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ, ಚಿಂತ್ರಪಳ್ಳಿ, ಕಡಲಬಾಳು, ಬಾಚಿಗೊಂಡನಹಳ್ಳಿ, ಬ್ಯಾಸಿಗಿದೇರಿ, ಹಿರೇಸೊಬಟಿ ಸೇರಿದಂತೆ ಹತ್ತಾರು ಗ್ರಾಮಗಳ ರೈತರಿಗೆ ವರದಾನವಾಗಲಿದೆ.

ಬನ್ನಿಕಲ್ಲು ಗ್ರಾಮದಲ್ಲಿದೆ ಗಾಂಧೀಜಿ ವಾಕಿಂಗ್ ಸ್ಟಿಕ್: ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಬನ್ನಿಕಲ್ಲು ಗ್ರಾಮದ ವೀರಾಪುರ ಈಶ್ವರಪ್ಪ ಅವರ ಪುತ್ರ ಬಿ.ವಿ.ಮಲ್ಲಿಕಾರ್ಜುನಪ್ಪ ಅವರ ಮನೆಯಲ್ಲಿ ಮಹಾತ್ಮ ಗಾಂಧೀಜಿ ಬಳಸುತ್ತಿದ್ದ ವಾಕಿಂಗ್ ಸ್ಟಿಕ್, ಅವರ ಹಸ್ತಾಕ್ಷರ ವಿರುವ ಪತ್ರವನ್ನು ಇಂದಿಗೂ ಕಾಣಬಹುದಾಗಿದೆ.

ಸ್ವಾತಂತ್ರ್ಯ ಸಂಗ್ರಾಮದ ಸೇವೆಗೆ ಮೆಚ್ಚಿ ತಾಲ್ಲೂಕಿನ ಬನ್ನಿಕಲ್ಲು ಗ್ರಾಮದ ವೀರಾಪುರ ಈಶ್ವರಪ್ಪ ಅವರಿಗೆ ಗಾಂಧೀಜಿ ಸ್ವತಃ ತಮ್ಮ ವಾಕಿಂಗ್ ಸ್ಟಿಕ್, ಗಡಿಯಾರ ನೀಡಿ ಮೆಚ್ಚುಗೆ ಪತ್ರವನ್ನು ಬರೆದಿರುವುದನ್ನು ಕಾಣಬಹುದು.

17ನೇ ಶತಮಾನದ ದೇವಸ್ಥಾನ: ತಾಲ್ಲೂಕಿನ ತಂಬ್ರಹಳ್ಳಿಯ ಶ್ರೀಬಂಡೆ ರಂಗನಾಥ ಸ್ವಾಮಿ, ದೇವಾಸ್ಥಾನ ನಿರ್ಮಾಣಕ್ಕೆ ತನ್ನದೇ ಆದ ಇತಿಹಾಸವಿದೆ. 17ನೇ ಶತಮಾನದ ಮೈಸೂರು ಅರಸರ ಕಾಲದಲ್ಲಿ ಹರಪನಹಳ್ಳಿ ಪಾಳೇಗಾರ ಸೋಮಶೇಖರ ನಾಯಕರ ಸಾಮಂತನಾಗಿದ್ದ ದಂಡ ನಾಯಕ ಓಬಳನಾಯಕ ದೇವಸ್ಥಾನವನ್ನು ನಿರ್ಮಿಸಿದ್ದ. ತಾಲ್ಲೂಕಿನ ತಂಬ್ರಹಳ್ಳಿ ಸಮೀಪದ ಓಬಳಾಪುರ ಗ್ರಾಮದಲ್ಲಿ ಆತ ನೆಲೆಸಿದ್ದ. ಅಂತೆಯೇ ಈ ಗ್ರಾಮಕ್ಕೆ ಆತನ ಹೆಸರು ಬಂತೆಂದು ಇತಿಹಾಸ ಹೇಳುತ್ತದೆ.

ಬೆಟ್ಟದ ತುದಿಯಲ್ಲಿ ರಂಗನಾಥೇಶ್ವರ ಮತ್ತು ಲಕ್ಷ್ಮಿ ದೇವಸ್ಥಾನಗಳನ್ನು ನಿರ್ಮಿಸಿದ್ದಲ್ಲದೇ ಬಿರುಬೇಸಿಗೆಯಲ್ಲೂ ತಂಗಾಳಿ ಸೂಸುವ ಮಂಟಪವನ್ನು ನಿರ್ಮಾಣ ಮಾಡಿದ್ದನೆಂದು ಹೊಂಡದ ಬಳಿ ಇರುವ ಶಾಸನಗಳು ರುಜುವಾತು ಪಡಿಸುತ್ತವೆ. ಇದನ್ನು ವೀಕ್ಷಣಾ ಗೋಪುರವೆಂತಲೂ ಕರೆಯಲಾಗುತ್ತದೆ. ಬೆಟ್ಟದ ಕೆಳಗೆ ನಿರ್ಮಾಣಗೊಂಡಿರುವ ಬಾವಿಗೂ ಕೂಡ ಓಬಳನಾಯಕ ಬಾವಿ ಎಂದು ಹೇಳಲಾಗುತ್ತಿದೆ. ಈ ತಂಗಾಳಿ ಗೋಪುರದ ನಾಲ್ಕು ದಿಕ್ಕಿಗೂ ಬಾಲಕೃಷ್ಣ, ಉಗ್ರನರಸಿಂಹ, ವರಾಹಸ್ವಾಮಿ ಮೂರ್ತಿಗಳನ್ನು ಕೆತ್ತಲಾಗಿದೆ. ಗೋಪುರದ ಕೆಳಗಿನ ಕಟ್ಟೆಯಲ್ಲಿ ಕಲ್ಲಿನಲ್ಲಿ ಕೆತ್ತಿರುವ ಬಟ್ಟಲುಗುಣಿ ಆಕರ್ಷಣೀಯವಾಗಿದೆ.

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

ಕೃಷಿ: ತಾಲ್ಲೂಕಿನಲ್ಲಿ ದಾಳಿಂಬೆ, ದ್ರಾಕ್ಷಿ, ನುಗ್ಗೆ, ಪಪ್ಪಾಯಿ, ಮಾವು ಹೀಗೆ ಹಲವು ತೋಟಗಾರಿಕೆ ಬೆಳೆಗಳನ್ನು ಬೆಳೆಯಲಾಗಿದೆ. ಪಿಂಜಾರ್ ಹೆಗ್ಡಾಳ್ ಬಳಿ ಕುಕ್ಕುಟೋದ್ಯಮವೂ ಅಭಿವೃದ್ಧಿಗೊಂಡಿವೆ.

ಮಠಗಳು, ಜಾತ್ರೆಗಳು: ಹಗರಿಬೊಮ್ಮನಹಳ್ಳಿ ತಾಲ್ಲೂಕಿನಲ್ಲಿ ನಂದಿಪುರ ದೊಡ್ಡಬಸವೇಶ್ವರ ಮಠ, ಹಂಪಸಾಗರದ ಮಹಾದೇವತಾತನವರ ನವಲಿ ಹಿರೇಮಠ, ಪಟ್ಟಣದ ಹಾಲಸ್ವಾಮಿ ಮಠ ಇವೆ. ನಂದಿಪುರದಲ್ಲಿ ಕನ್ನಡ ನಾಡುನುಡಿಯನ್ನು ಗೌರವಿಸುವ ನಂದಿಪುರ ನುಡಿಹಬ್ಬ ನಡೆಯುತ್ತದೆ, ಹಬ್ಬದಲ್ಲಿ ಸರ್ವಾಧ್ಯಕ್ಷರನ್ನು ನೇಮಿಸಿ, ವಿವಿಧ ಸಾಹಿತ್ಯಿಕ ಕಾರ್ಯಕ್ರಮಗಳು ಜರುಗುತ್ತವೆ. ಚರಂತೇಶ್ವರ ಪ್ರಸಾರಂಗವನ್ನು ಸ್ಥಾಪಿಸಿರುವ ಮಹೇಶ್ವರ ಸ್ವಾಮೀಜಿ ವಿವಿಧ ರಂಗಗಳ ನೂರಾರು ಮೌಲಿಕ ಕೃತಿಗಳನ್ನು ಪ್ರಕಟಿಸಿದ್ದಾರೆ.

ತುಂಗಭದ್ರಾ ಜಲಾಶಯ ನಿರ್ಮಾಣಗೊಂಡ ಬಳಿಕ ಸ್ಥಳಾಂತರಗೊಂಡಿರುವ ಪಟ್ಟಣದ ರಾಮನಗರ, ನಾರಾಯಣದೇವರಕೆರೆ, ಅರಳಿಹಳ್ಳಿ, ಕುರುದಗಡ್ಡಿ ನಿವಾಸಿಗಳು ಪ್ರತಿವರ್ಷ ವೆಂಕಟೇಶ್ವರ ರಥ ಎಳೆಯುವುದು, ಮರುದಿನ ಕುಸ್ತಿ ಪಂದ್ಯಗಳನ್ನು ಏರ್ಪಡಿಸುವುದು ಇಲ್ಲಿನ ಸಂಪ್ರದಾಯವಾಗಿದೆ.

ತಾಲ್ಲೂಕಿನ ಯಡ್ರಮ್ಮನಹಳ್ಳಿಯ ತೊಗಲುಗೊಂಬೆಯಾಟದ ಕಲಾವಿದರು, ಹಂಪಾಪಟ್ಟಣದ ಗೋಂದಳಿ ಸಮುದಾಯದ ಕಲಾವಿದರು ತಮ್ಮ ಜಾನಪದ ಕಲೆಯ ಮೂಲಕ ಮೂಲ ಸಂಸ್ಕೃತಿಯನ್ನು ಇನ್ನಷ್ಟು ಶ್ರೀಮಂತಗೊಳಿಸಿದ್ದಾರೆ. ತಬಲಾ ವಾದನದ ಮೂಲಕ ಮೋರಿಗೇರಿ ವಿರೂಪಾಕ್ಷರಾವ್, ಸುಗಮ ಸಂಗೀತದಲ್ಲಿ ಉಲವತ್ತಿಯ ಮೌನೇಶ್ ತಮ್ಮ ಪ್ರತಿಭೆಯನ್ನು ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಅನಾವರಣಗೊಳಿಸಿದ್ದಾರೆ. ❖

ಅಂಕಸಮುದ್ರ ಪಕ್ಷಿಧಾಮದ ನೋಟ

ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಸಂಕ್ಷಿಪ್ತ ಮಾಹಿತಿ

- ಒಟ್ಟು ಗ್ರಾಮಗಳ ಸಂಖ್ಯೆ 110
- ಕಂದಾಯ ಗ್ರಾಮಗಳು 50
- ಹೋಬಳಿಗಳು 03
- ಗ್ರಾಮ ಪಂಚಾಯಿತಿಗಳು 21
- ಜನಸಂಖ್ಯೆ (ಪುರುಷರು) 95,337
- ಮಹಿಳೆಯರು 92,901
- ಒಟ್ಟು ಜನಸಂಖ್ಯೆ 1,88,238
- ಭೌಗೋಳಿಕ ವಿಸ್ತೀರ್ಣ 97,599 ಹೆಕ್ಟೇರ್
- ಸಾಗುವಳಿ ವಿಸ್ತೀರ್ಣ 65,864 ಹೆಕ್ಟೇರ್
- ಸಾಗುವಳಿ ಯೋಗ್ಯವಲ್ಲದ ವಿಸ್ತೀರ್ಣ 5,159
- ಹೆಕ್ಟೇರ್‌ಅರಣ್ಯ ಪ್ರದೇಶ 4,482 ಹೆಕ್ಟೇರ್ಪ್ರ
- ಪ್ರಮುಖ ಬೆಳೆಗಳು
  ಜೋಳ, ಮೆಕ್ಕೆಜೋಳ, ಸಜ್ಜೆ, ರಾಗಿ, ನವಣೆ, ಭತ್ತ ಏಕದಳ ಬೆಳೆಗಳು. ಮುಂಗಾರಿನಲ್ಲಿ ತೊಗರಿ, ಹಿಂಗಾರಿನಲ್ಲಿ ಕಡಲೆ, ಅಲಸಂದಿ ಪ್ರಮುಖ ದ್ವಿದಳ ಧಾನ್ಯ ಬೆಳೆಗಳು. ಶೇಂಗಾ, ಸೂರ್ಯಕಾಂತಿ ಎಣ್ಣೆಕಾಳು ಬೆಳೆಗಳು, ಕಬ್ಬು, ಹತ್ತಿ ಪ್ರಮುಖ ವಾಣಿಜ್ಯ ಬೆಳೆಗಳು.

ಸಂರಕ್ಷಿತ ಪಕ್ಷಿಧಾಮ

ಹಗರಿಬೊಮ್ಮನಹಳ್ಳಿ ತಾಲ್ಲೂಕು ಕೇಂದ್ರದಿಂದ 12 ಕಿ.ಮೀ ದೂರದಲ್ಲಿರುವ ತುಂಗಭದ್ರಾ ಹಿನ್ನೀರು ಪ್ರದೇಶ ಇರುವ ಅಂಕಸಮುದ್ರ ಕೆರೆಯ 244 ಎಕರೆ ವಿಸ್ತಾರವಾದ ಪ್ರದೇಶದಲ್ಲಿ ಸಾವಿರಾರು ಕರಿಜಾಲಿ ಮರಗಳು. ಅದರಲ್ಲಿ ದೇಶ ವಿದೇಶಗಳ 140ಕ್ಕೂ ಹೆಚ್ಚು ಪ್ರಭೇದಗಳ ಪಕ್ಷಿಗಳು ಇಲ್ಲಿ ಬಂದು ನೆಲೆಸುತ್ತಿವೆ. ಕೆಲವು ಸಂತಾನೋತ್ಪತ್ತಿ ನಡೆಸುತ್ತಿವೆ. ಬಣ್ಣದ ಕೊಕ್ಕರೆ (ಪೇಂಟೆಡ್ ಸ್ಟಾರ್ಕ್), ಬೂದು ಬಕ(ಗ್ರೇ ಹೆರಾನ್), ಇರುಳು ಬಕ (ನೈಟ್ ಹೆರಾನ್), ನೀರುಕಾಗೆ (ಕಾರ್ಮೋರೆಂಟ್), ಗೋವಕ್ಕಿ (ಕ್ಯಾಟಲ್ ಈಗ್ರೆಟ್), ಹೆಜ್ಜಾರ್ಲೆ(ಪೆಲಿಕಾನ್), ಕಬ್ಬಕ್ಕಿಗಳು, ಕೊಕ್ಕರೆ, ವಿವಿಧ ಜಾತಿಯ ಬಾತುಕೋಳಿಗಳು ಸೇರಿದಂತೆ ನೂರಾರು ಪ್ರಭೇದಗಳ ಹಕ್ಕಿಗಳು ಸಾವಿರಾರು ಸಂಖ್ಯೆಯಲ್ಲಿ ಇಲ್ಲಿ ಬದುಕು ಕಂಡುಕೊಂಡಿವೆ.

‘ಕೋಳಿ’ ಕೂಗದ ಹಳ್ಳಿ

ತಾಲ್ಲೂಕಿನ ನಾಣ್ಯಾಪುರ ಗ್ರಾಮ ಕೋಳಿ ಕೂಗದ ಹಳ್ಳಿ ಎಂದೇ ಖ್ಯಾತಿ ಹೊಂದಿದೆ. ಇಲ್ಲಿ ಕೋಳಿಗಳನ್ನು ಸಾಕುವುದಿಲ್ಲ. ಗ್ರಾಮದಲ್ಲಿ ಜಗಳೂರು ಸ್ವಾಮಿ ದೇವಸ್ಥಾನವಿದೆ. ದೇವರ ಕಾರಣದಿಂದಾಗಿ 150 ವರ್ಷಗಳಿಂದ ಗ್ರಾಮದಲ್ಲಿ ಯಾರೂ ಕೋಳಿಗಳನ್ನು ಸಾಕಿಲ್ಲ, ಕೋಳಿ ಮಾಂಸ ತಿಂದಿಲ್ಲ, ಮೊಟ್ಟೆಗಳನ್ನು ಕೂಡ ಮುಟ್ಟಿಲ್ಲ ಎನ್ನುತ್ತಾರೆ ಗ್ರಾಮದ ಲಕ್ಷ್ಮಣ. ಕೋಳಿ ತಿಂದರೆ ವಾಂತಿ ಭೇದಿ ಕಾಯಂ ಎನ್ನುತ್ತಾರೆ.

ಬಳ್ಳಾರಿಯಿಂದ ದಾವಣಗೆರೆ, ದಾವಣಗೆರೆಯಿಂದ ಬಳ್ಳಾರಿಗೆ ಮರು ಸೇರ್ಪಡೆಯಾಗಿದ್ದ ತಾಲ್ಲೂಕು

ಈಗ ವಿಜಯನಗರ ಜಿಲ್ಲೆಗೆ ಹರಪನಹಳ್ಳಿ...

ತಾಲ್ಲೂಕಿನ ಮಾಹಿತಿ

ಒಟ್ಟು ಗ್ರಾಮಗಳು	240
ಕಂದಾಯ ಗ್ರಾಮಗಳು	85
ಜಿಲ್ಲಾ ಪಂಚಾಯಿತಿ	7 ಸ್ಥಾನ
ತಾಲ್ಲೂಕು ಪಂಚಾಯ್ತಿ	26 ಸ್ಥಾನ
ಗ್ರಾಮ ಪಂಚಾಯಿತಿಗಳು	37
ಹೋಬಳಿಗಳು	4
ಜನಸಂಖ್ಯೆ(ಪುರುಷರು)	1,54,289,
ಮಹಿಳೆಯರು	1,47,714,
ಒಟ್ಟು ಜನಸಂಖ್ಯೆ	3,02,003.
ಭೌಗೋಳಿಕ ವಿಸ್ತೀರ್ಣ	1,43,024,20 ಹೆಕ್ಟೇರ್
ಬಿತ್ತನೆ ವಿಸ್ತೀರ್ಣ	89,000 ಹೆಕ್ಟೇರ್
ಹಿಡುವಳಿ	1,01,507 ಹೆಕ್ಟೇರ್
ಅರಣ್ಯ ಪ್ರದೇಶ	22,400 ಹೆಕ್ಟೇರ್

ಬೆಳೆಗಳು
ಮೆಕ್ಕೆಜೋಳ, ಶೇಂಗಾ, ಜೋಳ, ಈರುಳ್ಳಿ, ಸೂರ್ಯಕಾಂತಿ, ತಂಬಾಕು, ಭತ್ತ, ರಾಗಿ, ತೊಗರಿ, ಹತ್ತಿ, ಅಲಸಂದೆ, ಕಬ್ಬು.

ಕಲಾಲೋಕದ ಸಿರಿವಂತಿಕೆ

ರಂಗ ಸಂಚಾರ, ವರ್ಷವಿಡಿ ಶರಣರ ಚಾವಡಿಯ ಮೂಲಕ ಪ್ರಸಿದ್ಧಿ ಪಡೆದ ಸಮಸ್ತರು ರಂಗ ತಂಡ, ಸಂಪ್ರದಾಯದ ತಂಡಗಳು, ಸರ್ಕಾರಿ ಶಾಲಾ ಶಿಕ್ಷಕರ ಕಲಾ ಬಳಗ, ಹಗಲುವೇಷಗಾರರು, ಗೋಂದಲಿಗರ ಕಲೆ ಮತ್ತು ಕುಲಕಸುಬು, ಹಲುವಾಗಲು ಗ್ರಾಮದ ಸೂತ್ರದ ಬೊಂಬೆಯಾಟ, ಮಾಡ್ಲಗೇರೆ ಕೋಲಾಟ, ಅರಸೀಕೆರೆ ಹಲಗೆವಾದನ, ಸಮ್ಮಾಳ, ಕೀಲುಕುಣಿತ, ಗೆಜ್ಜೆಕುಣಿತದ ಮಜಲುಗಳಿಂದ ಸಂಗಮವಾಗಿದೆ. ಜಾನಪದ ಅಕಾಡೆಮಿ ಅಧ್ಯಕ್ಷೆ ಜೋಗತಿ ಮಂಜಮ್ಮ, ರಂಗ ಕಲಾವಿದೆ ಸೋಗಿ ನಾಗರತ್ನಮ್ಮ, ಪ್ರತಿಭಾನ್ವಿತ ಕಲಾವಿದರ ಹೆಜ್ಜೆ ಗುರುತುಗಳು ಇಲ್ಲಿ ಸಿಗುತ್ತವೆ.

ಪ್ರಮುಖ ಮಠ, ಮಠಾಧೀಶರು

ತೆಗ್ಗಿನಮಠ ಸಂಸ್ಥಾನ - ಶ್ರೀ ವರಸದ್ಯೋಜಾತ ಶಿವಾಚಾರ್ಯ ಸ್ವಾಮೀಜಿ, ನೀಲಗುಂದ ಗುಡ್ಡದ ವಿರಕ್ತಮಠ - ಶ್ರೀ ಚನ್ನಬಸವ ಶಿವಯೋಗಿ ಸ್ವಾಮೀಜಿ, ಕೂಲಹಳ್ಳಿ - ಶ್ರೀ ಚಿನ್ಮಯಿ ಸ್ವಾಮೀಜಿ, ಶ್ರೀ ಕಾಶಿನಾಥ ಸ್ವಾಮೀಜಿ, ಕೋಲಶಾಂತೇಶ್ವರ ಮಠ - ಶಾಂತಲಿಂಗ ರಾಜದೇಶಿಕೇಂದ್ರ ಸ್ವಾಮೀಜಿ, ರಾಮಘಟ್ಟ - ರೇವಣಸಿದ್ಧ ಶಿವಾಚಾರ್ಯ ಸ್ವಾಮೀಜಿ, ಅಡವಿಹಳ್ಳಿ ಹಾಲಸ್ವಾಮೀಜಿ, ನಿಚ್ಚವ್ವನಹಳ್ಳಿ, ಬೆಣ್ಣಿಹಳ್ಳಿ ಮಠದ ಹಾಲಸ್ವಾಮೀಜಿ ಪ್ರಮುಖರು.

• ವಿಶ್ವನಾಥ ಡಿ.

ಎರಡು ದಶಕದಲ್ಲಿ ಬಳ್ಳಾರಿಯಿಂದ ದಾವಣಗೆರೆ, ದಾವಣಗೆರೆಯಿಂದ ಬಳ್ಳಾರಿಗೆ ಪುನಃ ಸೇರ್ಪಡೆ ಆಗಿರುವ ಹರಪನಹಳ್ಳಿ, ಈಗ ರಚನೆಯಾಗಿರುವ ವಿಜಯನಗರ ಜಿಲ್ಲೆಯಲ್ಲಿ ಗುರುತಿಸಿಕೊಂಡು ಮೂರು ಜಿಲ್ಲೆಗಳೊಂದಿಗೆ ಭಾವನಾತ್ಮಕ ಸಂಬಂಧ ಬೆಸೆದಿದೆ. ಸಾಹಿತ್ಯ, ಶಿಕ್ಷಣ, ಸ್ವಾತಂತ್ರ್ಯ ಚಳವಳಿ ಮತ್ತು ಐತಿಹಾಸಿಕ ಕುರುಹುಗಳ ಪ್ರಮುಖ ತಾಣ.

ಡಾ.ನಂಜುಂಡಪ್ಪ ವರದಿ ಪ್ರಕಾರ ಅತ್ಯಂತ ಹಿಂದುಳಿದ ಮೂರನೇ ತಾಲ್ಲೂಕಾಗಿದೆ. ಆದರೂ ದಾವಣಗೆರೆ, ಬಳ್ಳಾರಿ ಜಿಲ್ಲೆಗಳ ಶಿಕ್ಷಣದ ಕಾಶಿ ಎನ್ನುವ ಹಿರಿಮೆ ಪಡೆದಿದೆ. ಕೃಷಿ ಕ್ಷೇತ್ರದಲ್ಲಿ ಮೆಕ್ಕೆಜೋಳದ ಕಣಜವಾಗಿದೆ.

ದೇಶ ಮತ್ತು ರಾಜ್ಯದ ಇತಿಹಾಸವನ್ನು ಗಮನಿಸಿದರೆ ಶಾತವಾಹನ, ಕದಂಬ, ರಾಷ್ಟ್ರಕೂಟ, ಚಾಲುಕ್ಯರು, ಕಲಚೂರರು, ಗಂಗರು, ಹೊಯ್ಸಳರ ಕಾಲದಲ್ಲೂ ಇಲ್ಲಿಯ ಹಳ್ಳಿಗಳು ಸದ್ದು ಮಾಡಿವೆ. ನೊಳಂಬರು, ಪಾಂಡ್ಯರು, ಪಾಳೇಗಾರರು, ಉಚ್ಚಂಗಿಪಾಂಡ್ಯರ ಅವಧಿಯಲ್ಲಿ ಉಚ್ಚಂಗಿದುರ್ಗ, ಹರಪನಹಳ್ಳಿ, ಬಾಗಳಿ, ಚಿಕ್ಕಹಳ್ಳಿ ಗ್ರಾಮಗಳು ಅರಸರ ಪ್ರಮುಖ ಕೇಂದ್ರಗಳಾಗಿರುವುದು ಶಾಸನಗಳಿಂದ ತಿಳಿಯುತ್ತದೆ, ಈಗ ಹರಪನಹಳ್ಳಿ ತಾಲ್ಲೂಕು ಕೇಂದ್ರವಾಗಿದೆ.

ಉಚ್ಚಂಗಿದುರ್ಗದ ಕಲ್ಲಿನ ಕೋಟೆ, ಬಾಗಳಿ ಕಲ್ಲೇಶ್ವರ, ಕೂಲಹಳ್ಳಿ ಗುಹೆ, ಕೆರೆಗುಡಿಹಳ್ಳಿ ಬಸವೇಶ್ವರ, ನೀಲಗುಂದ ಭೀಮೇಶ್ವರ, ನಿಟ್ಟೂರಿನ ಕೋಟೆ, ಅರಸೀಕೆರೆ ದಂಡಿನ ದುರುಗಮ್ಮ, ತೆಲಿಗಿ, ದುಗ್ಗಾವತಿ, ಹಲುವಾಗಲು, ಕಣಿವಿಹಳ್ಳಿ, ಚಿಗಟೇರಿ, ನಂದಿಬೇವೂರು, ಕೊಂಗನಹೊಸೂರಿನ ಕುರುಹು, ಗಂಟೆ ನಾದ ಹೊಮ್ಮಿಸುವ ಕರೆಕಲ್ಲ ಗುಡ್ಡದಲ್ಲಿ ಇತಿಹಾಸದ ಕುರುಹುಗಳಿವೆ.

ಗಂಟೆ, ಶಿಲಾ, ತಾಮ್ರ, ತಾಳೆಗರಿ ಶಾಸನಗಳು ಇಲ್ಲಿ ದೊರೆತಿವೆ. ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನ, ಕೋಟೆ ಕಾಳಮ್ಮ, ಗೋಕರ್ಣೇಶ್ವರ, ವೀರಭದ್ರೇಶ್ವರ ದೇವರ ದೇವಸ್ಥಾನಗಳು, ಜೈನರ ಬಸದಿ, ಮುಸ್ಲಿಮರ ಪುರಾತನ ಮಸೀದಿಗಳಿವೆ. ಸಾಲುಮರದ ತಿಮ್ಮಕ್ಕ ಉದ್ಯಾನ (ಹರಪನಹಳ್ಳಿ ಉಚ್ಚಂಗೆಮ್ಮ ಗುಡ್ಡ), ಗೋಸಾಮಿಗುಡ್ಡಗಳು ಸ್ಥಳ ಪುರಾಣಕ್ಕೆ ಸಾಕ್ಷಿಯಾಗಿವೆ.

ಹಾಸ್ಯ ಸಾಹಿತ್ಯದ ತವರು: ಪುರಾತನ ಕವಿ ಉಚ್ಚಂಗಿದುರ್ಗದ ಮಹಾಲಿಂಗರಂಗ, ದಾಸ, ಕೀರ್ತನ ಕವಯಿತ್ರಿ ಹರಪನಹಳ್ಳಿ ಭೀಮವ್ವ ಸಾಹಿತ್ಯ, ಹಾಸ್ಯ ಬ್ರಹ್ಮನೆಂದೆ ಖ್ಯಾತಿ ಪಡೆದ ಭೀಮಸೇನರಾವ್ ಚಿದಂಬರ (ಬೀಚಿ) ಅವರು ತಿಮ್ಮನಾಗಿ ಈಗಲೂ ಜನಮಾನಸದಲ್ಲಿ ಉಳಿದಿದ್ದಾರೆ, ಚಿಗಟೇರಿ ಜಾನಪದ ಗಾರುಡಿಗ ದಿ.ಮುದೇನೂರು ಸಂಗಣ್ಣರ ಬರಹ, ಪಟ್ಟಣದಲ್ಲಿ ವಾಸವಿದ್ದ ದಿ.ಎಸ್.ಎಸ್.ಹಿರೇಮಠರ ವೈಚಾರಿಕ ಕೃತಿಗಳು ಪ್ರೇರಣೆಯಾಗಿವೆ.

ಶಿವರಾಮ ಕಾರಂತರು ಸ್ಪರ್ಶಿಸಿದ ಈ ನೆಲದಲ್ಲಿ 1947, ಮೇ 7 ರಿಂದ ಮೇ 9ರ ವರೆಗೆ ಕೆ.ವಿ.ವೆಂಕಟರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ನಡೆದಿತ್ತು.

ಸೋಬಾನಪದ ಹಾಡುಗಾರ್ತಿ ಉಚ್ಚಂಗಿದುರ್ಗದ ಬೊಮ್ಮಾಳ ಎಲಿಸವ್ವ, ಗೊರವರ ಕುಣಿತ ಕಲಾವಿದ ದಿ.ಚಿಗಟೇರಿ ಚನ್ನಬಸಪ್ಪ, ಬಾಗಳಿ ಷಡಕ್ಷರಪ್ಪ, ಸಾಹಿತಿ ಕುಂ.ಬಾ.ಸದಾಶಿವಪ್ಪ ಹಾಗೂ ಬಸವಲಿಂಗಪ್ಪನವರ ಸೂತ್ರದ ಬೊಂಬೆಯಾಟ. ಭೀಮವ್ವರಿಂದ ಪ್ರೇರಿತರಾದ ದಿ.ವೆಂಕೋಬರಾವ್‌ರು ಕೀರ್ತನೆ ಕೃತಿಗಳನ್ನು ಪ್ರಕಟಿಸಿದ್ದಾರೆ. ಕಬಡ್ಡಿ, ಕೊಕ್ಕೊ, ಡಿಸ್ಕಸ್ ಥ್ರೊ, ಓಟ, ವಾಲಿಬಾಲ್ ನಂತಹ ಆಟದಲ್ಲಿ ಗ್ರಾಮಾಂತರ ಕ್ರೀಡಾಪಟುಗಳು ರಾಷ್ಟ್ರಮಟ್ಟದಲ್ಲಿ ಸಾಧನೆ ಮಾಡಿದ್ದಾರೆ.

ಧರ್ಮ ಜಾಗೃತಿ: ಇಲ್ಲಿಯ ಹಿಂದೂ ಪರಂಪರೆಯ ಶಂಕರಚಾರ್ಯ, ರಾಘವೇಂದ್ರ, ಮಧ್ವರಾಯರ ಮಠಗಳು ಭವ್ಯ ಇತಿಹಾಸ ಹೊಂದಿವೆ. ಜೈನರ ಸುಂದರ ಬಸದಿ, ಮುಸ್ಲಿಮರ ಪುರಾತನ ಮಸೀದಿಗಳಿವೆ. ಈಚೆಗೆ ಕ್ರೈಸ್ತ ಧರ್ಮ ಚರ್ಚ್‌ಗಳನ್ನು ಸ್ಥಾಪಿಸಿದೆ.

ಪಂಚಗಣಾಧೀಶ್ವರರಾದ ಕೂಲಹಳ್ಳಿ ಮದ್ದಾನೇಶ್ವರ, ಹರಪನಹಳ್ಳಿ ಕೆಂಪೇಶ್ವರ ಹಾಗೂ ಅರಸೀಕೆರೆ ಕೋಲಶಾಂತೇಶ್ವರರು 16ನೇ ಶತಮಾನದಲ್ಲಿ ಸಮಾನತೆ ಕ್ರಾಂತಿಗೈದಿದ್ದಾರೆ, ಈಗ ಲಕ್ಷಾಂತರ ಭಕ್ತರ ದೈವಿ ಪುರುಷರಾಗಿರುವುದು ವಿಶೇಷ.

ತೆಗ್ಗಿನಮಠದ ಲಿಂ.ಚಂದ್ರಮೌಳೀಶ್ವರ ಶಿವಾಚಾರ್ಯರು ಶಿಕ್ಷಕರ ತರಬೇತಿ ಕೇಂದ್ರ, ಔಷಧ ಮಹಾವಿದ್ಯಾಲಯದಂತಹ ಮಹತ್ವದ ಅನೇಕ ವಿದ್ಯಾಸಂಸ್ಥೆಗಳನ್ನು ಆರಂಭಿಸಿದ್ದಾರೆ, ತರಳಬಾಳು ವಿದ್ಯಾಸಂಸ್ಥೆಯು ಪೂರ್ವ ಪ್ರಾಥಮಿಕದಿಂದ ಪದವಿ, ಪಾಲಿಟೆಕ್ನಿಕ್ ಕಾಲೇಜು ತೆರೆದಿದೆ. ಉಜ್ಜಯಿನಿಪೀಠದ ವಿದ್ಯಾಸಂಸ್ಥೆ, ಬಳ್ಳಾರಿ ವೀರಶೈವ ವಿದ್ಯಾವರ್ಧಕ ಸಂಘದ ಕಾಲೇಜುಗಳು, ಕರ್ನಾಟಕ ಕಲ್ಚರಲ್ ಅಸೊಸಿಯೇಷನ್ ಶಾಲೆ, ಪ್ರಕೃತಿ ವಿದ್ಯಾಸಂಸ್ಥೆಯ ಶಾಲೆಗಳು ರಾಜ್ಯದಲ್ಲಿ ಹೆಸರು ಗಳಿಸುವ ಮೂಲಕ ರಾಜ್ಯದ ಪ್ರಮುಖ ಶಿಕ್ಷಣ ಕೇಂದ್ರಗಳಲ್ಲಿ ಹರಪನಹಳ್ಳಿಯನ್ನು ಒಂದಾಗಿಸಿವೆ.

ಪ್ರಭಾವಿ ರಾಜಕಾರಣ: 1952 ರಿಂದ 2018ರವರೆಗೆ 15 ವಿಧಾನಸಭೆ ಚುನಾವಣೆಗಳು ನಡೆದಿವೆ. ದಿವಂಗತರಾದ ಇಜಾರಿ ಶಿರಸಪ್ಪ, ಎಂ.ಎಂ.ಜೆ.ಸದ್ಯೋಜಾತಯ್ಯ, ಎಂ.ದಾಸಪ್ಪ, ಡಿ.ನಾರಾಯಣ ದಾಸ್, ಬಿ.ಎಚ್.ಯಂಕ ನಾಯ್ಕ, ಪಿ.ಟಿ.ಪರಮೇಶ್ವರನಾಯ್ಕ, ದಿವಂಗತ ಎಂ.ಪಿ.ರವೀಂದ್ರ ಶಾಸಕರಾಗಿದ್ದಾರೆ. ಸದ್ಯ ಜಿ.ಕರುಣಾಕರ ರೆಡ್ಡಿ ಎರಡನೇ ಸಲ ಶಾಸಕರಾಗಿದ್ದಾರೆ.

ಹರಪನಹಳ್ಳಿ ಹಿನ್ನೆಲೆ: ಕ್ರಿ.ಶ.1,104ರ ಹಿರೇಕುರುವತ್ತಿ ಶಾಸನದಲ್ಲಿ ತಿಳಿಸಿರುವಂತೆ ಕೋಗಳಿ ರಾಜ್ಯದ ಮುತ್ತಿಗೆ ಆಳ್ವಿಕೆಗೆ ಹರಪನಹಳ್ಳಿ ಒಳಪಟ್ಟಿತ್ತು. ಈ ಪ್ರದೇಶದಲ್ಲಿದ್ದ 12 ಬ್ರಾಹ್ಮಣರು, ಹರಿಯಣ್ಣನ ನೇತೃತ್ವದಲ್ಲಿ ಕೋಗಳಿ ಅರಸನ ಬಳಿ ಹೋಗಿ ಒಂದು ಅಗ್ರಹಾರದ ನಿರ್ಮಾಣಕ್ಕೆ ಬಿನ್ನವತ್ತಳೆ ಸಲ್ಲಿಸಿದರು. ಅವರ ಆಸೆಯಂತೆ ರಾಜನು ಅಗ್ರಹಾರ ನಿರ್ಮಿಸಿ ಬ್ರಹ್ಮಪುರಿ ಎಂದು ಹೆಸರಿಟ್ಟಿದ್ದ.

ಆ ಬ್ರಹ್ಮಪುರಿ ಅಗ್ರಹಾರವನ್ನು ಕಾಲಾನಂತರ ಹರಿಪುರ, ಹರಿಯಣ್ಣನಹಳ್ಳಿ, ಹರಿಯಪ್ಪನಹಳ್ಳಿ, ಹಾರಪ್ಪಹಳ್ಳಿ, ಹುರುಪಿನಹಳ್ಳಿ, ಹರಪನಹಳ್ಳಿಯಾಗಿ ಮಾರ್ಪಡಾಗಿದೆ ಎಂಬುದು ಐತಿಹ್ಯ. ಕ್ರಿ.ಶ 1,565ರಲ್ಲಿ ಹರಿಯಮ್ಮ ಎನ್ನುವ ಮಹಿಳೆ ರಾಜ್ಯಭಾರ ನಡೆಸಿದ್ದಕ್ಕಾಗಿ ಈ ಹೆಸರು ಬಂದಿದೆ ಎಂಬ ವಾದವೂ ಇದೆ. 233 ವರ್ಷಗಳ ಅರಸರ ಆಳ್ವಿಕೆಯ ಸುದೀರ್ಘ ಅವಧಿಯಲ್ಲಿ 15 ಪುರುಷ ಅರಸರು ಆಡಳಿತ ನಡೆಸಿದ್ದಾರೆ ಎನ್ನುವ ಕಥೆಗಳು ಜನಪದರದಲ್ಲಿವೆ.. ಕೆಲಕಾಲ ಐತಿಹಾಸಿಕ ಬಾಗಳಿ ಅಗ್ರಹಾರದ ಆಡಳಿತಕ್ಕೂ ಒಳಪಟ್ಟಿತ್ತು. 12 ಜನ ಬ್ರಾಹ್ಮಣರ ಪ್ರಭಾವದಿಂದಾಗಿ ಪಟ್ಟಣದಲ್ಲಿ 12 ಆಂಜನೇಯ ಸ್ವಾಮಿ ದೇವಸ್ಥಾನ, 12 ಉಕ್ಕಡ (ಅಗಸಿಬಾಗಿಲು), 12 ಗರಡಿ ಮನೆಗಳು, 12 ಮಠಗಳು, 12 ಮಸೀದಿಗಳನ್ನು ಸ್ಥಾಪಿಸಿರುವುದು ಇತಿಹಾಸದಿಂದ ತಿಳಿಯುತ್ತದೆ. ಬರುಬರುತ್ತ ಈ ಸಂಖ್ಯೆ ಹೆಚ್ಚಾಗಿದೆ. ವಿಜಯನಗರ ಅರಸರ ಸೇನಾಧಿಕಾರಿ ಪಾಳೇಗಾರ ದಾದಾನಾಯಕ ಮತ್ತು ರಂಗನಾಯಕ ಸಹೋದರರು ಹರಪನಹಳ್ಳಿ ಮತ್ತು ಉಚ್ಚಂಗಿದುರ್ಗ ಪ್ರದೇಶಗಳನ್ನು ರಾಜಧಾನಿಯನ್ನಾಗಿಸಿ ಆಡಳಿತ ನಡೆಸಿದರು. ಮುಂದೆ ರಾಜಸೋಮಶೇಖರ ನಾಯಕ ಸುದೀರ್ಘಾವಧಿ ಆಳ್ವಿಕೆ ಮಾಡಿದ್ದಾರೆ. ಬ್ರಿಟಿಷರ ಆಳ್ವಿಕೆಯ ಸ್ವಾತಂತ್ರ್ಯ ಪೂರ್ವದಲ್ಲಿ ಮುಂಡರಗಿ ಭೀಮರಾಯ ಇಲ್ಲಿ ಗಮನ ಸೆಳೆದಿದ್ದಾರೆ.

ಜಾತ್ರೆಗಳು: ಉಚ್ಚಂಗೆಮ್ಮ ದೇವಿ ದೇವಸ್ಥಾನ, ಕೂಲಹಳ್ಳಿ ಗೋಣಿಬಸವೇಶ್ವರ, ಹರಪನಹಳ್ಳಿ ಕೋಟೆ ಆಂಜನೇಯ, ವೀರಭದ್ರೇಶ್ವರ, ಬೆಣ್ಣೆಹಳ್ಳಿ ಹಂಪಾಂಬ, ಪಂಪಾಪತಿ, ಗುಂಡಗತ್ತಿ ಆಂಜನೇಯ, ಅರಸೀಕೆರೆ ದಂಡಿನ ದುರುಗಮ್ಮದೇವಿ, ಹಲಿಕಟ್ಟೆ ಗುಳೇದ ಲಕ್ಕಮ್ಮದೇವಿ ಜಾತ್ರೆಗಳು ಇಲ್ಲಿ ಪ್ರಮುಖ. ❖

ಸ್ವಾತಂತ್ರ್ಯ ಚಳವಳಿ ಕೇಂದ್ರ ಸ್ಥಾನ

ಸ್ವಾತಂತ್ರ್ಯ ಚಳವಳಿಯ ಕೇಂದ್ರ ಸ್ಥಾನಗಳಾಗಿದ್ದ ಕಂಚಿಕೇರಿ, ನೀಲಗುಂದ, ಹರಪನಹಳ್ಳಿಗಳಲ್ಲಿ ಹೋರಾಟಗಾರರು ಬ್ರಿಟಿಷ್ ಅಧಿಕಾರಿಗಳ ಕಚೇರಿ, ವಾಹನ ಧ್ವಂಸ ಮಾಡಿದ್ದು, ಈಚಲುಗಿಡ ಕಡಿಯಲು ಹೋಗಿ ಜೈಲುವಾಸ ಅನುಭವಿಸಿರುವುದು, ಅಸಹಕಾರ ಚಳವಳಿಯಲ್ಲಿ ಮಹಾತ್ಮ ಗಾಂಧೀಜಿ ಆಗಮಿಸಿ, ತಂಗಿದ್ದ ಕೊಠಡಿ ಸ್ಮಾರಕವಾಗಿದೆ.

ನಂತರ ಸ್ವಾತಂತ್ರ್ಯ ಚಳವಳಿಯ ರಾಷ್ಟ್ರಮಟ್ಟದ ನಾಯಕರು ಸಂಘಟನೆಗೆ ಬಂದು ಚಿಗಟೇರಿ ಮಾರ್ಗವಾಗಿ ಸಂಚರಿಸಿ ಹಣ ಸಂಗ್ರಹಿಸಿದ್ದರು ಎಂದು ಸ್ವಾತಂತ್ರ್ಯ ಹೋರಾಟಗಾರ ಎಚ್.ಎಂ.ವೀರಭದ್ರಯ್ಯ ತಮ್ಮ ಪುಸ್ತಕದಲ್ಲಿ ಉಲ್ಲೇಖಿಸಿದ್ದಾರೆ.

ಭೀಮೇಶ್ವರ ದೇವಸ್ಥಾನದ ನೋಟ

ವಿಶ್ವ ಕುಸ್ತಿ ಇಂದಿನಿಂದ: ಕಣದಲ್ಲಿ ಭಾರತದ ಯುವಪೈಲ್ವಾನರು

ಒಸ್ಲೊ (ಪಿಟಿಐ):ಶನಿವಾರ ಇಲ್ಲಿ ಆರಂಭವಾಗಲಿರುವ ವಿಶ್ವ ಕುಸ್ತಿ ಚಾಂಪಿಯನ್‌ಷಿಪ್‌ನಲ್ಲಿ ಭಾರತದ ಯುವ ಕುಸ್ತಿಪಟುಗಳು ಕಣಕ್ಕಿಳಿಯಲಿದ್ದಾರೆ.

ಖ್ಯಾತನಾಮ ಪೈಲ್ವಾನರ ಗೈರುಹಾಜರಿಯಲ್ಲಿ ಯುವ ಪ್ರತಿಭೆಗಳಿಗೆ ತಮ್ಮ ಛಾಪು ಮೂಡಿಸುವ ಅವಕಾಶ ಒದಗಿಬಂದಿದೆ.

ಒಲಿಂಪಿಯನ್ ಬಜರಂಗ್ ಪೂನಿಯಾ, ರವಿ ದಹಿಯಾ, ದೀಪಕ್ ದಹಿಯಾ ಮತ್ತು ಮಹಿಳೆಯರ ವಿಭಾಗದಲ್ಲಿ ವಿನೇಶ ಪೋಗಟ್ ಅವರು ಕಣಕ್ಕಿಳಿಯುತ್ತಿಲ್ಲ.

ರವೀಂದರ್ ದಹಿಯಾ (61 ಕೆಜಿ), ರೋಹಿತ್ (65ಕೆಜಿ), ಯಶ್ ತುಷೀರ್ (74ಕೆಜಿ), ಪೃಥ್ವಿರಾಜ್ ಬಾಸಾಹೇಬ್ ಪಾಟೀಲ (92ಕೆಜಿ) ಮತ್ತು ಅನಿರುದ್ಧ ಗುಲಿಯಾ (125ಕೆಜಿ) ಅವರು ಕಣಕ್ಕಿಳಿಯಲು ಸಿದ್ಧರಾಗಿದ್ದಾರೆ. ಆದರೆ ಮಹಿಳಾ ತಂಡದಲ್ಲಿರುವ ಅನ್ಶು ಮಲಿಕ್ (57ಕೆಜಿ) ಅವರ ಮೇಲೆ ಹೆಚ್ಚಿನ ನಿರೀಕ್ಷೆ ಮೂಡಿದೆ.

ಅನ್ಶು ಮಲಿಕ್ –ಫೇಸ್‌ಬುಕ್ ಚಿತ್ರ



ಪ್ರಜಾವಾಣಿ ಪ್ರಜಾ ಪ್ಲಸ್
ಮನರಂಜನೆ | ಜಾಹೀರಾತು ಪ್ರೋತ್ಸಾಹ | ಉದ್ಯಮ ಅಭಿವೃದ್ಧಿ
ಶನಿವಾರ, 2 ಅಕ್ಟೋಬರ್ 2021

ಗ್ರಾಮೀಣ ಸೊಗಡಿನ ಶೈಕ್ಷಣಿಕ, ಸಾಂಸ್ಕೃತಿಕ, ಸಮಗ್ರ ಕೃಷಿ ಕೇಂದ್ರ

ನೆಲದ ಸಿರಿ

ಬಳಕೂರು ವಿ.ಎಸ್. ನಾಯಕ್

ಕೋಲೆಬಸವ, ರಾಟೆ, ಒಕ್ಕಣೆಯ ಕಣ, ಹಾಲು ಹಿಂಡುವಿಕೆ, ಬುಡಬುಡಕೆಯವರು, ಶಕುನ ಸಾರುವ ಹಕ್ಕಿಗಳು, ಧ್ಯಾನ ಉಳುಮೆ ಮಾಡುತ್ತಿರುವ ರೈತ ಮತ್ತು ಎತ್ತುಗಳು, ಕುಂಬಾರಿಕೆ, ಕುಲುಮೆ, ವೀರಗಾಸೆ, ಯಕ್ಷಿಣಿ, ಜಗ್ಗ ಲಕ್ಕಿ ಡೊಳ್ಳುಕುಣಿತ, ರಾಕ್ಷಸಿ ಕಹಳೆ, ಕರಗ, ಪರಂಪರೆಯ ಗ್ರಾಮೀಣ ವಸ್ತುಸಂಗ್ರಹಾಲಯ, ಅಪರಿಮಿತ ಪರಿಸರಸ್ನೇಹಿ ಈಜುಕೊಳ, ಬಕಾಸುರ ಇಂಗು ಗುಂಡಿಗಳು, ರೋಮನ್ ಆ್ಯಂಪಿ ಥಿಯೇಟರ್, ವಿವಿಧ ಸಸ್ಯ ಪ್ರಭೇದಗಳು, ದಂಡಕಾರಣ್ಯ, ಸಾಕುಪ್ರಾಣಿಗಳು ಮತ್ತು ಜೇನುಸಾಕಣೆ.. ಇವೆಲ್ಲ ಬೆಂಗಳೂರಿನಿಂದ ಕೇವಲ 20 ಕಿ.ಮೀ. ದೂರದಲ್ಲಿ ಬೆಂಗಳೂರು– ಮಾಗಡಿ ರಸ್ತೆಯಲ್ಲಿ ನಿರ್ಮಿಸಲಾಗಿರುವ 'ನೆಲದ ಸಿರಿ ಗ್ರಾಮೀಣ ಸೊಗಡಿನ ಶೈಕ್ಷಣಿಕ, ಸಾಂಸ್ಕೃತಿಕ, ಸಮಗ್ರ ಕೃಷಿ ಕೇಂದ್ರ' ತೋಟದಲ್ಲಿ ನೋಡಬಹುದು.

ಮಧುಗಿರಿಯ ಹನುಮನಹಳ್ಳಿ ಮೂಲದ ಡಾ.ಗೋಪಾಲಕೃಷ್ಣ ಮತ್ತು ಅವರ ಪತ್ನಿ ವಂದನಾ ಅವರು ಒಟ್ಟೂ ಐದೂವರೆ ಎಕರೆಯಲ್ಲಿ ಈ ತೋಟವನ್ನು ನಿರ್ಮಿಸಿದ್ದಾರೆ. ಇದು ಮಾಗಡಿ ರಸ್ತೆಯಲ್ಲಿರುವ ಚೆನ್ನದಾಸಿ ಪಾಳ್ಯ, ತಾವೆಕೆರೆ ಬಳಿಯಿದೆ. 'ನಗರ ವಾಸ ನರಕವಾಸವಾಗಿಬಿಟ್ಟಿದೆ. ನಗರಗಳಲ್ಲಿ ಕಲುಷಿತ ಗಾಳಿ, ನೀರು ಮತ್ತು ಆಹಾರ ಸೇವನೆಯಿಂದ ಮನುಷ್ಯನ ಜೀವನ ಯಾತನಾಮಯವಾಗಿದೆ. ಜೊತೆಗೆ ಒತ್ತಡದ ಜೀವನ ಆರೋಗ್ಯಕ್ಕೆ ಮಾರಕವಾಗಿದೆ. ಈ ಬಗ್ಗೆ ಅರಿವು ಮೂಡಿಸಲು ಇದನ್ನು ಸ್ಥಾಪಿಸಲಾಗಿದೆ' ಎಂದು ಡಾ. ಗೋಪಾಲಕೃಷ್ಣ ಹೇಳುತ್ತಾರೆ

ತೋಟದ ವಿಶೇಷತೆಗಳು

ತೋಟವು ಚಿಕ್ಕದಾಗಿದ್ದರೂ ಪರಿಸರ ಅಧ್ಯಯನ, ಸಮಗ್ರ ಕೃಷಿ, ಸಾವಯವ ಬೇಸಾಯ, ಗ್ರಾಮೀಣ ವಸ್ತುಸಂಗ್ರಹಾಲಯ.. ಹೀಗೆ ಹತ್ತು ಹಲವಾರು ಉದ್ದೇಶಗಳನ್ನು ನನಸಾಗಿಸುವ ನಿಟ್ಟಿನಲ್ಲಿ ಸ್ಥಾಪಿತವಾಗಿರುವುದು ವಿಶೇಷ. ಇವೆಲ್ಲವುಗಳನ್ನು ಶಿಕ್ಷಣ ರೂಪದಲ್ಲಿ ಶಾಲಾ ಮಕ್ಕಳಿಗೆ ಹೇಳಿಕೊಡಲಾಗುತ್ತದೆ.

ಪರಂಪರಾ ಗ್ರಾಮೀಣ ವಸ್ತುಸಂಗ್ರಹಾಲಯ

ನಮ್ಮ ಪೂರ್ವಜರು ಬಳಸುತ್ತಿದ್ದ ಉಪಕರಣಗಳು, ಸಾಮಗ್ರಿಗಳು ಮತ್ತು ಆಚಾರಗಳನ್ನು ಈಗಿನ ಪೀಳಿಗೆಗೆ ಪರಿಚಯಿಸುವ ಉದ್ದೇಶದಿಂದ ಪರಂಪರಾ ಗ್ರಾಮೀಣ ವಸ್ತುಸಂಗ್ರಹಾಲಯವನ್ನು ಸ್ಥಾಪಿಸಲಾಗಿದೆ. ಹಿಂದಿನ ಕಾಲದ ಹೊಲ ಉಳುವ ನೇಗಿಲು ಮತ್ತು ಎತ್ತು, ಟ್ರ್ಯಾಕ್ಟರ್ ಎಂಬ ಆಧುನಿಕ ಯಂತ್ರದಿಂದ ಕಣ್ಮರೆಯಾಗಿದೆ. ಹಾಗೆಯೇ ಅಡುಗೆ ಮಾಡಲು ಬಳಸುತ್ತಿದ್ದ ಮಣ್ಣಿನ ಬಾನಿ– ಮುಚ್ಚಳಿಕೆ, ಹೆಂಚು, ಹಿತ್ತಾಳೆ ಪಾತ್ರೆಗಳು ಅಲ್ಯೂಮಿನಿಯಂ, ಸ್ಟೀಲ್ ಪಾತ್ರೆಗಳಿಂದಾಗಿ ಹಿನ್ನೆಲೆಗೆ ಸರಿದಿವೆ. ನಮ್ಮ ಪೂರ್ವಿಕರು ಬಳಸುತ್ತಿದ್ದ ಪರಿಸರಸ್ನೇಹಿ ಉಪಕರಣಗಳನ್ನು ಒಂದೆಡೆ ಸೇರಿಸಿ ಮಕ್ಕಳಿಗೆ ಉಪಕರಣಗಳ ಹೆಸರು ಮತ್ತು ಅವುಗಳು ಯಾವ ಕೆಲಸಕ್ಕೆ ಬಳಕೆಯಾಗುತ್ತಿದ್ದವು ಎನ್ನುವ ವಿಚಾರವನ್ನು ಪರಿಚಯಿಸುವ ಉದ್ದೇಶ ಹೊಂದಿದೆ.

ಇಂಗು ಗುಂಡಿಗಳು

ನೆಲದ ಸಿರಿ ತೋಟದ ಪಕ್ಕದಲ್ಲಿ ಪೂರ್ವದಿಕ್ಕಿಗೆ ಹೊಂದಿಕೊಂಡು ಹಳ್ಳ ಹರಿಯುತ್ತದೆ. ಇಲ್ಲಿ ಸುಮಾರು 600 ಅಡಿ ಸಾಗಿದ ನಂತರ ಮತ್ತೊಂದು ತಡೆಗೋಡೆಯನ್ನು ನಿರ್ಮಿಸಲಾಗಿದೆ. ಇಂಗುಗುಂಡಿಯಲ್ಲಿ ಸುಮಾರು 18 ಲಕ್ಷ ಲೀಟರ್ ನೀರು ತುಂಬಿದ ನಂತರ ನೀರನ್ನು ಬಿಡಲಾಗುತ್ತದೆ. ನೆಲದ ಸಿರಿಯಲ್ಲಿ ಸುಮಾರು 25 ಲಕ್ಷ ಲೀಟರ್‌ಗಳಷ್ಟು ಮಳೆ ನೀರನ್ನು ಕೊಯ್ಲು ಮಾಡಲಾಗುತ್ತದೆ.

ನೆಲದ ಸಿರಿಯ ಇತರೆ ವಿಶೇಷಗಳು

ಶಾಂತಲಾ ನಾಟಕಶಾಲೆ: ಸುಮಾರು 600 ಚದರ ಅಡಿಗಳಷ್ಟು ವಿಸ್ತೀರ್ಣವುಳ್ಳ ನಾಟ್ಯ ಶಾಲೆಯನ್ನು ಕಡಪ ಕಲ್ಲಿನಲ್ಲಿ ತಯಾರು ಮಾಡಲಾಗಿದೆ.

ಸಾಲು ಪರಗೋಲಾಸ್: ಸುಮಾರು 150 ಅಡಿ ದೂರಕ್ಕೆ ಒಂದು ಕಾಲುದಾರಿ ನಿರ್ಮಿಸಿ ಅದಕ್ಕೆ 36 ಕಲ್ಲಿನ ಕಂಬಗಳು ಮತ್ತು 69 ಕಲ್ಲಿನ ತೊಲೆಗಳನ್ನು ಬಳಸಲಾಗಿದೆ. ಇದರ ಮೇಲೆ ಪಡವಲ, ಸೀಮೆಬದನೆ, ಚಪ್ಪರದವರೆಕಾಯಿ ಹೀಗೆ ಹಲವಾರು ತರಕಾರಿಗಳನ್ನು ಹಬ್ಬಿಸಲಾಗಿರುವುದು ವಿಶೇಷ.

ತೋಟದ ಮನೆ: ತೋಟದ ಮನೆಯನ್ನು ದೇಶಿ ಸಂಸ್ಕೃತಿಯನ್ನು ಹೊರಗಿನಿಂದ ಕಾಣುವ ಹಾಗೆ ವಿನ್ಯಾಸ ಮಾಡಲಾಗಿದ್ದು, 18 ಅಡಿಗಳ ಎತ್ತರದಲ್ಲಿ ಕಾಂಕ್ರೀಟಿನಿಂದ ಛಾವಣಿಯನ್ನು ನಿರ್ಮಿಸಿದ್ದಾರೆ.

ದಂಡಕಾರಣ್ಯ: ಬಗೆಬಗೆಯ ಕಾಡು ಮರಗಳನ್ನು ಬೆಳೆಸಲಾಗಿದ್ದು, ಘಮಘಮಿಸುವ ಕಾಡು ಹೂಗಳ ಪರಿಮಳ, ಪಕ್ಷಿಗಳ ಕಲರವ ತುಂಬಿಕೊಂಡಿರುತ್ತದೆ.

ಕೊಟ್ಟಿಗೆಗಳು: ಹಸು, ಎಮ್ಮೆ, ಕೋಳಿ-ಕುರಿ, ಮೇಕೆ, ಬೆಕ್ಕು, ಮೊಲ, ಮೀನು ಇತ್ಯಾದಿ ಸಾಕುಪ್ರಾಣಿಗಳನ್ನು ಪ್ರತ್ಯೇಕವಾದ ಕೊಟ್ಟಿಗೆಗಳಲ್ಲಿ ಸಾಕಲಾಗುತ್ತದೆ. ಇದರ ಉದ್ದೇಶ ಆರ್ಥಿಕ ಅವಲಂಬನೆಯ ಜೊತೆಗೆ ಮಕ್ಕಳಿಗೆ ವಿವಿಧ ಸಾಕುಪ್ರಾಣಿಗಳನ್ನು ತೋರಿಸುವುದು.

ತೋಟದ ಸಸ್ಯ ಪರಿಚಯ: ಸುಮಾರು 2000ಕ್ಕೂ ಹೆಚ್ಚು ಸಸ್ಯಗಳನ್ನು ಬೆಳೆಸಲಾಗಿದೆ. ತೋಟದ ಅಂಚಿನಲ್ಲಿ ಬಿದಿರು ಬೆಳೆಸಲಾಗಿದೆ. ಬೆಂಗಳೂರು– ಮಾಗಡಿ ರಸ್ತೆಯಲ್ಲಿ ವಾಹನಗಳಿಂದ ಉಂಟಾಗುವ ಶಬ್ದ ಮಾಲಿನ್ಯ ಮತ್ತು ಕಲುಷಿತ ಗಾಳಿ ಮತ್ತು ರಾತ್ರಿ ವೇಳೆ ಉಂಟಾಗುವ ವಾಹನಗಳ ಬೆಳಕಿನ ಮಾಲಿನ್ಯ ತಡೆಗಟ್ಟಲು ಇದು ನೆರವಾಗಿದೆ.

ಗ್ರಾಮೀಣ ಕ್ರೀಡೆಗಳು: ಗ್ರಾಮೀಣ ಕ್ರೀಡೆಗಳನ್ನು ಜೀವಂತ ಉಳಿಸುವುದು ಮತ್ತು ಈಗಿನ ಹಾಗೂ ಮುಂದಿನ ಪೀಳಿಗೆಗೆ ಪರಿಚಯಿಸುವುದು ಇದರ ಉದ್ದೇಶವಾಗಿದೆ. ವಿವಿಧ ಗ್ರಾಮೀಣ ಕ್ರೀಡೆಗಳಾದ ಲಗೋರಿ, ಗೋಲಿಯಾಟ, ಕಣ್ಣಾಮುಚ್ಚಾಲೆ, ಮರಕೋತಿ ಆಟ, ಕುಂಟೆಬಿಲ್ಲೆ, ಚೌಕಾಬಾರ ಇತ್ಯಾದಿ ಆಟಗಳ ಬಗ್ಗೆ ಚಿತ್ರಣ ನೀಡಲಾಗಿದೆ.

ಗ್ರಾಮೀಣ ಕಸುಬುಗಳಾದ ಮಡಿಕೆ ಮಾಡುವುದು, ಕುಲುಮೆಯನ್ನು ತಯಾರಿಸುವುದು, ಗೊಂಬೆ ಮಾಡುವುದಲ್ಲದೇ, ಕೊರವಂಜಿ, ಬುಡಬುಡುಕಿ ಇತ್ಯಾದಿ ಗ್ರಾಮೀಣ ಕಲೆಗಳನ್ನು ಮಕ್ಕಳಿಗೆ ನುರಿತ ವ್ಯಕ್ತಿಗಳಿಂದ ಮಾಡಿಸಿ ತೋರಿಸಲಾಗುತ್ತದೆ. ಇದು ವಾರದ ಏಳೂ ದಿನ ತೆರೆದಿರುತ್ತದೆ.

(ಚಿತ್ರಗಳು: ಲೇಖಕರವು)

ರೋಮನ್ ಆ್ಯಂಪಿ ಥಿಯೇಟರ್

ನೆಲದ ಸಿರಿ ತೋಟದಲ್ಲಿ ಸುಮಾರು 60 ವಿದ್ಯಾರ್ಥಿಗಳಿಗೆ ಕುಳಿತುಕೊಳ್ಳಲು ಅನುಕೂಲವಾಗುವ ಒಂದು ಥಿಯೇಟರ್ ನಿರ್ಮಾಣವಾಗಿದೆ. ಇದಕ್ಕೆ ರೋಮನ್ ಎಂಬ ಹೆಸರು ಕೊಡಲು ಕಾರಣ ಗ್ರೀಸ್ ದೇಶದ ರೋಮನ್ ನಗರದಲ್ಲಿ ಗುಡ್ಡದ ಇಳಿಜಾರಿನಲ್ಲಿ ಕಲ್ಲಿನ ಆಸನಗಳನ್ನು ನಿರ್ಮಿಸಿ ಕೆಳಭಾಗದ ಸಮತಟ್ಟು ನೆಲದಲ್ಲಿ ವೇದಿಕೆಯನ್ನು ನಿರ್ಮಿಸಲಾಗುತ್ತಿತ್ತು. ರಾತ್ರಿ ವೇಳೆ ನಾಗರಿಕರು ನಾಟಕಗಳನ್ನು ಈ ಆಸನದಲ್ಲಿ ಕುಳಿತು ದೀಪದ ಬೆಳಕಿನಲ್ಲಿ ನೋಡುತ್ತಿದ್ದರು. ನೈಸರ್ಗಿಕವಾಗಿರುವ ಭೂಭಾಗವನ್ನು ಬಳಸಿ ನಿರ್ಮಿಸಲಾಗಿದೆ.

ರಾಗಿಕಣ ಸಂತೆ ಪುನರಾರಂಭ

ಕೋವಿಡ್ ಕಾರಣದಿಂದಾಗಿ ಸ್ಥಗಿತಗೊಂಡಿದ್ದ ಸಾಂಸ್ಕೃತಿಕ ಕೇಂದ್ರ 'ರಾಗಿಕಣ' ಸಂತೆ ಅ.2ರಂದು ಪುನರಾರಂಭಗೊಳ್ಳುತ್ತಿದೆ. ಕೋವಿಡ್‌ನಿಂದ ತೊಂದರೆಗೊಳಗಾದ ನೇಕಾರರ ಸಹಾಯಾರ್ಥವಾಗಿ ಅ. 2 ಮತ್ತು 3ರಂದು ಕೈಮಗ್ಗ ಮತ್ತು ಖಾದಿಯ ವಸ್ತ್ರಗಳ ಮಾರಾಟವನ್ನೂ ಆಯೋಜಿಸಲಾಗಿದೆ.

ನಿವೃತ್ತ ಪೊಲೀಸ್ ಅಧಿಕಾರಿ ಅಜಯ್ ಕುಮಾರ್ ಸಿಂಗ್ ಸಂತೆ ಉದ್ಘಾಟಿಸಲಿದ್ದಾರೆ. ನಿಶಾಂತ್ ಗುರವ್ ಗಾಂಧಿ ಭಜನೆ ನಡೆಸಿಕೊಡುವರು. ನೃತ್ಯ ಕಲಾವಿದೆ ಸುಹಾಸಿನಿ ಕೌಲಗಿ ಅವರಿಂದ ಭರತನಾಟ್ಯ ಪ್ರದರ್ಶನ ನಡೆಯಲಿದೆ. ಅ. 3ರಂದು ಬೆಳಿಗ್ಗೆ 11ಕ್ಕೆ 'ಖಾದಿ ಮತ್ತು ಕೈಮಗ್ಗದಲ್ಲಿ ಪ್ರಸ್ತುತ ಸವಾಲುಗಳು' ವಿಷಯ ಕುರಿತು ಚರ್ಚೆ ನಡೆಯಲಿದೆ. ವಿಮೋರ್ ಸಂಸ್ಥೆಯ ಪವಿತ್ರಾ ಮುದ್ದಯ್ಯ, 'ಮೆಟಫರ್ ರಾಚ'ದ ರವಿಕಿರಣ್, ಕಾಸ್‌ಕೋಮ್ ಸಂಸ್ಥೆಯ ಸ್ವಾಮಿನಾಥನ್ ವೈತಲಿಂಗಂ ಮತ್ತು ವಸ್ತ್ರವಿನ್ಯಾಸಕಿ ಇಳಾ ದುಬೆ ಪಾಲ್ಗೊಳ್ಳುವರು. ಎರಡೂ ದಿನಗಳು ನೈಸರ್ಗಿಕವಾಗಿ ಬೆಳೆದ ಸೊಪ್ಪು- ತರಕಾರಿಗಳು, ದಿನಸಿ ಪದಾರ್ಥಗಳು, ಗಾಣದ ಎಣ್ಣೆ, ಕೈಉತ್ಪಾದಿತ ಕಲಾತ್ಮಕ ಹಾಗೂ ಕರಕುಶಲ ವಸ್ತುಗಳ ಮಾರಾಟವಿರುತ್ತದೆ.

ಸ್ಥಳ: ರಾಗಿಕಣ, ಶ್ರೀರಾಮಕೃಷ್ಣ ಸಮಗ್ರ ಶಿಕ್ಷಣ ಕೇಂದ್ರ, ಬನ್ನೇರುಘಟ್ಟ ರಸ್ತೆ, ಗೊಟ್ಟಿಗೆರೆ, ಬೆಂಗಳೂರು. ಸಂಪರ್ಕಕ್ಕೆ: 99726 76426, 99800 43911. ❖

'ಶ್ಮಶಾನ ಕುರುಕ್ಷೇತ್ರಂ' ನಾಟಕದ ತಾಲೀಮಿನ ದೃಶ್ಯ

ನಗರದಲ್ಲಿ ಇಂದು-ನಾಳೆ

ಎರಡು ನಾಟಕಗಳ ಪ್ರದರ್ಶನ

ನಗರದಲ್ಲಿ ನಿಧಾನವಾಗಿ ರಂಗ ಚಟುವಟಿಕೆಗಳು ಪ್ರಾರಂಭವಾಗತೊಡಗಿವೆ. ಇಂದು ಮತ್ತು ನಾಳೆ ಶಂಕರಾ ಫೌಂಡೇಷನ್‌ನ ಡಮರು ರಂಗಮಂದಿರದಲ್ಲಿ ಎರಡು ನಾಟಕಗಳ ಪ್ರದರ್ಶನ ನಡೆಯಲಿವೆ. ಬ್ಯಾಕ್ (ಆನ್) ಸ್ಟೇಜ್ ಎನ್ನುವ ಯೋಜನೆಯೊಂದರ ನೆರವಿನಿಂದಾಗಿ ಈ ಪ್ರದರ್ಶನಗಳು ಸಿದ್ಧವಾಗಿದೆ.

ಕುವೆಂಪು ಅವರ 'ಶ್ಮಶಾನ ಕುರುಕ್ಷೇತ್ರಂ' ಮತ್ತು ರಷ್ಯಾದ ನಾಟಕಕಾರ ಆಂಟನ್ ಚಕಾವ್ ಅವರ 'ವಾರ್ಡ್ ನಂ 6' ಕಿರುಕಾದಂಬರಿ ರಂಗರೂಪ ಪ್ರದರ್ಶನಗೊಳ್ಳುತ್ತಿರುವ ಎರಡು ನಾಟಕಗಳು. ವಿಮರ್ಶಕ ಡಿ.ಆರ್. ನಾಗರಾಜ್ ಅವರು ಈ ಕಿರುಕಾದಂಬರಿಯನ್ನು 'ಕತ್ತಲೆ ದಾರಿ ದೂರ' ಎಂದು ರೂಪಾಂತರ ಮಾಡಿದ್ದಾರೆ.

ಕೆಲಸ ಇಲ್ಲದೇ ಸಂಕಷ್ಟ ಎದುರಿಸುತ್ತಿರುವ ರಂಗಕಲಾವಿದರಿಂದ ಅವರಿಗಾಗಿಯೇ ನಡೆಯುತ್ತಿರುವ ಪ್ರದರ್ಶನ ಇದಾಗಿದೆ. ಪ್ರದರ್ಶನದಿಂದ ಬಂದ ಲಾಭವನ್ನು ಕಲಾವಿದರೇ ಹಂಚಿಕೊಳ್ಳಲಿದ್ದಾರೆ.

ಕುವೆಂಪುರವರ 'ಶ್ಮಶಾನ ಕುರುಕ್ಷೇತ್ರಂ' ನಾಟಕವು, ಯುದ್ಧದ ಭೀಕರತೆಯು ಶ್ರೀಸಾಮಾನ್ಯನ ಮೇಲೆ ಬೀರುವ ಪರಿಣಾಮವನ್ನು ಸಾರುವ ಕೃತಿಯಾಗಿದೆ. ಯುದ್ಧ, ಕಲಹ ಎನ್ನುವುದು ದೇಶ-ದೇಶಗಳ ನಡುವೆ, ಧರ್ಮ, ಜಾತಿ, ಪ್ರಭೇದ, ಬಡವ-ಶ್ರೀಮಂತ, ಹೀಗೆ ಹಲವಾರು ಆಯಾಮಗಳನ್ನು ಹೊಂದಿದ್ದು ಅದೆಲ್ಲದಕ್ಕಿಂತ ಮಿಗಿಲಾಗಿ ವ್ಯಕ್ತಿ ಮತ್ತು ವ್ಯಕ್ತಿತ್ವ, ಮನಸ್ಸು - ಮನಸ್ಸುಗಳ ನಡುವೆ ನಡೆಯುವಂಥದ್ದು ಎಂಬುವುದನ್ನು ಸೂಕ್ಷ್ಮವಾಗಿ ನಿರೂಪಿಸಿದ್ದಾರೆ.

ರಷ್ಯಾದ ನಾಟಕಕಾರ ಆಂಟನ್ ಚಕಾವ್ ಕಿರುಕಾದಂಬರಿಯ ರಂಗರೂಪ. ಪ್ರಸ್ತುತ ಪರಿಸ್ಥಿತಿಯಲ್ಲಿ ಪ್ರಭುತ್ವವನ್ನು ಪ್ರಶ್ನಿಸುವವರನ್ನು ದೇಶದ್ರೋಹಿಗಳು ಎಂಬಂತೆ ಬಿಂಬಿಸುತ್ತಿರುವುದು ಶೋಚನೀಯ. ಪ್ರಭುತ್ವವನ್ನು ಪ್ರಶ್ನಿಸುವವರನ್ನು, ಅವರ ಒಡನಾಡಿಗಳನ್ನು ಒಂದು ಪ್ರತ್ಯೇಕ 'ವಲಯ'ದವರು ಎಂಬಂತೆ ಬಿಂಬಿಸಲಾಗುತ್ತಿದೆ. ಅಂತಹ ಒಂದು ಪ್ರತ್ಯೇಕ 'ವಲಯ'ದ ರೂಪಕವೇ ವಾರ್ಡ್ ನಂ.6. ❖

'ವಾರ್ಡ್ ನಂ. 6' ನಾಟಕದ ತಾಲೀಮಿನ ದೃಶ್ಯ

'ಶ್ಮಶಾನ ಕುರುಕ್ಷೇತ್ರಂ'
ದಿನಾಂಕ: ಅ. 2
ನಿರ್ದೇಶನ: ಸವಿತ ಬಿ.

'ವಾರ್ಡ್ ನಂ. 6'
ದಿನಾಂಕ: ಅ. 3
ನಿರ್ದೇಶನ: ನಿರಂಜನ್ ಖಾಲಿಕೊಡ
ಸಮಯ: ಸಂಜೆ 7ಕ್ಕೆ
ಸ್ಥಳ: ಡಮರು ರಂಗ ಮಂದಿರ, ಶಂಕರ ಫೌಂಡೇಷನ್, ಕನಕಪುರ ರಸ್ತೆ
ಟಿಕೆಟ್ ದರ: ₹200
bookmyshowನಲ್ಲೂ ಸೀಟುಗಳನ್ನು ಕಾಯ್ದಿರಿಸಬಹುದು.
ಹೆಚ್ಚಿನ ಮಾಹಿತಿಗೆ: 9164458141

ಸಿನಿಮಾ

ಚಿತ್ರೀಕರಣ– ಕಾನೂನು ನೆರವಿಗೆ ಎಬಿಸಿಡಿ

ಫ್ಯಾಷನ್ ಎಬಿಸಿಡಿ ಲೋಗೋ

ನೆರೆ ರಾಜ್ಯ ಹಾಗೂ ವಿದೇಶಗಳಲ್ಲಿ ಚಿತ್ರೀಕರಣಕ್ಕೆ ಬೇಕಾದ ಕಾನೂನು ನೆರವು, ಸ್ಥಳೀಯಾಡಳಿತದ ಪರವಾನಗಿ ಸಹಿತ ವಿವಿಧ ವ್ಯವಸ್ಥೆ ಕಲ್ಪಿಸಿಕೊಡಲು ಮುಂದಾಗಿದೆ ಫ್ಯಾಷನ್ ಎಬಿಸಿಡಿ ಕಂಪನಿ.

ಫ್ಯಾಷನ್ ಎಬಿಸಿಡಿ ಮಂಗಳೂರು ಮೂಲದ ಸಂಸ್ಥೆ. ಚರಣ್ ಸುವರ್ಣ ಅದರ ಮಾಲೀಕರು. ಇದುವರೆಗೂ ಬಾಲಿವುಡ್ ಮಟ್ಟದಲ್ಲಿ, ಫ್ಯಾಷನ್ ಲೋಕದಲ್ಲಿ ಸಕ್ರಿಯರಾಗಿರುವವರು. ಈಗ ಚಿತ್ರರಂಗಕ್ಕೆ ಅನುಕೂಲವಾಗುವ ಯೋಜನೆಯನ್ನು ಹೊತ್ತು ತಂದಿದ್ದಾರೆ. ಈ ಸಂಸ್ಥೆ ಇದೀಗ ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಸರಾಗಿರುವ ನೊವೆಲ್ ವರ್ಕ್ಸ್ ಎಂಬ ಮತ್ತೊಂದು ಸಂಸ್ಥೆಯೊಂದಿಗೆ ಕೈ ಜೋಡಿಸಿದೆ.

ಕನ್ನಡ ಚಿತ್ರಗಳಿಗೆ ಹೊರರಾಜ್ಯ ಮತ್ತು ವಿದೇಶಗಳಲ್ಲಿ ಚಿತ್ರೀಕರಣಕ್ಕೆ ಬೇಕಾದ ಎಲ್ಲ ವ್ಯವಸ್ಥೆ ಕಲ್ಪಿಸಿ, ಸಬ್ಸಿಡಿಯನ್ನೂ ಕೊಡಿಸುವುದೂ ಈ ಸಂಸ್ಥೆಯ ಕಾರ್ಯಗಳಲ್ಲಿ ಒಂದು. ಕೆಲವು ದೇಶಗಳಲ್ಲಿ ಇಂಥ ಸಬ್ಸಿಡಿ ವ್ಯವಸ್ಥೆ ಇದೆ ಎಂದು ಇದೇ ಸಂಸ್ಥೆ ಹೇಳಿದೆ.

ಫ್ಯಾಷನ್ ಎಬಿಸಿಡಿ ಸಂಸ್ಥೆ ಮತ್ತು ನೊವೆಲ್ ವರ್ಕ್ಸ್ ವಿಶ್ವದ ಐವತ್ತಕ್ಕೂ ಹೆಚ್ಚು ದೇಶಗಳ ಸರ್ಕಾರಗಳೊಂದಿಗೆ ಒಡಂಬಡಿಕೆ ಮಾಡಿಕೊಂಡಿವೆ.

ಶೀಘ್ರದಲ್ಲಿಯೇ ನೊವೆಲ್ ವರ್ಕ್ಸ್ ತಂಡವನ್ನು ಬೆಂಗಳೂರಿಗೆ ಕರೆಸಿ ಒಂದು ಕಾರ್ಯಕ್ರಮ ಆಯೋಜಿಸಿ ಕನ್ನಡ ನಿರ್ಮಾಪಕರನ್ನು ಮುಖಾಮುಖಿಯಾಗಿಸುವ ತಯಾರಿಯೂ ಶುರುವಾಗಿದೆ ಎಂದಿದ್ದಾರೆ ಚರಣ್ ಸುವರ್ಣ. ❖

ಐವಿಎಫ್/ಐಯುಐ ನಿಮಗೆ ತೃಪ್ತಿ ನೀಡಿಲ್ಲವೇ?
ಐವಿಎಫ್/ಐಯುಐ ಚಿಕಿತ್ಸೆಯನ್ನು ನೀವು ಪರಿಗಣಿಸುತ್ತಿಲ್ಲವೇ?
ಅತ್ಯುತ್ತಮ ಕಾನ್ಸ್ಟಿಟ್ಯೂಷನಲ್ ಹೋಮಿಯೋಕೇರ್ ಚಿಕಿತ್ಸೆಯ ಮೂಲಕ ಯಾವುದೇ ಅಡ್ಡ ಪರಿಣಾಮಗಳಿಲ್ಲದೆ ನೈಸರ್ಗಿಕ ಗರ್ಭಧಾರಣೆ ನಿಮ್ಮದಾಗಲಿ
ಹೋಮಿಯೋಕೇರ್ ಮೊಬೈಲ್ ಆ್ಯಪ್ ಡೌನ್‌ಲೋಡ್ ಮಾಡಿರಿ ಮತ್ತು ಉಚಿತ ಚಿಕಿತ್ಸೆ ಪಡೆಯಿರಿ.*
*Conditions apply.
ವೈಶಿಷ್ಟ್ಯಮಯ ಚಿಕಿತ್ಸೆಗಳು
ಋತುಚಕ್ರ ಸಮಸ್ಯೆಗಳು
ಪಿಸಿಓಡಿ, ಗರ್ಭಾಶಯ ಗಡ್ಡೆಗಳು, ಹೈಪೋಥೈರಾಯ್ಡ್
ಪದೇ ಪದೇ ಗರ್ಭಪಾತ
ಲೈಂಗಿಕ ದೌರ್ಬಲ್ಯ
ವೀರ್ಯಾಣು ಕೊರತೆ
ಪುರುಷ ಮತ್ತು ಮಹಿಳೆಯರಲ್ಲಿ ಹಾರ್ಮೋನ್ ಸಮಸ್ಯೆ
ಬ್ಲಾಕಡ್ ವೇನ್ಸ್
www.homeocare.in
HOMEOCARE INTERNATIONAL
ಹೋಮಿಯೋಕೇರ್® ಇಂಟರ್‌ನ್ಯಾಷನಲ್
ವರ್ಲ್ಡ್-ಕ್ಲಾಸ್ ಹೋಮಿಯೋಪತಿ
1800-108-1212
50+ ಕ್ಲಿನಿಕ್ಸ್ – ಕರ್ನಾಟಕ, ತೆಲಂಗಾಣ, ಆಂಧ್ರಪ್ರದೇಶ, ತಮಿಳುನಾಡು, ಪುದುಚೆರಿ

ಆರೋಗ್ಯಕರ ಪೇಯ ಹರ್ಬಲ್ ಕಷಾಯ

ಸುಕೃತ ಎಸ್.

ಕಾಫಿ ಮತ್ತು ಟೀ ನಮ್ಮ ದೈನಂದಿನ ಅವಿಭಾಜ್ಯ ಭಾಗ. ಕೆಲವರಂತೂ ದಿನಕ್ಕೆ 4–5 ಸಲ ಕಾಫಿ ಅಥವಾ ಟೀ ಕುಡಿಯುವ ಅಭ್ಯಾಸವಿಟ್ಟುಕೊಂಡಿರುತ್ತಾರೆ. ಬೇಸರ ಆದಾಗ, ತಲೆಬಿಸಿ ಆದಾಗ, ಸುಮ್ಮನೆ ಕೂತಾಗ ಕಾಫಿ, ಟೀ ಹೀರುವ ಚಟ ಕೆಲವರದ್ದು.

ಕಾಫಿ ಮತ್ತು ಟೀಯಲ್ಲಿ ಇರುವ ಕೆಫಿನ್ ಕೇಂದ್ರ ನರಮಂಡಲ ವ್ಯವಸ್ಥೆಯನ್ನು ಚಟುವಟಿಕೆಯಿಂದ ಇರುವಂತೆ ಮಾಡುತ್ತದೆ. ಜೊತೆಗೆ, ನೆನಪಿನ ಶಕ್ತಿ ಮತ್ತು ಏಕಾಗ್ರತೆಯನ್ನು ಹೆಚ್ಚಿಸುತ್ತದೆ. ಹಾಗಂತ, ದಿನಕ್ಕೆ 5–6 ಬಾರಿ ಕಾಫಿ, ಟೀ ಸೇವಿಸಿ ದೇಹಕ್ಕೆ ಹೆಚ್ಚು ಕೆಫಿನ್ ಅಂಶ ಸೇರಿದರೆ ಅದು ಅಪಾಯಕಾರಿಯಾಗುತ್ತದೆ. ಆತಂಕ, ತಳಮಳ, ಚಡಪಡಿಕೆ, ನಿದ್ರಾಹೀನತೆ, ಅಧಿಕ ರಕ್ತದೊತ್ತಡ ಸೇರಿ ಅನೇಕ ತೊಂದರೆಗಳು ನಮ್ಮನ್ನು ಆವರಿಸಿಕೊಳ್ಳುತ್ತವೆ. ಹಾಗಿದ್ದರೆ, ಕಾಫಿ ಮತ್ತು ಟೀ ಬದಲಿಗೆ ಆರೋಗ್ಯಪೂರ್ಣವಾಗಿರುವ ಯಾವುದನ್ನು ಕುಡಿಯಬಹುದು ನೋಡೋಣ.

ಅರಿಶಿನದ ಹಾಲು

ಶುಂಠಿ, ಚಕ್ಕೆ, ಅರಿಶಿನ ಮತ್ತು ಕಾಳುಮೆಣಸು ಹಾಕಿ ತಯಾರಿಸಿದ ಅರಿಶಿನದ ಹಾಲು ಆರೋಗ್ಯಕ್ಕೆ ಬಹಳ ಪ್ರಯೋಜನಕಾರಿ. ಹಾಲಿನ ರುಚಿ ಹೆಚ್ಚಿಸಲು ವೆನಿಲ್ಲಾ ಮತ್ತು ಜೇನುತುಪ್ಪವನ್ನೂ ಬೆರೆಸಿಕೊಳ್ಳಬಹುದು. ಸಣ್ಣ ಪುಟ್ಟ ಕೆಮ್ಮು, ಜ್ವರ, ಶೀತದಂಥ ರೋಗಗಳಿಗೆ ಇದು ಮನೆಮದ್ದು. ಜತೆಗೆ, ದೇಹದಲ್ಲಿ ರೋಗನಿರೋಧಕ ಶಕ್ತಿಯನ್ನೂ ಹೆಚ್ಚಿಸುತ್ತದೆ.

ಪೆಪ್ಪರ್‌ಮಿಂಟ್ ಚಹಾ

ಇದು ತುಂಬಾ ರುಚಿಕರವಾಗಿರುತ್ತದೆ ಮತ್ತು ಆರೋಗ್ಯಕ್ಕೂ ಉತ್ತಮವಾದುದು. ದೇಹ ಚೈತನ್ಯಪೂರ್ಣವಾಗಿರುವುದಕ್ಕೆ ಇದು ಬಹಳ ಪ್ರಯೋಜನಕಾರಿ ಎಂದು ಹಲವು ಅಧ್ಯಯನಗಳು ಹೇಳಿವೆ ಕೂಡ. ಮನೆಯಲ್ಲಿ ಪುದೀನವನ್ನು ಬೆಳೆಸುವುದು ಸುಲಭ. ಇದರ ಚಹಾವನ್ನು ತಯಾರಿಸುವುದು ಕೂಡ ಸುಲಭವೇ. ಬಿಸಿ ಬಿಸಿ ನೀರಿಗೆ ಕೆಲವು ಪುದೀನಾ ಎಲೆಗಳನ್ನು ಹಾಕಿದರೆ ಆಯಿತು; ಚಹಾ ತಯಾರಾಗುತ್ತದೆ.

ನಿಂಬೆ ನೀರು

ಬೆಳಿಗ್ಗೆ ಎದ್ದ ಕೂಡಲೇ ಇದನ್ನು ಸೇವಿಸುವುದು ಉತ್ತಮ ಉಪಾಯ. ಇದರಲ್ಲಿ ವಿಟಮಿನ್ ಸಿ ಹೇರಳವಾಗಿ ಇರುವುದರಿಂದ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ. ಜೊತೆಗೆ ಚರ್ಮದ ಆರೋಗ್ಯಕ್ಕೂ ಇದು ಮದ್ದಾಗಿದೆ.

ಶುಂಠಿ ಚಹಾ

ಇದನ್ನು ಎಲ್ಲರೂ ಬಹಳವಾಗಿ ಇಷ್ಟಪಡುತ್ತಾರೆ. ರಕ್ತ ಪರಿಚಲನೆ, ಸುಸ್ತು, ಒತ್ತಡದಿಂದ ಈ ಚಹಾ ನಮ್ಮನ್ನು ದೂರ ಮಾಡುತ್ತದೆ.

ಕ್ಯಾಮೊಮೈಲ್ ಚಹಾ

ಕ್ಯಾಮೊಮೈಲ್ ಚಹಾ ಸೇವನೆಯಿಂದ ನೆಮ್ಮದಿಯಾಗಿ ವಿಶ್ರಾಂತಿ ಪಡೆಯಲು, ಒತ್ತಡವನ್ನು ಕಡಿಮೆ ಮಾಡಿಕೊಳ್ಳಲು ಮತ್ತು ಚೆನ್ನಾಗಿ ನಿದ್ರೆ ಮಾಡಲು ಸಾಧ್ಯವಾಗುತ್ತದೆ. ಈ ಟೀ ಸೇವನೆಯಿಂದ ಋತುಸ್ರಾವದ ಸಮಯದಲ್ಲಿ ಕಿಬ್ಬೊಟ್ಟೆಯ ನೋವು ಕಡಿಮೆಯಾಗುತ್ತದೆ. ರಕ್ತದಲ್ಲಿನ ಸಕ್ಕರೆ ಅಂಶವನ್ನು ಕಡಿಮೆ ಮಾಡಿ, ಮಧುಮೇಹ ನಿಯಂತ್ರಣಕ್ಕೆ ಈ ಟೀ ನೆರವಾಗುತ್ತದೆ. ದೇಹದ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ. ❖

ಕೊಂಬೂಚಾ

ಕೊಂಬೂಚಾ ಒಂದು ಆರೋಗ್ಯಕರ ಟೀ. ಆ್ಯಂಟಿಆಕ್ಸಿಡೆಂಟ್‌ಗಳು ಹೇರಳವಾಗಿರುವ ಕಾರಣ ಈ ಟೀ ಹಾನಿಕಾರಕ ಬ್ಯಾಕ್ಟೀರಿಯಾಗಳನ್ನು ಕೊಲ್ಲುತ್ತದೆ. ಈ ಟೀ ಸೇವನೆಯಿಂದ ಹತ್ತಾರು ಆರೋಗ್ಯಕರ ಲಾಭಗಳಿವೆ. ಸಕ್ಕರೆ, ಯೀಸ್ಟ್ ಮತ್ತು ಬ್ಯಾಕ್ಟೀರಿಯಾಗಳಿಂದ ಸಂಸ್ಕರಿಸಲಾದ ಈ ಟೀ ಸೇವನೆಯಿಂದ ನಿಮ್ಮ ಮುಂಜಾನೆಯನ್ನು ಉಲ್ಲಾಸಕರವಾಗಿ ಆರಂಭಿಸಬಹುದು.

ALSTYLE
Upto 80% OFF
Branded Garments & Under Garments Sale
Alstyle Panties Rs.60
Alstyle Vest Rs.60
Levis Men's Brief Rs.100
Dixcy Bra Rs.100
Raymond, Colour Plus, Park Avenue, Parx Shirts MRP upto Rs.2499 — Rs.800
Alstyle Men's Track Pant / Alstyle Ladies Track Pant, Alstyle Yoga Pant, Alstyle Capri — Rs.600
Next Look Shirts by Raymond MRP upto Rs.1299 — Rs.500
Men's T-Shirts, Ladies Payjama, Boys / Girls Tops & Bottoms — Rs.200
Branded Shoes & Footwear Upto 50% OFF
Jackets, Sweat Shirts, Sweaters, Shirts, Trousers, Jeans, Rugs, Bedsheets, Towels, Boxers, Shorts etc. for Men's & Women
Banashankari : Nagalakshmi Kalyana Mantapa, No.5, II Stage, Near Post Office, Bangalore - 560 070
Infantry Road : Safina Plaza, No.84/85, Bangalore - 560 001
Rajajinagar : Raja Rajeshwari Kalyana Mantapa, 2nd Block, Dr. Rajkumar Road, Bangalore - 560 010
Org. by: Surya Agency Pvt. Ltd.

ತ್ವಚೆಯ ಆರೋಗ್ಯಕ್ಕಿರಲಿ ಲ್ಯಾವೆಂಡರ್ ಸ್ನಾನ

ಸೌಂದರ್ಯ

ಮನಸ್ವಿ

ಪ್ರತಿದಿನ ಸ್ನಾನ ಮಾಡಿದ ಕೂಡಲೇ ಮನಸ್ಸಿನಲ್ಲಿ ಆಹ್ಲಾದಕರ ಭಾವನೆ ಮೂಡುತ್ತದೆ. ದಣಿದ ದೇಹಕ್ಕೆ ಸ್ನಾನವೇ ಮದ್ದು. ಸ್ನಾನ ಮಾಡಿದ ಮೇಲೆ ಮನಸ್ಸು ಹಾಗೂ ದೇಹ ಎರಡಕ್ಕೂ ಖುಷಿ ಸಿಗುತ್ತದೆ. ಇದರಿಂದ ದೇಹದಲ್ಲಿ ರಕ್ತ ಸಂಚಾರ ಸುಗಮವಾಗುತ್ತದೆ. ಸ್ನಾಯುಗಳಿಗೆ ಆರಾಮ ಎನ್ನಿಸಿ, ಮನಸ್ಸಿನ ಒತ್ತಡ ಕಡಿಮೆಯಾಗಿ ಉತ್ತಮ ನಿದ್ದೆಗೆ ಸಹಕಾರಿ. ಅಲ್ಲದೇ ಚರ್ಮದ ಆರೋಗ್ಯಕ್ಕೂ ಸ್ನಾನ ಉತ್ತಮ. ಆದರೆ ಸುಮ್ಮನೆ ಬಕೆಟ್ ಅಥವಾ ಟಬ್‌ನಲ್ಲಿ ನೀರು ತುಂಬಿಸಿಕೊಂಡು ಸ್ನಾನ ಮಾಡುವುದಕ್ಕಿಂತ ಕೆಲವೊಂದು ನೈಸರ್ಗಿಕ ಉತ್ಪನ್ನಗಳನ್ನು ಸೇರಿಸಿಕೊಂಡರೆ ಆಹ್ಲಾದದೊಂದಿಗೆ ಚರ್ಮದ ಆರೋಗ್ಯವೂ ಚೆನ್ನಾಗಿರುತ್ತದೆ.

ಲ್ಯಾವೆಂಡರ್

ಲ್ಯಾವೆಂಡರ್ ಹನಿಯನ್ನು ನೀರಿಗೆ ಹಾಕಿಕೊಂಡು ಸ್ನಾನ ಮಾಡುವುದರಿಂದ ಆರಾಮ ಎನ್ನಿಸುತ್ತದೆ. ಯಾಕೆಂದರೆ ಇದರಲ್ಲಿರುವ ಚಿಕಿತ್ಸಕ ಗುಣ ದೇಹವನ್ನು ಹಗುರವಾಗಿಸುತ್ತದೆ. ಅಲ್ಲದೇ ಒತ್ತಡ ಕಡಿಮೆ ಮಾಡಲು ಸಹಾಯ ಮಾಡುತ್ತದೆ. ಲ್ಯಾವೆಂಡರ್ ಎಣ್ಣೆಯನ್ನು ಹಚ್ಚಿಕೊಂಡು ಸ್ನಾನ ಮಾಡುವುದರಿಂದ ಒತ್ತಡ ನಿವಾರಣೆಯಾಗುತ್ತದೆ ಎಂಬುದನ್ನು ಥಾಯ್ಲೆಂಡ್ ಮೂಲದ ಅಧ್ಯಯನವೊಂದು ನಿರೂಪಿಸಿದೆ. ಲ್ಯಾವೆಂಡರ್ ಸ್ನಾನದಿಂದ ಗುಣಮಟ್ಟದ ನಿದ್ದೆಗೂ ಸಹಕಾರಿ. ಇದು ರಕ್ತದೊತ್ತಡವನ್ನು ಕಡಿಮೆ ಮಾಡಿ ಸ್ನಾಯುಗಳಿಗೆ ಆರಾಮ ನೀಡುತ್ತದೆ. ಇದರಲ್ಲಿ ಸ್ನಾನ ಮಾಡುವುದರಿಂದ ಚರ್ಮ ಹಾಗೂ ಕೂದಲಿನ ಆರೋಗ್ಯಕ್ಕೂ ಉತ್ತಮ.

ಬಳಕೆ: ಸ್ನಾನದ ನೀರಿಗೆ 6 ರಿಂದ 8 ಹನಿ ಲ್ಯಾವೆಂಡರ್ ಜಲ ಸೇರಿಸಿ ಚೆನ್ನಾಗಿ ಮಿಶ್ರ ಮಾಡಿ. ಈ ನೀರಿನಲ್ಲಿ ಸ್ನಾನ ಮಾಡಿದ ತಕ್ಷಣಕ್ಕೆ ಮಾಯಿಶ್ಚರೈಸರ್ ಹಚ್ಚಿಕೊಳ್ಳಿ.

ಆ್ಯಪಲ್ ಸೈಡರ್ ವಿನೆಗರ್

ಅಂದದ ತ್ವಚೆ, ಕೂದಲು ಯಾರಿಗೆ ಇಷ್ಟವಿಲ್ಲ ಹೇಳಿ. ಚರ್ಮದ ಕಾಂತಿ ಹೆಚ್ಚಲು, ಕೂದಲಿನ ಆರೋಗ್ಯಕ್ಕೆ ಆ್ಯಪಲ್ ಸೈಡರ್ ವಿನೆಗರ್ ಉತ್ತಮ. ಸ್ನಾನದ ನೀರಿನೊಂದಿಗೆ ಆ್ಯಪಲ್ ಸೈಡರ್ ವಿನೆಗರ್ ಸೇರಿಸಿಕೊಳ್ಳುವುದರಿಂದ ಹಲವು ಉಪಯೋಗಗಳಿವೆ. ಇದರಲ್ಲಿರುವ ಆ್ಯಂಟಿಆಕ್ಸಿಡೆಂಟ್ ಅಂಶ ಕಪ್ಪುಕಲೆಗಳನ್ನು ನಿವಾರಿಸುತ್ತದೆ. ಚರ್ಮದ ಉರಿಯೂತವನ್ನು ನಿವಾರಿಸುತ್ತದೆ. ಇದು ಸೋಂಕು ಹಾಗೂ ಬ್ಯಾಕ್ಟೀರಿಯಾ ನಿವಾರಕವಾದ ಕಾರಣ ಚರ್ಮದ ಆರೋಗ್ಯವನ್ನು ಕಾಪಾಡುತ್ತದೆ. ಇದು ಬೆವರಿನ ಕೊಳೆಯನ್ನು ತೆಗೆದುಹಾಕಿ ಚರ್ಮಕ್ಕೆ ತಾಜಾ ಅನುಭವ ಸಿಗುವಂತೆ ಮಾಡುತ್ತದೆ.

ಬಳಕೆ: ಒಂದು ಬಕೆಟ್ ನೀರಿಗೆ 1 ಚಮಚ ಆ್ಯಪಲ್ ಸೈಡರ್ ವಿನಿಗರ್ ಸೇರಿಸಿ, ಸ್ನಾನ ಮಾಡಿ. ಕಂಕುಳ ಕೆಳಗೆ, ತೊಡೆ ಸಂಧಿಯಲ್ಲಿ ಈ ನೀರನ್ನು ಹಾಕಿ ಚೆನ್ನಾಗಿ ತೊಳೆದುಕೊಳ್ಳಿ. ಇದರಿಂದ ಬೆವರಿನ ದುರ್ವಾಸನೆಯೂ ನಿವಾರಣೆಯಾಗುತ್ತದೆ.

ಓಟ್‌ಮೀಲ್

ತೂಕ ಇಳಿಸಲು ಹಾಗೂ ಸಮತೋಲಿತ ಡಯೆಟ್ ಪಾಲಿಸುವಲ್ಲಿ ಓಟ್‌ಮೀಲ್ ಬಹಳ ಪ್ರಮುಖ ಪಾತ್ರ ವಹಿಸುತ್ತದೆ. ಇದರೊಂದಿಗೆ ಚರ್ಮದ ಆರೋಗ್ಯ ಕಾಪಾಡುವಲ್ಲೂ ಓಟ್‌ಮೀಲ್‌ನ ಪಾತ್ರ ದೊಡ್ಡದು. ಒಣಚರ್ಮ, ಚರ್ಮದ ಕಿರಿಕಿರಿ, ತುರಿಕೆ, ಸನ್‌ಬರ್ನ್ ಮುಂತಾದ ಸಮಸ್ಯೆ ಇರುವವರು ಸ್ನಾನದ ನೀರಿಗೆ ಓಟ್‌ಮೀಲ್ ಸೇರಿಸಿಕೊಳ್ಳಬೇಕು. ಅಲರ್ಜಿ ತೊಂದರೆ ಇರುವವರು ಕೂಡ ಓಟ್‌ಮೀಲ್ ಬಳಸುವುದರಿಂದ ಪರಿಹಾರ ಕಂಡುಕೊಳ್ಳಬಹುದು. ಓಟ್‌ಮೀಲ್‌ನಲ್ಲಿ ಪ್ರೊಟೀನ್, ಕೊಬ್ಬು, ವಿಟಮಿನ್ ಸೇರಿದಂತೆ ಹಲವು ಬಗೆಯ ಪೋಷಕಾಂಶಗಳಿವೆ. ಇದು ಚರ್ಮವನ್ನು ಸ್ವಚ್ಛಗೊಳಿಸಿ, ಚರ್ಮದಲ್ಲಿ ತೇವಾಂಶ ಇರುವಂತೆ ನೋಡಿಕೊಳ್ಳುತ್ತದೆ.

ಬಳಕೆ: ಒಂದು ಕಪ್ ಓಟ್‌ಮೀಲ್ ಅನ್ನು ಚೆನ್ನಾಗಿ ಪುಡಿ ಮಾಡಿಕೊಳ್ಳಿ. ನೀರಿಗೆ ಓಟ್‌ಮೀಲ್ ಪುಡಿ ಸೇರಿಸಿ ಕಲೆಸಿ 15 ನಿಮಿಷ ಹಾಗೇ ಬಿಡಿ. ಮತ್ತೆ 15 ರಿಂದ 20 ನಿಮಿಷ ಕಲೆಸಿ. ಚರ್ಮಕ್ಕೆ ಉಜ್ಜಿಕೊಂಡು ಸ್ನಾನ ಮಾಡಿ. ❖

ಪ್ರಜಾವಾಣಿ ವಾರೆವ್ಹಾ ವಾರಾಂತ್ಯ
ಸೂಪರ್ ಬ್ರ್ಯಾಂಡ್‌ಗಳ ಬಂಪರ್ ಕೊಡುಗೆಗಳು ಇದೀಗ ನಿಮಗಾಗಿ!
ಇನ್ನಷ್ಟು ಆಕರ್ಷಕ ಕೊಡುಗೆಗಳಿಗೆ ಇಲ್ಲಿ ಸ್ಕ್ಯಾನ್ ಮಾಡಿ
ಕೂಪನ್ ಪಾರ್ಟನರ್: COUPON DUNIA
200ಕ್ಕೂ ಹೆಚ್ಚು ಕೊಡುಗೆಗಳು
toppr — ಎಲ್ಲಾ ಟಾಪರ್ ಕಲಿಕಾ ಪ್ಯಾಕೇಜ್‌ಗಳ ಮೇಲೆ 15% ರಿಯಾಯಿತಿ
Faasos — ಆಡಿಯೊ ಸಾಧನಗಳ ಮೇಲೆ 10% ರಿಯಾಯಿತಿ
MENSXP — ಪುರುಷರ ಸೌಂದರ್ಯ ವರ್ಧಕ & ಜೀವನಶೈಲಿ ಉತ್ಪನ್ನಗಳ ಮೇಲೆ ಹೆಚ್ಚುವರಿ 30% ರಿಯಾಯಿತಿ
BEHROUZ The Royal Biryani — ₹199 ರೂ.ಗಿಂತ ಹೆಚ್ಚಿನ ಆರ್ಡರ್‌ಗಳ ಮೇಲೆ 40% ರಿಯಾಯಿತಿ ಪಡೆಯಿರಿ
Flipkart — ದಿ ಬಿಗ್ ಬಿಲಿಯನ್ ಡೇಸ್: ಫ್ಲಿಪ್‌ಕಾರ್ಟ್ ಪ್ಲಸ್ ಸದಸ್ಯರಿಗೆ ಸೈಟ್‌ವೈಡ್ 85%ವರೆಗೆ ರಿಯಾಯಿತಿ
Domino's Pizza — ಪಿಜ್ಜಾ ಆರ್ಡರ್‌ಗಳ ಮೇಲೆ 50%ವರೆಗೆ ರಿಯಾಯಿತಿ ಪಡೆಯಿರಿ
makemytrip — ₹2500ವರೆಗೆ ಸ್ಥಳೀಯ ವಿಮಾನಗಳಲ್ಲಿ ರಿಯಾಯಿತಿ
TATA 1mg — ಪ್ರಿಸ್ಕ್ರಿಪ್ಷನ್ ಔಷಧಿಗಳ ಮೇಲೆ 15% ರಿಯಾಯಿತಿ
boAt — ಎಲ್ಲಾ ಆಡಿಯೊ ಸಾಧನಗಳ ಮೇಲೆ ಹೆಚ್ಚುವರಿ 10% ರಿಯಾಯಿತಿ
THE BODY SHOP — ಆಯ್ದ ವೈಯಕ್ತಿಕ ಆರೈಕೆ ಉತ್ಪನ್ನಗಳ ಮೇಲೆ 15% ರಿಯಾಯಿತಿ
fernsnpetals — ಉಡುಗೊರೆ, ಹೂವು, ಕೇಕ್ ಮತ್ತು ಹೆಚ್ಚಿನವುಗಳ ಮೇಲೆ 18% ರಿಯಾಯಿತಿ
hungama — ಹಂಗಾಮ ಸಂಗೀತ ವಾರ್ಷಿಕ ಚಂದಾದಾರಿಕೆಯ ಮೇಲೆ 50% ರಿಯಾಯಿತಿ

ಮುದ್ದುಪ್ರಾಣಿಯನ್ನು ಸಾಕುವ ಮುನ್ನ

ಪ್ರೀತಿಯೊಂದಿಗೆ ಜವಾಬ್ದಾರಿಯೂ ಮುಖ್ಯ



ರೇಷ್ಮಾ

ನಾಯಿ, ಬೆಕ್ಕು, ಮೊಲ, ಪಾರಿವಾಳ, ಗಿಳಿ.. ಹೀಗೆ ಸಾಕುಪ್ರಾಣಿ–ಪಕ್ಷಿಗಳನ್ನು ನೋಡಿದಾಕ್ಷಣ ಮನಸ್ಸಿಗೆ ಏನೋ ಖುಷಿ ಸಿಗುತ್ತದೆ. ಮುದ್ದಾದ ನಾಯಿಮರಿಯನ್ನೋ, ಬೆಕ್ಕನ್ನೋ ನೋಡಿದಾಗ ಅಪ್ಪಿ ಮುದ್ದಾಡಬೇಕು ಎನ್ನಿಸುತ್ತದೆ. ಮನೆಯಲ್ಲೂ ಇಂಥದ್ದೇ ಮುದ್ದಾದ ಮರಿ ಇದ್ದರೆ ಚೆನ್ನ ಎನ್ನಿಸಿ ಮನೆಗೆ ತಂದು ಸಾಕುತ್ತೇವೆ. ಸಾಕುಪ್ರಾಣಿಯ ಮೇಲಿನ ಪ್ರೀತಿಯಿಂದ ಮನೆಗೆ ತಂದರೆ ಸಾಲದು ಅವುಗಳನ್ನು ಅಷ್ಟೇ ಚೆನ್ನಾಗಿ ನೋಡಿಕೊಳ್ಳುವುದು ಅಗತ್ಯ. ಪ್ರಾಣಿಗಳನ್ನು ಸಾಕುವ ಮುನ್ನ ಮನೆಯಲ್ಲಿ ಅದರ ಜವಾಬ್ದಾರಿ ಯಾರು ತೆಗೆದುಕೊಳ್ಳುತ್ತಾರೆ ಎಂಬುದು ಮುಖ್ಯವಾಗುತ್ತದೆ. ಪ್ರೀತಿಯೊಂದಿಗೆ ಅವುಗಳ ಮೇಲೆ ಗಮನ ಹರಿಸುವುದು ಅವಶ್ಯ.

ಸಾಮಾಜಿಕ ಜವಾಬ್ದಾರಿ

ನಿಮ್ಮ ಸಾಕುಪ್ರಾಣಿಯನ್ನು ಮನೆಯ ಒಳಗೇ ಕೂಡಿ ಹಾಕುವುದು ಸರಿಯಲ್ಲ. ಅವುಗಳನ್ನು ಹೊರಗಡೆ ತಿರುಗಾಡಲು, ಆಡವಾಡಲು ಬಿಡಬೇಕು. ಹೊರಗೆ ಕರೆದುಕೊಂಡು ಹೋದಾಗ ಗಲೀಜು ಮಾಡದಂತೆ ನೋಡಿಕೊಳ್ಳಬೇಕು. ಒಂದು ವೇಳೆ ಗಲೀಜು ಮಾಡಿದರೂ ಅದನ್ನು ಸ್ವಚ್ಛ ಮಾಡಲು ಬೇಕಾಗುವ ಪೇಪರ್, ಪ್ಲಾಸ್ಟಿಕ್ ಅನ್ನು ಜೊತೆಗೆ ತೆಗೆದುಕೊಂಡು ಹೋಗಿ. ಮನೆಯ ಒಳಗೆ ಗಲೀಜು ಮಾಡಿದರೆ ವಾಸನೆ ಎಂಬ ಕಾರಣಕ್ಕೆ ಹೇಗೆ ಸ್ವಚ್ಛ ಮಾಡುತ್ತೇವೋ ಹೊರಗಡೆ ಜನರಿಗೆ ವಾಸನೆಯಿಂದ ತೊಂದರೆ ಆಗುತ್ತದೆ ಎಂದು ಭಾವಿಸಿ ಸ್ವಚ್ಛ ಮಾಡುವುದು ಅಗತ್ಯ.

ಸಮಯ ನಿಗದಿ

ಪ್ರಾಣಿಗಳು ಮನೆಗೆ ಬಂದ ಮೇಲೆ ನಮಗೆ ಒಡನಾಡಿಗಳಾಗುತ್ತವೆ, ಹಾಗಾಗಿ ಅವುಗಳ ಮೇಲೆ ಸದಾ ಗಮನ ಹರಿಸಬೇಕು. ಅವುಗಳ ಜೊತೆಗೆ ಒಡನಾಡಲು, ಸಮಯ ಕಳೆಯಲೆಂದೇ ನಿರ್ದಿಷ್ಟ ಸಮಯ ನಿಗದಿ ಮಾಡಿಕೊಳ್ಳುವುದು ಉತ್ತಮ. ನೀವು ಸದಾ ಬ್ಯುಸಿಯಾಗಿದ್ದು ಅವುಗಳ ಜೊತೆ ಒಡನಾಡದಿದ್ದರೆ ಮಂಕಾಗುವ ಸಾಧ್ಯತೆ ಇರುತ್ತದೆ. ಹಾಗಾಗಿ ದಿನದಲ್ಲಿ ಒಂದಿಷ್ಟು ಹೊತ್ತು ಅವುಗಳೊಂದಿಗೆ ಸಮಯ ಕಳೆಯುವುದು ಅವಶ್ಯ.

ಸುರಕ್ಷತೆಗೂ ಗಮನ ಕೊಡಿ

ಮುದ್ದು ಮಗುವಿನ ಸುರಕ್ಷತೆ ನಿಮ್ಮ ಕೈಯಲ್ಲೇ ಇದೆ. ಅಪಾಯಕಾರಿ ವಸ್ತುಗಳು ಅವಕ್ಕೆ ಸಿಗದಂತೆ ನೋಡಿಕೊಳ್ಳುವುದು, ಅವುಗಳನ್ನು ಸುರಕ್ಷಿತವಾದ ಜಾಗದಲ್ಲಿ ಇರಿಸಿ ರಕ್ಷಿಸುವುದು ನಿಮ್ಮ ಜವಾಬ್ದಾರಿ. ಅದೇ ರೀತಿ ಪ್ರಾಣಿಗಳ ಪ್ರಾಣಕ್ಕೆ ಕುತ್ತು ತರುವ ಯಾವುದೇ ಅಪಾಯಕಾರಿ ವಸ್ತುಗಳು ಅವುಗಳ ಕೈಗೆಟುಕದಂತೆ ಇರಿಸುವುದು ಬಹಳ ಮುಖ್ಯವಾಗುತ್ತದೆ. ಅಲ್ಲದೇ ಅಂತಹ ವಸ್ತುಗಳನ್ನು ಮುಚ್ಚಿದ ಜಾಗದಲ್ಲಿ ಇರಿಸುವುದು ಅವಶ್ಯ.

ವ್ಯಾಯಾಮ ಮಾಡಿಸಿ

ನೀವು ಸಾಕುಪ್ರಾಣಿಯನ್ನು ಸಾಕುತ್ತಿದ್ದರೆ ಪ್ರತಿದಿನ ಅವುಗಳಿಗೆ ವ್ಯಾಯಾಮ ಮಾಡಿಸುವುದನ್ನು ಮರೆಯಬೇಡಿ. ವ್ಯಾಯಾಮ ಎಂದರೆ ಮನುಷ್ಯರಂತೆ ದೇಹ ದಂಡಿಸುವುದಲ್ಲ. ಬದಲಾಗಿ ಅವುಗಳಿಗೆ ಆಟವಾಡಿಸಬೇಕು, ವಾಕಿಂಗ್ ಮಾಡಿಸಬೇಕು. ಸಂಜೆ, ಬೆಳಿಗ್ಗೆ ಮೈದಾನ ಅಥವಾ ಪಾರ್ಕ್‌ನಲ್ಲಿ ವಾಕಿಂಗ್ ಮಾಡಿಸುವುದು ಅವಶ್ಯ.

ನಾಯಿಗಳಿಗೆ ಸಾಮಾಜಿಕ ನಡವಳಿಕೆ ಕಲಿಸಿ

ಯಾವುದೇ ಪ್ರಾಣಿಯನ್ನು ಸಾಕುವ ಮುನ್ನ ಅವುಗಳಿಗೆ ಸಾಮಾಜಿಕ ನಡವಳಿಕೆ ಕಲಿಸಲು ನಿಮ್ಮಿಂದ ಸಾಧ್ಯವೇ ಎಂದು ಯೋಚಿಸಬೇಕು. ನಾಯಿ, ಬೆಕ್ಕು ಯಾವುದೇ ಪ್ರಾಣಿ ಇರಲಿ ಬೇರೆಯವರ ಎದುರು ಹೇಗಿರಬೇಕು, ಸುಮ್ಮನೆ ಕಚ್ಚುವುದು, ಕೂಗುವುದು ಮಾಡಬಾರದು ಎಂಬುದನ್ನೆಲ್ಲಾ ಕಲಿಸಬೇಕು. ಆ ಕಾರಣಕ್ಕೆ ಸರಿಯಾದ ತರಬೇತುದಾರರ ಬಳಿ ತರಬೇತಿ ಕೊಡಿಸುವುದು ಮುಖ್ಯವಾಗುತ್ತದೆ. ಅವಕ್ಕೆ ಸರಿಯಾಗಿ ತರಬೇತಿ ನೀಡದಿದ್ದರೆ ಅನಪೇಕ್ಷಿತ ಅಪಘಾತಗಳಿಗೆ ಕಾರಣವಾಗುವುದಲ್ಲದೆ, ಮನೆ ಇಡೀ ರಾಡಿ ಮಾಡುತ್ತವೆ. ಸಾಕುಪ್ರಾಣಿಗಳನ್ನು ಇತರ ತಳಿಗಳೊಂದಿಗೆ ಬೆರೆಯಲು ಬಿಡಬೇಕು, ಇದರಿಂದ ಭಯ ಹಾಗೂ ಆತಂಕ ನಿವಾರಣೆಯಾಗಿ ಉತ್ತಮ ವ್ಯಕ್ತಿತ್ವ ರೂಢಿಸಿಕೊಳ್ಳಲು ಸಾಧ್ಯವಾಗುತ್ತದೆ.

ಆರೋಗ್ಯಕರ ಡಯೆಟ್

ಮನುಷ್ಯ ತನ್ನ ಆರೋಗ್ಯ ಪಾಲನೆಗೆ ಡಯೆಟ್ ಕ್ರಮವನ್ನು ಹೇಗೆ ಪಾಲಿಸುತ್ತಾನೋ ಹಾಗೆಯೇ ಸಾಕುಪ್ರಾಣಿಗಳ ಆಹಾರಕ್ರಮದ ಮೇಲೆ ಗಮನ ಹರಿಸುವುದು ಅವಶ್ಯ. ಅವುಗಳಲ್ಲಿ ಪ್ರತಿರಕ್ಷಣಾ ವ್ಯವಸ್ಥೆ ಹೆಚ್ಚಲು, ಸರಿಯಾಗಿ ಬೆಳವಣಿಗೆ ಹೊಂದಲು ನಿರ್ಬಂಧಿತ ಹಾಗೂ ಸಮತೋಲಿತ ಆಹಾರ ಸೇವನೆ ಬಹಳ ಮುಖ್ಯ. ಸಾಕುಪ್ರಾಣಿಗಳ ಆಹಾರಕ್ರಮದ ಬಗ್ಗೆ ಸರಿಯಾಗಿ ತಿಳಿದುಕೊಳ್ಳಲು ಪಶುವೈದ್ಯರನ್ನು ಭೇಟಿ ಮಾಡಬಹುದು. ❖

ದೀಪಾವಳಿಗೆ 'ಮುಗಿಲ್‌ಪೇಟೆ' ರೆಡಿ

ಸಿನಿ ಹನಿ

ಕ್ರೇಜಿಸ್ಟಾರ್ ರವಿಚಂದ್ರನ್ ಅವರ ಪುತ್ರ ಮನು ನಾಯಕನಾಗಿ ನಟಿಸಿರುವ 'ಮುಗಿಲ್‌ಪೇಟೆ' ಚಿತ್ರ ದೀಪಾವಳಿ ವೇಳೆಗೆ ತೆರೆಗೆ ಬರಲಿದೆ.

'ಮುಗಿಲ್‌ಪೇಟೆ' ಅದ್ದೂರಿಯಾಗಿ ಮೂಡಿಬಂದಿದ್ದು, ಸಿನಿರಸಿಕರಿಗೆ ಹಬ್ಬದ ಸಂಭ್ರಮ ಮತ್ತಷ್ಟು ಹೆಚ್ಚಲಿದೆ ಎಂದಿದೆ ಚಿತ್ರತಂಡ.

ಮನು ಅವರಿಗೆ ನಾಯಕಿಯಾಗಿ ಕಯಾದು ಲೋಹರ್ ನಟಿಸಿದ್ದಾರೆ. ರಿಷಿ, ಅವಿನಾಶ್, ತಾರಾ ಅನೂರಾಧಾ, ಸಾಧುಕೋಕಿಲ, ರಂಗಾಯಣ ರಘು ಹೀಗೆ ಹೆಸರಾಂತ ಕಲಾವಿದರು 'ಮುಗಿಲ್ ಪೇಟೆ'ಯಲ್ಲಿ ಅಭಿನಯಿಸಿದ್ದಾರೆ.

ಭರತ್ ಎಸ್. ನಾವುಂದ ರಚನೆ ಹಾಗೂ ನಿರ್ದೇಶನದ ಈ ಚಿತ್ರವನ್ನು ಮೋತಿ ಮೂವಿ ಮೇಕರ್ಸ್ ಲಾಂಛನದಲ್ಲಿ ರಕ್ಷಾ ವಿಜಯ್ ಕುಮಾರ್ ನಿರ್ಮಿಸಿದ್ದಾರೆ. ಈ ಹಿಂದೆ 'ಅಡಚಣೆಗಾಗಿ ಕ್ಷಮಿಸಿ' ಚಿತ್ರ ನಿರ್ದೇಶಿಸಿದ್ದ ಭರತ್ ಅವರಿಗೆ ಇದು ಎರಡನೇ ಚಿತ್ರ.

ಆರು ಹಾಡುಗಳಿರುವ ಈ ಚಿತ್ರಕ್ಕೆ ಶ್ರೀಧರ್ ವಿ. ಸಂಭ್ರಮ್ ಸಂಗೀತ ನೀಡಿದ್ದಾರೆ. ರವಿವರ್ಮ (ಗಂಗು) ಅವರ ಛಾಯಾಗ್ರಹಣ ಇದೆ.

ಅರ್ಜುನ್ ಕಿಟ್ಟು ಸಂಕಲನ, ಡಾ.ರವಿವರ್ಮ, ವಿಜಯ್ ಸಾಹಸ ನಿರ್ದೇಶನ, ಹರ್ಷ, ಮುರಳಿ, ಮೋಹನ್ ನೃತ್ಯ ನಿರ್ದೇಶನ, ಹಾಗೂ ಸತೀಶ್ ಅವರ ಕಲಾ ನಿರ್ದೇಶನವಿರುವ ಈ ಚಿತ್ರಕ್ಕೆ ಹನುಮಂತು ನಿರ್ಮಾಣ ನಿರ್ವಾಹಕರು . ❖

ಮಿಸ್–ಮಿಸೆಸ್‌ಗಾಗಿ ಫ್ಯಾಷನ್ ಷೋ

ಫ್ಯಾಷನ್ ಷೋದಲ್ಲಿ ತೀರ್ಪುಗಾರರು

ಫ್ಯಾಶನ್ ಷೋ ಅಂದರೆ ಅಲ್ಲಿ ಅಂದ, ಆಕಾರ, ವಯಸ್ಸು ಮುಂತಾದವು ಇರುವವರಿಗೆ ಮಾತ್ರ ರ‍್ಯಾಂಪ್ ಹತ್ತಲು ಅವಕಾಶ ಸಿಗುವುದುಂಟು.

ಆದರೆ ಇಲ್ಲೊಂದು ಹೊಸ ಪ್ರಯತ್ನ ನಡೆದಿದೆ. ಜ್ಯೋತ್ಸಾ ವೆಂಕಟೇಶ್ ಮತ್ತು ಸಬರೇಷ್ ಬಾಲಕೃಷ್ಣನಾಯ್ಡು ಸಾರಥ್ಯದ ಜಾಸ್ ಸ್ಟುಡಿಯೋದವರು, 'ಮಿಸ್ ಅಂಡ್ ಮಿಸಸ್ ಕರ್ನಾಟಕ 2021' ಅಡಿಷನ್ ಸ್ಪರ್ಧೆಯಲ್ಲಿ ಪಾಲ್ಗೊಳ್ಳಲು ಅವಕಾಶ ಮಾಡಿಕೊಟ್ಟಿದ್ದರು. ಇದಕ್ಕೆ ಯಾವುದೇ ರೀತಿಯ ನೋಂದಣಿ ಶುಲ್ಕವಿಲ್ಲ. ಪ್ರಸಕ್ತ ಪಿಡುಗು ಬಂದಿರುವ ಸಂದರ್ಭದಲ್ಲಿ ಇವರಿಗೆ ಬದುಕಿನಲ್ಲಿ ಆತ್ಮವಿಶ್ವಾಸ ತುಂಬಲು ಇಂತಹ ಸ್ಪರ್ಧೆ ಏರ್ಪಡಿಸಲಾಗಿದೆ ಎಂದು ಜಾಸ್ ಸ್ಟುಡಿಯೋ ಹೇಳಿದೆ.

ಆಡಿಷನ್ ಮುಗಿದಿದೆ. ಅಕ್ಟೋಬರ್ ಅಂತ್ಯದೊಳಗೆ ಅಂತಿಮ ಸುತ್ತಿನ ಸ್ಪರ್ಧೆ ನಡೆಯಲಿದೆ.

ಫ್ಯಾಶನ್ ಕ್ಷೇತ್ರದಲ್ಲಿ ಹೆಸರು ಮಾಡಿರುವ ಹತ್ತು ಮಂದಿ ತೀರ್ಪುಗಾರರಾಗಿದ್ದಾರೆ. ಈ ಪೈಕಿ ಇಬ್ಬರು ಮಂಗಳಮುಖಿಯರು. ನೀತೂ ಆರ್. ಎಸ್ ಹಾಗೂ ಅಮಿತ್‌ಪಾಂಡ್ಯ ತೀರ್ಪುಗಾರರ ಸಾಲಿನಲ್ಲಿದ್ದಾರೆ. ಬೆಂಗಳೂರು, ಮೈಸೂರು, ಮೂಡಬಿದಿರೆ, ತಿರುಪತಿ, ತ್ರಿಪುರ, ಶಿಲ್ಲಾಂಗ್ ಸಹಿತ ವಿವಿಧೆಡೆಯಿಂದ 115 ಸ್ಪರ್ಧಿಗಳು ಬಂದಿದ್ದರು. ಮಿಸ್ ಮತ್ತು ಮಿಸೆಸ್ ಎರಡು ವಿಭಾಗಗಳಲ್ಲಿ ಒಟ್ಟು 12 ಮಂದಿಯಂತೆ ಆಯ್ಕೆ ನಡೆಯಲಿದೆ. ಆಯ್ಕೆ ಸುತ್ತಿನಲ್ಲಿ ನಟ ಅಭಯ್‌ವೀರ್, ಗಾಯಕಿ ರೆಮೋ ಮುಂತಾದ ಗಣ್ಯರು ಅತಿಥಿಗಳಾಗಿ ಆಗಮಿಸಿದ್ದರು. ❖

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

Commerical

BTM Layout

BTM 2ND stage, Commercial corner property 40x60 with good returns for sale- 8,00,00,000/-, 9448532965/ 9742554459.

Flat

Electronic City

2 BHK Flats Sale 875 Sqft, Car-parking, Sipani Bliss, Bandapura Road, Anekal Taluk. 9845063208, 8618092022.

Kengeri

FOR SALE: BTM 1st Stage Dollar's Colony, 3BHK-1400 Sqft, climatically responsive Apt 1.15 Cr with Interiors, last unit. Call: 9880209405

Malleshwaram

SALE 3BHK apartment 1750 sft Renaissance Park-3, Malleshwaram behind Orion Mall. 2.1 Crores negotiable. 9342139450

Vishweshwariah Layout

2BHK (2UNITS) SPACIOUS FLATS Sale,Less Price Under Construction on BDA 'A'Katha Site,Pre- Launch Offers (Investors Welcome): 9606631148/ 9606037596

House

Bannerghatta Road

AKSHYA NAGAR 46x41 South/ East Corner G+2 House Sale 1.80.00.000/- Negotiable 30x40, 40x60 Sites Call:9845069739 9380613718

Vijayanagar

SALE 40X60 Site With House, 32 Square Building, GF+1st, Near Metro. Owner- 9845009445

Vishweshwariah Layout

SALE: NAGADEVANAHALLI (Amma Ashrama) 20X42 BBMP 'A' Khatha EF Independent and Duplex, 3 Floors- 9980733501/ 9845021795

Sites

Anjanapura

SALE:- BDA, 40X60, ANJANAPURA, 2nd Block, 80' Road, Commercial Site 1.35Cr. 11th Block, 30x40, N/F Also- 5th 'G' Block- 20x30 E/F- 31,00,000/- 9945373839/ 9620041313.

✓ **AVAILABLE WANTED** Anjanapura, Banashankari 6th Stage, Vishweshwaraiah Layout, Kempegowda Layout, Royal Park,Immediate Settlement: 7259015156/ 9980599456

Arkavathi Layout

BDA 50X80 Semi Commercial Site for Sale @ Arkavathi Near Hennur Main Road: 7676900174 9945569909

Banashankari

BSK6THSTAGE 5THBLOCK BDASITE NORTHWESTCORNER OPP TOPARK 40*51 TOPLOCATION PARALLELTO 100FTROAD PRICE 7500 PERSFT OWNER-9741407677

SALE:- BDA- 30X40, BANASHANKARI 6th Stage, 9th Block, West Facing, 59,00,000/- (Negotiable). S/F- 55,00,000/-, 4th Block- 20x30- S/F, 43,00,000/- 9620041313/ 9945373839.

BANASHANKARI 6TH STAGE- Surroundings BDA- AVAILABLE/ WANTED- 20x30, 30x40, 40x60, 50x80 Sites. 'BRINDAVAN ASSOCIATES:- 9980863245

AVAILABLE /WANTED BDA sites, Banashankari 6th stage, 20x30, 30x40, 40x60,50x80, Genuine Buyers/ Sellers 9513332646, 9902764626

BDA 30X40 East Facing Site for Sale @ BSK 6th Stage 6th Block Call: 9945569909 7676900174

BDA SITE Sale Banashankari 6th Stage, 7th Block,30x40, W/F, 6th Block 40x60 N/F, 9632822225/ 9148553232

BTM Layout

BTM 4TH Stage BDA site 20x30, 50x80, sale. 30x40, 5 Floor Rental income house. 9900966336.

Basavanagudi

BASAVANAGUDI 30X40, 40x60, 25x35, 48.5x25, 53x86, 40x60, 25x40, 75x85. Price: 2.25Cr- 30K Contact: 'ESHWARI ENTERPRISES'- 98454-97163

Hosur Road

AECS LAYOUT KUDLU 30'x40'NW CORNER 8400/Sft Nego Near MS DHONI GLOBAL SCHOOL PH:9945889467, 8892455445

Hoskote

HOSKOTE 30X60 SITE For SALE at Kanakanagar, Sir. M. Visveshwaraiah Layout, Hoskote. Contact: 9880843416, 9743535151.

HRBR Layout

HRBR BDA Commercial Building Rental Income 2.9 Lakhs Basement G+3: Sale 5.5 Crores and 30x45 'A' Katha Site E/F Sale Rs 11,300.- 98866-33433

HSR Layout

HSR 40X60, 30X40 Brand new house, 5 Floor sale BDA sites. 30x50, 30x40, 40x60, 50x80. 9900966336.

Jakkur

BBMP, DC-CONVERSION, Each 30x40, 4800/-sft, Brigade Bricklane Apartment Back Side, Near Kogilu Cross. Owner.9980741687, 9591600488.

Mysore Road

SUPER OFFER/ BASE RATES BMRDA & RERA Approved 60x90 Villa Plots for Sale, Mysore Road, Near Big Banyan Tree, Contact: 9591723113

Vishweshwariah Layout

AVAILABLE BDA Site Vishweshwariah Layout 3rd Block 30X40 West Facing Good Location Genuine Buyers: 7338688111

"VISHVESWARAIAH 4TH near Saibaba Temple100ft Road, North facing 30x40 Allottee Site, 66 Lakhs. 9845268611"

SITE SALE: S.M.Vishweshwaraiah 5th Block 20x30 North, 40x60 Commercial 80 feet Road East, Near Ullal Signal: 9060756616

Villas/Bunglows

Thanisandra

SOBHA CITY 5-BHK Semi-furnished Row House Villa For Sale/Lease/Rent @ Sobha City, Behind Manyatha Tech Park-7337676822

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

BUSINESS

Business Offers

Distributors

WE ARE building material suppliers and looking for a business partners with minimum investment. contact.: info@innovativesliding.com

Finance

NRI'S INVESTMENT AndFinance AvailableOn LowInterest AgainstProperties, Land & Building,Sites,Flats, Converted& AgricultureLandsCall: 7411265189

JOB OPPORTUNITIES

Call Centre

REQUIRED FOR US Based Furniture Industry, Work From Home, American/ Neutral Accent & US Telesales/ US Outbound Experience Must, Sal 50- 80k Call: 9766018123

Hospital & Medical Jobs

WANTED SONOLOGIST for a reputed hospital at Perintalmanna,Kerala. Contact 09495956665

Marketing & Sales

LOOKING FOR Sales Staff in Bangalore Showroom with 6 to 8 years experience in Jewellery. Salary starting from 25000 up to 35000. Food and Accommodation shall be provided by the Company. Contact B.B. Jewellers 9986577790

Situation Required

RETIRED RADIOLOGIST seeks suitable engagement / associateship on win - win basis 9448477703

Teachers/ Professors

***ELITE PUBLIC** SCHOOL* Kempegowda layout Laggere Bangalore* Requires teachers* English, D.Ed / B,Ed Science/ Mathematics, B.Ed 9980200444, 9972223344

Wanted

WANTED BUSINESS DEVELOPMENT MANAGER, Earn more than 1,00,000/ month, Part-time/ Full-time/ Freshers/ Retired. 8660955348

OTHERS

Medical

HOME NURSES available/ Wanted for Home/ Hospital/ Patient Care 24/7 MAJ Gandhinagar. Contact: 7022399993/ 6366883838

PERSONAL

Change of Name

I, ASMA BANO ROUF SHARIFF W/o Mohammed Rouf Shariff residing at No. 5/1-7, Flat No. 3A, TNT Grandeur, Benson Cross Road, Benson Town, Bangalore- 560046 have changed my name from ASMA BANO ROUF SHARIFF to ASMA ROUF SHARIFF vide affidavit dated 30.09.2021 sworn before notary Sivakumara .M.N, Bangalore-32.

I, FATHIMA BEGUM, D/o. Syed Ameer Pasha, R/a Zoha Villa#11, Celebrity Galaxy, Bandenallasandra, Jigani, Bengaluru- 560105 Have Changed My Daughter's Name From ZOHA FIRDOZ to ZUHA FIRDOSE (DOB: 07.07.2007) Vide Affidavit Dated: 01.10.2021 Before Notary Anitha Bai, Bangalore.

I, NAYEMULLA ABDUL RAHMAN, residing at: No. 31, 9th Cross, Bendre Nagar, BSK 2nd Satge, Bengaluru-560070 have changed my name to NAYEEMULLA ABDUL RAHMAN vide Affidavit dated 29.09.2021, sworn to before Notary L.Puttaraju, Bengaluru

14840914K SEP/MT Sukhdeep Singh 2ATC mother name record's NASEEB KAUR instead of NASIB KAUR notary KV.Mani, Bangalore.

I, SHANTHA. M w/o. Krishnamurthy K. residing at #76-77, 9th main, NRI Layout, Bangalore- 560016 have changed my name from SHANTHAMMA to SHANTHA. M vide affidavit dated 01/10/2021 before notary Gangaraju. B.N, Bangalore

I, PRUTHVI. K S/o Krishnamurthy K residing at #76-77, 9th main NRI Layout, Bangalore- 560016 have changed my name from PRUTHVI to PRUTHVI. K vide affidavit dated 01/10/2021 before notary Gangaraju. B.N, Bangalore.

I, KIRTI KUMAR KALGATHRA, residing at Bengaluru-10, have changed my name as KIRTI KUMAR JAYWANT KARGATHRA, vide affidavit dated 1/10/2021 before Notary P.C.Ramaiah, Bengaluru

14832247M, NK/MT, Mrutyunjay Hiremath ASC Centre and College daughter name record's TEJASWINI HIREMATH instead of TEJASWINI MRUTYUNJAY HIREMATH notary KV.Mani, Bangalore.

14832247M, NK/MT, Mrutyunjay Hiremath ASC Centre and College father name record's GADIGAYYA instead of GADAGAYYA HIREMATH notary KV.Mani, Bangalore.

14832247M, NK/MT, Mrutyunjay Hiremath ASC Centre and College mother name record's GANGAWWA instead of GANGAVVA HIREMATH notary KV.Mani, Bangalore.

RAMITA DEVI W/O. 14826337X, HAV/MT, Mithilesh Kumar Pal, Vill/Post/Teh: Bairia, Dist: Ballia, UP, my name RAMITA DEVI to RAMITA PAL notary Meer Hassan, Bangalore.

I, SOWMYA, W/o. MD Aleem, have changed my name to SUMAIYA .B vide Affidavit dated 30.09.2021, sworn before Notary Umamaheswary M.N. Bengaluru

14840914K SEP/MT Sukhdeep Singh 2ATC Father name record's BIKAR SINGH instead of BIKKAR SINGH notary KV.Mani, Bangalore.

Lost

ದಾಖಲೆ ಕಳೆದುಹೋಗಿದೆ
ಶಶಿಕಲ ಹೆಚ್. ಎನ್, ಆದ ನಾನು, ಆವಲಹಳ್ಳಿ, ಯಲಹಂಕ, ಬೆಂಗಳೂರು ಇಲ್ಲಿ ವಾಸಿಸುತ್ತಿದ್ದು ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಆಸ್ತಿಯ ಶುದ್ಧಕ್ರಯ ಪತ್ರ (ಸೇಲ್ ಡೀಡ್ / ಪಂದರ್ ಡೀಡ್) ಕಳೆದುಹೋಗಿರುತ್ತದೆ, ಖಾತಾ ನಂ. 525/1299/4 CD. No.YAND456 No.YAN-1-08872-2012-13 ಸಿಕ್ಕಿದಲ್ಲಿ ಸಂಪರ್ಕಿಸಿ: 74830 05260

MORE Classifieds IN SUPPLEMENT